ಬುಧವಾರ, ಫೆಬ್ರುವರಿ 26, 2025 | ₹ 7.00

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆರ್ಥಿಕ ನೆರವಿನ ನಿರೀಕ್ಷೆಯಲ್ಲಿ ವಿರಳ ಕಾಯಿಲೆ ರೋಗಿಗಳ ಕುಟುಂಬಸ್ಥರು

ಏರುತ್ತಲೇ ಇದೆ ಚಿಕಿತ್ಸಾ ವೆಚ್ಚ

• ವರುಣ ಹೆಗಡೆ

ಬೆಂಗಳೂರು: ವಿರಳ ಕಾಯಿಲೆಯಿಂದ ಬಳಲುತ್ತಿರುವವರಿಗೆ ಸಕಾಲದಲ್ಲಿ ಆರ್ಥಿಕ ನೆರವು ಸಿಗದಿರುವುದು ಹಾಗೂ ಕೇಂದ್ರ ಸರ್ಕಾರ ನಿಗದಿಪಡಿಸಿದ ಮೊತ್ತಕ್ಕಿಂತ ಚಿಕಿತ್ಸಾ ವೆಚ್ಚ ಏರುತ್ತಿರುವುದರಿಂದ ರೋಗಿಗಳು ಸಮಸ್ಯೆಗೆ ಸಿಲುಕುತ್ತಿದ್ದಾರೆ.

ದೇಶದಲ್ಲಿ ಸುಮಾರು ಏಳು ಸಾವಿರ ವಿರಳ ಕಾಯಿಲೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಶೇ 5ರಷ್ಟು ಕಾಯಿಲೆಗಳಿಗೆ ಮಾತ್ರ ನಿಖರ ಚಿಕಿತ್ಸೆಗಳಿದ್ದು, ಉಳಿದ ಶೇ 95 ರಷ್ಟು ಕಾಯಿಲೆಗಳಿಗೆ ಜೀವನಪೂರ್ತಿ ಪೂರಕ ಚಿಕಿತ್ಸೆ ಒದಗಿಸಬೇಕಾಗಿದೆ. ಈ ರೋಗಗಳಿಂದ ಬಳಲುತ್ತಿರುವವರಿಗೆ ನೆರವಾಗಲು ಆರೋಗ್ಯ ಸಚಿವಾಲಯವು 'ವಿರಳ ರೋಗಗಳ ರಾಷ್ಟ್ರೀಯ ನೀತಿ-2021'ರ (ತಿದ್ದುಪಡಿ) ಅಡಿ ತಲಾ ₹50 ಲಕ್ಷದವರೆಗೆ ಉಚಿತ ಚಿಕಿತ್ಸೆ ಹಾಗೂ ಔಷಧ ಒದಗಿಸುತ್ತಿದೆ. ಆದರೆ, ಬಹುತೇಕ ಎಲ್ಲ ರೋಗಿಗಳ ಚಿಕಿತ್ಸಾ ವೆಚ್ಚವು ಅಲ್ಪಾವಧಿಯಲ್ಲಿಯೇ ಗೊತ್ತುಪಡಿಸಿದ ಮೊತ್ತವನ್ನು ಮೀರುತ್ತಿದೆ. ಇದರಿಂದಾಗಿ ರೋಗಿಗಳ ಕುಟುಂಬಗಳು ಚಿಕಿತ್ಸಾ ವೆಚ್ಚ ಭರಿಸಲಾಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ.

ರೋಗ ಗುರುತಿಸುವಲ್ಲಿ ವಿಳಂಬ, ಚಿಕಿತ್ಸೆ ಸಮಸ್ಯೆ ಹಾಗೂ ಜಾಗೃತಿಯ ಕೊರತೆಯಿಂದಾಗಿ ರೋಗಿಗಳನ್ನು ಗುರುತಿಸುವುದೂ ಕಷ್ಟಸಾಧ್ಯವಾಗಿದೆ. ಇದರಿಂದಾಗಿಯೇ ಆರೋಗ್ಯ ಸಚಿವಾಲಯದ ನೋಂದಣಿಯಡಿ ಕೇವಲ 15 ಸಾವಿರ ಮಂದಿ ಹೆಸರು ನೋಂದಾಯಿಸಿದ್ದಾರೆ. ಅವರ ಚಿಕಿತ್ಸೆಗೆ ಕೋಟ್ಯಂತರ ರೂಪಾಯಿ ಅಗತ್ಯ ಇರುವುದರಿಂದ, ರೋಗಿಗಳ ವಿವರದ ಜತೆಗೆ ಚಿಕಿತ್ಸಾ ವೆಚ್ಚ ಭರಿಸಲು ನಿಧಿ ಪಾವತಿಸುವ ಅವಕಾಶವನ್ನೂ ದಾನಿಗಳಿಗೆ ಪೋರ್ಟಲ್‌ನಲ್ಲಿ ಕಲ್ಪಿಸಲಾಗಿದೆ.

ರಾಜ್ಯದಲ್ಲಿ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಡಿ ಕಾರ್ಯ ನಿರ್ವಹಿಸುತ್ತಿರುವ ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದಲ್ಲಿ 308 ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ಇವರಲ್ಲಿ ಹಲವರ ಚಿಕಿತ್ಸಾ ಮೊತ್ತವು ಆರೋಗ್ಯ ಸಚಿವಾಲಯದ ಆರ್ಥಿಕ ನೆರವು ಮೀರಿದೆ.

12 ಲಕ್ಷ ರೋಗಿಗಳು: ಹಿಮೋಫೀಲಿಯಾ, ತಲಸ್ಸೇಮಿಯಾ, ಪೊಂಪೆ, ಗೌಚರ್, ಸಿಕಲ್-ಸೆಲ್ ಅನೀಮಿಯಾ ಸೇರಿ ಹಲವು ರೋಗಗಳನ್ನು ವಿರಳ ಕಾಯಿಲೆಗಳ ಪಟ್ಟಿಗೆ ಸೇರಿಸಲಾಗಿದೆ. ಈ ಕಾಯಿಲೆಗಳು ಆನುವಂಶಿಕವಾಗಿವೆ. ವಿರಳ ಕಾಯಿಲೆ ಎದುರಿಸುತ್ತಿರುವ ರೋಗಿಗಳ ನಿಖರ ಸಂಖ್ಯೆ ರಾಜ್ಯದಲ್ಲಿ ಇಲ್ಲ. ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ ಪ್ರಕಾರ ರಾಜ್ಯದಲ್ಲಿ ಅಂದಾಜು 12 ಲಕ್ಷ ರೋಗಿಗಳು ಇದ್ದಾರೆ. ಸುಮಾರು 40 ಸಾವಿರ ಮಂದಿ ಈ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

'ಮಗಳು ಗೌಚರ್ ರೋಗವನ್ನು ಎದುರಿಸುತ್ತಿದ್ದು, ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದಲ್ಲಿ ಚಿಕಿತ್ಸೆ ಒದಗಿಸಲಾಗಿತ್ತು. ಆರ್ಥಿಕ ನೆರವು ಮೀರಿದ ಪರಿಣಾಮ ಔಷಧ ಒದಗಿಸುವುದು ಸವಾಲಾಗಿದೆ. 15 ದಿನಗಳಿಗೊಮ್ಮೆ ಔಷಧ ನೀಡಬೇಕಾಗಿದೆ' ಎಂದು 12 ವರ್ಷದ ಬಾಲಕಿಯ ತಂದೆಯೊಬ್ಬರು ಬೇಸರ ವ್ಯಕ್ತಪಡಿಸಿದರು.

ರೋಗಿಗಳಿಗೆ ಔಷಧ ಸಮಸ್ಯೆ

ಆರೋಗ್ಯ ಸಚಿವಾಲಯವು ರೋಗಿಗಳಿಗೆ ಗೊತ್ತುಪಡಿಸಿದ ಆರ್ಥಿಕ ನೆರವಿನಡಿ ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರವು ಔಷಧ ಖರೀದಿಸಿ, ವಿತರಿಸುತ್ತಿದೆ. ಆದರೆ, ಈ ಔಷಧಗಳ ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿರುವುದರಿಂದ ರೋಗಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಅಪರೂಪದ ಆನುವಂಶಿಕ 'ಲೈಸೊಸೊಮಲ್ ಸ್ಟೋರೇಜ್ ಡಿಸಾರ್ಡರ್ಸ್'ನಂತಹ (ಎಲ್‌ಎಸ್‌ಡಿ) ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೂ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 50ಕ್ಕೂ ಅಧಿಕ ಎಲ್‌ಎಸ್‌ಡಿ ರೋಗಿಗಳು ಕೇಂದ್ರದಲ್ಲಿ ನೋಂದಣಿ ಮಾಡಿಕೊಂಡಿದ್ದು, ಕೆಲವರ ಚಿಕಿತ್ಸಾ ಮೊತ್ತ ₹50 ಲಕ್ಷ ದಾಟುತ್ತಿದೆ. ಇದರಿಂದ ಅವರು ಚಿಕಿತ್ಸೆಯನ್ನು ಸ್ಥಗಿತಗೊಳಿಸುತ್ತಿದ್ದಾರೆ.

'ಈ ಕಾಯಿಲೆಗಳಿಗೆ ಔಷಧ ವೆಚ್ಚವೂ ದುಬಾರಿ ಆಗಿರುವುದರಿಂದ ಬಹುತೇಕರು ಚಿಕಿತ್ಸೆಯನ್ನೇ ಸ್ಥಗಿತ ಮಾಡುತ್ತಿದ್ದಾರೆ. ಮಗು ಬೆಳೆದಂತೆ ಚಿಕಿತ್ಸಾ ವೆಚ್ಚವೂ ಹೆಚ್ಚಾಗಲಿದೆ. ಕೆಲ ಔಷಧಗಳನ್ನು ಆಮದು ಮಾಡಿಕೊಳ್ಳುವುದರಿಂದ ದುಬಾರಿಯಾಗಿವೆ' ಎಂದು ಭಾರತೀಯ ವಿರಳ ಕಾಯಿಲೆ ಸಂಸ್ಥೆಯ ಸಹ ಸಂಸ್ಥಾಪಕ ಪ್ರಸನ್ನ ಶಿರೋಲ್ ತಿಳಿಸಿದರು.



'₹5 ಕೋಟಿವರೆಗೂ ವೆಚ್ಚ'

'ವಿರಳ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ನಿರಂತರ ಚಿಕಿತ್ಸೆ ಹಾಗೂ ಔಷಧ ಅಗತ್ಯ. ಕೇಂದ್ರ ಆರೋಗ್ಯ ಸಚಿವಾಲಯ ಒದಗಿಸುತ್ತಿರುವ ₹50 ಲಕ್ಷವು ರೋಗಿಗೆ ಆರು ತಿಂಗಳಿಂದ ಒಂದು ವರ್ಷದವರೆಗೆ ಮಾತ್ರ ಸಾಕಾಗುತ್ತಿದೆ. ಸದ್ಯ ಕೇಂದ್ರದಲ್ಲಿ 300ಕ್ಕೂ ಅಧಿಕ ರೋಗಿಗಳಿಗೆ ಆರ್ಥಿಕ ನೆರವಿನಡಿ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ದಾನಿಗಳ ನೆರವು, ಕಾರ್ಪೊರೇಟ್ ದೇಣಿಗೆಯನ್ನೂ ಪಡೆದು ಚಿಕಿತ್ಸೆ ಒದಗಿಸಬೇಕಾದ ಪರಿಸ್ಥಿತಿಯಿದೆ. ರೋಗ ಹಾಗೂ ತೂಕದ ಮೇಲೆಯೂ ಚಿಕಿತ್ಸಾ ವೆಚ್ಚ ನಿರ್ಧಾರವಾಗುತ್ತದೆ. 10 ಕೆ.ಜಿ ಇರುವ ಮಗುವಿಗೆ ವಾರ್ಷಿಕ ₹30 ಲಕ್ಷ ಬೇಕಾಗುತ್ತದೆ. ಕೆಲವರಿಗೆ ₹1 ಕೋಟಿಯಿಂದ ₹5 ಕೋಟಿವರೆಗೂ ಅಗತ್ಯವಿರುತ್ತದೆ' ಎಂದು ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ ಡಾ. ಮೀನಾಕ್ಷಿ ಭಟ್ ತಿಳಿಸಿದರು.

ಸುರಂಗ ಕುಸಿತ: ಇನ್ನೂ ಕಾಣದ 'ಬೆಳಕು'

ನಾಗರ್‌ಕರ್ನೂಲ್ (ಪಿಟಿಐ): 'ಇಲ್ಲಿನ ಶ್ರೀಶೈಲಂ ಎಡ ದಂಡೆ ಕಾಲುವೆಯ ಸುರಂಗದೊಳಗೆ ಸಿಲುಕಿರುವ ಕಾರ್ಮಿಕರ ರಕ್ಷಣೆಯಲ್ಲಿ ತೊಡಗಿರುವ ಸಿಬ್ಬಂದಿಯ ಜೀವವೂ ಅಪಾಯದಲ್ಲಿದೆ' ಎಂದು ತೆಲಂಗಾಣ ನೀರಾವರಿ ಸಚಿವ ಉತ್ತಮ್ ಕುಮಾರ್ ರೆಡ್ಡಿ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸುರಂಗಕ್ಕೆ ಒಂದೇ ಪ್ರವೇಶ/ನಿರ್ಗಮನ ದ್ವಾರ ಇರುವುದರಿಂದ ರಕ್ಷಣಾ ಪ್ರಕ್ರಿಯೆ ಅತ್ಯಂತ ಕಷ್ಟಕರ ಮತ್ತು ಸವಾಲಿನದ್ದಾಗಿದೆ ಎಂದು ಈ ಕಾರ್ಯಾಚರಣೆಯಲ್ಲಿ ತೊಡಗಿರುವ ತಜ್ಞರು ಹೇಳಿದ್ದಾರೆ' ಎಂದರು.

'ಭೂಮಿಯ ಒಳಗಿನ ಟೆಕ್ಟಾನಿಕ್ ಫಲಕಗಳು ಸ್ವಲ್ಪ ಪ್ರಮಾಣದಲ್ಲಿ ಚಲಿಸಿದ್ದೇ ಸುರಂಗದ ಒಂದು ಭಾಗ ಕುಸಿಯಲು ಕಾರಣ. ಸುರಂಗದಲ್ಲಿ ಕೆಸರು ತುಂಬಿದ್ದು, ನೀರಿನ ಹರಿವು ಮುಂದುವರಿದಿದೆ. ಇದರಿಂದ ರಕ್ಷಣಾ ತಂಡಗಳ ಸಿಬ್ಬಂದಿಯ ಪ್ರಾಣಕ್ಕೂ ಅಪಾಯ ಉಂಟಾಗಬಹುದು ಎಂದು ಕೆಲವರು ಹೇಳಿದ್ದಾರೆ. ಈ ಎಲ್ಲಾ ಅಪಾಯಗಳ ಮಧ್ಯೆ ರಕ್ಷಣಾ ಕಾರ್ಯಾಚರಣೆಯನ್ನು ಹೇಗೆ ಮುಂದುವರಿಸಬೇಕು ಎಂಬ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

ಮುಖ್ಯಾಂಶಗಳು

- ನಿರಂತರ ಆಮ್ಲಜನಕ ಪೂರೈಕೆ
- ಮುಂದುವರಿದ ರಕ್ಷಣಾ ಕಾರ್ಯ

‘ಬಿ’ ಖಾತಾ: ಹೆಚ್ಚುವರಿ ಶುಲ್ಕ

₹10,000 ಶುಲ್ಕದ ಹೊರೆ; ಬಡಜನರಿಗೆ ದಾವಣಗೆರೆ ಮಹಾನಗರ ಪಾಲಿಕೆ ‘ಬರೆ’

• ಸಿದ್ದಯ್ಯ ಹಿರೇಮಠ

ದಾವಣಗೆರೆ: ಅನಧಿಕೃತ ಬಡಾವಣೆಗಳಲ್ಲಿನ ನಿವೇಶನ ಹಾಗೂ ಮನೆಗಳಿಗೆ ‘ಇ- ಆಸ್ತಿ’ ಸೃಜಿಸಿ, ‘ಬಿ’ ಖಾತಾ ನೀಡುವ ಅಭಿಯಾನವನ್ನು ರಾಜ್ಯ ಸರ್ಕಾರ ಫೆ.19ರಿಂದ ಆರಂಭಿಸಿದ್ದು, ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲೂ ಭರದಿಂದ ಸಾಗಿದೆ. ಆದರೆ, ರಾಜ್ಯದ ಯಾವುದೇ ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಆಕರಿಸದ ‘ಸುಧಾರಣೆ ಶುಲ್ಕ’ವನ್ನು ಇಲ್ಲಿ ಅರ್ಜಿದಾರರಿಂದ ಪಡೆಯಲಾಗುತ್ತಿದೆ.

‘ಪ್ರತಿ ನಿವೇಶನ ಅಥವಾ ಮನೆಗೆ ‘ಬಿ’ ಖಾತಾ ನೀಡಲು ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ₹10,000 ಶುಲ್ಕ ಪಡೆದು ಇ-ರಸೀದಿ ನೀಡಲಾಗುತ್ತಿದೆ. ಈ ಮಾದರಿಯ ಶುಲ್ಕವನ್ನು ರಾಜ್ಯದ ಇತರ ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಡೆಯಲಾಗುತ್ತಿಲ್ಲ. ಈ ಕುರಿತು ಅಧಿಕೃತ ಮಾಹಿತಿಯನ್ನೂ ನೀಡದೇ ಹೆಚ್ಚುವರಿ ಶುಲ್ಕದ ಹೆಸರಿನಲ್ಲಿ ಸುಲಿಗೆ ಮಾಡಲಾಗುತ್ತಿದೆ’ ಎಂದು ಕೆಲವು ಅರ್ಜಿದಾರರು ದೂರಿದ್ದಾರೆ.

‘ಈಚೆಗೆ ನಡೆದ ಮಹಾನಗರ ಪಾಲಿಕೆಯ ಸರ್ವ ಸದಸ್ಯರ ಸಭೆಯಲ್ಲಿ ಈ ಕುರಿತು ಠರಾವು (ನಿರ್ಧಾರ) ಹೊರಡಿಸಿ ಶುಲ್ಕದ ಮೊತ್ತವನ್ನು ₹10,000ಕ್ಕೆ ಹೆಚ್ಚಿಸಲಾಗಿದೆ. 2016ರಿಂದ ಈ ಶುಲ್ಕ ₹8,000 ಇತ್ತು’ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.



ದಾವಣಗೆರೆಯ ಮಹಾನಗರ ಪಾಲಿಕೆ ಕಚೇರಿ

‘ರಾಜ್ಯ ಸರ್ಕಾರ ಇಂಥ ಶುಲ್ಕ ಸಂಗ್ರಹಿಸುವಂತೆ ಯಾವುದೇ ರೀತಿಯ ಆದೇಶ ಹೊರಡಿಸಿಲ್ಲ. ಸುತ್ತೋಲೆ ಮೂಲಕವೂ ಸೂಚಿಸಿಲ್ಲ. ಬದಲಿಗೆ, ಪಾಲಿಕೆಯ ಸರ್ವ ಸದಸ್ಯರ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ‘ಬಿ’ ಖಾತಾಗಾಗಿ ಅರ್ಜಿ ಸಲ್ಲಿಸುವವರಿಂದ ₹10,000 ಶುಲ್ಕ ಪಡೆಯುವ ಕುರಿತ ಠರಾವು ಹೊರಡಿಸಲಾಗಿದೆ. ರಾಜ್ಯದ ಇತರೆಡೆ ಈ ರೀತಿಯ ಶುಲ್ಕ ಸಂಗ್ರಹವಾಗುತ್ತಿದೆಯೋ ಇಲ್ಲವೋ ಗೊತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

ಮಹಾನಗರ ಪಾಲಿಕೆ ಸದಸ್ಯರ 5 ವರ್ಷಗಳ ಅಧಿಕಾರಾವಧಿ ಫೆ.19ಕ್ಕೆ ಕೊನೆಗೊಂಡಿದೆ. ಅದಕ್ಕಿಂತ ಕೆಲವೇ ದಿನ ಮೊದಲು ಶುಲ್ಕ ಸಂಗ್ರಹಿಸುವ ಠರಾವು ಹೊರಡಿಸಲಾಗಿದೆ ಎಂದು ಪಾಲಿಕೆ ಮೂಲಗಳು ಹೇಳುತ್ತವೆ. ವಿಶೇಷವೆಂದರೆ ಅಂದಿನಿಂದಲೇ ‘ಬಿ’ ಖಾತಾ ಅಭಿಯಾನ ರಾಜ್ಯದಾದ್ಯಂತ ಶುರುವಾಗಿದೆ.



‘ಬಿ’ ಖಾತಾ ನಿವೇಶನವನ್ನು ಮಾರಾಟ ಮಾಡಲು ಮಾತ್ರ ಅವಕಾಶವಿದೆ. ಬಡಜನರು ಮನೆ ಕಟ್ಟಿಕೊಳ್ಳಲು ಗೃಹಸಾಲ ಸೌಲಭ್ಯ ದೊರಕಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳಬೇಕು

ಕೆ.ಪ್ರಸನ್ನಕುಮಾರ್, ಮಾಜಿ ಸದಸ್ಯ ಮಹಾನಗರ ಪಾಲಿಕೆ, ದಾವಣಗೆರೆ

‘ನಗರದಲ್ಲಿ 1.10 ಲಕ್ಷ ಆಸ್ತಿಗಳಿವೆ. ಅವುಗಳಲ್ಲಿ ಕೇವಲ 80,000 ಆಸ್ತಿಗಳು ನೋಂದಣಿಯಾಗಿವೆ. ಇನ್ನುಳಿದ 30,000ಕ್ಕೂ ಅಧಿಕ ಆಸ್ತಿಗಳು ಅಕ್ರಮವಾಗಿವೆ. ಕೆಲವರು 20 ವರ್ಷಗಳಿಂದ ಅಕ್ರಮವಾಗಿ ಮನೆ ಕಟ್ಟಿಕೊಂಡು ತೆರಿಗೆಯನ್ನೇ ಕಟ್ಟಿಲ್ಲ. ಅಂಥವರು ₹10,000 ಅಭಿವೃದ್ಧಿ ಮತ್ತು ಸುಧಾರಣೆ ಶುಲ್ಕ ಪಾವತಿಸುತ್ತಿದ್ದಾರೆ. ರಾಜ್ಯದ ಇತರೆಡೆ ಈ ರೀತಿಯ ಶುಲ್ಕ ಇರದಿರಬಹುದು. ನಾವು ಸಂಗ್ರಹಿಸಬಾರದು ಅಂತ ಇಲ್ಲ’ ಎಂದು ಫೆ.19ರವರೆಗೆ ನಗರದ ಮೇಯರ್ ಆಗಿದ್ದ ಕೆ.ಚಮನ್‌ಸಾಬ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಸಂಗ್ರಹದಿಂದ ಬಡ ಜನತೆಗೆ ಸಮಸ್ಯೆಯಾಗುತ್ತಿದೆ ಎಂದಾದರೆ ಪಾಲಿಕೆ ಆಯುಕ್ತರು ಮತ್ತು ಆಡಳಿತಾಧಿಕಾರಿ ಜೊತೆ ಚರ್ಚಿಸಿ ಶುಲ್ಕ ರದ್ದತಿಗೆ ಕೋರಲಾಗುವುದು’ ಎಂದು ಅವರು ಹೇಳಿದರು.

‘ಹೊಸ ಬಡಾವಣೆಯ ಪ್ರತಿ ನಿವೇಶನಕ್ಕೆ ಬಾಗಿಲು ಸಂಖ್ಯೆ ನೀಡಲು ಮಾತ್ರ ಈ ರೀತಿಯ ಶುಲ್ಕ ಸಂಗ್ರಹಿಸುವುದಾಗಿ ಈಚೆಗೆ ನಡೆದ ಸಭೆಯಲ್ಲಿ ಠರಾವು ಹೊರಡಿಸಲಾಗಿದೆ. ಬಡವರಿಗೆ ಸಹಾಯವಾಗಲೆಂದು ಸರ್ಕಾರ ‘ಬಿ’ ಖಾತಾ ನೀಡುವ ವಿಶಿಷ್ಟ ಅಭಿಯಾನ ಆರಂಭಿಸಿದೆ. ಬಡವರಿಂದ ಸಂಗ್ರಹಿಸಿರುವ ಶುಲ್ಕವನ್ನು ಮರಳಿಸಬೇಕು’ ಎಂದು 24ನೇ ವಾರ್ಡ್ ಸದಸ್ಯರಾಗಿದ್ದ ಕೆ.ಪ್ರಸನ್ನಕುಮಾರ್ ಆಗ್ರಹಿಸಿದರು.

‘ವಿಚಾರಣೆ ಎದುರಿಸಲು ಸಿದ್ಧ’

ಪ್ರಜಾವಾಣಿ ವಾರ್ತೆ


ಜಿ.ಕುಮಾರ ನಾಯಕ

ರಾಯಚೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರಿಹಾರ ರೂಪದಲ್ಲಿ ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೋಕಾಯುಕ್ತ ವಿಚಾರಣೆಯಲ್ಲಿ ಮಾಹಿತಿ ನೀಡಿದ್ದೇನೆ. ಹೀಗಿದ್ದರೂ ಕರ್ತವ್ಯ ಲೋಪವಾಗಿದೆ ಎಂದು ಗುರುತಿಸಿದರೆ ಅದನ್ನು ಎದುರಿಸಲು ಸಿದ್ಧ’ ಎಂದು ರಾಯಚೂರು ಸಂಸದ ಜಿ.ಕುಮಾರ ನಾಯಕ ಹೇಳಿದರು.

‘ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಲೋಕಾಯುಕ್ತರು ಸಲ್ಲಿಸಿರುವ ವರದಿಯಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಅದನ್ನು ನೋಡಿಲ್ಲ. ನಾನು ಯಾವುದೇ ನಿಯಮ ಬಾಹಿರವಾಗಿ ಕೆಲಸ ಮಾಡಿಲ್ಲ’ ಎಂದು ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದರು.

‘ಕಡತ ಪರಿಶೀಲನೆ ಮಾಡಿಯೇ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಕರ್ತವ್ಯ ಲೋಪವಾಗಿದೆ ಎಂದು ವರದಿಯಲ್ಲಿದ್ದರೆ ಅದನ್ನು ಎದುರಿಸುವೆ. ವರದಿ ನೋಡಿದ ಬಳಿಕ ನಿಖರವಾಗಿ ಪ್ರತಿಕ್ರಿಯಿಸುತ್ತೇನೆ’ ಎಂದು ಕುಮಾರ ನಾಯಕ ತಿಳಿಸಿದರು.

ರಾಜೀನಾಮೆಗೆ ಒತ್ತಾಯ


ಆರ್. ಅಶೋಕ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕಣದಲ್ಲಿ ಕಾಂಗ್ರೆಸ್ ಸಂಸದ ಕುಮಾರ ನಾಯಕ (ಅಂದಿನ ಮೈಸೂರು ಜಿಲ್ಲಾಧಿಕಾರಿ) ಅವರ ರಾಜೀನಾಮೆ ಪಡೆಯಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಪರಿಹಾರ ರೂಪದಲ್ಲಿ ಮುಡಾ ನಿವೇಶನ ಹಂಚಿಕೆ ಮಾಡಿದ ಪ್ರಕರಣದಲ್ಲಿ ಅಂದು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಕುಮಾರ ನಾಯಕ ಅವರು ಕರ್ತವ್ಯಲೋಪ ಎಸಗಿರುವುದು ಲೋಕಾಯುಕ್ತ ವರದಿಯಲ್ಲಿ ಸಾಬೀತಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಕ್ಷಣ ಅವರ ರಾಜೀನಾಮೆ ಪಡೆಯಬೇಕು. ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕೆಪಿಎಸ್‌ಸಿ: ಅರ್ಜಿ ಭರ್ತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುತ್ತಿರುವ 2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಅನುವು ಮಾಡಿಕೊಟ್ಟಿರುವ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಮುಖ್ಯ ಪರೀಕ್ಷೆಗೆ ಅರ್ಜಿ ಭರ್ತಿ ಮಾಡಲು ಅವಕಾಶ ಕಲ್ಪಿಸಿದೆ.

ಈ ಸಂಬಂಧ ಡಿ.ಪವಿತ್ರಾ ಸೇರಿದಂತೆ ಇತರೆ 51 ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠವು ಈ ಕುರಿತಂತೆ ಆದೇಶಿಸಿದೆ.

ಕಳೆದ ವಾರವಷ್ಟೇ ಮುಖ್ಯ ಪರೀಕ್ಷೆಯ ಅಧಿಸೂಚನೆಯನ್ನು ಅಮಾನತಿನಲ್ಲಿರಿಸಿದ್ದ ಕೆಎಸ್‌ಎಟಿ, ಆ ಆದೇಶವನ್ನು ಮಾರ್ಪಾಡು ಮಾಡಿ ಪ್ರಕ್ರಿಯೆ ಮುಂದುವರಿಸಲು ಅವಕಾಶ ಮಾಡಿಕೊಟ್ಟಿದೆ. ಅಲ್ಲದೆ, ಅರ್ಜಿಯು ಅಂತಿಮ ಆದೇಶಕ್ಕೆ ಒಳಪಟ್ಟಿರಲಿದೆ’ ಎಂದು ತಿಳಿಸಿದ್ದು ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿದೆ. ಈ ಆದೇಶದಿಂದಾಗಿ ಪೂರ್ವಭಾವಿ ಪರೀಕ್ಷೆಯಲ್ಲಿ 1:15ರಂತೆ ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಪ್ರಕ್ರಿಯೆ ಮುಂದುವರಿಸಲು ಅವಕಾಶ ದೊರೆತಂತಾಗಿದೆ.

‘ಪರೀಕ್ಷೆಯಲ್ಲಿ ಸುಮಾರು 59 ಪ್ರಶ್ನೆಗಳ ಅನುವಾದದಲ್ಲಿ ದೋಷ ಕಂಡುಬಂದಿವೆ. ಆದ್ದರಿಂದ, ಪರೀಕ್ಷೆ ರದ್ದುಗೊಳಿಸಬೇಕು’ ಎಂದು ಅಭ್ಯರ್ಥಿಗಳು ಕೆಎಸ್‌ಎಟಿ ಮೆಟ್ಟಿಲೇರಿದ್ದರು.

ಬೂಕರ್ ಪ್ರಶಸ್ತಿ ಆಯ್ಕೆಪಟ್ಟಿಯಲ್ಲಿ ಬಾನು ಮುಷ್ತಾಕ್ ಕೃತಿ

ಲಂಡನ್ (ಪಿಟಿಐ): ಕನ್ನಡ ಸಾಹಿತಿ ಬಾನು ಮುಷ್ತಾಕ್ ಅವರ ಸಣ್ಣ ಕತೆಗಳ ಅನುವಾದಿತ ಸಂಕಲನ ‘ಹಾರ್ಟ್ ಲ್ಯಾಂಪ್’, ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಪರಿಗಣಿಸಲು ಮಂಗಳವಾರ ಸಿದ್ಧವಾಗಿರುವ ಪಟ್ಟಿಯಲ್ಲಿದೆ.



ದೀಪಾ ಭಸ್ತಿ ಈ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಕೌಟುಂಬಿಕ ಹಾಗೂ ಸಮುದಾಯದ ತುಮುಲಗಳನ್ನು ಪ್ರಾದೇಶಿಕ ಸೊಗಡಿನೊಂದಿಗೆ, ವ್ಯಂಗ್ಯದ ಶೈಲಿಯಲ್ಲಿ ಈ ಕತೆಗಳು ಕಟ್ಟಿಕೊಟ್ಟಿವೆ ಎಂದು ತೀರ್ಪುಗಾರರು ವಿಶ್ಲೇಷಿಸಿದ್ದಾರೆ.

ಹದಿಮೂರು ಕೃತಿಗಳು ಬೂಕರ್ ಪ್ರಶಸ್ತಿಯ ಅಂತಿಮ ಪಟ್ಟಿಯಲ್ಲಿವೆ. 50 ಸಾವಿರ ಪೌಂಡ್ (₹55 ಲಕ್ಷಕ್ಕೂ ಹೆಚ್ಚು) ಮೊತ್ತದ ಬಹುಮಾನದ ಈ ಪ್ರಶಸ್ತಿಯ ‘ಲಾಂಗ್ ಲಿಸ್ಟ್’ಗೆ ಇದೇ ಮೊದಲ ಬಾರಿಗೆ ಕನ್ನಡದಿಂದ ಅನುವಾದಗೊಂಡ ಕೃತಿಯು ಆಯ್ಕೆಯಾಗಿದೆ.

ಈ ಪಟ್ಟಿಯಲ್ಲಿನ ಹದಿಮೂರು ಕೃತಿಗಳಲ್ಲಿ ಆರು ಕೃತಿಗಳು ಅಂತಿಮ ಸುತ್ತಿಗೆ ಆಯ್ಕೆಯಾಗಲಿವೆ. ಅವುಗಳಲ್ಲಿ ಒಂದು ಏಪ್ರಿಲ್ 8ರಂದು ಬಹುಮಾನಕ್ಕೆ ಆಯ್ಕೆಗೊಳ್ಳಲಿದೆ.

ಸತೀಶ್ ಗಡಿಪಾರು; ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಸ್ಲಿಂ ಧರ್ಮದ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಪೋಸ್ಟ್ ಹರಿಬಿಟ್ಟ ಪ್ರಕರಣದ ಆರೋಪಿ ಸತೀಶ್ ಗಡಿಪಾರು ಪ್ರಕ್ರಿಯೆಗೆ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ.

ಗಡಿಪಾರಿಗೆ ಮುಂದಾಗಿದ್ದ ನಗರ ಪೊಲೀಸರು, ಕಾರಣ ಕೇಳಿ ನೋಟಿಸ್ ನೀಡಿದ್ದರು. ಆರೋಪಿ ಹಾಗೂ ಅವರ ಪರ ವಕೀಲ ಅ.ಮಾ.ಭಾಸ್ಕರ್ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ವಿಚಾರಣೆಗೆ ಭಾಗಿಯಾಗಿ ಆಕ್ಷೇಪಣೆ ಸಲ್ಲಿಸಿದ್ದರು. ಬಳಿಕ ಪೊಲೀಸರ ನಿರ್ಧಾರ ಪ್ರಶ್ನಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿದ್ದರು.

ಸರ್ಕಾರದ ವಿರುದ್ಧ ಬಿಜೆಪಿ-ಜೆಡಿಎಸ್ ಜಂಟಿ ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ, ಕೆಪಿಎಸ್‌ಸಿ ಹಗರಣ ಗಳನ್ನೇ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡು ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರವನ್ನು ಕಟ್ಟಿಹಾಕುವ ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ನಾಯಕರು ಕಾರ್ಯತಂತ್ರ ರೂಪಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಎರಡೂ ಪಕ್ಷಗಳ ಸಮನ್ವಯ ಸಮಿತಿ ಸಭೆಯಲ್ಲಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಡಿ.ವಿ. ಸದಾನಂದ ಗೌಡ, ಸಂಸದ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಭಾಗವಹಿಸಿದ್ದರು. ಕಲಾಪದಲ್ಲಿ ಕೈಗೆತ್ತಿಕೊಳ್ಳಬಹುದಾದ ವಿಷಯಗಳು, ಸರ್ಕಾರದ ವಿರುದ್ಧ ಸದನದ ಒಳಗೆ, ಹೊರಗೆ ರೂಪಿಸಬಹುದಾದ ಹೋರಾಟಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಆರ್. ಅಶೋಕ, ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್‌ಗಳ ಹಾವಳಿ ಮಿತಿಮೀರಿದೆ. ಸಾಲ ಪಡೆದವರ ಸಾವಿನ ಸರಣಿ ಸುಗ್ರೀವಾಜ್ಞೆ ಜಾರಿಗೊಳಿಸಿದ ನಂತರವೂ ನಿಂತಿಲ್ಲ. ಕೋಮು ಗಲಭೆ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಕರ್ನಾಟಕ ಲೋಕಸೇವಾ ಆಯೋಗದ ಹಗರಣ ಯುವ ಜನರ ಭವಿಷ್ಯಕ್ಕೆ ಮಾರಕವಾಗಿದೆ. ರೈತರ ಆತ್ಮಹತ್ಯೆ, ಬಾಣಂತಿಯರ ಸಾವಿನ ಸರಣಿ ಮುಂದುವರಿದಿದೆ. ಈ ಎಲ್ಲ ವಿಷಯಗಳನ್ನು ಇಟ್ಟುಕೊಂಡು ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಬೆಂಗಳೂರು ಏಳು ಚೂರು: ಕುಮಾರಸ್ವಾಮಿ

ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ರಾಜಧಾನಿಯನ್ನು ಏಳು ಚೂರು ಮಾಡಲು ಹೊರಟಿರುವ ರಾಜ್ಯ ಸರ್ಕಾರ, ಕೆಂಪೇಗೌಡರ ಹೆಸರನ್ನು ಸಂಪೂರ್ಣ ನಾಶ ಮಾಡಲು ಹೊರಟಿದೆ’ ಎಂದು ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ದೂರಿದರು. ‘ಬೆಂಗಳೂರಿನ ಅಭಿವೃದ್ಧಿ ಕುಂಠಿತವಾಗಿದೆ. ಮೆಟ್ರೊ ಪ್ರಯಾಣದರ ಹೆಚ್ಚಳವಾಗಿದೆ. ಇಂತಹ ವಿಷಯಗಳ ಕುರಿತು ಎರಡೂ ಪಕ್ಷಗಳ ಶಾಸಕರು ಸದನದಲ್ಲಿ ಧ್ವನಿ ಎತ್ತಲಿದ್ದಾರೆ’ ಎಂದರು.

ಮಲ್ಪೆ: ಸಂಶಯಾಸ್ಪದ ರೀತಿಯಲ್ಲಿ ಸಂಚಾರ • ಮೂವರ ಬಂಧನ

ಒಮಾನ್‌ನ ಮೀನುಗಾರಿಕಾ ಬೋಟ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಸೇಂಟ್ ಮೇರಿಸ್ ದ್ವೀಪದ ಬಳಿ ಸಂಶಯಾಸ್ಪದ ರೀತಿಯಲ್ಲಿ ಸಂಚರಿಸುತ್ತಿದ್ದ ಒಮಾನ್ ದೇಶದ ಮೀನುಗಾರಿಕಾ ಬೋಟೊಂದನ್ನು ಕರಾವಳಿ ಕಾವಲು ಪೊಲೀಸ್ (ಸಿಎಸ್‌ಪಿ) ಹಾಗೂ ಮಂಗಳೂರಿನ ಕೋಸ್ಟ್ ಗಾರ್ಡ್ ವಶಕ್ಕೆ ಪಡೆದಿದ್ದು, ಅದರಲ್ಲಿದ್ದ ಮೂವರನ್ನು ಬಂಧಿಸಲಾಗಿದೆ.

ತಮಿಳುನಾಡಿನ ಜೇಮ್ಸ್ ಫ್ರಾಂಕ್ಲಿನ್ ಮೋಸೆಸ್ (50), ರಾಬಿನ್ ಸ್ಟನ್ (50) ಹಾಗೂ ಡೆರೋಸ್ ಅಲ್ಫೋನ್ಸ್ (38) ಬಂಧಿತರು.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ನ್ಯಾಯಾಲಯವು ಅವರಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಫೆ. 17ರಂದು ಒಮಾನ್‌ನ ದುಕಂ ಮೀನುಗಾರಿಕಾ ಬಂದರಿನಿಂದ ಹೊರಟಿದ್ದ ಈ ಬೋಟ್ ಕಾರವಾರದ ಮೂಲಕ ಮಲ್ಪೆಯ ಸೇಂಟ್ ಮೇರಿಸ್ ದ್ವೀಪದ ಕಡೆಗೆ ಸಂಚರಿಸುತ್ತಿತ್ತು. ಈ ಕುರಿತು ಮಾಹಿತಿ ಪಡೆದ ಸಿಎಸ್‌ಪಿ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಫೆ.23ರಂದು ಸೇಂಟ್ ಮೇರಿಸ್ ದ್ವೀಪದ ಬಳಿ ಬೋಟ್ ಅನ್ನು ತಪಾಸಣೆ ನಡೆಸಿ, ಮಂಗಳೂರಿನ ಕೋಸ್ಟ್ ಗಾರ್ಡ್ ಸಹಕಾರದೊಂದಿಗೆ ವಶಕ್ಕೆ ಪಡೆದಿದ್ದಾರೆ.


ವಶಕ್ಕೆ ಪಡೆಯಲಾದ ಮೀನುಗಾರಿಕಾ ಬೋಟ್

ಬಂಧಿತರ ಬಳಿ ಪಾಸ್‌ಪೋರ್ಟ್ ಹಾಗೂ ಬೋಟ್‌ನ ದಾಖಲೆಗಳು ಕಂಡುಬಂದಿಲ್ಲ. ಬೋಟ್ ಅನ್ನು ಕೋಸ್ಟ್ ಗಾರ್ಡ್, ಸಿಎಸ್‌ಪಿ, ಕೇಂದ್ರ ಗುಪ್ತಚರ ದಳ, ಕಸ್ಟಮ್ಸ್, ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಜಂಟಿಯಾಗಿ ಪರಿಶೀಲನೆ ನಡೆಸಿದ್ದು ಯಾವುದೇ ಸಂಶಯಾಸ್ಪದ ವಸ್ತುಗಳು ದೊರೆತಿಲ್ಲ ಎಂದೂ ವಿವರಿಸಿದ್ದಾರೆ.

ಕೋಸ್ಟ್ ಗಾರ್ಡ್ ಅಧಿಕಾರಿ ಸುಖಿಂದರ್ ಸಿಂಗ್ ಅವರ ದೂರನ್ನು ಆಧರಿಸಿ ಮಲ್ಪೆಯ ಸಿಎಸ್‌ಪಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಸಿಎಸ್‌ಪಿ ವರಿಷ್ಠಾಧಿಕಾರಿ ಮಿಥುನ್ ಎಚ್‌.ಎನ್‌., ಇಂಡಿಯನ್ ಕೋಸ್ಟ್ ಗಾರ್ಡ್ ಕಮಾಂಡರ್ ವಿಶಾಲ್ ರಾಣ, ಸಿಎಸ್‌ಪಿ ಡಿವೈಎಸ್‌ಪಿ ಟಿ.ಎಸ್. ಸುಲ್ಫಿ, ಇನ್‌ಸ್ಪೆಕ್ಟರ್ ಅನಂತ ಪದ್ಮನಾಭ, ಪೊಲೀಸ್ ಇನ್‌ಸ್ಪೆಕ್ಟರ್ ಲೋಕೇಶ್, ಅಧಿಕಾರಿಗಳಾದ ಪ್ರಮೋದ್ ಕುಮಾರ್ ಪಿ., ಶಿವಶಂಕರ್, ಫಮೀನಾ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

‘ಏಜೆನ್ಸಿ ಬಳಿ ಪಾಸ್‌ಪೋರ್ಟ್’

ಬಂಧಿತರು ಒಮಾನ್‌ನಲ್ಲಿ ಮೀನುಗಾರಿಕಾ ಕೆಲಸ ನಿರ್ವಹಿಸುತ್ತಿದ್ದು, ಅಲ್ಲಿನ ಏಜೆನ್ಸಿಯವರು ಅವರ ಪಾಸ್‌ಪೋರ್ಟ್‌ಗಳನ್ನು ತಮ್ಮ ಕೈವಶ ಇರಿಸಿಕೊಂಡಿದ್ದ ಕಾರಣ ಅವರಿಗೆ ಊರಿಗೆ ಬರಲು ಸಾಧ್ಯವಾಗಿರಲಿಲ್ಲ. ಸಂಬಳ, ಆಹಾರ ಸಿಗದ ಕಾರಣ ಅವರು ಮೀನುಗಾರಿಕಾ ಬೋಟ್ ಮೂಲಕ ಭಾರತಕ್ಕೆ ಬಂದಿರುವುದಾಗಿ ತಿಳಿದುಬಂದಿದೆ. ಈ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಕರಾವಳಿ ಕಾವಲು ಪೊಲೀಸ್ ಘಟಕದ ವರಿಷ್ಠಾಧಿಕಾರಿ ಮಿಥುನ್ ಎಚ್‌.ಎನ್‌. ತಿಳಿಸಿದರು.

ಬುಧವಾರ, ಫೆಬ್ರುವರಿ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 57 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಗರಗಳಲ್ಲಿ ಸಮಸ್ಯೆಯಾಗಿ ಕಾಡುತ್ತಿರುವ ಟ್ರಾಫಿಕ್ ತೊಂದರೆಗಳಿಗೆ ಎ.ಐ. ತಂತ್ರಜ್ಞಾನ ಸ್ವಲ್ಪ ಪರಿಹಾರವನ್ನಾದರೂ ಕೊಟ್ಟೀತೆಂಬ ಭರವಸೆಯಿದೆ

ಮಹಾಶಿವರಾತ್ರಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
74,602 ▲	22,547 ▼	87.19 ▼

ಸಿಬಿಎಸ್‌ಇ 10ನೇ ತರಗತಿಗೆ 2 ಬಾರಿ ಪರೀಕ್ಷೆ

ನವದೆಹಲಿ(ಪಿಟಿಐ): 10ನೇ ತರಗತಿಯ ಪರೀಕ್ಷೆಗಳನ್ನು 2026ರಿಂದ ವರ್ಷದಲ್ಲಿ ಎರಡು ಬಾರಿ ನಡೆಸುವ ಕರಡು ನಿಯಮಾವಳಿಗಳಿಗೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಮಂಗಳವಾರ ಅನುಮೋದನೆ ನೀಡಿದೆ.

‘ಕರಡು ನಿಯಮಾವಳಿಗಳನ್ನು ಪ್ರಕಟಿಸಲಾಗಿದ್ದು, ಮಾರ್ಚ್ 9ರವರೆಗೆ ತಮ್ಮ ಪ್ರತಿಕ್ರಿಯೆ ಸಲ್ಲಿಸಬಹುದು. ಬಳಿಕ ಪರೀಕ್ಷಾ ನೀತಿಯನ್ನು ಅಂತಿಮಗೊಳಿಸಲಾಗುತ್ತದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕರಡು ನಿಯಮಾವಳಿ ಪ್ರಕಾರ, ಮೊದಲ ಹಂತದ ಪರೀಕ್ಷೆಗಳು ಫೆ.17ರಿಂದ ಮಾರ್ಚ್ 6ರವರೆಗೆ ಹಾಗೂ ಎರಡನೇ ಹಂತದ ಪರೀಕ್ಷೆಗಳು ಮೇ 5ರಿಂದ 20ರವರೆಗೆ ನಡೆಯಲಿವೆ.

11ನೇ ಪುಟ ನೋಡಿ

ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ‘ಸುಪ್ರೀಂ’

ಡಿನೋಟಿಫೈ: ಎಚ್‌ಡಿಕೆಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ



ನವದೆಹಲಿ: ಕೇಂದ್ರದ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಅಕ್ರಮ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಮತ್ತೆ ವಿಚಾರಣೆ ಎದುರಿಸುವ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಅಕ್ರಮ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ತಡೆ ನೀಡುವಂತೆ ಕೋರಿ ಕುಮಾರಸ್ವಾಮಿ ಸಲ್ಲಿಸಿದ್ದ ಮನವಿಯನ್ನು 2020ರಲ್ಲಿ ಹೈಕೋರ್ಟ್ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದ್ದರು.

ಕುಮಾರಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಲು ಯಾವುದೇ ಪೂರ್ವಾನುಮತಿ ಪಡೆದಿಲ್ಲ ಎಂದು ದೂರಿ ಹಿರಿಯ ವಕೀಲ ಮುಕುಲ್ ರೊಹಟಗಿ ಹಾಗೂ ವಕೀಲ ಬಾಲಾಜಿ ಶ್ರೀನಿವಾಸನ್ ನೇತೃತ್ವದಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ರಾಜೇಶ್ ಬಿಂದಾಲ್ ಅವರ ಪೀಠ ನಿರಾಕರಿಸಿತು.

ಭ್ರಷ್ಟಾಚಾರ ನಿಗ್ರಹ ಕಾಯ್ದೆ 2018ರ ಸೆಕ್ಷನ್ 19(1)(ಬಿ)ರ ತಿದ್ದುಪಡಿ ಅನುಸಾರ, ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಅಧಿಕಾರದಲ್ಲಿ ಇಲ್ಲದೇ ಇದ್ದರೂ ಪೂರ್ವಾನುಮತಿ ಪಡೆಯಬೇಕು ಎಂಬ ನಿಯಮದ ಆಧಾರದಲ್ಲಿ ಕುಮಾರಸ್ವಾಮಿ ಅರ್ಜಿ ಸಲ್ಲಿಸಿದ್ದರು. ‘ಸೆಕ್ಷನ್ 19ರ ಅಡಿಯಲ್ಲಿ ಪೂರ್ವಾನುಮತಿ ಪಡೆಯದೆ ಪ್ರಕರಣ ದಾಖಲಿಸಲಾಗಿದೆ. ಇದನ್ನು ಪ್ರಶ್ನಿಸಿ ಸೆಕ್ಷನ್ 482 ಸಿಆರ್‌ಪಿಸಿ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸುವ ಮೂಲಕ ಹೈಕೋರ್ಟ್ ಲೋಪ ಎಸಗಿದೆ’ ಎಂದು ಕುಮಾರಸ್ವಾಮಿ ಪರ ವಕೀಲರು ವಾದ ಮಂಡಿಸಿದರು.

ಕರ್ನಾಟಕ ಸರ್ಕಾರ ಪರವಾಗಿ ವಾದಿಸಿದ ಹಿರಿಯ ವಕೀಲ ಹರೀನ್ ಪಿ. ರಾವಲ್ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ಅಮನ್ ಪವಾರ್, ‘ಅರ್ಜಿದಾರರು ಸಂವಿಧಾನದ 136ನೇ ಪರಿಚ್ಛೇದದ ಅಡಿಯಲ್ಲಿ ವಿವೇಚನೆಯ ವ್ಯಾಪ್ತಿಯನ್ನು ಪ್ರಶ್ನಿಸಲು ಅಗತ್ಯವಿರುವ ಸಂಪೂರ್ಣ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ’ ಎಂದು ವಾದಿಸಿದರು.

10ನೇ ಪುಟ ನೋಡಿ

ಪ್ರಕರಣವೇನು?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿರುವ ಎರಡು ವಿಭಿನ್ನ ಜಮೀನುಗಳನ್ನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕುಮಾರಸ್ವಾಮಿ ಡಿನೋಟಿಫೈ ಮಾಡಿದ್ದಾರೆ ಎಂದು ಪ್ರಕರಣ ದಾಖಲಾಗಿತ್ತು.

ಎಲ್ಲಿ: ಬನಶಂಕರಿ ಐದನೇ ಹಂತದ ಹಲಗೆವಡೇರಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 128 ಹಾಗೂ 137
ಎಷ್ಟು ಜಾಗ: 2 ಎಕರೆ 24 ಗುಂಟೆ
ಯಾವಾಗ: 2006ರಿಂದ 2007ರ ನಡುವೆ



ಕುಮಾರಸ್ವಾಮಿ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದಿಂದ ಕೂಡಿವೆ. ಅವರು ಮುಖ್ಯಮಂತ್ರಿ ಹುದ್ದೆಯನ್ನು ನೇರವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ.
ಕರ್ನಾಟಕ ಸರ್ಕಾರದ ವಕೀಲರು

ಮೇಲ್ಮನವಿ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದ್ದು ದೊಡ್ಡ ಸಮಸ್ಯೆ ಅಲ್ಲ, ಕಾನೂನು ವ್ಯಾಪ್ತಿಯಲ್ಲಿ ಹೋರಾಟ ಮುಂದುವರಿಸಲಾಗುವುದು
ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ



ಶಿವ ಭಕ್ತಿ... ಮಹಾಶಿವರಾತ್ರಿ ಅಂಗವಾಗಿ ಕಲಬುರಗಿಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಶಿವಲಿಂಗವನ್ನು ಭತ್ತದಿಂದ ರೂಪಿಸಲಾಗಿದೆ. ಭಕ್ತರು ವೇದಿಕೆಯನ್ನು ಹೂಗಳಿಂದ ಮಂಗಳವಾರ ಸಿಂಗರಿಸಿದರು
ಚಿತ್ರ: ತಾಜುದ್ದೀನ್ ಆಜಾದ್

ಬಿವೈವಿ ವಿರುದ್ಧ ‘ಲಿಂಗಾಯತ’ ಅಸ್ತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಕೆಳಗಿಳಿಸುವುದಕ್ಕಾಗಿ ಪಕ್ಷದ ವರಿಷ್ಠರ ಮೇಲೆ ಒತ್ತಡ ಹಾಕಲು ಲಿಂಗಾಯತ ಮುಖಂಡರನ್ನು ಅಸ್ತ್ರವಾಗಿ ಬಳಸಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಗುಂಪು ಮುಂದಾಗಿದೆ.

ಬೆಂಗಳೂರಿನಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದ 60ಕ್ಕೂ ಹೆಚ್ಚು ಬಿಜೆಪಿ ಮುಖಂಡರ ಜತೆ ಮಂಗಳವಾರ ಸಭೆ ನಡೆಸಿದ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಬಿ.ಪಿ. ಹರೀಶ್, ಯತ್ನಾಳ ಅವರು ವಿಜಯೇಂದ್ರ ವಿರುದ್ಧ ಸಮಾಜದ ಮುಖಂಡರನ್ನು ಒಗ್ಗೂಡಿಸುವ ಕೆಲಸಕ್ಕೆ ಕೈಹಾಕಿದ್ದಾರೆ.

‘ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವಲ್ಲಿ ವಿಜಯೇಂದ್ರ ವಿಫಲರಾಗಿದ್ದಾರೆ. ಬಿಜೆಪಿ ದುರ್ಬಲವಾಗುತ್ತಿದೆ. ಅವರ ನೇತೃತ್ವದಲ್ಲಿ 2028ರಲ್ಲಿ ವಿಧಾನಸಭಾ ಚುನಾವಣೆ ಎದುರಿಸಿದರೆ ಈಗಿರುವ ಸಂಖ್ಯೆಗಿಂತ ಕುಸಿಯಲಿದೆ. ತಕ್ಷಣ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗೆ ಇಳಿಸಬೇಕಿದೆ. ಈ ಕುರಿತು ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡಿಕೊಡಲು ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದು ಸಭೆಯ ನಂತರ ಮುಖಂಡ ಉಮೇಶ್ ಮಹಾಬಲ ಶೆಟ್ಟಿ ಮಾಹಿತಿ ನೀಡಿದರು.

9ನೇ ಪುಟ ನೋಡಿ

ಸೋಮಣ್ಣ, ಬೊಮ್ಮಾಯಿಗೆ ಪಟ್ಟ?

ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದ ಬಸವರಾಜ ಬೊಮ್ಮಾಯಿ ಅಥವಾ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಲ್ಲಿ ಯಾರಿಗಾದರೂ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡುವಂತೆ ಪಕ್ಷದ ವರಿಷ್ಠರನ್ನು ಕೋರಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಲಿಂಗಾಯತ ಸಮಾಜದ ಮುಖಂಡ ವೀರೇಶ್ ಮಾಹಿತಿ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿಜಯೇಂದ್ರ ಅವರಿಂದ ಹೋರಾಟ ಸಾಧ್ಯವಿಲ್ಲ. ಅವರೇ ಮುಂದುವರಿದರೆ ಪಕ್ಷಕ್ಕೂ ನಷ್ಟ, ಲಿಂಗಾಯತ ಸಮಾಜಕ್ಕೂ ನ್ಯಾಯ ಸಿಗದು. ಅವರನ್ನು ಬದಲಾವಣೆ ಮಾಡಲೇಬೇಕು ಎಂದು ವರಿಷ್ಠರಿಗೆ ಮನವರಿಕೆ ಮಾಡಿಕೊಡಲಾಗುವುದು’ ಎಂದು ಹೇಳಿದರು.

‘ವಿಜಯೇಂದ್ರ ಪರ ಸಮಾವೇಶ’

ದಾವಣಗೆರೆ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬೆಂಬಲಕ್ಕೆ ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ. ಹಲವು ಮಠಾಧೀಶರೊಂದಿಗೆ ಈ ಬಗ್ಗೆ ಚರ್ಚಿಸಲಾಗಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

‘ಇಡೀ ಸಮುದಾಯ ಬಿ.ಎಸ್. ಯಡಿಯೂರಪ್ಪ ಹಾಗೂ ವಿಜಯೇಂದ್ರ ಬೆನ್ನಿಗೆ ನಿಲ್ಲಲಿದೆ. ಮಠಾಧೀಶರೊಂದಿಗೆ ಪೂರ್ವಭಾವಿ ಸಭೆಯೊಂದನ್ನು ಶೀಘ್ರವೇ ನಡೆಸಲಾಗುವುದು. ಬಿ.ವೈ. ವಿಜಯೇಂದ್ರ ಅವರನ್ನು ಮುಖ್ಯಮಂತ್ರಿ ಮಾಡುವುದು ನಮ್ಮ ಉದ್ದೇಶ’ ಎಂದು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಕಾರವಾರ: 41 ಡಿಗ್ರಿ ಸೆ. ತಾಪಮಾನ

ಪ್ರಜಾವಾಣಿ ವಾರ್ತೆ



ಕಾರವಾರ: ‘ತಾಲ್ಲೂಕಿನ ಸಾವಂತವಾಡಾ ಹೋಬಳಿ ವ್ಯಾಪ್ತಿಯಲ್ಲಿ ಮಂಗಳವಾರ ಉಷ್ಣಾಂಶ 41.3 ಡಿಗ್ರಿ ಸೆಲ್ಸಿಯಸ್ ತಲುಪಿದ್ದು, ಇದು ರಾಜ್ಯದಲ್ಲೇ ಗರಿಷ್ಠ ತಾಪಮಾನ’ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ (ಕೆಎಸ್‌ಎನ್‌ಎಂಡಿಸಿ) ತಿಳಿಸಿದೆ.

ಕರಾವಳಿಯ ಮೂರು ಜಿಲ್ಲೆಗಳ 7 ಸ್ಥಳಗಳಲ್ಲಿ ಸರಾಸರಿ ಉಷ್ಣಾಂಶ ಪ್ರಮಾಣ 40 ಡಿಗ್ರಿ ಸೆಲ್ಸಿಯಸ್ ಮೀರಿದೆ. ಉತ್ತರ ಕನ್ನಡ ಜಿಲ್ಲೆಯ 6, ದಕ್ಷಿಣ ಕನ್ನಡದ 4, ಉಡುಪಿಯ 2 ಹಾಗೂ ರಾಯಚೂರು ಜಿಲ್ಲೆಯ 1 ಕಡೆಯಲ್ಲಿ ಸರಾಸರಿ ಉಷ್ಣಾಂಶ ಸರಾಸರಿ 39 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿತ್ತು.

ಚಳಿ ಕಡಿಮೆಯಾಗಿ, ಏಕಾಏಕಿ ಸೆಕೆಯ ವಾತಾವರಣ ಆವರಿಸುತ್ತಿರುವುದು ಜನರಲ್ಲಿ ಆತಂಕ ಮೂಡಿಸಿದೆ.

ಕರಾವಳಿ ಭಾಗದಲ್ಲಿ ಉಷ್ಣಾಂಶ ಕಡಿಮೆ ಇದ್ದರೂ ಆರ್ದ್ರತೆ ಅಧಿಕ ಇರುವ ಕಾರಣ ಸೆಕೆ ಹೆಚ್ಚಿತ್ತು. ಈಗ ಉಷ್ಣಾಂಶ ಅಧಿಕ ಆಗಿರುವುದಿಂದ ಸೆಕೆ ಹೆಚ್ಚಾಗಬಹುದು ಎಂಬ ಆತಂಕವಿದೆ.

ಮೂರು ಜಿಲ್ಲೆಗಳಿಗೆ ಬಿಸಿಗಾಳಿ ಎಚ್ಚರಿಕೆ

(ಬೆಂಗಳೂರು ವರದಿ): ರಾಜ್ಯದ ಬಹುತೇಕ ಕಡೆ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚುತ್ತಿರುವ ಬೆನ್ನಲ್ಲೇ ಕರಾವಳಿಯ 3 ಜಿಲ್ಲೆಗಳಿಗೆ ಬುಧವಾರದಿಂದ 3 ದಿನಗಳು ಬಿಸಿಗಾಳಿಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಖ ಅಲೆ ಕಾಣಿಸಿಕೊಳ್ಳುವ ಸಂಭವವಿದೆ. ಕರಾವಳಿ ಮತ್ತು ಉತ್ತರ ಒಳನಾಡಿನ ಹಲವೆಡೆ ಉಷ್ಣಾಂಶವು ಸಾಮಾನ್ಯಕ್ಕಿಂತ ಐದು ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗುವ ಅಂದಾಜಿದೆ ಎಂದು ಇಲಾಖೆ ತಿಳಿಸಿದೆ.

ಸಜ್ಜನ್‌ಗೆ ಜೀವಾವಧಿ ಕಾರಾಗೃಹ ಶಿಕ್ಷೆ

ನವದೆಹಲಿ (ಪಿಟಿಐ): 1984ರಲ್ಲಿ ನಡೆದ ಸಿಖ್ ವಿರೋಧಿ ದಂಗೆಗೆ ಸಂಬಂಧಿಸಿದ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ಸಿನ ಸಜ್ಜನ್ ಕುಮಾರ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆ ವಿಧಿಸಿದೆ. 11

‘ಮಹಾರಾಷ್ಟ್ರ ಜೊತೆ ಚರ್ಚೆಗೆ ಸಿ.ಎಂ ಸೂಚನೆ’

ಬೆಂಗಳೂರು: ‘ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವ ಕುರಿತು ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಲು ಮುಖ್ಯ ಕಾರ್ಯದರ್ಶಿ ಅವರಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ’ ಎಂದು ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು. 8

ಯಾದಗಿರಿ ಜಿಲ್ಲೆಯಲ್ಲಿ ಪ್ರಕರಣ: 'ತಮಟೆ ಮೀಡಿಯಾ' ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಅತ್ಯಾಚಾರ, ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾದಗಿರಿ ಜಿಲ್ಲೆಯ ಗ್ರಾಮವೊಂದರಲ್ಲಿ ಚಿಂದಿ ಆಯಲು ತೆರಳಿದ್ದ ಇಬ್ಬರು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ 'ತಮಟೆ ಮೀಡಿಯಾ' ನೇತೃತ್ವದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ಮಂಗಳವಾರ ಪ್ರತಿಭಟನೆ ನಡೆಸಿದವು.

ಆರೋಪಿಗಳನ್ನು ಬಂಧಿಸಬೇಕು. ಕೊಲೆಯಾದ ಹೆಣ್ಣುಮಕ್ಕಳ ಕುಟುಂಬಸ್ಥರಿಗೆ ತಲಾ ₹50 ಲಕ್ಷ ಪರಿಹಾರ ವಿತರಣೆ ಮಾಡಬೇಕು ಎಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು, ಆಗ್ರಹಿಸಿದರು.

ಮುಖ್ಯಾಂಶಗಳು

- **ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿಲ್ಲ: ಆರೋಪ**
- **ಕೊಲೆಯಾದವರ ಕುಟುಂಬಗಳಿಗೆ ಪರಿಹಾರಕ್ಕೆ ಆಗ್ರಹ**

'ಬುಡ್ಗ ಜಂಗಮ' ಸಮುದಾಯದ ಇಬ್ಬರು ಹೆಣ್ಣುಮಕ್ಕಳು ಚಿಂದಿ ಆಯಲು ಹೋಗಿದ್ದರು. ಆಗ, ಕಿಡಿಗೇಡಿಗಳು ಅತ್ಯಾಚಾರ ಎಸಗಿ ಕೊಲೆ ಮಾಡಿ ಪರಾರಿ ಆಗಿದ್ದಾರೆ. ನೀರು ಕುಡಿಯಲು ಹೋಗಿ ಕಾಲು ಜಾರಿ ಬಿದ್ದು ಮರಣ ಹೊಂದಿದ್ದಾರೆ ಎಂದು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಾಸ್ತವವೇ ಬೇರೆಯಿದೆ. ಇಬ್ಬರು ಹೆಣ್ಣು ಮಕ್ಕಳನ್ನು ಆರೋಪಿಗಳು ಹೊತ್ತೊಯ್ದು ಅತ್ಯಾಚಾರ ಎಸಗಿ ಕೊಲೆ ಮಾಡಿ ಕೆರೆಗೆ ಎಸೆದು ಪರಾರಿ ಆಗಿದ್ದಾರೆ' ಎಂದು ಪ್ರತಿಭಟನಕಾರರು ಹೇಳಿದರು.

ಜಿ.ರಾಮಕೃಷ್ಣ, ವಡ್ಡಗೆರೆ ನಾಗರಾಜಯ್ಯ, ಬಿ.ಟಿ.ವೆಂಕಟೇಶ್, ದು.ಸರಸ್ವತಿ, ಕೆ.ವೈ.ನಾರಾಯಣಸ್ವಾಮಿ, ಎನ್. ಗಾಯಿತ್ರಿ, ಅಶ್ವಿನಿ ಬೋಧ್, ಲೇಖಾ, ಚಂದ್ರು ತರಹುಣಸೆ, ಶಿವಸುಂದರ್, ಗೌರಿ ಅಲೆಮಾರಿ ಸಮುದಾಯದ ಮುಖಂಡರಾದ ಬಸವರಾಜು, ಶಾಂತರಾಜು, ವೀರೇಶ್ ದಾವಣಗೆರೆ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಯಾದಗಿರಿ ಜಿಲ್ಲೆಯಲ್ಲಿ ಚಿಂದಿ ಆಯಲು ಹೋದ ಪರಿಶಿಷ್ಟ ಜಾತಿಯ ಬುಡ್ಗ ಜಂಗಮ ಸಮುದಾಯದ ಇಬ್ಬರ ಯುವತಿಯರ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಪ್ರಗತಿಪರ ಸಂಘಟನೆಗಳು ಮಂಗಳವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಗೆ ನಡೆಸಿದರು. ಪ್ರಜಾವಾಣಿ ಚಿತ್ರ

ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಐ.ಟಿ ಅಧಿಕಾರಿಗಳ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಕ್ಷೇತ್ರದ ಪ್ರತಿಷ್ಠಿತ ಕಂಪನಿಯೊಂದರ ಕಚೇರಿಗಳ ಮೇಲೆ ಮಂಗಳವಾರ ದಾಳಿಮಾಡಿದ ಆದಾಯ ತೆರಿಗೆ (ಐ.ಟಿ.) ಇಲಾಖೆ ಅಧಿಕಾರಿಗಳು, ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಶೋಧ ನಡೆಸಿದರು.

ರಿಯಲ್ ಎಸ್ಟೇಟ್ ಕಂಪನಿಯು ಮಹಾತ್ಮ ಗಾಂಧಿ ರಸ್ತೆ, ಶಿವಾಜಿನಗರ ಸೇರಿದಂತೆ ನಗರದ ವಿವಿಧೆಡೆ ಹೊಂದಿರುವ ನಾಲ್ಕು ಕಚೇರಿಗಳ ಮೇಲೆ ಮಂಗಳವಾರ ಬೆಳಿಗ್ಗೆ ಏಕಕಾಲಕ್ಕೆ ದಾಳಿಮಾಡಿದ ಐ.ಟಿ. ಅಧಿಕಾರಿಗಳು, ತಡರಾತ್ರಿಯವರೆಗೂ ದಾಖಲೆಗಳ ಶೋಧ ನಡೆಸಿದರು. ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದ ಮಾಹಿತಿ ಆಧರಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದಾಯ ತೆರಿಗೆ ಇಲಾಖೆಯ 50ಕ್ಕೂ ಹೆಚ್ಚು ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಮಾತ್ರವಲ್ಲದೇ, ಗೋವಾದಿಂದಲೂ ಅಧಿಕಾರಿಗಳನ್ನು ಕಾರ್ಯಾಚರಣೆಗಾಗಿ ಕರೆಸಲಾಗಿತ್ತು. ಕಂಪನಿಯ ವಹಿವಾಟು, ಆಸ್ತಿಗಳ ಮಾರಾಟ, ಹೂಡಿಕೆ, ತೆರಿಗೆ ಪಾವತಿಗೆ ಸಂಬಂಧಿಸಿದ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕನ್ನಡಿಗರ ಮೇಲೆ ದೌರ್ಜನ್ಯಕ್ಕೆ ಖಂಡನೆ

ಬೆಂಗಳೂರು: 'ಕನ್ನಡದಲ್ಲಿ ಮಾತನಾಡಿ ಎಂದಿದ್ದಕ್ಕೆ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕನ ಮೇಲೆ ಮರಾಠಿಗರು ಹಲ್ಲೆ ಮಾಡಿರುವುದು ಖಂಡನೀಯ' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ್ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯೊಂದಿಗೆ ಮಾತನಾಡಿ ಗಡಿ ಜಿಲ್ಲೆ ಬೆಳಗಾವಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬೆಳಗಾವಿಯಲ್ಲಿ ವಾಸಿಸುವ ಮರಾಠಿ ಸಂಘ–ಸಂಸ್ಥೆಗಳಿಗೆ ಹಾಗೂ ನಾಯಕರಿಗೆ ಎಚ್ಚರಿಕೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಗೌರವ ಇಲ್ಲದವರು ತೊಲಗಲಿ': 'ಕನ್ನಡ ಭಾಷೆಗೆ ಗೌರವ ಕೊಡದವರು, ಬೆಳಗಾವಿ ಬಿಟ್ಟು ತೊಲಗಬೇಕು' ಎಂದು ಕರ್ನಾಟಕ ಗಡಿ ಹೋರಾಟ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ಕೆ.ರಾವ್ ಬೈಂದೂರ್ ಆಗ್ರಹಿಸಿದ್ದಾರೆ.

'ಕನ್ನಡ ಭಾಷೆಗೆ ಅಗೌರವ ತೋರಿ, ಕೆಎಸ್‌ಆರ್‌ಟಿಸಿ ನಿರ್ವಾಹಕನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಯುಜಿಸಿ ಕರಡು ನಿಯಮ ಪುನರ್‌ಪರಿಶೀಲನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ವ್ಯವಸ್ಥೆಯ ಬದಲಾವಣೆಯು ಗುಣಮಟ್ಟ ದುರ್ಬಲಗೊಳಿಸಬಾರದು ಆದ್ದರಿಂದ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ತನ್ನ ಕರಡು ನಿಯಮಾವಳಿಗಳನ್ನು ಪುನರ್ ಪರಿಶೀಲಿಸಬೇಕು' ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆಂಪರಾಜು ಅವ ಆಗ್ರಹಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ವತಿಯಿಂದ ಆಯೋಜಿಸಿದ್ದ 'ಯುಜಿಸಿಯ ವಿಶ್ವವಿದ್ಯಾಲಯಗಳ ಹೊಸ ಕರಡು ನಿಯಮಾವಳಿಗಳ ಸಾಧಕ - ಬಾಧಕ' ಕುರಿತ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಬದಲಾವಣೆಗೆ ತಕ್ಕಂತೆ ಶಿಕ್ಷಣ ವ್ಯವಸ್ಥೆ ಇರಬೇಕು. ಶಿಕ್ಷಣ ವ್ಯವಸ್ಥೆ ಪರಾಮರ್ಶೆಯಾಗದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ. ಆದರೆ, ಅದು ಗುಣಮಟ್ಟವನ್ನು ತಗ್ಗಿಸಲು ಕಾರಣವಾಗಬಾರದು. ವಿದ್ಯಾರ್ಥಿ ಕೇಂದ್ರಿತ, ಸದೃಢ ಶಿಕ್ಷಣ ವ್ಯವಸ್ಥೆಗೆ ಪೂರಕವಾಗುವ ನೀತಿಗಳನ್ನು ಅನುಷ್ಠಾನಗೊಳಿಸಬೇಕು' ಎಂದರು.

'ಸಹಾಯಕ ಪ್ರಾಧ್ಯಾಪಕನಾಗಬೇಕಾದರೆ ನಿರ್ದಿಷ್ಟ ವಿಷಯದ ಜ್ಞಾನ ಮತ್ತು ಆಳವಾದ ಅಧ್ಯಯನ ಅವಶ್ಯ. ನಿಯಮಾವಳಿಯಲ್ಲಿ ಆ ಬಗ್ಗೆ ಸಡಿಲಿಕೆ ಇದೆ. ಅಲ್ಲದೆ, ಪ್ರಾಧ್ಯಾಪಕರ ಪಿಎಚ್‌.ಡಿ ಅಗತ್ಯವನ್ನೂ ತಗ್ಗಿಸಿದೆ. ಇದರಿಂದ ಪ್ರಾಧ್ಯಾಪಕರಲ್ಲಿ ಸಂಶೋಧನಾ ಪ್ರವೃತ್ತಿ, ಸುದೀರ್ಘ ಅಧ್ಯಯನ ಆಸಕ್ತಿ ಕುಂಠಿತವಾಗುತ್ತದೆ. ಪ್ರಾಧ್ಯಾಪಕರೇ ಸಂಶೋಧನಾ ಆಸಕ್ತಿ ರೂಢಿಸಿಕೊಳ್ಳದಿದ್ದರೆ ವಿದ್ಯಾರ್ಥಿಗಳಲ್ಲಿ ಸಂಶೋಧನಾ, ಅನ್ವೇಷಣಾ, ಅಧ್ಯಯನ ಪ್ರವೃತ್ತಿ ವೃದ್ಧಿ ಸಾಧ್ಯವಾಗುವುದಿಲ್ಲ' ಎಂದರು.

'ಉದ್ಯಮಿಗಳು, ಖಾಸಗಿ ವಲಯದವರು, ಶಿಕ್ಷಣ ವ್ಯವಸ್ಥೆಯ ಅರಿವಿಲ್ಲದವರು ಕುಲಪತಿ ಗಳಾಗಬಹುದು ಎಂಬ ಚಿಂತನೆ ಸಮಂಜಸವಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಹೊಂದಿದ ಮಾತ್ರಕ್ಕೆ ಪ್ರಾಧ್ಯಾಪಕರಿಗೆ ಎಚ್‌ಎಎಲ್, ಬಿಎಚ್‌ಇಎಲ್ ಸಂಸ್ಥೆಗಳಲ್ಲಿ ನಿರ್ದೇಶಕ ಹುದ್ದೆ ಪಡೆಯಲು ಸಾಧ್ಯವೇ? ಬೇರೆ ಕ್ಷೇತ್ರದಲ್ಲಿ ಇಲ್ಲದ ಸಡಿಲಿಕೆ, ಉನ್ನತ ಶಿಕ್ಷಣದಲ್ಲಿ ಏಕೆ' ಎಂದು ಪ್ರಶ್ನಿಸಿದರು.

ವಿಚಾರಗೋಷ್ಠಿಯಲ್ಲಿ ಕೋಶಾಧಿಕಾರಿ ಜಿ.ಕೃಷ್ಣಮೂರ್ತಿ, ವಿಜ್ಞಾನ ನಿಕಾಯದ ಡೀನ್ ಪ್ರೊ.ಅಶೋಕ್ ಡಿ.ಹಂಜಗಿ, ಶಿಕ್ಷಣ ನಿಕಾಯದ ಡೀನ್ ಪ್ರೊ. ಪಿ.ಸಿ.ಕೃಷ್ಣಮೂರ್ತಿ, ಪ್ರೊ. ಮುರುಳಿಧರ್ ಉಪಸ್ಥಿತರಿದ್ದರು.

ಏ.6ರಿಂದ ಸಂಗೀತೋತ್ಸವ

ಬೆಂಗಳೂರು: ಶ್ರೀರಾಮ ಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಏಪ್ರಿಲ್ 6ರಿಂದ ಮೇ 2ರವರೆಗೆ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ '87ನೇ ಶ್ರೀ ರಾಮನವಮಿ ಸಂಗೀತೋತ್ಸವ' ಹಮ್ಮಿಕೊಂಡಿದೆ.

ತಿಂಗಳು ಪೂರ್ತಿ ನಡೆಯುವ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ವೀಣೆ, ಪಿಟೀಲು, ಕೊಳಲು ಸೇರಿ ವಿವಿಧ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ.



ಏ.6ರ ಬೆಳಿಗ್ಗೆ 8.30ರಿಂದ ರಾಮನವಮಿ ಮಹಾ ಅಭಿಷೇಕ ನಡೆಯಲಿದೆ. ಮಲ್ಲಾಡಿ ಸಹೋದರರು ವಿಶೇಷ ಸಂಗೀತ ಸೇವೆ ಸಲ್ಲಿಸಲಿದ್ದಾರೆ. ಸಂಜೆ 5.45ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಪ್ರಸಕ್ತ ವರ್ಷದಿಂದ ಆರಂಭಿಸಿರುವ 'ಎಸ್.ಎಂ.ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ'ಯನ್ನೂ ಇದೇ ಸಮಾರಂಭದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಸಂದೀಪ್ ನಾರಾಯಣ್ ಅವರಿಗೆ ಪ್ರದಾನ ಮಾಡಲಾಗುತ್ತದೆ.

ಒಂದು ತಿಂಗಳ ಸಂಗೀತೋತ್ಸವದಲ್ಲಿ ಜಯತೀರ್ಥ ಮೇವುಂಡಿ, ತ್ರಿಚೂರ್ ಸಹೋದರರು, ವಿದ್ಯಾಭೂಷಣ, ರಂಜನಿ ಮತ್ತು ಗಾಯತ್ರಿ, ಪ್ರವೀಣ್ ಗೋಡ್ಖಿಂಡಿ, ಅಭಿಷೇಕ್ ರಘುರಾಂ, ವೆಂಕಟೇಶ್ ಕುಮಾರ್, ಶಾಹಿದ್ ಪರ್ವೆಜ್, ಸುಮಾ ಸುಧೀಂದ್ರ, ಎಸ್. ಸಾಕೇತರಾಮನ್, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಸೇರಿ ಸಂಗೀತ ಕ್ಷೇತ್ರದ ಪ್ರಮುಖ ಗಾಯಕರು ಹಾಗೂ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ. ಈ ಸಂಗೀತ ಕಛೇರಿಗಳು ಪ್ರತಿನಿತ್ಯ ಸಂಜೆ 5 ಗಂಟೆಯ ಬಳಿಕ ನಡೆಯಲಿವೆ. ಸಂಗೀತೋತ್ಸವದ ಅವಧಿಯಲ್ಲಿ ಪ್ರತಿದಿನ ಬೆಳಿಗ್ಗೆ 8ರಿಂದ 9.30ರವರೆಗೆ ವಾಲ್ಮೀಕಿ ರಾಮಾಯಣ ಉಪನ್ಯಾಸ ಮಾಲಿಕೆ ನಡೆಯಲಿದೆ. ವೀರನಾರಾಯಣ ಪಾಂಡುರಂಗಿ, ವೇದವರ್ಧನತೀರ್ಥ ಸ್ವಾಮೀಜಿ, ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಸತ್ಯಾತ್ಮತೀರ್ಥ ಸ್ವಾಮೀಜಿ, ವಿಶ್ವವಲ್ಲಭತೀರ್ಥ ಸ್ವಾಮೀಜಿ ಉಪನ್ಯಾಸ ಮಾಲಿಕೆ ನೀಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಸಂಗೀತೋತ್ಸವದ ಟಿಕೆಟ್ ಕಾಯ್ದಿರಿಸಬಹುದು. ವಿವರಕ್ಕೆ 9448079079 ಅಥವಾ 9483518012ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಿಂಗಹಳ್ಳಿ-ಪಿಎಸಿಎಸ್‌ಗೆ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿಂಗಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್. ಹನುಮಂತಪ್ಪ, ಉಪಾಧ್ಯಕ್ಷರಾಗಿ ಬಿ.ಎಂ.ಜಗನ್ನಾಥ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಟ್ಟು 11 ಸದಸ್ಯಬಲ ಹೊಂದಿರುವ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕಾಗಿ ಸೋಮವಾರ ನಡೆದ ಚುನಾವಣೆಯಲ್ಲಿ ತಲಾ ಒಬ್ಬರು ನಾಮಪತ್ರ ಸಲ್ಲಿಸಿದ್ದರು.

ಹನುಮಂತಪ್ಪ ಮಾತನಾಡಿ, 'ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಪ್ರಯತ್ನಿಸಲಾಗುತ್ತದೆ' ಎಂದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್.ಜಗದೀಶ್, ಸದಸ್ಯ ನವೀನ್. ಎನ್, ನಿರ್ದೇಶಕರಾದ ಆರ್.ಗೋವಿಂದಪ್ಪ, ಜಿ.ಪ್ರಶಾಂತ್ ಅನಿತ.ಕೆ, ಬಿ.ವಿ. ಭಾಗ್ಯಲಕ್ಷ್ಮಿ, ಜಿ.ಪ್ರಕಾಶ್, ಮುನಿಯಪ್ಪ(ಕಾಕಣ್ಣ), ಬಿಜೆಪಿ ಮುಖಂಡರಾದ ರಾಜಶೇಖರ್, ತಿಮ್ಮೇಗೌಡ, ಪ್ರದೀಪ್, ಚಂದ್ರಮುರಳಿ ಉಪಸ್ಥಿತರಿದ್ದರು.

‘ಝೀರೋ ಬ್ಯಾಕ್ಟೀರಿಯಲ್’ ತಂತ್ರಜ್ಞಾನ ಬಳಕೆ: ಜಲಮಂಡಳಿ ಅಧ್ಯಕ್ಷ

‘ಸಂಸ್ಕರಿತ ನೀರಿನ ಗುಣಮಟ್ಟ ವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್‌ಗಳ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ (ಎಸ್‌ಟಿಪಿ) ನೀರಿನ ಗುಣಮಟ್ಟ ಸುಧಾರಣೆಗೆ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ‘ಝೀರೊ ಬ್ಯಾಕ್ಟೀರಿಯಲ್’ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಂಗಳವಾರ ತಿಳಿಸಿದರು.

ಅಪಾರ್ಟ್‌ಮೆಂಟ್‌ಗಳ ಎಸ್‌ಟಿಪಿ ನೀರನ್ನು ಉದ್ಯಾನ, ಸ್ವಚ್ಛತೆಗೆ ಬಳಸಿಕೊಳ್ಳಲಾಗುತ್ತಿದೆ. ಹೆಚ್ಚುವರಿ ನೀರನ್ನು ಮಾರಾಟ ಮಾಡಲೂ ಅವರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ ಎಂದು ಹೇಳಿದರು.

ಇಂಡೋ-ಜರ್ಮನ್ ಸೈನ್ಸ್ ಅಂಡ್ ಟೆಕ್ನಾಲಜಿ ಸೆಂಟರ್ ಆಯೋಜಿಸಿದ್ದ ‘ಸುಸ್ಥಿರ ಆವಾಸ ಸ್ಥಾನ’ ಕಾರ್ಯಾಗಾರದಲ್ಲಿ ಮಾತನಾಡಿದ ಅವರು,



ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ಬೆಂಗಳೂರು ನಗರಕ್ಕೆ ಅತ್ಯಾಧುನಿಕ ಕ್ರಮಗಳನ್ನು ಅಳವಡಿಸಲಾಗುವುದು’

ರಾಮ್ ಪ್ರಸಾತ್ ಮನೋಹರ್
ಬೆಂಗಳೂರು ಜಲಮಂಡಳಿ ಅಧ್ಯಕ್ಷ

‘ಸಂಸ್ಕರಿಸಿದ ನೀರಿನ ಗುಣಮಟ್ಟದ ಬಗ್ಗೆ, ಕ್ರೆಡೈ ಮೂಲಕ ಕಟ್ಟಡಗಳ ಡೆವಲಪರ್‌ಗಳು ಅನುಮಾನ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಎಸ್‌ಟಿಪಿಗಳ ನೀರಿನ ಗುಣಮಟ್ಟ ವೃದ್ಧಿಸಲು ‘ಝೀರೊ ಬ್ಯಾಕ್ಟೀರಿಯಲ್’ ತಂತ್ರಜ್ಞಾನ ಅಳವಡಿಸಲು ವಿಜ್ಞಾನಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ಬೆಂಗಳೂರಿನಲ್ಲಿ ಅಂತರ್ಜಲದ ಸಮರ್ಪಕ ಬಳಕೆಗೆ ಉತ್ತೇಜನ, ಅದರ ಮೇಲೆ ನಿಗಾ ಹಾಗೂ ಅಂತರ್ಜಲದ ವೃದ್ಧಿಗೆ ಸುಸ್ಥಿರ ಯೋಜನೆಗಳನ್ನು ರೂಪಿಸಲು, ಐಐಎಸ್‌ಸಿ, ಕೇಂದ್ರ ಅಂತರ್ಜಲ ಪ್ರಾಧಿಕಾರದ ಜೊತೆಗೂಡಿ ಬೆಂಗಳೂರು ಜಲಮಂಡಳಿ ಕಾರ್ಯಪಡೆಯನ್ನು ರಚಿಸಿದೆ. ಈ ಕಾರ್ಯಪಡೆ ಮೂಲಕ ಸಾಂಪ್ರದಾಯಿಕ ಕೊಳವೆಬಾವಿಗಳ ಮೇಲೆ ನಿಗಾ ವಹಿಸಲಾಗಿದೆ. ಅಂತರ್ಜಲ ದುರ್ಬಳಕೆ ತಡೆಗಟ್ಟಲು ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನೂ ಬಳಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರು ಪೂರೈಸುವುದು ಸವಾಲಿನ ಕೆಲಸವಾಗಿದೆ. ಕಳೆದ ವರ್ಷ 200 ದಿನ ಮಳೆಯಾಗಿರಲಿಲ್ಲ. ಇದೀಗ ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಇದು ಜಾಗತಿಕ ಸಮಸ್ಯೆಯಾಗಿದೆ ಎಂದರು.

ನಗರದಲ್ಲಿ 1,300 ಎಂಎಲ್‌ಡಿ ಸಂಸ್ಕರಿಸಿದ ನೀರು ದೊರೆಯುತ್ತಿದೆ. ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಹವಾ ನಿಯಂತ್ರಣ ವ್ಯವಸ್ಥೆಗೆ 60 ಲಕ್ಷ ಲೀಟರ್ ಸಂಸ್ಕರಿಸಿದ ನೀರನ್ನು ಪೂರೈಸಲಾಗುತ್ತಿದೆ. ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಜಲಮಂಡಳಿ ವ್ಯಾಪಕ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.

ಐಐಎಸ್‌ಸಿಯ ಪ್ರೊ.ಎಲ್.ಎನ್. ರಾವ್, ಜರ್ಮನಿ ವಿ.ವಿ ಪ್ರಾಧ್ಯಾಪಕ ಕ್ರಿಸ್ಟಿನಾ ಬೋಗ್ನೇರ್, ಐಐಎಸ್‌ಸಿಡೀನ್ ಪ್ರೊ. ಜಿ.ಕೆ. ಅನಂತ ಸುರೇಶ್, ಐಐಎಸ್‌ಸಿ ಸಿಎಸ್‌ಟಿ ಅಧ್ಯಕ್ಷೆ ಪ್ರೊ. ಮಾಧವಿ ಲತಾ, ಇಂಡೋ ಜರ್ಮನ್ ಸೈನ್ಸ್ ಅಂಡ್ ಟೆಕ್ನಾಲಜಿ ಸೆಂಟರ್‌ನ ನಿರ್ದೇಶಕ ಆರ್. ಮದನ್ ಉಪಸ್ಥಿತರಿದ್ದರು.

ಸಮಾನ ವೇತನ ನೀಡಿ: ಚೌಧರಿ

ಬೆಂಗಳೂರು: ‘ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ, ಹೊರಗುತ್ತಿಗೆ, ಸ್ಟೈಪೆಂಡರಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಎನ್‌ಎಚ್‌ಎಂ ಅಡಿಯಲ್ಲಿ ಕೆಲಸ ಮಾಡುತ್ತಿರುವ ಶುಶ್ರೂಷಾಧಿಕಾರಿಗಳಿಗೆ ಸಮಾನ ವೇತನ ನೀಡಬೇಕು’ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಒತ್ತಾಯಿಸಿದ್ದಾರೆ.



ನಾಗಲಕ್ಷ್ಮೀ ಚೌಧರಿ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸರ್ಕಾರದ ಮುಖ್ಯ ಕಾರ್ಯ ದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿರುವ ಅವರು, ‘ಬೆಲೆ ಏರಿಕೆಯಿಂದ ಶುಶ್ರೂಷಾಧಿಕಾರಿಗಳು ಜೀವನ ನಿರ್ವಹಣೆ ಕಷ್ಟವಾಗಿದೆ. ಸಮಾನ ವೇತನ ನಿಗದಿಪಡಿಸಿ, ಸೇವಾ ಭದ್ರತೆ ಒದಗಿಸಬೇಕು’ ಎಂದು ಒತ್ತಾಯಿಸಿದ್ದಾರೆ.

28ರಿಂದ ಪ್ರತಿಭಟನೆ

ಕೆ.ಆರ್.ಪುರ: ‘7ನೇ ವೇತನ ಆಯೋಗದಿಂದ ಆಗಿರುವ ನಷ್ಟವನ್ನು ಸರಿಪಡಿಸಬೇಕೆಂದು ಆಗ್ರಹಿಸಿ, ಫೆ.28ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ’ ಎಂದು ಕರ್ನಾಟಕ ನಿವೃತ್ತ ನೌಕರರ ವೇದಿಕೆಯ ಕೇಂದ್ರ ಸಮಿತಿ ತಿಳಿಸಿದೆ. ಸಮಿತಿಯ ಪ್ರಧಾನ ಸಮಿತಿ ಸದಸ್ಯರಾದ ಮಂಜುಳಾ ರಾಣಿ, ಅನಂತ ಪದ್ಮನಾಭ, ಯತೀಶ್ ಮಡಾನಾಡ, ‘ಆರ್ಥಿಕ ಸೌಲಭ್ಯಗಳಾದ ಡಿ.ಸಿ.ಆರ್.ಜಿ, ಕಮ್ಯುಟೇಶನ್ ಹಾಗೂ ಗಳಿಕೆ ರಜೆಗಳನ್ನು ನೀಡಿಲ್ಲ. ಈ ಆರ್ಥಿಕ ನಷ್ಟವನ್ನು ಸರಿ ಪಡಿಸಲು ಒತ್ತಾಯಿಸಿ ಪ್ರತಿಭಟಿಸಲಾಗುತ್ತಿದೆ’ ಎಂದರು.

ತೋಟಗೆರೆ ಬಸವಣ್ಣ ದೇವಸ್ಥಾನ: ರಾಸುಗಳ ಮೆರವಣಿಗೆಗೆ ಸಿದ್ಧತೆ

ಮೆರುಗು ತಂದ ದನಗಳ ಜಾತ್ರೆ

• ಭೈರಮೂರ್ತಿ ಜಿ

ಹೆಸರಘಟ್ಟ: ತೋಟಗೆರೆ ಬಸವಣ್ಣ ದೇವಸ್ಥಾನದ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ದನಗಳ ಜಾತ್ರೆ ಆರಂಭವಾಗಿದ್ದು, ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ದೇಶಿಯ ತಳಿಯಾದ ಹಳ್ಳಿಕಾರ್, ಸಿಂಧಿ ಸೇರಿದಂತೆ ಇನ್ನಿತರ ರಾಸುಗಳು ಬಂದಿವೆ. ರೈತರು ತಮ್ಮ ರಾಸುಗಳನ್ನು ಸಿಂಗರಿಸಿ, ಮೆರವಣಿಗೆ ಮಾಡಿ ಮಾರಾಟಕ್ಕೆ ಸಿದ್ಧಪಡಿಸಿದ್ದಾರೆ. ಕಾಲಿಗೆ ಗೆಜ್ಜೆ, ಕೊರಳಿಗೆ ಗಂಟೆ, ದಂಡೆ, ಕೊಂಬಿಗೆ ಕಳಸ ಹೀಗೆ ಬಗೆ ಬಗೆಯ ಬಣ್ಣಗಳಿಂದ, ಹೂಗಳಿಂದ ರಾಸುಗಳನ್ನು ಅಲಂಕರಿಸಿ ಮೆರುಗು ತಂದಿದ್ದಾರೆ.

ಜಾತ್ರೆಯಲ್ಲಿ ಅಲ್ಲಲ್ಲಿ ರಾಸುಗಳನ್ನು ಕೊಂಡುಕೊಳ್ಳುವ ರೈತರು ಬಾಯಿವ್ಯಾಪಾರ ಮಾಡುತ್ತಿದ್ದರು. ಕೆಲವು ದಲ್ಲಾಳಿಗಳು ಹಳೆಯ ಸಂಪ್ರದಾಯದಂತೆ ಬಟ್ಟೆ ಕೆಳಗೆ ಕೈ ಬೆರಳುಗಳನ್ನು ಸೂಚಿಸಿ, ಕೊಡುವವರ ಮತ್ತು ಕೊಂಡು ಕೊಳ್ಳುವವರ ಮಧ್ಯೆ ಸಂಧಿ ವ್ಯಾಪಾರ ಮಾಡುತ್ತಿದ್ದುದು ಕಂಡುಬಂದಿತು.

ಕಳೆದ ವರ್ಷ 1700ರಿಂದ 180 ಜೋಡಿ ರಾಸುಗಳು ಜಾತ್ರೆಗೆ ಬಂದಿದ್ದವು. ಈ ಬಾರಿ 110 ಜೋಡಿ ರಾಸುಗಳು ಬಂದಿವೆ. ಹೋರಿಗಳನ್ನು ಸಾಕಲು ಹೆಚ್ಚು ವೆಚ್ಚವಾಗುವುದರಿಂದ ರೈತರು ನಿರಾಸಕ್ತಿ ತೋರುತ್ತಿದ್ದಾರೆ ಎಂದು ಹಾರೋವಳ್ಳಿ ಗ್ರಾಮದ ರೈತ ಹನುಮಂತರಾಜು ತಿಳಿಸಿದರು.

ಜಾತ್ರೆಯಲ್ಲಿ ₹40 ಸಾವಿರದಿಂದ ₹6 ಲಕ್ಷ ದವರೆಗಿನ ಬೆಲೆಯ ರಾಸುಗಳು ಇವೆ. ಕಡಿಮೆ ಬೆಲೆಯ ರಾಸುಗಳು ಮಾರಾಟವಾಗುತ್ತಿದ್ದರೂ, ಹೆಚ್ಚು ಬೆಲೆಯ ರಾಸುಗಳನ್ನು ಕೊಂಡುಕೊಳ್ಳುವಂತಹ ಗಿರಾಕಿಗಳು ಈ ಬಾರಿ ಜಾತ್ರೆಗೆ ಬಂದಿಲ್ಲ ಎಂದು ರೈತ ಹೊನ್ನಪ್ಪ ಹೇಳಿದರು.

ಜಾತ್ರೆಯಲ್ಲಿ ರಾಸುಗಳಿಗೆ ಅಗತ್ಯವಾದ ಹಗ್ಗ, ಮೂಗುದಾರ, ದಂಡೆ, ಬಾರುಕೋಲು, ಕಣ್ಣೆ, ಮಕಾಡೆ, ಗೆಜ್ಜೆ, ಗಂಟೆ, ಶಂಖಗಳ ಮಳಿಗೆಗಳು ಆಕರ್ಷಿಸುತ್ತಿವೆ.

ಜಾತ್ರೆಯಲ್ಲಿ ಭಾಗವಹಿಸಿರುವ ಎಲ್ಲ ಜಾನುವಾರಗಳ ಮಾಲೀಕರಿಗೆ, ಹಿತ ಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಹುಮಾನ ವಿತರಿಸಲಾಗುತ್ತದೆ ಎಂದು ಟ್ರಸ್ಟಿ ವಿ. ರಾಮಸ್ವಾಮಿ ತಿಳಿಸಿದರು.

ಶಿವರಾತ್ರಿ ಹಬ್ಬ



ರಾಸುಗಳಿಗೆ ಅಗತ್ಯವಿರುವ ಸಾಮಾಗ್ರಿಗಳ ಮಾರಾಟ ಅಂಗಡಿ ತೆರೆಯಲಾಗಿತ್ತು

ನೀರಾವರಿ ಯೋಜನೆಗಳಿಗೆ ಅನುದಾನ: ಸಚಿವ ಸಿ.ಆರ್.ಪಾಟೀಲರಿಗೆ ಡಿಸಿಎಂ ಡಿಕೆಶಿ ಮನವಿ

ಕೇಂದ್ರಕ್ಕೆ ₹11,123 ಕೋಟಿ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಕರ್ನಾಟಕದ ಆರು ನೀರಾವರಿ ಯೋಜನೆಗಳಿಗೆ ₹11,123 ಕೋಟಿ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿದೆ.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಹಾಗೂ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿದ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀರಾವರಿ ಯೋಜನೆಗಳಿಗೆ ಅನುದಾನ ನೀಡುವಂತೆ ಕೋರಿದರು.

ಮನವಿಯಲ್ಲಿ ಏನಿದೆ: ಭದ್ರಾ ಎಡದಂಡೆ ಕಾಲುವೆಯ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸುವ ಯೋಜನೆಗೆ ಕೇಂದ್ರ ಜಲ ಆಯೋಗಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ. ತುಂಗಭದ್ರಾ ಎಡದಂಡೆ ಕಾಲುವೆಯು 226 ಕಿ.ಮೀ ಉದ್ದ ಹರಿಯಲಿದ್ದು, ಉತ್ತರ ಕರ್ನಾಟಕದ 2,44,103 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಒದಗಿಸಲಿದೆ. ಈ ಯೋಜನೆಯಿಂದಾಗಿ ಕಾಲುವೆಯ ಕೊನೆ ಭಾಗದ ರೈತರಿಗೂ ನೀರು ಸಮನಾಂತರವಾಗಿ ಹಂಚಿಕೆಯಾಗಲಿದೆ. ಜತೆಗೆ 96,400 ಹೆಕ್ಟೇರ್ ಪ್ರದೇಶದ ರೈತರಿಗೆ ನೆರವಾಗಲಿದೆ.

ಘಟಪ್ರಭಾ ಬಲದಂಡೆ ಪ್ರಮುಖ ಕಾಲುವೆಯ 199 ಕಿ.ಮೀವರೆಗೆ ಹಾಗೂ ಚಿಕ್ಕೋಡಿ ಭಾಗದ ಕಾಲುವೆ 30 ಕಿ.ಮೀನಿಂದ 88.25 ಕಿ.ಮೀ ವರೆಗೆ ಕಾಲುವೆಗಳ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸಲು ಫೆಬ್ರುವರಿ 10ರಂದು ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಪ್ರವಾಹ ನಿರ್ವಹಣೆ ಮತ್ತು ಗಡಿ ಪ್ರದೇಶ ಕಾರ್ಯಕ್ರಮ ಯೋಜನೆ ಅಡಿಯಲ್ಲಿ ಬೆಣ್ಣಿಹಳ್ಳದಿಂದ ಮಲಪ್ರಭಾದ ಸಂಗಮದವರೆಗೂ ಪ್ರವಾಹ ನಿಯಂತ್ರಣ ಹಾಗೂ ಪ್ರವಾಹ ನಿರ್ವಹಣೆಯ ಕಾಮಗಾರಿ ನಡೆಸಲು ಅನುದಾನ ನೀಡಬೇಕು.

ಸೋಂತಿ ಏತ ನೀರಾವರಿ ಯೋಜನೆಯ ಮೂಲಕ ಸೋಂತಿ ಬ್ಯಾರೇಜ್‌ನಿಂದ ನೀರನ್ನು ಎತ್ತಿ ಕಾಲುವೆಗಳ ಮೂಲಕ ಬರಪೀಡಿತ ಚಿತ್ತಾಪುರ, ಯಾದಗಿರಿ ತಾಲ್ಲೂಕಿನಲ್ಲಿ 16,000 ಹೆಕ್ಟೇರ್ ಕೃಷಿ ಭೂಮಿಗೆ 4 ಟಿಎಂಸಿ ನೀರನ್ನು ಒದಗಿಸಲಾಗುತ್ತದೆ. ರಾಜ್ಯ ಸರ್ಕಾರವು ಈ ಯೋಜನೆಯ ವಿಸ್ತೃತ ಯೋಜನಾ ವರದಿ ಸಲ್ಲಿಸಿತ್ತು. ಕೇಂದ್ರ ಜಲಸಂಪನ್ಮೂಲ ಸಚಿವಾಲಯದ ತಾಂತ್ರಿಕ ಸಲಹಾ ಸಮಿತಿಯು ₹673.90 ಕೋಟಿ ಮೊತ್ತದ ಡಿಪಿಆರ್‌ಗೆ 2015ರಲ್ಲಿ ಅನುಮೋದನೆ ನೀಡಿತ್ತು. ಅರಣ್ಯ ಸಚಿವಾಲಯದ ಅನುಮತಿಗೆ 2017ರಲ್ಲಿ ಪ್ರಸ್ತಾವ ಸಲ್ಲಿಸಲಾಗಿತ್ತು. ಈಗ ಈ ಯೋಜನೆಯ ಮೊತ್ತ ₹804.66 ಕೋಟಿಗೆ ಏರಿಕೆಯಾಗಿದೆ. ಜತೆಗೆ ಅಗತ್ಯವಿರುವ ಅನುಮತಿಯನ್ನು ನೀಡಲು ಕೇಂದ್ರ ಜಲ ಆಯೋಗದ ಅಧಿಕಾರಿಗಳಿಗೆ ಸೂಚಿಸಬೇಕು.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪ್ರಮುಖ ಭಾಗವಾಗಿರುವ 172 ಕಿ.ಮೀ ಉದ್ದದ ಇಂಡಿ ಕಾಲುವೆ ಯೋಜನೆಯು ಕಲಬುರಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಯ 1.31 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶಕ್ಕೆ ನೀರಾವರಿ ಒದಗಿಸಲಿದೆ. ಹೀಗಾಗಿ, ಇಂಡಿ ಕಾಲುವೆಯ 64.00 ಕಿ.ಮೀ. ನಿಂದ 172 ಕಿ.ಮೀ. ವರೆಗೂ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸಲು ಸರ್ಕಾರ ತೀರ್ಮಾನಿಸಿದ್ದು, ಈ ಯೋಜನೆಗಾಗಿ ಪೂರ್ವ ಕಾರ್ಯಸಾಧ್ಯತಾ ವರದಿ ಸಲ್ಲಿಸಲಾಗಿದೆ.

ಮಲಪ್ರಭಾ ಕಾಲುವೆ ಯೋಜನೆಯ ಮೂರನೇ ಹಂತದಲ್ಲಿ ಕಾಲುವೆಗಳ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸಲು ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ. ಈ ಯೋಜನೆಯಿಂದ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.



ಸಿ.ಆರ್.ಪಾಟೀಲ ಅವರಿಗೆ ಡಿ.ಕೆ. ಶಿವಕುಮಾರ್ ಮನವಿ ಸಲ್ಲಿಸಿದರು. ವಿ.ಸೋಮಣ್ಣ ಇದ್ದಾರೆ

'ಮೇಕೆದಾಟು: ಶೀಘ್ರ ಸಭೆ'

ಮೇಕೆದಾಟು ಯೋಜನೆ ಬಗ್ಗೆ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಮತ್ತು ಶೀಘ್ರದಲ್ಲೇ ಅಧಿಕಾರಿಗಳೊಂದಿಗೆ ಸಭೆ ನಡೆಸುವುದಾಗಿ ಭರವಸೆ ನೀಡಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೇಂದ್ರದಿಂದ ಕೋರಿರುವ ಅನುದಾನ

ಯೋಜನೆ	ಜಿಲ್ಲೆ	ನೀರಾವರಿ ಅನುಕೂಲ (ಹೆಕ್ಟೇರ್)	ಮೊತ್ತ (₹ಕೋಟಿಗಳಲ್ಲಿ)
ಸೋಂತಿ ಏತ ನೀರಾವರಿ ಯೋಜನೆ	ಕಲಬುರಗಿ, ಯಾದಗಿರಿ	16,000	804
ಇಂಡಿ ಕಾಲುವೆ ಯೋಜನೆ	ವಿಜಯಪುರ	16,000	2,666
ಬೆಣ್ಣಿಹಳ್ಳ ಪ್ರವಾಹ ನಿಯಂತ್ರಣ	ಧಾರವಾಡ	-	1,610
ಮಲಪ್ರಭಾ ಯೋಜನೆಯ ಆಧುನೀಕರಣ	ಧಾರವಾಡ, ಬಾಗಲಕೋಟೆ, ಬೆಳಗಾವಿ, ಗದಗ	44,457	3,000
ಘಟಪ್ರಭಾ ಬಲದಂಡೆ ಕಾಲುವೆ	ಬೆಳಗಾವಿ, ಬಾಗಲಕೋಟೆ	25,000	1,596
ತುಂಗಭದ್ರಾ ಎಡದಂಡೆ ಕಾಲುವೆ	ಕೊಪ್ಪಳ, ರಾಯಚೂರು	96,440	1,444

'ವಿದ್ಯಮಾನಗಳಿಗೆ ಸ್ಪಂದಿಸಿದಾಗ ಶ್ರೇಷ್ಠ ಕಾವ್ಯ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪ್ರಯೋಗ ಶೀಲ ಕವಿ ತನ್ನ ಸುತ್ತಲಿನ ವಿದ್ಯಮಾನಗಳಿಗೆ ಸ್ಪಂದಿಸಿದಾಗ ಮಾತ್ರ ಶ್ರೇಷ್ಠ ಕಾವ್ಯ ಸೃಷ್ಟಿಸಲು ಸಾಧ್ಯ' ಎಂದು ಕವನ ವಾಚನ ಮತ್ತು ಸಮ್ಮೇಳನದ ಸರ್ವಾಧ್ಯಕ್ಷ ಸಾಹಿತಿ, ಕವಿ ವೈ.ಬಿ.ಎಚ್ ಜಯದೇವ್ ತಿಳಿಸಿದರು.

ಹೆಸರಘಟ್ಟ ಮುಖ್ಯ ರಸ್ತೆಯ ಅಸೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ಆಯೋಜಿಸಲಾದ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್' ದಾಖಲೆಗಾಗಿ ಆಯೋಜಿಸಿದ್ದ ಸಾವಿರ ಕವಿಗಳಿಂದ ಕವನ ವಾಚನ ಮತ್ತು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಪ್ರಾಚೀನ, ಅರ್ವಾಚೀನ ಸಾಹಿತ್ಯವನ್ನು ಅಭ್ಯಸಿಸಿದಾಗ ಮಾತ್ರ ಪ್ರಯೋಗ ಶೀಲ ಕವಿ ಜಗದ ಕಣ್ಣಾಗಲು ಸಾಧ್ಯ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ 'ಸಮಾಜವನ್ನು ತಿದ್ದುವ ಜವಾಬ್ದಾರಿ ಕವಿಗಳ ಮೇಲಿದೆ. ಕನ್ನಡಿಗರಾದ ನಾವು ಕನ್ನಡವನ್ನು ಎತ್ತಿ ಹಿಡಿಯಬೇಕು' ಎಂದರು.

'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆ'ಯ ಹರೀಶ್ ಆರ್. ಮಾತನಾಡಿ 'ಕವಿಗಳಿರುವುದನ್ನು ದಾಖಲೆ ಮಾಡುವುದೇ ನಮ್ಮ ಉದ್ದೇಶ. ಈ ಕವಿಗೋಷ್ಠಿಯಲ್ಲಿ 323 ಕವಿಗಳು ವಾಚನ ಮಾಡಿ, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ನಿರ್ಮಿಸಲಾಗಿದೆ' ಎಂದು ಘೋಷಿಸಿದರು.

ಸಭಾ ಕಾರ್ಯಕ್ರಮದ ನಂತರ ಕವಿಗೋಷ್ಠಿ, ಪುಸ್ತಕ ಬಿಡುಗಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಮುರುಘರಾಜೇಂದ್ರ ಮಠದ ಬಸವಕುಮಾರ ಸ್ವಾಮೀಜಿ, ಸಂಸ್ಥೆಯ ಅಧ್ಯಕ್ಷ ಈ. ರವೀಶ, ಅಸೆಂಟ್ ಕಾಲೇಜಿನ ಪ್ರಾಂಶುಪಾಲ ಬಿ.ಎಂ. ವೆಂಕಟೇಶ್, ನಿವೃತ್ತ ಪ್ರಾಂಶುಪಾಲ ಜಿ.ಎಸ್. ಮಲ್ಲಿಕಾರ್ಜುನಪ್ಪ, ಕವಿತಾ ರಾಜೇಂದ್ರ ಕೊಣ್ಣೂರ ಮತ್ತು ಕವಿಗಳು ಇದ್ದರು.


ಹೆಸರಘಟ್ಟ ಮುಖ್ಯ ರಸ್ತೆಯ ಅಸೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ಆಯೋಜಿಸಲಾದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗಾಗಿ ಕವಿಗಳಿಂದ ಕವನ ವಾಚನ ಮತ್ತು ಸಮ್ಮೇಳನ ನಡೆಯಿತು. 323 ಕವಿಗಳು ವಾಚಿಸಿ ಮಾಡಿದ ದಾಖಲೆಯ ಪ್ರತಿಯನ್ನು ಸಂಸ್ಥೆ ಅಧ್ಯಕ್ಷ ಈ. ರವೀಶ ಅವರಿಗೆ ನೀಡಲಾಯಿತು.

ಬಹು ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಭೇಟಿ ಮಾಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಗೆ ಬಹು ಕೌಶಲ ಅಭಿವೃದ್ಧಿ ಕೇಂದ್ರ ಮಂಜೂರು ಮಾಡುವಂತೆ ಮನವಿ ಮಾಡಿದರು.

ದೇವನಹಳ್ಳಿ ತಾಲ್ಲೂಕಿನಲ್ಲಿ ಉದ್ಯಮ ಪೋರ್ಟಲ್ ಅಡಿಯಲ್ಲಿ 45,000 ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಘಟಕಗಳು ನೋಂದಣಿಯಾಗಿದ್ದು, ಅಂದಾಜು ನಾಲ್ಕು ಲಕ್ಷ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತಿವೆ. ಬೇಡಿಕೆ ಆಧಾರಿತ ಕೌಶಲ ತರಬೇತಿ ಕೇಂದ್ರವನ್ನು ಮಂಜೂರು ಮಾಡಿದರೆ ಈ ಉದ್ಯಮಗಳಿಗೆ ನುರಿತ ಕೆಲಸಗಾರರು ಸಿಗಲಿದ್ದಾರೆ ಎಂದು ಅವರು ಗಮನ ಸೆಳೆದರು.

ಕೆಲಸಗಾರರಿಗೆ ಹೊಣೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲಸ ಮಾಡುವವರಿಗೆ ಪಕ್ಷದಲ್ಲಿ ಹುದ್ದೆ ನೀಡುವಂತೆ ಎಐಸಿಸಿ ಸೂಚನೆ ನೀಡಿದೆ. ಈ ವಿಚಾರವಾಗಿ ಸ್ಥಳೀಯ ಮಟ್ಟದಿಂದ ವರದಿ ತರಿಸಿಕೊಂಡಿದ್ದು, ಸರಿಯಾಗಿ ಕೆಲಸ ಮಾಡುವವರಿಗೆ ಜವಾಬ್ದಾರಿ ನೀಡಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆಸಕ್ತಿ ಇಲ್ಲದವರ ಜಾಗಕ್ಕೆ ಬೇರೆಯವರನ್ನು ನೇಮಿಸಿ, ಪದಾಧಿಕಾರಿಗಳ ಪಟ್ಟಿಯನ್ನು ಶೀಘ್ರ ಅಂತಿಮಗೊಳಿಸಲಾಗುವುದು' ಎಂದು ಹೇಳಿದರು.

'ತಾಲ್ಲೂಕು ಮಟ್ಟದಲ್ಲಿ ಹಗಲಿರುಳು ಶ್ರಮಿಸುವವರಿಗೆ ಮಾತ್ರ ಪಕ್ಷದ ಜವಾಬ್ದಾರಿ ವಹಿಸಲಾಗುವುದು. ನಾಯಕರ ಹಿಂದೆ ಗಿರಿಗಿಟ್ಲೆಯಂತೆ ಸುತ್ತುವವರನ್ನು ನೇಮಿಸಿ ಪ್ರಯೋಜನ ಇಲ್ಲ. ತಾಲ್ಲೂಕಿನಲ್ಲಿ ಕುಳಿತು ಸಮಸ್ಯೆ ಬಗೆಹರಿಸಬೇಕು' ಎಂದರು.

'ಪಕ್ಷ ಸಂಘಟನೆ ವಿಚಾರದಲ್ಲಿ ನಮಗೆ ದಿನವಿಡೀ ಸ್ಥಳೀಯ ಮಟ್ಟದಲ್ಲಿ ಕೆಲಸ ಮಾಡುವವರು ಬೇಕು. ಬೇರೆಯವರ ಒತ್ತಡದ ಮೇರೆಗೆ ನೇಮಕ ಮಾಡಿಕೊಂಡು ಸಮಯ ವ್ಯರ್ಥ ಮಾಡುವುದರಲ್ಲಿ ಪ್ರಯೋಜನವಿಲ್ಲ' ಎಂದೂ ಹೇಳಿದರು.

ಕಸಾಪ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅಭಿಮತ

'ಪ್ರಮುಖ ಹುದ್ದೆಗಳಲ್ಲಿ ಕನ್ನಡಿಗರಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಬೇಕು. ಪ್ರಮುಖ ನಿರ್ಣಯ ಕೈಗೊಳ್ಳುವ ಹುದ್ದೆಗಳು ಹಾಗೂ ಕಚೇರಿಗಳನ್ನು ಕನ್ನಡಿಗರು ಅಲಂಕರಿಸುವಂತಾಗಬೇಕು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ, ಮಾತನಾಡಿದರು.

'ಭಾಷೆಯ ವಿಜೃಂಭಣೆಗೆ ಆಸ್ಪದ ಇರುವಲ್ಲಿ ಕನ್ನಡಕ್ಕೆ ಅವಕಾಶ ಸಿಗುವಂತಾಗಬೇಕು. ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡಬೇಕು. ಆದರೆ, ಕಸ ಹೊಡೆಯುವ, ಚರಂಡಿ ಮತ್ತು ರಸ್ತೆ ಸ್ವಚ್ಛಗೊಳಿಸುವ, ಬಹುಪರಾಕ್ ಹೇಳುವ ಹುದ್ದೆಗಳಿಗೆ ಮೀಸಲಾತಿ ನೀಡಿದರೆ ಏನೂ ಪ್ರಯೋಜನವಿಲ್ಲ. ಸರ್ಕಾರಿ, ಅರೆ ಸರ್ಕಾರಿ, ಸಹಕಾರಿ ಸಂಸ್ಥೆಗಳಲ್ಲಿನ ಪ್ರಮುಖ ಹುದ್ದೆಗಳನ್ನು ಕನ್ನಡಿಗರು ಅಲಂಕರಿಸಬೇಕು. ಆಗ ಕನ್ನಡ ನಾಡಿಗೆ ಮೆರಗು ಬರುತ್ತದೆ' ಎಂದು ಹೇಳಿದರು.

'ನ್ಯಾಯಮೂರ್ತಿಗಳು ಬರೆಯುವ ತೀರ್ಪಿನ ಸಂಕ್ಷಿಪ್ತ ರೂಪವಾದರೂ ಕನ್ನಡದಲ್ಲಿ ಇರಬೇಕು. ಇಲ್ಲವಾದಲ್ಲಿ ಕಕ್ಷಿದಾರ ತೀರ್ಪಿನ ಪ್ರತಿ ಹಿಡಿದು ವಕೀಲರ ಬಳಿ ತೆರಳಬೇಕಾಗುತ್ತದೆ' ಎಂದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಿದವರ ಕುಟುಂಬಸ್ಥರನ್ನು ಆಹ್ವಾನಿಸಿ, ಸನ್ಮಾನಿಸಲಾಗುತ್ತಿದೆ. ಈಗಾಗಲೇ ಕಿಟೆಲ್ ವಂಶಸ್ಥರನ್ನು ಗೌರವಿಸಲಾಗಿದೆ. ಬಳ್ಳಾರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಥಾಮಸ್ ಮನ್ರೊ ಅವರ ವಂಶದವರನ್ನು ಗೌರವಿಸಲಾಗುವುದು' ಎಂದು ಹೇಳಿದರು.

ಕರ್ಪೂರ ಶ್ರೀನಿವಾಸರಾವ್ ಅವರ ಮರಿ ಮೊಮ್ಮಗಳು ನಿರ್ಮಲಾ ಕರ್ಪೂರರಾವ್, '60 ವರ್ಷಗಳ ಹಿಂದೆ ಅಮೆರಿಕಕ್ಕೆ ಹೋದಾಗ ಅಲ್ಲಿ ಕನ್ನಡ ಮಾತನಾಡಲು ಕನ್ನಡಿಗರು ಸಿಗುತ್ತಿರಲಿಲ್ಲ. ನಮ್ಮ ಮಕ್ಕಳಿಗೆ ಕನ್ನಡ ಪರಿಚಯಿಸಲು ಅಲ್ಲಿ ಕಾವೇರಿ ಕನ್ನಡ ಸಂಸ್ಥೆ ಸ್ಥಾಪಿಸಿದೆವು. ಎಲ್ಲೇ ಇದ್ದರೂ ಕನ್ನಡವನ್ನು ಬಳಸಬೇಕು' ಎಂದು ಅಭಿಪ್ರಾಯಪಟ್ಟರು.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ಬಿ.ವಿ. ವಸಂತ ಕುಮಾರ್, ಮ. ನಂಜುಂಡಸ್ವಾಮಿ, ಸುಧಾ ನರಸಿಂಹರಾಜು, ಸಿದ್ಧಗಂಗಯ್ಯ ಹೊಲತಾಳು ಮತ್ತು ಚಿಕ್ಕನಾಯಕನಹಳ್ಳಿ ಕನ್ನಡ ಸಂಘದ ಸಿ.ಬಿ. ರೇಣುಕಸ್ವಾಮಿ ಅವರಿಗೆ 'ಪ್ರೊ.ಸಿ.ಎಚ್ ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಪದ್ಮಿನಿ ನಾಗರಾಜು, ಬಿ.ಎಂ.ಪಟೇಲ್‌ಪಾಂಡು, ಮಹೇಶ ಜೋಶಿ, ನ್ಯಾ. ಕೃಷ್ಣ ಎಸ್. ದೀಕ್ಷಿತ್, ದತ್ತಿ ದಾನಿಗಳ ಪ್ರತಿನಿಧಿ ಎಸ್. ರಾಜಶೇಖರ್ ಮತ್ತು ನೇ.ಭ. ರಾಮಲಿಂಗ ಶೆಟ್ಟಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ದತ್ತಿ ಪ್ರಶಸ್ತಿ ಪುರಸ್ಕೃತರು

'ಪ್ರೊ.ಸಿಎಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ'ಯನ್ನು ಬಿ.ವಿ.ವಸಂತ ಕುಮಾರ್ (ಶಿಕ್ಷಣ), ಮ.ನಂಜುಂಡ ಸ್ವಾಮಿ (ಕನ್ನಡ ಸೇವೆ), ಸುಧಾ ನರಸಿಂಹರಾಜು (ಕಲಾ ಸೇವೆ), ಸಿದ್ಧಗಂಗಯ್ಯ ಹೊಲತಾಳು (ಕೃಷಿ ಸೇವೆ) ಮತ್ತು ಚಿಕ್ಕನಾಯಕನ ಹಳ್ಳಿ ಕನ್ನಡ ಸಂಘದ ಸಿ.ಬಿ. ರೇಣುಕಸ್ವಾಮಿ ಸ್ವೀಕರಿಸಿದರು. 'ರಾಜಸಭಾ ಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾವ್ ದತ್ತಿ ಪ್ರಶಸ್ತಿ'ಯನ್ನು ಸುಪ್ರಿಯ.ಎಸ್. ಆರ್., 'ಕರ್ಪೂರ ರಾಮರಾವ್ ಜನ್ಮಶತಾಬ್ದಿ ದತ್ತಿ ಪ್ರಶಸ್ತಿ'ಯನ್ನು ಮಮತಾ.ಎಸ್.ಟಿ. ಮತ್ತು ಬಾಲಗೌರಮ್ಮ ಅವರಿಗೆ ಪ್ರದಾನ ಮಾಡಲಾಯಿತು.

ಸುದ್ದಿ 2 ನಿಮಿಷ

'ರಾಜ್ಯಸಭೆ ಮೇಲೆ ಕಣ್ಣಿಟ್ಟು ಮೋಹನ್‌ದಾಸ್ ಪೈ ಟೀಕೆ'

ಬೆಂಗಳೂರು: 'ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ವಿನಾ ಕಾರಣ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ರಾಜ್ಯಸಭೆ ಸದಸ್ಯ ಸ್ಥಾನ ಪಡೆಯುವುದಕ್ಕಾಗಿ ಅವರು ಈ ರೀತಿ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೋಹನ್ ದಾಸ್ ಪೈ ಅವರು ಕೇಂದ್ರದಲ್ಲಿ ಉನ್ನತ ಹುದ್ದೆ ಬಯಸಿರಬಹುದು. ಅದಕ್ಕೆ ಕಾಂಗ್ರೆಸ್ ಸರ್ಕಾರದ ಸಚಿವರ ವಿರುದ್ಧ ಆರೋಪ ಮಾಡುತ್ತಿದ್ದಾರೆ' ಎಂದರು.

'ಹಿಂದೆ ಅವರು ಬೇರೆ ಬೇರೆ ಹುದ್ದೆಯಲ್ಲಿ ಇದ್ದವರು. ಸರ್ಕಾರ ಬದಲಾವಣೆಯಾದ ಮೇಲೆ ಅವರ ವರಸೆ ಬದಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಾನು ಗುರಿ ಆಗಿದ್ದೇವೆ. ಏನೋ ಒಂದು ಆಗಬೇಕಿದೆ. ಅದಕ್ಕೆ ಸೋಷಿಯಲ್ ಮಿಡಿಯಾ ವಾರಿಯರ್ ಆಗಿದ್ದಾರೆ. ಹಿಂದೆ ತಿಂಗಳಿಗೆ ಒಮ್ಮೆ ಮಾತನಾಡುತ್ತಿದ್ದರು. ಈಗ ವಾರಕ್ಕೊಮ್ಮೆ ಮಾತನಾಡುತ್ತಿದ್ದಾರೆ' ಎಂದರು.

'ಮೇಲಿರುವ ಭಗವಂತ ಕೆಳಗೆ ಬಂದರೂ ಬೆಂಗಳೂರನ್ನು ಕೇವಲ ಎರಡು-ಮೂರು ವರ್ಷಗಳಲ್ಲಿ ಬದಲಾಯಿಸಲು ಆಗುವುದಿಲ್ಲ' ಎಂದು ಇತ್ತೀಚೆಗೆ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದ್ದರು. ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಮೋಹನ್‌ದಾಸ್ ಪೈ, 'ಡಿ.ಕೆ.ಶಿವಕುಮಾರ್ ಬೆಂಗಳೂರು ಉಸ್ತುವಾರಿ ಸಚಿವರಾಗಿ ಬಂದು ಎರಡು ವರ್ಷ ಆಯಿತು. ನಗರಕ್ಕೆ ಪ್ರಬಲ ಸಚಿವರು ಸಿಕ್ಕಿದ್ದಾರೆಂದು ನಾವೆಲ್ಲಾ ಚಪ್ಪಾಳೆ ತಟ್ಟಿ ಸ್ವಾಗತಿಸಿದ್ದೆವು. ಆದರೆ, ನಮ್ಮ ಜೀವನ ಇನ್ನಷ್ಟು ಕೆಟ್ಟದಾಗಿದೆ. ಯಾವುದನ್ನೂ ಸಮಯಕ್ಕೆ ಸರಿಯಾಗಿ ಜಾರಿ ಮಾಡಿಲ್ಲ' ಎಂದು ಟೀಕಿಸಿದ್ದರು.



15 ಎಕರೆ ಕಾಫಿ ತೋಟ ಭಸ್ಮ

ಮೂಡಿಗೆರೆ: ತಾಲ್ಲೂಕಿನ ಕಣೆಗದ್ದೆ ಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ಇಳೇಖಾನ್ ಚಂದ್ರು ಎಂಬುವವರ ಕಾಫಿ ತೋಟಕ್ಕೆ ಬೆಂಕಿ ತಗುಲಿ, 15 ಎಕರೆಯಷ್ಟು ಕಾಫಿ ತೋಟ ಸುಟ್ಟುಹೋಗಿದೆ.

ಬೆಂಕಿ ಹೊತ್ತಿಕೊಂಡ ಸುದ್ದಿ ತಿಳಿಯುತ್ತಿದ್ದಂತೆ, ಸ್ಥಳೀಯರು, ಅಕ್ಕಪಕ್ಕದ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿದ್ದವರು ಧಾವಿಸಿ, ಬೆಂಕಿ ನಂದಿಸಲು ಯತ್ನಿಸಿದರು. ಆದರೆ, ಅಷ್ಟರಲ್ಲಾಗಲೇ ಸಮೀಪದ ತೋಟಗಳಿಗೂ ಬೆಂಕಿ ವ್ಯಾಪಿಸಿತ್ತು. ನಾಲ್ಕೈದು ಮಂದಿಯ ಕಾಫಿ ತೋಟವನ್ನು ಆಹುತಿ ಪಡೆಯಿತು.

ತೋಟಗಳಿಗೆ ಹೊಂದಿಕೊಂಡಂತೆ ಸಾರಗೋಡು ಮೀಸಲು ಅರಣ್ಯವಿದ್ದು, ಅರಣ್ಯಕ್ಕೆ ಬೆಂಕಿ ತಗುಲುವುದನ್ನು ತಡೆಯಲು ಸಿಬ್ಬಂದಿ ಹಾಗೂ ಸಾರ್ವಜನಿಕರು ಹರಸಾಹಸಪಟ್ಟರು. ಮೂಡಿಗೆರೆ ಹಾಗೂ ಚಿಕ್ಕಮಗಳೂರಿನ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಎರಡು ಗಂಟೆಗೂ ಹೆಚ್ಚುಕಾಲ ಕಾರ್ಯಚರಣೆ ನಡೆಸಿದ ನಂತರ ಬೆಂಕಿ ನಿಯಂತ್ರಣಕ್ಕೆ ಬಂತು. ಆದರೆ, ಅಷ್ಟರಲ್ಲಾಗಲೇ ಲಕ್ಷಾಂತರ ಮೌಲ್ಯದ ಕಾಫಿ ತೋಟ ಭಸ್ಮವಾಗಿತ್ತು.

'ತೋಟಕ್ಕೆ ಬೆಂಕಿ ಹತ್ತಿಕೊಳ್ಳಲು ಕಾರಣ ಏನು ಎಂಬುದು ಗೊತ್ತಾಗಿಲ್ಲ. ಯಾವುದೇ ದೂರು ಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂತಾವರ ಕನ್ನಡ ಸಂಘದ ದತ್ತಿ ಪ್ರಶಸ್ತಿ ಘೋಷಣೆ

ಮಂಗಳೂರು: ಕಾಂತಾವರ ಕನ್ನಡ ಸಂಘದ ಮೂರು ದತ್ತಿ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಗಮಕಿ ಸತೀಶ್ ಕುಮಾರ್ ನಿಟ್ಟೆ ಕೆಮ್ಮಣ್ಣು ಅವರ ದತ್ತಿನಿಧಿಯ 'ಗಮಕಕಲಾ ಪ್ರವಚನ' ಪ್ರಶಸ್ತಿಗೆ ಪ್ರಸಿದ್ಧ ವ್ಯಾಖ್ಯಾನಕಾರ ಸರ್ಪಂಗಳ ಈಶ್ವರ ಭಟ್ ಮಂಗಳೂರು, ಗಮಕಿ ಶ್ರೀಮತಿ ಯಾಮಿನಿ ಭಟ್ ಉಡುಪಿ ಅವರ ದತ್ತಿನಿಧಿಯ 'ಗಮಕಕಲಾ ವಾಚನ' ಪ್ರಶಸ್ತಿಗೆ ಗಮಕಿ ಯಜ್ಞೇಶ್ ಆಚಾರ್ಯ ಸುರತ್ಕಲ್ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಲ್ಪಿ ಕೆ. ಶಾಮರಾಯ ಆಚಾರ್ಯ ಕಾರ್ಕಳ ಅವರ ದತ್ತಿನಿಧಿಯ 'ಕಾಷ್ಠಶಿಲ್ಪಕಲಾ ಪ್ರಶಸ್ತಿ'ಗೆ ರಥ ಶಿಲ್ಪಿ ಶಂಕರ ಆಚಾರ್ಯ ಕೋಟೇಶ್ವರ ಅವರು ಆಯ್ಕೆಯಾಗಿದ್ದಾರೆ.



ಸರ್ಪಂಗಳ ಈಶ್ವರ ಭಟ್



ಶಂಕರ ಆಚಾರ್ಯ



ಯಜ್ಞೇಶ್ ಆಚಾರ್ಯ

ಪ್ರಶಸ್ತಿಗಳು ತಲಾ ಹತ್ತು ಸಾವಿರ ನಗದು, ತಾಮ್ರಪತ್ರ ಮತ್ತು ಸನ್ಮಾನ ಒಳಗೊಂಡಿವೆ ಎಂದು ಸಂಘದ ಅಧ್ಯಕ್ಷ ನಾ.ಮೊಗಸಾಲೆ ತಿಳಿಸಿದ್ದಾರೆ.

ಮಾರ್ಚ್ 23ರಂದು ಕಾಂತಾವರದ ಕನ್ನಡ ಭವನದಲ್ಲಿ ನಡೆಯುವ 'ಮುದ್ದಣ ಸಾಹಿತ್ಯೋತ್ಸವ'ದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

ಸಚಿವ ಬೈರತಿ ವಿರುದ್ಧವೇ 'ಕೈ' ಶಾಸಕ ಗರಂ

ದಲಿತ ಶಾಸಕರಿಗೆ ಬೈರತಿ ಅವಮಾನ; ಸಚಿವರ ತುಘಲಕ್ ದರ್ಬಾರ್: ಟೀಕೆ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ(ಕೋಲಾರ): ಕೋಲಾರ ಜಿಲ್ಲೆಯ ಕಾಂಗ್ರೆಸ್ ಬಣಗಳ ನಡುವಿನ ಶೀತಲ ಸಮರ ತಾರಕಕ್ಕೇರಿದ್ದು ಇದೀಗ ಬೀದಿಗೆ ಬಂದಿದೆ.

ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ವಿರುದ್ಧ ಸ್ವಪಕ್ಷೀಯ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮಂಗಳವಾರ ಬಹಿರಂಗವಾಗಿ ಹರಿಹಾಯ್ದಿದ್ದಾರೆ.

'ದಲಿತರಿಗಾಗಿ ಮೀಸಲಿಟ್ಟ ಅನುದಾನದಲ್ಲಿ ಜನಪರ ಉತ್ಸವ ನಡೆಸಿದ್ದಾರೆ. ಸೌಜನ್ಯಕ್ಕಾದರೂ ಜಿಲ್ಲೆಯ ಮೂವರು ಪರಿಶಿಷ್ಟ ಜಾತಿಯ ಶಾಸಕರ ಜೊತೆ ಚರ್ಚಿಸಿಲ್ಲ' ಎಂದು ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಇದು ಕೇವಲ ಶಾಸಕರಿಗೆ ಆಗಿರುವ ಅವಮಾನ ಅಲ್ಲ. ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಉಸ್ತುವಾರಿ ಸಚಿವರು ಅವಮಾನ ಮಾಡಿದ್ದಾರೆ' ಎಂದು ಬೈರತಿ ಸುರೇಶ್ ವಿರುದ್ಧ ವಾಗ್ದಾಳಿ ನಡೆಸಿದರು.



ನಾರಾಯಣಸ್ವಾಮಿ



ಬೈರತಿ ಸುರೇಶ್

ಕೋಲಾರದಲ್ಲಿ ನಡೆದ ರಾಜ್ಯಮಟ್ಟದ ಜನಪರ ಉತ್ಸವಕ್ಕೆ ಜಿಲ್ಲೆಯ ಪರಿಶಿಷ್ಟ ಜಾತಿ ಶಾಸಕರಾದ ಕಾಂಗ್ರೆಸ್‌ನ ಎಸ್.ಎನ್.ನಾರಾಯಣಸ್ವಾಮಿ(ಬಂಗಾರಪೇಟೆ), ರೂಪಕಲಾ ಶಶಿಧರ್ (ಕೆಜಿಎಫ್) ಹಾಗೂ ಜೆಡಿಎಸ್‌ನ ಸಮೃದ್ಧಿ ಮಂಜುನಾಥ್ (ಮುಳಬಾಗಿಲು) ಗೈರಾಗಿದ್ದರು.

'ಸಚಿವರು ಹಣವಂತರೇ ಇರಬಹುದು, ಸಾಹುಕಾರ ಆಗಿರಬಹುದು, ಪ್ರಭಾವಿಗಳಾಗಿರಬಹುದು. ಆದರೆ ಯಾರೇ ಬರಲಿ, ಯಾರೇ ಇರಲಿ ಸರ್ಕಾರಿ ಕಾರ್ಯಕ್ರಮ ನಡೆಯುತ್ತವೆ ಎಂದಿರುವುದು ಸರಿ ಅಲ್ಲ. ನಮ್ಮ ಸಮುದಾಯದ ಮತ ಹೊರತುಪಡಿಸಿ ಗೆಲ್ಲಲು ಸಾಧ್ಯವೇ ಇಲ್ಲ. ಅವರ ಮತಗಳು ಅಗತ್ಯವಿಲ್ಲವೆಂದು ಹೇಳಲಿ ನೋಡೋಣ' ಎಂದು ಸವಾಲು ಹಾಕಿದರು.

'ಇದೇನು ತುಘಲಕ್ ದರ್ಬಾರೇ': 'ಬೈರತಿ ಸುರೇಶ್ ನಮ್ಮದೇ ಪಕ್ಷದ ಸಚಿವರು, ಜಿಲ್ಲಾ ಉಸ್ತುವಾರಿ. ನಮ್ಮನ್ನಾದರೂ ಕರೆದು ಮಾತನಾಡಬಹುದಿತ್ತು. ಕನಿಷ್ಠ ಪಕ್ಷ ದೂರವಾಣಿ ಕರೆ ಮಾಡಿಲ್ಲ, ಸಭೆ ಕರೆದಿಲ್ಲ. ಏನು ಮಾಡಬೇಕೆಂದು ಕೇಳಿಲ್ಲ. ಅವರ ಇಷ್ಟಬಂದಂತೆ ಮಾಡಲು ಇದೇನು ತುಘಲಕ್ ದರ್ಬಾರೇ? ಅವರ ಸ್ವಂತ ಹಣವಾದರೆ ಏನು ಬೇಕಾದರೂ ಮಾಡಿಕೊಳ್ಳಲಿ; ನಾವು ಕೇಳುವುದಿಲ್ಲ. ಆದರೆ, ಸರ್ಕಾರಿ ಹಣ; ವಿಶೇಷವಾಗಿ ದಲಿತರ ಹಣ, ಈ ಹಣ ಖರ್ಚು ಮಾಡಲು ಆ ಸಮುದಾಯದ ಶಾಸಕರನ್ನು ಗಣನೆಗೆ ತೆಗೆದುಕೊಂಡಿಲ್ಲ. ಇದು ಒಳ್ಳೆಯದಲ್ಲ' ಎಂದರು.

'ಉಸ್ತುವಾರಿ ಸಚಿವರು ಕಿವಿ ಊದುವ ಹಿಂಬಾಲಕರ ಮಾತು ಕೇಳುತ್ತಿದ್ದಾರೆ. ಅದು ಸರಿ ಅಲ್ಲ. ನಾನೊಬ್ಬ ಜಿಲ್ಲೆಯ ಹಿರಿಯ ಶಾಸಕನಾಗಿ ಈ ಮಾತು ಹೇಳುತ್ತಿದ್ದೇನೆ. ಉಸ್ತುವಾರಿ ಸಚಿವರು ಬಂದಾಗ ಅವರ ಜೊತೆ ಯಾರೊಬ್ಬ ದಲಿತ ಮುಖಂಡರೂ ಇರುವುದಿಲ್ಲ. ಇವರ ವರ್ತನೆಯಿಂದ ದಲಿತರು ದೂರ ಸರಿಯುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.



ಪ್ರಶಸ್ತಿ ಪ್ರದಾನ

ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ಲೇಖಿಕಾ ಸಾಹಿತ್ಯ ವೇದಿಕೆ ಜಂಟಿಯಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 'ವಾಣಿ ಸ್ಮರಣೆ' ಕಾರ್ಯಕ್ರಮದಲ್ಲಿ ಲೇಖಕಿ ಎ.ಪಿ. ಮಾಲತಿ ಅವರಿಗೆ 'ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ) ವೇದಿಕೆ ಸದಸ್ಯೆ ತಾರಾ ನಂಜುಂಡ ಶಾಸ್ತ್ರಿ, ಲೇಖಕಿ ಶೈಲಜಾ ಸುರೇಶ್, ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು, ಲೇಖಕಿ ಮಂಗಳ ಪ್ರಿಯದರ್ಶಿನಿ ಡಿ., ಚಿನ್ಮಯಿ ಮತ್ತು ಮಧುಮತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಆರ್ಟ್ ಆಫ್ ಲಿವಿಂಗ್‌ನಲ್ಲಿ ಶಿವರಾತ್ರಿ ಇಂದು

ಬೆಂಗಳೂರು: ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಫೆ.26ರಂದು (ಬುಧವಾರ) ಮಹಾಶಿವರಾತ್ರಿ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ.

ಫೆ. 26ರಂದು ಸಂಜೆ 6.30ಕ್ಕೆ ಮಹಾ ರುದ್ರಾಭಿಷೇಕ, ಮಹಾ ಸತ್ಸಂಗದೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಲಿದೆ. ಫೆ. 27ರ ಬೆಳಿಗಿನ ಜಾವ 4.30ರವರಗೆ ಮಹಾ ರುದ್ರ ಹೋಮದೊಂದಿಗೆ ಭಕ್ತಿ ಮೆರಗು ನೀಡಲಿದೆ.

1 ಸಾವಿರ ವರ್ಷಗಳ ನಂತರ ಮೂಲ ಸೋಮನಾಥ ಜ್ಯೋತಿರ್ಲಿಂಗದ ದರ್ಶನವೂ ಇರಲಿವೆ. ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಸಾನ್ನಿಧ್ಯ ವಹಿಸಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಪ್ರಕಟಣೆ ತಿಳಿಸಿದೆ.

ಯಲಹಂಕ: ಹಾಲು ಕರೆಯುವ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಇಟಗಲ್‌ಪುರ ಮತ್ತು ಕಾಕೋಳು ಹಾಲು ಉತ್ಪಾದಕರ ಸಹಕಾರ ಸಂಘಗಳ ಸಹಯೋಗದೊಂದಿಗೆ ಹಸುಗಳ ಹಾಲು ಕರೆಯುವ ಸ್ಪರ್ಧೆಯನ್ನು ಇಟಗಲ್‌ಪುರ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು.

60ಕ್ಕೂ ಹೆಚ್ಚು ಹಸುಗಳೊಂದಿಗೆ ರೈತರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಲೋಹಿತ್ ಹಾಗೂ ರೂಪಾ ಶ್ರೀಧರ್ ಅವರಿಗೆ ಬಹುಮಾನವಾಗಿ ಪಾರಿತೋಷಕ, ಪ್ರಮಾಣಪತ್ರ, ಹಾಲಿನ ಕ್ಯಾನ್, ಬಕೆಟ್ ನೀಡಿ ಸನ್ಮಾನಿಸಲಾಯಿತು.

ಜಿಲ್ಲಾ ಪಶುವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಚಂದ್ರಶೇಖರ್ ಮಾತನಾಡಿ, ರೈತರಿಗೆ ಹೈನುಗಾರಿಕೆ ವರದಾನವಾಗಿದ್ದು, ಈ ವೃತ್ತಿಯಲ್ಲಿ ಆಸಕ್ತಿ ಮತ್ತು ಶ್ರದ್ಧೆಯಿಂದ ತೊಡಗಿಸಿಕೊಂಡರೆ ಆರ್ಥಿಕವಾಗಿ ಸಬಲರಾಗಲು ಅವಕಾಶವಿದೆ. ರೈತರು ಎಲ್ಲ ರೀತಿಯ ತಳಿಗಳನ್ನು ಉಳಿಸುವುದರ ಜೊತೆಗೆ ರೋಗಗಳು ಬರದಂತೆ ತಡೆಗಟ್ಟಲು ಕಾಲಕಾಲಕ್ಕೆ ಅಗತ್ಯ ಲಸಿಕೆಗಳನ್ನು ಹಾಕಿಸಬೇಕು ಎಂದು ತಿಳಿಸಿದರು.

ಇಟಗಲ್‌ಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಮೋಹನ್‌ಕುಮಾರ್, ಪಶು ವೈದ್ಯಕೀಯ ಇಲಾಖೆಯ ಬೆಂಗಳೂರು ಉತ್ತರ ತಾಲ್ಲೂಕು ಸಹಾಯಕ ನಿರ್ದೇಶಕ ರವಿಕುಮಾರ್ ಉಪಸ್ಥಿತರಿದ್ದರು.



ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ದರೋಡೆಗೆ ಸಂಚು ಐವರ ಬಂಧನ

ಪ್ರಜಾವಾಣಿ ವಾರ್ತೆ

ತುಮಕೂರು: ನಗರ ಹೊರವಲಯದ ರಿಂಗ್ ರಸ್ತೆಯಲ್ಲಿ ಟೊಮೆಟೊ ಸಾಗಿಸುತ್ತಿದ್ದ ರೈತರನ್ನು ದರೋಡೆ ಮಾಡಿದ್ದ ಆರೋಪಿಗಳನ್ನು ತಿಲಕ್‌ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗಂಗಸಂದ್ರದ ಬಳಿ ಭಾನುವಾರ ರಾತ್ರಿ ದರೋಡೆಗೆ ಹೊಂಚು ಹಾಕಿ ಕುಳಿತಿದ್ದ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಬಂಧಿಸಿದ್ದಾರೆ. ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ರೈತರ ದರೋಡೆ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಬಗ್ಗೆ ಬಾಯಿ ಬಿಟ್ಟಿದ್ದಾರೆ.

ಡಕಾಯಿತಿ, ಕಳ್ಳತನ ಮಾಡುತ್ತಿದ್ದ ನಗರದ ಹೆಗಡೆ ಕಾಲೊನಿ, ಪಿ.ಎಚ್. ಕಾಲೊನಿಗೆ ಸೇರಿದ ಅಬ್ದುಲ್ ಖಾದರ್ (38), ಫಯಾಜ್ (22), ಮಂಜುನಾಥ್ (21), ಅಫ್ರೋಜ್ (22), ಸುಹೇಲ್ (24) ಬಂಧಿತರು. ಪೊಲೀಸರು ಬೈಕ್, ಮೊಬೈಲ್ ಜಪ್ತಿ ಮಾಡಿದ್ದಾರೆ.

ರೈತರ ದರೋಡೆ: ರಿಂಗ್ ರಸ್ತೆಯಲ್ಲಿ ಫೆ. 19ರಂದು ಮಧ್ಯರಾತ್ರಿ ಫಯಾಜ್, ಮಂಜುನಾಥ್, ಅಫ್ರೋಜ್ ಇತರರು ರೈತರಿಗೆ ಚಾಕುವಿನಿಂದ ಇರಿದು ಚಿನ್ನಾಭರಣ, ನಗದು ದೋಚಿದ್ದರು. ಅರಸೀಕೆರೆಯಿಂದ ಬೆಂಗಳೂರಿಗೆ ಹೋಗುವವರನ್ನು ಚಾಕುವಿನಿಂದ ಬೆದರಿಸಿದ್ದರು. ಹಣ ಕೊಡಲು ಒಪ್ಪದಿದ್ದಾಗ ಚಾಕುವಿನಿಂದ ಇರಿದಿದ್ದರು. ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'ಮಂಚನಬೆಲೆಯಿಂದ ಕುಡಿಯುವ ನೀರು'

ರಾಜರಾಜೇಶ್ವರಿನಗರ: ಯಶವಂತಪುರ ವಿಧಾನಸಭೆ ಕ್ಷೇತ್ರದ 17 ಗ್ರಾಮ ಪಂಚಾಯಿತಿಗಳಿಗೆ ಮಂಚನಬೆಲೆ ಜಲಾಶಯ ಹಾಗೂ ಕಾವೇರಿಯಿಂದ ಕುಡಿಯುವ ನೀರು ಪೂರೈಸಲಾಗುತ್ತದೆ ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ಕೊಡಿಗೇಹಳ್ಳಿ, ರಾಮೋಹಳ್ಳಿ, ಕುಂಬಳಗೋಡು, ಸೂಲಿಕೆರೆ, ಎಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಾವಣೆ, ಗ್ರಾಮಗಳನ್ನು 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಸೇರಲಿವೆ. ಒಂಬತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಚನಬೆಲೆ ಜಲಾಶಯದಿಂದ ಕುಡಿಯುವ ನೀರು ಪೂರೈಸುವ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ ಎಂಟು ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ಕಾವೇರಿ ಕುಡಿಯುವ ನೀರಿನ 5ನೇ ಹಂತದಿಂದ ಪೂರೈಸಲಾಗುವುದು ಎಂದರು.

ಸುಮಾರು ₹10 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಶ್ರೀಧರ್, ತಾವರೆಕೆರೆ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸಾವಿತ್ರಿ, ಮುಖಂಡರಾದ ಎಸ್.ಟಿ.ಪ್ರಕಾಶ್ ಗೌಡ, ಸುಮಾ ಜನಾರ್ಧನ್, ರಮೇಶ್‌ಗೌಡ, ರೋಹಿಣಿ, ಪಟೇಲ್ ಚಿಕ್ಕಣ್ಣ, ವಿನೋದ ನರಸಿಂಹಮೂರ್ತಿ ಉಪಸ್ಥಿತದ್ದರು.

ನಗರದಲ್ಲಿ ಇಂದು

'ಮೃತ್ತಿಕಾ ಶಿವಲಿಂಗ ದರ್ಶನ', 'ರುದ್ರಾಭಿಷೇಕ': ಆಯೋಜನೆ ಮತ್ತು ಸ್ಥಳ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಮಲ್ಲೇಶ್ವರ, ಬೆಳಿಗ್ಗೆ 11ರಿಂದ

'ಜಾಣ ಜಾಣೆಯರ ನಗೆ ಜಾಗರಣೆ, ಶಿವಪಾರ್ವತಿಯ ಅಂಬಾರಿ ಉತ್ಸವ: ಅತಿಥಿಗಳು: ದಿನೇಶ್ ಗುಂಡೂರಾವ್, ಎಂ.ಆರ್. ಸೀತಾರಾಮ್, ಆನಂದ್ ಗುರೂಜಿ, ವೂಡೇ ಪಿ. ಕೃಷ್ಣ, ಶ್ರೀನಿವಾಸ ಶರ್ಮಾ, ಡಿ. ಮುನಿರಾಜು, ರಾಘವೇಂದ್ರ ಎಸ್., ಹಾಸ್ಯ ರಸದೌತಣ: ಎಂ.ಎಸ್. ನರಸಿಂಹಮೂರ್ತಿ, ಕೃಷ್ಣೇಗೌಡ, ಮಿಮಿಕ್ರಿ ದಯಾನಂದ್, ಮಿಮಿಕ್ರಿ ಗೋಪಿ, ಸ್ಥಳ: ತುಳಸಿ ತೋಟ ಆಟದ ಮೈದಾನ, ಚಿಕ್ಕಲಾಲ್‌ಬಾಗ್, ಉಪ್ಪಾರಪೇಟೆ ಪೊಲೀಸ್ ಠಾಣೆ, ಸಂಜೆ 4ರಿಂದ

ಸಾಂಸ್ಕೃತಿಕ ಕಾರ್ಯಕ್ರಮ: ಭಕ್ತಿ ಗೀತೆಗಳು, ಭಜನೆ, ಹರಿಕಥೆ, ಭರತನಾಟ್ಯ ಪ್ರದರ್ಶನ, ಕೊಳಲು ವಾದನ, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಮೂರನೇ ಹಂತ, ಜೆ.ಪಿ. ನಗರ ಸಂಜೆ 4ರಿಂದ

ಆಯೋಜನೆ: ಕೆಬಿಜಿ ಸ್ವಯಂ ಸೇವಕರು, ಕಥಾ ಶಾಸ್ತ್ರ: ಪ್ರಭಾತ್ ಆರ್ಟ್ಸ್ ಇಂಟರ್ ನ್ಯಾಷನಲ್, ಉದ್ಘಾಟನೆ: ಕೃಷ್ಣಬೈರೇಗೌಡ, ಸ್ಥಳ: ಎನ್‌ಟಿಐ ಮೈದಾನ, ವಿದ್ಯಾರಣ್ಯಪುರ, ಸಂಜೆ 4ರಿಂದ

ಶಿವವೈಭವ: ಅಮರನಾಥ ಹಿಮದ ಜ್ಯೋತಿರ್ಲಿಂಗ ದರ್ಶನ, ಆದಿಯೋಗಿ ಶಿವನ ದರ್ಶನ, ಪ್ರಸಾದ ವಿನಿಯೋಗ, ಗಾಯನ: ಶಮಿತಾ ಮಲ್ನಾಡ್, ಅನುರಾಧ ಭಟ್, ಅಶ್ವಿನ್ ಶರ್ಮಾ, ಪೃಥ್ವಿ ಭಟ್, ಉಮಾ, ವಿನೋದ್ ಗೌಡ, ಸ್ಥಳ: ಗಣೇಶ ದೇವಸ್ಥಾನದ ಆಟದ ಮೈದಾನ, ಕೆಂಗೇರಿ ಉಪನಗರ, ಸಂಜೆ 4

ರೋಟರಿ ಸೃಷ್ಟಿ ಶಿವರಾತ್ರಿ ಸಂಸ್ಕೃತಿ ಉತ್ಸವ: ಅತಿಥಿಗಳು: ಶಿವರಾಜ ತಂಗಡಗಿ, ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಉದಯ್ ಗರುಡಾಚಾರ್, ಧರಣಿದೇವಿ ಮಾಲಗತ್ತಿ, ಶುಭಾ ಧನಂಜಯ್, ನಾಗಮಣಿ ಶ್ರೀನಾಥ್, ಸತೀಶ್ ಮಾಧವನ್, ಎ.ವಿ. ಸತ್ಯನಾರಾಯಣ, 'ನಾದಸ್ವರ' ತವಿಲ್ ರಾಜ ಮತ್ತು ತಂಡ, ಕುಚಿಪುಡಿ ನೃತ್ಯ ಪ್ರದರ್ಶನ: ರೇಖಾ ಸತೀಶ್, ಭರತನಾಟ್ಯ ಪ್ರದರ್ಶನ: ಮಂದಸ್ಮಿತಾ, ಗಾಯನ: ಆರ್. ಕೆ. ಪದ್ಮನಾಭ, ಕುಚಿಪುಡಿ ನೃತ್ಯ ಪ್ರದರ್ಶನ: ವೈಗ ಕೆ. ಸಜೀವೆ, ವೀಣೆ: ಸುಮಾ ಸುಧೀಂದ್ರ, ಗಾಯನ: ಮಾನಸಿ ಪ್ರಸಾದ್, 'ಶಿವಾರ್ಪಣಂ': ಶಿವಪ್ರಿಯ, ತಬಲಾ: ಅಮೃತೇಶ್ ಕುಲಕರ್ಣಿ, ಆಯೋಜನೆ: ರೋಟರಿ 3191, ರೋಟರಿ ಬ್ಯುಗಲ್ ರಾಕ್ ಸಂಸ್ಥೆ, ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಸಂಜೆ 5ರಿಂದ



ಆಯೋಜನೆ: ಜ್ಞಾನ ಮುನೇಶ್ವರಸ್ವಾಮಿ ದೇವಾಲಯ, ಗಣ ಹೋಮ, ಸ್ವಾಮಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಜ್ಞಾನ ಮುನೇಶ್ವರ ಸ್ವಾಮಿ ದೇವಾಲಯ, ಜ್ಞಾನಭಾರತಿ ಆವರಣ, ಸಂಜೆ 5ರಿಂದ

ಕಾವ್ಯ ಶಿವರಾತ್ರಿ: ಅಹೋರಾತ್ರಿ ಕಾವ್ಯಗಾಯನ, ಮಂಟೇಸ್ವಾಮಿ ಮತ್ತು ಮಲೆಮಹಾದೇಶ್ವರ ಮಹಾಕಾವ್ಯ ಗಾಯನ: ಅಲ್ಕೆರೆ ಶಿವಕುಮಾರ್ ಮತ್ತು ತಂಡ, ಸ್ಥಳ: ಡಾ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಸಂಜೆ 6ರಿಂದ

ಆಯೋಜನೆ: ಅಖಿಲ ಭಾರತ ವೀರಶೈವ ಮಹಾಸಭಾ, ವೀರಗಾಸೆ ಕುಣಿತ, ಸ್ಯಾಕ್ಸೋಫೋನ್: ಹರಿಪ್ರಸಾದ್ ಮತ್ತು ತಂಡ, ಹಾಸ್ಯ ಕಾರ್ಯಕ್ರಮ: ಜಗ್ಗಪ್ಪ ಸುಶ್ಮಿತಾ ಮತ್ತು ತಂಡ, ಶಿವ ತಾಂಡವ ನೃತ್ಯ ವೈಭವ: ಪೂಜಶ್ರೀ ಎಲ್.ಬಿ. ಮತ್ತು ತಂಡ, ಸಂಗೀತ ಕಾರ್ಯಕ್ರಮ: ವಾಸುಕಿ ವೈಭವ್, ಸ್ಥಳ: ಬಿ.ಎಸ್. ಚಂದ್ರಶೇಖರ್ ಆಟದ ಮೈದಾನ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 6

'ದಕ್ಷ ಯಜ್ಞ ಅಥವಾ ಭೃಗುಮುನಿಯ ಗರ್ವಭಂಗ' ನಾಟಕ ಪ್ರದರ್ಶನ: ಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ, ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಲಕ್ಷ್ಮೀಪುರ, ಕೆಂಪೇಗೌಡನಗರ, ಸಂಜೆ 6

ಆಯೋಜನೆ: ಸೋಮೇಶ್ವರಸ್ವಾಮಿ ದೇವಸ್ಥಾನ, ಸಹಸ್ರಾರು ದೀಪೋತ್ಸವ, ರಾತ್ರಿ ಜಾಗರಣೆ, ಪೂಜಾ ಕಾರ್ಯಕ್ರಮ, ಸ್ಥಳ: ಸೋಮೇಶ್ವರಸ್ವಾಮಿ ದೇವಸ್ಥಾನ, ಅಬ್ಬಿಗೆರೆ, ಚಿಕ್ಕಬಾಣಾವರ, ಸಂಜೆ 6

ಆಯೋಜನೆ: ಪಟ್ಟಾಭಿರಾಮ ಸೇವಾ ಮಂಡಳಿ, ಪಂಚಲಿಂಗ ದರ್ಶನ: ಸ್ಥಳ: ಪಟ್ಟಾಭಿರಾಮ ಸೇವಾ ಮಂಡಳಿ, ನಾಲ್ಕನೇ ಟಿ ಬ್ಲಾಕ್, ಜಯನಗರ, ಸಂಜೆ 6

ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, 'ದಕ್ಷ ಯಜ್ಞ' ನಾಟಕ ಪ್ರದರ್ಶನ: ನಿರ್ದೇಶನ: ಗುರು ಶ್ರೀನಿವಾಸ ಸಾಸ್ತಾನ್, 'ಶಿವ ನಾದಾನುಭವ' ಭಕ್ತಿ ಗೀತೆಗಳ ಗಾಯನ: ನಾಗಶ್ರೀ ನಾರಾಯಣ್ ಮತ್ತು ತಂಡ, 'ವೀಣಾ ವಾದನ': ಜಿ.ವೈ. ಪದ್ಮಾನಾಗರಾಜು, ಬಾಲ ತ್ರಿಪುರ ಸುಂದರಿ ಮತ್ತು ತಂಡ, 'ಭರತ ನಾಟ್ಯ' ಪ್ರದರ್ಶನ: ರಘು ನಂದನ್ ಎಸ್., ಮತ್ತು ತಂಡ, 'ಶಿವಾಮೃತ ಭರತನಾಟ್ಯ' ಪ್ರದರ್ಶನ: ಅಪೂರ್ವ ಶರ್ಮಾ ಮತ್ತು ತಂಡ, 'ಶಿವ ಸ್ಮರಣೆ ಭರತನಾಟ್ಯ' ಪ್ರದರ್ಶನ: ಸಾಯಿ ಭವಾನಿ, 'ಶಿವತಾಂಡವ ಭರತನಾಟ್ಯ' ಪ್ರದರ್ಶನ: ಸ್ವಾತಿ ಮತ್ತು ತಂಡ, 'ಶಿವಾರ್ಪಣಂ ಭರತನಾಟ್ಯ' ಪ್ರದರ್ಶನ: ಶುಭಶ್ರೀ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30ರಿಂದ

ಶಿವರಾತ್ರಿ ಕಲಾ ಪುರಸ್ಕಾರ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಎಲ್. ಸುಬ್ರಮಣ್ಯಂ, ಅನುಪಮಾ ಹೊಸಕೆರೆ, ಹಾಸನ ರಘು, ಸುಮಾ ಸುಧೀಂದ್ರ, ಮೈಸೂರು ನಾಗಮಣಿ ಶ್ರೀನಾಥ್, ಪಿ. ರಮಾ, ನಿರುಪಮಾ, ಟಿ.ಡಿ. ರಾಜೇಂದ್ರ, ವೀಣಾ ಮೂರ್ತಿ ವಿಜಯ್, ಡಾ. ಜಯಲಕ್ಷ್ಮಿ ಎಚ್.ಕೆ., ಮಿಥುನ್ ಶ್ಯಾಮ್, ಅತಿಥಿಗಳು: ಶೋಭಾ ಕರಂದ್ಲಾಜೆ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಶನ್, ಸ್ಥಳ: ಸರ್ಕಾರಿ ಶಾಲೆಯ ಮೈದಾನ, ಕೆ.ಸಿ. ಜನರಲ್ ಆಸ್ಪತ್ರೆ ಮುಂಭಾಗ, ಮಲ್ಲೇಶ್ವರ, ಸಂಜೆ 7

ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ನೃತ್ಯ ಕಾರ್ಯಕ್ರಮ: ಅಧ್ಯಕ್ಷತೆ: ಎಂ. ಆನಂದ್, ಉದ್ಘಾಟನೆ: ಎಂ. ಜಯಸಿಂಹ, ಅತಿಥಿಗಳು: ಮುನಿಚನ್ನಪ್ಪ, ಕೃಷ್ಣಪ್ಪ, ಎಂ. ಶಿವಣ್ಣ, ಶಾಂತಮ್ಮ, ನಂಜಪ್ಪ, ನಟರಾಜು, ಕೆ. ಪ್ರಕಾಶ್, ನರಸೇಗೌಡ, ರಾಜಣ್ಣ, ಮುನಿರತ್ನಂ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಈಶ್ವರ ದೇವಸ್ಥಾನದ ಹತ್ತಿರ, ನಾಗಶೆಟ್ಟಿಹಳ್ಳಿ, ರಾತ್ರಿ 8.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

'ನಮ್ಮ ಮೆಟ್ರೊ'ದ ಹಳದಿ ಮಾರ್ಗ

ಚಾಲಕರಹಿತ ರೈಲು ಸಂಚಾರ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಲಯದ ರೈಲ್ವೆ ಸುರಕ್ಷತಾ ಆಯುಕ್ತರು ಮತ್ತು ತಜ್ಞರ ತಂಡವು 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಚಾಲಕ ರಹಿತ ಮೆಟ್ರೊ ರೈಲು ಸಂಚಾರದ ತಪಾಸಣೆ ನಡೆಸಿತು.

ಚಾಲಕ ರಹಿತ ಮೆಟ್ರೊ ರೈಲಿನ ಪರೀಕ್ಷೆ ಯಶಸ್ವಿಯಾಗಿದ್ದರ ಬಗ್ಗೆ ಮೆಟ್ರೊ ಆಡಳಿತ ಮಂಡಳಿ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದು, 'ಇದು ಚಾಲಕರಹಿತ ಮೆಟ್ರೊ ಚಾಲನೆಗೆ ರೈಲ್ವೆ ಸಚಿವಾಲಯದ ಅನುಮೋದನೆ ಪಡೆಯುವ ಪ್ರಥಮ ಹೆಜ್ಜೆಯಾಗಿದೆ' ಎಂದು ತಿಳಿಸಿದೆ.

ಮೆಟ್ರೊದ ಹಳದಿ ಮಾರ್ಗದಲ್ಲಿನ ಆರ್.ವಿ.ರಸ್ತೆ- ಬೊಮ್ಮಸಂದ್ರ ನಿಲ್ದಾಣಗಳ ನಡುವೆ ಚಾಲಕ ರಹಿತ ಮೆಟ್ರೊ ರೈಲು ಚಲಾಯಿಸಿ, ಪರೀಕ್ಷೆ ನಡೆಸಲಾಗಿದೆ. ಈ ಪರೀಕ್ಷೆಯು ಹೊಸ ರೋಲಿಂಗ್ ಸ್ಟಾಕ್, ರೈಲ್ವೆ ಸಚಿವಾಲಯದ ಅನುಮೋದನೆ ಪಡೆಯುವ ಮೊದಲ ಹೆಜ್ಜೆಯಾಗಿದೆ. ಅನುಮೋದನೆ ಬಳಿಕ ಈ ಮಾರ್ಗದ ಸಂಕೇತ ವ್ಯವಸ್ಥೆಯ ಪರೀಕ್ಷೆಗಳನ್ನು ಪೂರ್ಣಗೊಳಿಸಲಾಗುತ್ತದೆ. ನಂತರ ಈ ಮಾರ್ಗದ ಸಂಪೂರ್ಣ ಪರೀಕ್ಷೆಗೆ ತಂಡವನ್ನು ಮತ್ತೆ ಆಹ್ವಾನಿಸಲಾಗುವುದು. ಎಲ್ಲಾ ಪರೀಕ್ಷೆಗಳು ಯಶಸ್ವಿಯಾಗಿ ಮುಗಿದ ಬಳಿಕ ಅನುಮೋದನೆ ಸಿಗಲಿದೆ. ಆ ಬಳಿಕ ಈ ಮಾರ್ಗವನ್ನು ಕಾರ್ಯಾಚರಣೆಗೆ ತೆರೆಯಲಾಗುವುದು ಎಂದು ಬಿಎಂಆರ್‌ಸಿಎಲ್ ಹೇಳಿದೆ.

'ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ ಕಂಪನಿಯು ಚಾಲಕ ರಹಿತ ಮೆಟ್ರೊ ರೈಲುಗಳನ್ನು ಪೂರೈಸಿದೆ. ಈ ಹೊಸ ರೈಲುಗಳಿಗಾಗಿ ರೈಲ್ವೆ ಸಚಿವಾಲಯದಿಂದ ಅನುಮೋದನೆ ಪಡೆಯುವ ಮೊದಲು ಈ ಪರೀಕ್ಷೆ ಕಡ್ಡಾಯ' ಎಂದು ರೈಲು ಸುರಕ್ಷತಾ ಆಯುಕ್ತ ಎ.ಎಂ.ಚೌಧರಿ ಅವರು ತಿಳಿಸಿದ್ದಾರೆ.



ಬಿಎಂಆರ್‌ಸಿಎಲ್‌ನಿಂದ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಚಾಲಕ ರಹಿತ ಮೆಟ್ರೊ ರೈಲಿನ ಪರೀಕ್ಷೆ ನಡೆಯಿತು

'ಪ್ರಯಾಣ ದರ: ಹೋರಾಟ'

ಬೆಂಗಳೂರು: ಮೆಟ್ರೊ ಪ್ರಯಾಣ ದರ ಏರಿಕೆ, ಬಿಬಿಎಂಪಿ ಚುನಾವಣೆ ವಿಳಂಬ ಖಂಡಿಸಿ ಬೆಂಗಳೂರು ವ್ಯಾಪ್ತಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬೆಂಗಳೂರಿನ ಶಾಸಕರು, ಸಂಸದರ ಜತೆ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮೆಟ್ರೊ ಪ್ರಯಾಣ ದರ ಹೆಚ್ಚಳದಲ್ಲಿ ಕೇಂದ್ರದ ಪಾತ್ರವಿಲ್ಲ. ದರ ಕಡಿಮೆ ಮಾಡಲು ಬಿಜೆಪಿ ಒತ್ತಾಯಿಸುತ್ತಾ ಬಂದಿದೆ. ಗುಂಡಿಗಳನ್ನು ಮುಚ್ಚಲು ಆಗದ ರಾಜ್ಯ ಸರ್ಕಾರ ಬೆಂಗಳೂರಿನ ವಾಹನ ದಟ್ಟಣೆ ನಿಯಂತ್ರಿಸಲು ಸುರಂಗ ಮಾರ್ಗಗಳ ನಿರ್ಮಾಣಕ್ಕೆ ಮುಂದಾಗಿದೆ. ಅವೈಜ್ಞಾನಿಕವಾದ ಇಂತಹ ಯೋಜನೆ ಗಳಿಗೆ ಹಣ ಪೋಲು ಮಾಡುವ ಬದಲು ಈಗಿರುವ ಮೆಟ್ರೊ ಜಾಲವನ್ನೇ ವಿಸ್ತರಿಸ ಬೇಕು. ಹೆಚ್ಚುವರಿ ಬೋಗಿಗಳನ್ನು ಬಳಸಬೇಕು ಎಂದು ಒತ್ತಾಯಿಸಿದರು.

'ಗ್ರೇಟರ್ ಬೆಂಗಳೂರು' ನೆಪದಲ್ಲಿ ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಸರ್ಕಾರ ಹುನ್ನಾರ ನಡೆಸಿದೆ. ವಿಳಂಬ ಮಾಡದೆ ತಕ್ಷಣ ಚುನಾವಣೆ ಘೋಷಣೆ ಮಾಡಬೇಕು. ಬೆಂಗಳೂರು ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು. ಇ-ಖಾತಾ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು.

₹29 ಲಕ್ಷ ಮೌಲ್ಯದ ದ್ವಿಚಕ್ರ ವಾಹನ, ಚಿನ್ನಾಭರಣ ಜಪ್ತಿ • ಬಾಗಲಗುಂಟೆ ಠಾಣೆಯ ಪೊಲೀಸರ ಕಾರ್ಯಾಚರಣೆ

50 ಪ್ರಕರಣಗಳಲ್ಲಿ ಬೇಕಾಗಿದ್ದ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಹಾಗೂ ಮನೆ ಕಳ್ಳತನಕ್ಕೆ ಸಂಬಂಧಿಸಿದಂತೆ ಒಟ್ಟು 50 ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪ ಎದುರಿಸುತ್ತಿರುವ ಮೂವರು ಆರೋಪಿಗಳನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಯಶವಂತಪುರದ ನಿವಾಸಿ ಶ್ರೀನಿವಾಸ್(29), ವೆಂಕಟೇಶ್ (23) ಹಾಗೂ ಸಾಗರ್ (21) ಬಂಧಿತರು. ಬಂಧಿತರಿಂದ ₹29.8 ಲಕ್ಷ ಮೌಲ್ಯದ 16 ದ್ವಿಚಕ್ರ ವಾಹನಗಳು ಹಾಗೂ 76 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮನೆಯಲ್ಲಿ ಕಳ್ಳತನ ಹಾಗೂ ದ್ವಿಚಕ್ರ ವಾಹನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀನಿವಾಸ್ ವಿರುದ್ಧ 38, ವೆಂಕಟೇಶ್ ವಿರುದ್ಧ 8 ಹಾಗೂ ಸಾಗರ್ ವಿರುದ್ಧ 6 ಪ್ರಕರಣಗಳು ದಾಖಲಾಗಿದ್ದವು. ಆರೋಪಿಗಳ ಬಂಧನದಿಂದ ಬಾಗಲಗುಂಟೆ, ಕೊಡಿಗೇಹಳ್ಳಿ, ಬನಶಂಕರಿ, ವಿಜಯನಗರ ಹಾಗೂ ಮಾದನಾಯಕನಹಳ್ಳಿಯಲ್ಲಿ ದಾಖಲಾಗಿದ್ದ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.


ವೆಂಕಟೇಶ್


ಸಾಗರ್


ಶ್ರೀನಿವಾಸ್

'ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೂವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು. ಠಾಣಾ ವ್ಯಾಪ್ತಿಯ ಸಿದ್ದಮ್ಮನ

ಅಪರಾಧ ಸುದ್ದಿ

ಕಟ್ಟಡದಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ದೂರುದಾರರು ತಮ್ಮ ಮನೆಯ ಎದುರು ನಿಲುಗಡೆ ಮಾಡಿದ್ದ ಬೈಕ್ ಅನ್ನು ಆರೋಪಿಗಳು ನಕಲಿ ಕೀ ಬಳಸಿ ಕಳವು ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ಕಳ್ಳತನ ಮಾಡಿದ್ದ ಬೈಕ್‌ಗಳನ್ನು ಮಂಜುನಾಥನಗರ ಮೆಟ್ರೊ ನಿಲ್ದಾಣದ ಬಳಿಯ ಖಾಲಿ ಪ್ರದೇಶದಲ್ಲಿ ನಿಲುಗಡೆ ಮಾಡುತ್ತಿದ್ದರು. ಆ ಸ್ಥಳದಿಂದ ಒಟ್ಟು 16 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ತಿಳಿಸಿದರು.

ಮೊಬೈಲ್ ಕದ್ದಿದ್ದ ಆರೋಪಿ ಸೆರೆ

ಕಲ್ಯಾಣನಗರದ ಎಲೆಕ್ಟ್ರಾನಿಕ್ ಅಂಗಡಿಯ ಬಾಗಿಲು ಒಡೆದು ಮೊಬೈಲ್ ಕಳ್ಳತನ ಮಾಡಿದ್ದ ಆರೋಪಿಯನ್ನು ಹೆಣ್ಣೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.


ವನ್ನೂರುಸ್ವಾಮಿ

ಆಂಧ್ರಪ್ರದೇಶದ ಅನಂತಪುರದ ಪೂಜಾರಿ ವನ್ನೂರುಸ್ವಾಮಿ (19) ಬಂಧಿತ. ಬಂಧಿತನಿಂದ ₹4.75 ಲಕ್ಷ ಮೌಲ್ಯದ 11 ಮೊಬೈಲ್ ಫೋನ್ ಹಾಗೂ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಡಿಸೆಂಬರ್ 8ರಂದು ಕಲ್ಯಾಣನಗರದ ಎಲೆಕ್ಟ್ರಾನಿಕ್ ಅಂಗಡಿಯ ಮಾಲೀಕರು ವ್ಯಾಪಾರ ಮುಗಿಸಿ ರಾತ್ರಿ ಅಂಗಡಿಯ ಬಾಗಿಲನ್ನು ಬಂದ್ ಮಾಡಿಕೊಂಡು ಮನೆಗೆ ತೆರಳಿದ್ದರು. ಬಳಿಕ ಮಳಿಗೆಯ ಬಾಗಿಲು ಒಡೆದು ದುಬಾರಿ ಬೆಲೆಯ ಮೊಬೈಲ್‌ಗಳನ್ನು ಕಳ್ಳತನ ಮಾಡಿ ಆರೋಪಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಕೆ.ಆರ್. ಪುರದ ಟಿನ್ ಫ್ಯಾಕ್ಟರಿ ಬಳಿ ಆರೋಪಿ ಅನುಮಾನಾಸ್ಪದವಾಗಿ ಓಡುತ್ತಿದ್ದ. ಆಗ ವನ್ನೂರುಸ್ವಾಮಿ ಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಎಲೆಕ್ಟ್ರಾನಿಕ್ ಅಂಗಡಿಯಲ್ಲಿ ಮೊಬೈಲ್ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದ. ಕದ್ದ ಮೊಬೈಲ್‌ಗಳನ್ನು ಉದಯನಗರದ ನೇತ್ರಾವತಿ ಬಡಾವಣೆಯ ಮನೆಯೊಂದರಲ್ಲಿ ಬಚ್ಚಿಟ್ಟಿದ್ದ. ಅಲ್ಲಿಂದ 11 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ

ಅರ್ಜಿ ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಿದ 57ನೇ ಸಿಸಿಎಚ್ ನ್ಯಾಯಾಲಯ

ಇಬ್ಬರು ಆರೋಪಿಗಳು ಗೈರು

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಮಂಗಳವಾರ 57ನೇ ಸಿಸಿಎಚ್ ನ್ಯಾಯಾಲಯದಲ್ಲಿ ನಡೆಯಿತು.


ದರ್ಶನ್

ನಟ ದರ್ಶನ್, ಪವಿತ್ರಾಗೌಡ ಸೇರಿ 15 ಆರೋಪಿಗಳು ಹಾಜರಾಗಿದ್ದರು. 16ನೇ ಆರೋಪಿ ನಿಖಿಲ್ ಮತ್ತು 17ನೇ ಆರೋಪಿ ಕೇಶವಮೂರ್ತಿ ಗೈರಾಗಿದ್ದರು.

ದರ್ಶನ್ ಪರ ವಾದ ಮಂಡಿಸಿದ ವಕೀಲ ಸುನಿಲ್, 'ಮಾಫಿ ಸಾಕ್ಷಿ ಆಗುವಂತೆ ಪೊಲೀಸರು ಪ್ರಕರಣದ ಇತರೆ ಆರೋಪಿಗಳಿಗೆ ಒತ್ತಡ ಹೇರುತ್ತಿದ್ದಾರೆ. ಪ್ರಮುಖವಾಗಿ ನಾಲ್ವರು ಆರೋಪಿಗಳಿಗೆ ಮಾಫಿ ಸಾಕ್ಷಿಯಾಗುವಂತೆ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶ ಜೈಶಂಕರ್, ಈ ಬಗ್ಗೆ ಅರ್ಜಿ ಸಲ್ಲಿಸುವಂತೆ ಸೂಚಿಸಿ, ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಿದರು.

ದರ್ಶನ್ ಬರುವುದು ತಡವಾದ ಕಾರಣ ಹತ್ತು ನಿಮಿಷ ಕಲಾಪ ಮುಂದೂಡುವಂತೆ ಅವರ ಪರ ವಕೀಲರು ಮನವಿ ಮಾಡಿದರು. ದರ್ಶನ್ ಅವರು ಇತರೆ ಆರೋಪಿಗಳನ್ನು ಮಾತನಾಡಿಸಿ, ಪವಿತ್ರಾರನ್ನು ಮಾತನಾಡಿಸಲಿಲ್ಲ. ವಿಚಾರಣೆ ಮುಗಿದ ಬಳಿಕ ಪವಿತ್ರಾ ಹೋಗುವವರೆಗೂ ದರ್ಶನ್ ನ್ಯಾಯಾಲಯದ ಕೊಠಡಿಯಲ್ಲೇ ಇದ್ದರು. ವಿಚಾರಣೆ ಬಳಿಕ ಪವಿತ್ರಾ ಕಣ್ಣೀರು ಹಾಕುತ್ತಾ ನ್ಯಾಯಾಲಯದಿಂದ ಹೊರ ಬಂದರು.

ಯುವತಿಯ ಕಾರು, ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣ

ರೌಡಿ ರಾಹುಲ್, ಸಹಚರರ ಬಂಧನ

ಪ್ರಜಾವಾಣಿ ವಾರ್ತೆ


ರಾಹುಲ್

ಬೆಂಗಳೂರು: ಪ್ರೀತಿ ನಿರಾಕರಿಸಿದ ಯುವತಿಯ ಕಾರು, ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ರೌಡಿ ಹಾಗೂ ಆತನ ಸಹಚರರನ್ನು ಸಿಸಿಬಿಯ ಪೂರ್ವ ವಿಭಾಗದ ಸಂಘಟಿತ ಅಪರಾಧ ನಿಯಂತ್ರಣ ದಳದ ಪೊಲೀಸರು ಬಂಧಿಸಿದ್ದಾರೆ.

ನಗರದ ಹೊರವಲಯದಲ್ಲಿ ಬಚ್ಚಿಟ್ಟುಕೊಂಡಿದ್ದ ರೌಡಿಶೀಟರ್ ರಾಹುಲ್, ಮುನಿರಾಜ್, ಪ್ರವೀಣ್ ಹಾಗೂ ವಿಲಿಯಮ್ಸ್ ಎಂಬುವವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಆರೋಪಿ ರಾಹುಲ್ ಹಾಗೂ ಆತನ ಸಹಚರರು ಶನಿವಾರ ರಾತ್ರಿ ಸುಬ್ರಹ್ಮಣ್ಯಪುರ ಮತ್ತು ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಗಳ ವ್ಯಾಪ್ತಿಗಳಲ್ಲಿರುವ ಮನೆಗಳ ಬಳಿ ಎರಡು ಕಾರುಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದರು.

ಒಂಬತ್ತು ವರ್ಷಗಳಿಂದ ರಾಹುಲ್‌ನನ್ನು ಪ್ರೀತಿಸುತ್ತಿದ್ದ ಯುವತಿ, ಈಚೆಗೆ ನಿರ್ಲಕ್ಷ್ಯ ಮಾಡಿದ್ದರು. ಈ ನಡುವೆ ರಾಹುಲ್ ಬೇರೆ ಯುವತಿಯನ್ನು ಮದುವೆಯಾಗಿದ್ದ. ಮದುವೆಯಾದ ಬಳಿಕವೂ ತನ್ನನ್ನು ಪ್ರೀತಿಸುವಂತೆ ಆರೋಪಿಯು ಯುವತಿಯನ್ನು ಪೀಡಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆ, ಕೊಲೆ ಯತ್ನ, ದರೋಡೆ, ಸುಲಿಗೆ, ಮಾದಕ ಪದಾರ್ಥಗಳ ಮಾರಾಟ ಸೇರಿದಂತೆ ದಕ್ಷಿಣ ವಿಭಾಗದ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ 18ಕ್ಕೂ ಅಧಿಕ ಪ್ರಕರಣಗಳಲ್ಲಿ ರಾಹುಲ್ ಆರೋಪಿಯಾಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

'ಸ್ನೇಹಿತರ ಜತೆ ಯುವತಿಯನ್ನು ಹುಡುಕಿಕೊಂಡು ಸಿ.ಕೆ.ಅಚ್ಚುಕಟ್ಟು ಪ್ರದೇಶದಲ್ಲಿರುವ ಮನೆಗೆ ಆರೋಪಿ ಬಂದಿದ್ದ. ಅಲ್ಲಿದ್ದ ಯುವತಿಯ ಸಾಕು ತಂದೆ ಲಕ್ಷ್ಮೀನಾರಾಯಣ ಒಳಕ್ಕೆ ಬರದಂತೆ ವಿರೋಧ ವ್ಯಕ್ತಪಡಿಸಿದ್ದರು. ಆಗ ಅವರಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಗಾಯಾಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಆರೋಪಿ ವಿರುದ್ಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಘಟನೆ ಬಳಿಕ ಯುವತಿ ನಗರ ತೊರೆದಿದ್ದಾರೆ. ಅವರನ್ನು ಸಂಪರ್ಕಿಸಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಬಂದ ಬಳಿಕ ಮತ್ತಷ್ಟು ಮಾಹಿತಿ ಗೊತ್ತಾಗಲಿದೆ' ಎಂದು ಹೇಳಿದರು.

'ಯುವತಿ ದೂರವಾದ ಕಾರಣ ಕೋಪಗೊಂಡು ಕಾರು, ಬೈಕ್‌ಗಳಿಗೆ ಬೆಂಕಿ ಹಚ್ಚಿದ್ದೇನೆ. ಅಲ್ಲದೇ ಬೆಂಕಿಗೆ ಆಹುತಿಯಾದ ಕಾರನ್ನು ನಾನೇ ಕೊಡಿಸಿದ್ದೆ. ಕೆಲವು ದಿನಗಳಿಂದ ಯುವತಿ ನನ್ನನ್ನು ಮಾತನಾಡಿಸುತ್ತಿರಲಿಲ್ಲ. ನನ್ನ ದೂರವಾಣಿ ಕರೆ ಸ್ವೀಕರಿಸುತ್ತಿರಲಿಲ್ಲ ಎಂಬುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೌಡಿ ಹೈದರ್ ಅಲಿ ಕೊಲೆ: ನಾಲ್ವರು ವಶಕ್ಕೆ


ಹೈದರ್ ಅಲಿ

ಬೆಂಗಳೂರು: ಗರುಡಾ ಮಾಲ್ ಬಳಿ ಶುಕ್ರವಾರ ಮಧ್ಯರಾತ್ರಿ ನಡೆದಿದ್ದ ರೌಡಿ ಹೈದರ್ ಅಲಿ(38) ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಅಶೋಕನಗರ ಠಾಣೆಯ ಪೊಲೀಸರು, ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'10ಕ್ಕೂ ಹೆಚ್ಚು ಮಂದಿ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದರು. ಆ ಪೈಕಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಜಕೀಯ ವೈಷಮ್ಯಕ್ಕೆ ಹೈದರ್ ಅಲಿ ಕೊಲೆಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ವಾರ್ಡ್‌ವೊಂದರಿಂದ ಸ್ಪರ್ಧಿಸಲು ರಾಜಕೀಯ ಪಕ್ಷದ ಮುಖಂಡರಿಂದ ಹೈದರ್‌ಗೆ ಸೂಚನೆ ಬಂದಿತ್ತು. ಹೈದರ್ ಸಹ ಆ ವಾರ್ಡ್‌ನಲ್ಲಿ ಸಕ್ರಿಯವಾಗಿ ಓಡಾಟ ನಡೆಸುತ್ತಿದ್ದ. ಇದೇ ಕಾರಣಕ್ಕೆ ಹೈದರ್ ಅಲಿ ಕೊಲೆ ನಡೆದಿದೆ ಎಂಬ ಮಾಹಿತಿ ಲಭಿಸಿದೆ. ಈ ಕುರಿತು ತನಿಖೆ ನಡೆಯುತ್ತಿದೆ' ಎಂದು ಮೂಲಗಳು ಹೇಳಿವೆ.

'ಹಳೇ ದ್ವೇಷದಿಂದ ಮತ್ತೊಂದು ಗುಂಪಿನವರು ಕೊಲೆ ಮಾಡಿದ್ದಾರೆ ಎಂಬುದು ಇದುವರೆಗೂ ನಡೆದ ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳ ಸುಳಿವು ಸಿಕ್ಕಿದೆ. ಶೀಘ್ರದಲ್ಲೇ ಬಂಧಿಸಲಾಗುವುದು. ಪ್ರಕರಣದ ತನಿಖೆ ನಡೆಯುತ್ತಿರುವ ಕಾರಣಕ್ಕೆ ಹೆಚ್ಚಿನ ವಿವರ ನೀಡಲು ಆಗುವುದಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಜಿಮ್ ಮಾಲೀಕನೂ ಆಗಿರುವ ಸ್ನೇಹಿತನ ಜತೆಗೆ ಶುಕ್ರವಾರ ಮಧ್ಯರಾತ್ರಿವರೆಗೂ ಅಶೋಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಬ್‌ವೊಂದರಲ್ಲಿ ಪಾರ್ಟಿ ನಡೆಸಿದ್ದ ಹೈದರ್ ಅಲಿ, ಬೈಕ್‌ನಲ್ಲಿ ಆನೆಪಾಳ್ಯದ ಮನೆಗೆ ತೆರಳುತ್ತಿದ್ದ. ಫುಟ್‌ಬಾಲ್ ಮೈದಾನದ ಬಳಿಯ ತಿರುವಿನಲ್ಲಿ ಬೈಕ್ ಅನ್ನು ಅಡ್ಡಗಟ್ಟಿದ ಆರೋಪಿಗಳು, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆ ಮಾಡಿದ್ದರು. ಕೊಲೆ ಪ್ರಕರಣದಲ್ಲಿ ಆರೋಪಿಗಳ ಬಂಧನಕ್ಕೆ ಎರಡು ವಿಶೇಷ ತಂಡ ರಚಿಸಲಾಗಿತ್ತು.

ರಸ್ತೆ ದಾಟುತ್ತಿದ್ದಾಗ ವಾಹನ ಡಿಕ್ಕಿ ವೃದ್ಧೆ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಹನವೊಂದು ಡಿಕ್ಕಿಯಾದ ರಭಸಕ್ಕೆ ವೃದ್ಧೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

60ರಿಂದ 65 ವರ್ಷ ಅಂದಾಜಿನ ವೃದ್ಧೆ ಮೃತಪಟ್ಟಿದ್ದಾರೆ. ಘಟನೆ ನಡೆದ ಸ್ಥಳದಲ್ಲಿ ಚೀಲವೊಂದು ಪತ್ತೆಯಾಗಿದ್ದು, ಮೃತಪಟ್ಟ ಮಹಿಳೆ ಚಿಂದಿ ಆಯುವ ಕೆಲಸ ಮಾಡುತ್ತಿದ್ದರು.

ಸುಮನಹಳ್ಳಿ ಬಸ್ ಡಿಪೊದ ಬಳಿ ಮಂಗಳವಾರ ಮುಂಜಾನೆ ವೃದ್ಧೆ ರಸ್ತೆ ದಾಟುತ್ತಿದ್ದರು. ಅದೇ ವೇಳೆ ವೇಗವಾಗಿ ಬಂದ ವಾಹನವೊಂದು ಅವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಾಹನವನ್ನು ಚಾಲಕ ನಿಲುಗಡೆ ಮಾಡದೇ ತೆರಳಿದ್ದಾನೆ. ಘಟನೆ ಸಂಭವಿಸಿದ ಸ್ಥಳದ ಸುತ್ತಮುತ್ತ ಅಳವಡಿಸಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ದಾಖಲಾಗಿರುವ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



'ರೇಸ್ ಫಾರ್ 7' ಜಾಗೃತಿ ಓಟ

ವಿರಳ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಲು ಭಾರತೀಯ ವಿರಳ ಕಾಯಿಲೆ ಸಂಸ್ಥೆಯು (ಒಆರ್‌ಡಿಐ) ನಗರದಲ್ಲಿ ಹಮ್ಮಿಕೊಂಡಿದ್ದ 'ರೇಸ್ ಫಾರ್ 7' ಜಾಗೃತಿ ಓಟಕ್ಕೆ ಕಿರುತೆರೆ ಕಲಾವಿದೆ ಶ್ವೇತಾ ಆರ್. ಪ್ರಸಾದ್ ಚಾಲನೆ ನೀಡಿದರು. ಒಆರ್‌ಡಿಐ ಸಹ ಸಂಸ್ಥಾಪಕ ಪ್ರಸನ್ನ ಶಿರೋಳ್ ಉಪಸ್ಥಿತರಿದ್ದರು.

ವಿದೇಶಿ ಬ್ರ್ಯಾಂಡ್‌ನ ನಕಲಿ ಸಿಗರೇಟ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯ ದಕ್ಷಿಣ ವಲಯದ ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿ ವಿಭಾಗದ ಅಧಿಕಾರಿಗಳು ನಗರದ ಹಲವೆಡೆ ದಾಳಿ ನಡೆಸಿ, ವಿದೇಶಿ ಬ್ರ್ಯಾಂಡ್‌ನ ನಕಲಿ ಸಿಗರೇಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಚಿಕ್ಕಪೇಟೆ, ಅವೆನ್ಯೂ ರಸ್ತೆ, ಮಾಮೂಲ್‌ಪೇಟೆ, ಬನಶಂಕರಿ, ಬಿಟಿಎಂ ಲೇಔಟ್, ಜಯನಗರ, ಲಿಂಗರಾಜಪುರಂ ಮತ್ತು ಕಾಕ್ಸ್ ಟೌನ್ ಸೇರಿದಂತೆ ವಿವಿಧೆಡೆ ಏಕಕಾಲದಲ್ಲಿ ದಾಳಿ ಮಾಡಿ ಶೋಧ ನಡೆಸಿದರು. ಒಟ್ಟು 11 ಪ್ರಕರಣ ದಾಖಲಿಸಿಕೊಂಡು, 900 ಪ್ಯಾಕ್‌ಗಳಲ್ಲಿದ್ದ 18 ಸಾವಿರ ಸಿಗರೇಟ್ ವಶಪಡಿಸಿಕೊಂಡಿದ್ದಾರೆ.



'ಮಾಂಡ್, ಡಿಜರುಮ್ ಬ್ಲಾಕ್, ಪ್ಯಾರಿಸ್, ವಿನ್ ಆ್ಯಂಡ್ ಗುಡಾಂಗ್ ಗರಂ ಸೇರಿದಂತೆ ವಿವಿಧ ವಿದೇಶಿ ಬ್ರ್ಯಾಂಡ್‌ಗಳ ಹೆಸರಿನಲ್ಲಿದ್ದ ನಕಲಿ ಸಿಗರೇಟ್‌ಗಳನ್ನು ಅಕ್ರಮವಾಗಿ ತಂದು ಮಾರಾಟ ಮಾಡುತ್ತಿದ್ದರು. ಸಿಗರೇಟ್ ಪ್ಯಾಕ್ ಮೇಲೆ ತಯಾರಿಕೆ ದಿನಾಂಕ, ಎಂಆರ್‌ಪಿ ಇರಲಿಲ್ಲ. ಜಿಎಸ್‌ಟಿ ಪಾವತಿಸುತ್ತಿರಲಿಲ್ಲ. ಕೋಟ್ಪಾ ಕಾಯ್ದೆಯಡಿ ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಪೊಲೀಸರಿಗೆ ಹಸ್ತಾಂತರಿಸಲಾಯಿತು' ಎಂದು ಜಿಎಸ್‌ಟಿ ಅಧಿಕಾರಿಗಳು ತಿಳಿಸಿದರು.

ರಾಜ್ಯ ಜಿಎಸ್‌ಟಿಯ ಹೆಚ್ಚುವರಿ ಆಯುಕ್ತ ಎಲ್. ಚಂದ್ರಶೇಖರ ನಾಯಕ್ ಅವರ ಮಾರ್ಗದರ್ಶನದಲ್ಲಿ ಜಿಎಸ್‌ಟಿ ಜಾರಿ ವಿಭಾಗದ ಅಧಿಕಾರಿಗಳು ಶೋಧ ನಡೆಸಿದರು. ವಾಣಿಜ್ಯ ತೆರಿಗೆಗಳ ಇಲಾಖೆ ಉಪ ಆಯುಕ್ತ ಭರತೇಶ್ ಕುಮಾರ್ ನೇತೃತ್ವ ವಹಿಸಿದ್ದರು.

ಎಂಜಿನಿಯರ್‌ಗಳ ವರ್ಗಾವಣೆ

ಬಿಸಿಬೂದಿ ಅವಘಡ: ಇತ್ತೀಚೆಗೆ ವರದಿ ಸಲ್ಲಿಸಿದ್ದ ತಜ್ಞರ ತಂಡ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದ ಬಿಲ್ಲಕೆಂಪನಹಳ್ಳಿಯಲ್ಲಿರುವ ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದಲ್ಲಿ ಕಳೆದ ತಿಂಗಳು ಸಂಭವಿಸಿದ್ದ ಬಿಸಿಬೂದಿ ಅವಘಡದಲ್ಲಿ ಐವರು ಕಾರ್ಮಿಕರು ಮೃತಪಟ್ಟ ಹಿನ್ನೆಲೆಯಲ್ಲಿ, ಸ್ಥಾವರದ ಮುಖ್ಯ ಎಂಜಿನಿಯರ್ ಸೂರ್ಯಕಾಂತ್ ಆರ್. ಕಬಾಡೆ ಮತ್ತು ಅಧೀಕ್ಷಕ ಎಂಜಿನಿಯರ್ ಎ.ಆರ್. ಅನಿತಾ ಅವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಇತ್ತೀಚೆಗೆ ವರ್ಗಾವಣೆ ಮಾಡಿದೆ.

ಜ. 4ರಂದು ಸಂಭವಿಸಿದ್ದ ಅವಘಡದಲ್ಲಿ ಬಿಸಿಬೂದಿ ಮೈಮೇಲೆ ಸಿಡಿದಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ಕಾರ್ಮಿಕರಾದ, ಉಮೇಶ್ ಕುಮಾರ್ ಸಿಂಗ್, ಸಂಟೂನ ಸದಾಯ್ (ದೂರುದಾರ), ಅಮಲೇಶ್ ಕುಮಾರ್ ಕಾಮತ್ ಹಾಗೂ ಉತ್ತರ ಪ್ರದೇಶದ ತರುಣ್‌ಕುಮಾರ್ ರೈ, ಲಖನ್ ಸಿಂಗ್ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ದಿನದಿಂದ ದಿನಕ್ಕೆ ಅವರ ಆರೋಗ್ಯ ಬಿಗಡಾಯಿಸಿದ್ದರಿಂದ ಕೆಲವೇ ದಿನಗಳಲ್ಲಿ ಐವರೂ ಕೊನೆಯುಸಿರೆಳೆದಿದ್ದರು.


ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಸ್ಥಾವರ

ಘಟನೆ ಬೆನ್ನಲ್ಲೇ, ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಸ್ಥಾವರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಘಟನೆಗೆ ತಾಂತ್ರಿಕ ದೋಷವಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ, ತನಿಖೆಗೆ ತಜ್ಞರ ತಂಡ ರಚಿಸಲಾಗುವುದು. ವರದಿ ಬಂದ ಬಳಿಕ, ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದರು.

ತಜ್ಞರ ತಂಡವು ಇತ್ತೀಚೆಗೆ ವರದಿ ನೀಡಿತ್ತು. ಅದರ ಬೆನ್ನಲ್ಲೇ, ಸ್ಥಾವರದ ಮುಖ್ಯ ಎಂಜಿನಿಯರ್ ಸೂರ್ಯಕಾಂತ್ ಆರ್. ಕಬಾಡೆ ಮತ್ತು ಅಧೀಕ್ಷಕ ಎಂಜಿನಿಯರ್ ಎ.ಆರ್. ಅನಿತಾ ಅವರನ್ನು ವರ್ಗಾವಣೆ ಮಾಡಲಾಗಿದೆ. ಇದೀಗ ಅನಿತಾ ಜಾಗಕ್ಕೆ ಮಂಜುನಾಥ್ ಹಾಗೂ ಕಬಾಡೆ ಜಾಗಕ್ಕೆ ಸತೀಶ್ ಅವರು ವರ್ಗಾವಣೆಯಾಗಿ ಬಂದಿದ್ದಾರೆ.

ಹಿಟಾಚಿ ಕಂಪನಿಯು ಸ್ಥಾವರದ ತಂತ್ರಜ್ಞಾನ ಪಾಲುದಾರ ಸಂಸ್ಥೆಯಾಗಿದೆ. ಐಎಸ್‌ಜಿಇಸಿ ಕಂಪನಿಯು ಸ್ಥಾವರದ ಕಾರ್ಯಾಚರಣೆ ಹಾಗೂ ನಿರ್ವಹಣೆಯ ಹೊಣೆ ಹೊತ್ತಿದ್ದು, ಆರ್ಬಿಟ್ ಎಂಬ ಕಂಪನಿಗೆ ನಿರ್ವಹಣೆಯ ಹೊಣೆ ನೀಡಿತ್ತು. ಸ್ಥಾವರ ಇನ್ನೂ ಕೆಪಿಸಿಎಲ್‌ಗೆ ಹಸ್ತಾಂತರವಾಗಿಲ್ಲ. ಬೆಂಗಳೂರಿನಿಂದ ನಿತ್ಯ 600 ಟನ್ ಒಣ ತ್ಯಾಜ್ಯವನ್ನು ಸ್ಥಾವರಕ್ಕೆ ತಂದು 11.5 ಮೆಗಾವಾಟ್ ವಿದ್ಯುತ್ ಅನ್ನು ಉತ್ಪಾದಿಸುವ ಗುರಿ ಹೊಂದಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶಿವಲಿಂಗೇಗೌಡರ ಕಾರಿಗೆ ಪೊಲೀಸ್ ಜೀಪ್ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಸೀಕೆರೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಕಾರಿಗೆ ಪೊಲೀಸ್ ಜೀಪೊಂದು ಡಿಕ್ಕಿ ಹೊಡೆದ ಪರಿಣಾಮ ಕಾರಿನ ಬಾಗಿಲು ಜಖಂಗೊಂಡಿದೆ. ಶಾಸಕರ ಭವನದ ಆವರಣದಲ್ಲಿ ಮಂಗಳವಾರ ಘಟನೆ ಸಂಭವಿಸಿದೆ.


ಕೆ.ಎಂ. ಶಿವಲಿಂಗೇಗೌಡ

ಶಿವಲಿಂಗೇಗೌಡ ಅವರು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿರುವ ಕಾರಣ ಅವರಿಗೆ ಸರ್ಕಾರಿ ಕಾರು ನೀಡಲಾಗಿತ್ತು. ಚಾಲಕ ಕಾರನ್ನು ಶಾಸಕರ ಭವನದ ಆವರಣದಲ್ಲಿ ನಿಲುಗಡೆ ಮಾಡಿದ್ದರು. ಆಗ ಅಪಘಾತ ಸಂಭವಿಸಿದೆ.

'ಪೊಲೀಸ್ ಜೀಪ್ ಚಾಲಕನ ನಿಯಂತ್ರಣ ತಪ್ಪಿದ್ದರಿಂದ ಅನಾಹುತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಕಾರಿನ ಏರ್‌ಬ್ಯಾಗ್ ಸಹ ತೆರೆದುಕೊಂಡಿದೆ. ಕಾರಿನಲ್ಲಿ ಯಾರೂ ಇರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಚಾರ್ಮಾಡಿ ಘಾಟಿಯಲ್ಲಿ ಎಲ್ಲೆಲ್ಲೂ ಪ್ಲಾಸ್ಟಿಕ್ ಬಾಟಲಿಯ ರಾಶಿ

ರಸ್ತೆ ಬಿಟ್ಟು ಕಾಡಿಗೆ ಇಳಿದ ಪಾದಯಾತ್ರಿಕರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶಿವರಾತ್ರಿ ಹಿಂದಿನ ದಿನವೇ ಧರ್ಮಸ್ಥಳ ತಲುಪಲು ತರಾತುರಿಯಲ್ಲಿದ್ದ ಭಕ್ತರು, ಚಾರ್ಮಾಡಿ ಘಾಟಿಯಲ್ಲಿ ರಸ್ತೆ ಮಾತ್ರವಲ್ಲದೆ ಅರಣ್ಯದಲ್ಲಿ ನುಗ್ಗಿ ಕಾಡು ಹಾದಿಗಳಲ್ಲೂ ತೆರಳಿದರು.

ನಾಲ್ಕೈದು ದಿನಗಳಿಂದ ಪಾದಯಾತ್ರಿಗಳ ಸಂಖ್ಯೆ ಜಾಸ್ತಿ ಇತ್ತು. ಶನಿವಾರ, ಭಾನುವಾರ ಮತ್ತು ಸೋಮವಾರ ಮೂರು ದಿನವೂ ಕನಿಷ್ಠ 50 ಸಾವಿರಕ್ಕೂ ಹೆಚ್ಚು ಪಾದಯಾತ್ರಿಗಳು ಈ ಮಾರ್ಗದಲ್ಲಿ ಸಂಚರಿಸಿದ್ದಾರೆ. ಮಂಗಳವಾರ ಕೂಡ ಭಕ್ತರ ಸಂಖ್ಯೆ ಹೆಚ್ಚಾಗಿಯೇ ಇತ್ತು.

ಕೊಟ್ಟಿಗೆಹಾರ ಮತ್ತು ಸುತ್ತಮುತ್ತಲ ಪ್ರದೇಶಗಳನ್ನು ಕೊನೆಯ ತಂಗುದಾಣ ಮಾಡಿಕೊಂಡಿದ್ದ ಭಕ್ತರು ಮಂಗಳವಾರ ಬೆಳಗಿನ ಜಾವದಿಂದಲೇ ಪ್ರಯಾಣ ಆರಂಭಿಸಿದರು. ಮಂಗಳವಾರ ಸಂಜೆ ವೇಳೆಗೆ ಧರ್ಮಸ್ಥಳ ತಲಪಬೇಕು ಎಂಬ ತವಕ ಭಕ್ತರಲ್ಲಿತ್ತು.


ರಸ್ತೆ ಬಿಟ್ಟು ಕಾಡಿನಲ್ಲಿ ಸಾಗುತ್ತಿರುವ ಭಕ್ತರು

ಶಿವರಾತ್ರಿ ಯಾತ್ರೆ

ಚಾರ್ಮಾಡಿ ಘಾಟಿಯಲ್ಲಿ ಎಲ್ಲೆಲ್ಲೂ ಕೇಸರಿ ಶಾಲು ಹೊತ್ತಿದ್ದ ಪಾದಯಾತ್ರಿಗಳೇ ಕಾಣಿಸುತ್ತಿದ್ದರು. ರಸ್ತೆಯಲ್ಲಿನ ತಿರುವುಗಳಲ್ಲಿ ಸುತ್ತಾಡಿಕೊಂಡು ಸಾಗುವುದು ದೂರವಾಗುತ್ತದೆ ಮತ್ತು ತಡವಾಗಲಿದೆ ಎಂಬ ಕಾರಣಕ್ಕೆ ಅರಣ್ಯದಲ್ಲಿ ಹಲವರು ತೆರಳಿದರು. ಕಾಡು ದಾರಿಗಳಲ್ಲಿ ಪ್ರಪಾತ ಇಳಿದು, ಗುಡ್ಡಗಳನ್ನು ಏರಿ ಸಾಹಸ ಮಾಡಿದರು.

ಮೀಸಲು ಅರಣ್ಯ ಆಗಿರುವುದರಿಂದ ಆನೆ, ಚಿರತೆ, ಹುಲಿ ಸೇರಿ ಕಾಡು ಪ್ರಾಣಿಗಳಿವೆ. ಅದ್ಯಾವುದನ್ನೂ ಲೆಕ್ಕಿಸದೆ ಕಾಡು ಹಾದಿಯಲ್ಲಿ ಸಾಗಿ ಬೇಗ ತಲುಪಲು ಪ್ರಯತ್ನಿಸಿದರು. ಈ ವೇಳೆ ಹಲವರು ಕೈಕಾಲುಗಳಿಗೆ ಪೆಟ್ಟನ್ನೂ ಮಾಡಿಕೊಂಡರು.

ಸೋಮವಾರ ಮಧ್ಯಾಹ್ನದ ಬಳಿಕ ಮತ್ತು ಮಂಗಳವಾರ ಮಧ್ಯಾಹ್ನದ ತನಕ ಇಡೀ ಘಾಟಿಯಲ್ಲಿ ಪಾದಯಾತ್ರಿಗಳೇ ತುಂಬಿಕೊಂಡಿದ್ದರು. ವಾಹನಗಳ ಸಂಚಾರಕ್ಕೂ ತೊಂದರೆಯಾಗಿತ್ತು. ಭಕ್ತರ ಸಂಖ್ಯೆ ಹೆಚ್ಚಿಗೆ ಇದ್ದಿದ್ದರಿಂದ ವಾಹನಗಳು ನಿಧಾನವಾಗಿ ಚಲಿಸಬೇಕಾಯಿತು.

ಪೊಲೀಸರು ಗಸ್ತು ವಾಹನದಲ್ಲಿ ತೆರಳಿ ಎಚ್ಚರಿಕೆಯ ಸಂದೇಶ ನೀಡಿದರು. ಅರಣ್ಯ ಸಿಬ್ಬಂದಿ ಕೂಡ ಕೆಲವೆಡೆ ಇದ್ದರು. ಆದರೂ ಭಕ್ತರು ಮೀಸಲು ಅರಣ್ಯದಲ್ಲಿ ನುಗ್ಗಿ ಅಪಾಯದ ಹಾದಿಗಳಲ್ಲಿ ಸಾಗುವುದನ್ನು ತಡೆಯಲು ಆಗಲಿಲ್ಲ ಎಂದು ಸ್ಥಳೀಯರು ಹೇಳಿದರು.

ಇನ್ನು ಇಡೀ ಚಾರ್ಮಾಡಿ ಘಾಟಿಯ ರಸ್ತೆ ಇಕ್ಕೆಲ ಪ್ಲಾಸ್ಟಿಕ್ ರಾಶಿಯಿಂದ ತುಂಬಿಕೊಂಡಿದೆ. ಭಕ್ತರಿಗೆ ಆಹಾರ ಮತ್ತು ನೀರು ಕೊಡುವವರ ಸಂಖ್ಯೆ ಕೂಡ ಜಾಸ್ತಿಯಾಗಿದ್ದು, ಇದು ಕೂಡ ಪ್ಲಾಸ್ಟಿಕ್ ಬಾಟಲಿಗಳ ರಾಶಿಗೆ ಕಾರಣವಾಗಿದೆ. ಪ್ಲಾಸ್ಟಿಕ್ ಬಾಟಲಿಗಳನ್ನು ಭಕ್ತರಿಗೆ ಹಂಚಿದವರು ಬಾಕಿ ತ್ಯಾಜ್ಯವನ್ನು ಅಲ್ಲಲ್ಲೇ ಬಿಟ್ಟು ಹೋಗಿದ್ದಾರೆ. ಕೊಟ್ಟಿಗೆಹಾರ ದಾಟಿದ ನಂತರ ಚಾರ್ಮಾಡಿ ಘಾಟಿಯ ಕೊನೆ ತನಕವೂ ಪ್ಲಾಸ್ಟಿಕ್ ರಾಶಿಯೇ ಬಿದ್ದಿದೆ.

133 ವರ್ಷಗಳ ಕಟ್ಟಡ ಕೆಡವಿ, ಹೊಸ ಕಟ್ಟಡ ನಿರ್ಮಾಣ

ಇತಿಹಾಸ ಸೇರಲಿದೆ ಶೇಷಾದ್ರಿಪುರ ಠಾಣೆ ಕಟ್ಟಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 1892ರಲ್ಲಿ ನಿರ್ಮಾಣವಾಗಿದ್ದ ಪೊಲೀಸ್ ಠಾಣೆಯ ಕಟ್ಟಡ
- 1958ರಲ್ಲಿ ರಾಜ್ಯದ ಮೊದಲ ಲಾಕಪ್ ಸಾವು ಸಂಭವಿಸಿದ್ದ ಠಾಣೆ
- ಅದೇ ಸ್ಥಳದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ನಿರ್ಧಾರ

ಬೆಂಗಳೂರು: ಶತಮಾನದ ಹಿಂದೆ ನಿರ್ಮಿಸಲ್ಪಟ್ಟ ನಗರದ ಶೇಷಾದ್ರಿಪುರ ಪೊಲೀಸ್ ಠಾಣೆ ಕಟ್ಟಡವನ್ನು ನೆಲಸಮಗೊಳಿಸಿ, ಈ ಸ್ಥಳದಲ್ಲಿ ಹೊಸ ಠಾಣೆ ನಿರ್ಮಾಣಕ್ಕೆ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಪೊಲೀಸ್ ಇಲಾಖೆ ಮುಂದಾಗಿದೆ.

ಮೈಸೂರಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ 1892ರಲ್ಲಿ ಶೇಷಾದ್ರಿಪುರ ಠಾಣೆ ನಿರ್ಮಿಸಿದ್ದರು. ಅವರ ನೆನಪಿಗಾಗಿ ಶೇಷಾದ್ರಿಪುರ ಠಾಣೆ ಎಂದೇ ಹೆಸರಿಡಲಾಗಿತ್ತು. ಪೊಲೀಸ್ ಠಾಣೆ ಕಟ್ಟಡ ನೆಲಸಮಕ್ಕೆ ದಿನಗಣನೆ ಆರಂಭವಾಗಿದ್ದು, ಇತಿಹಾಸದ ಪುಟ ಸೇರಲಿದೆ.

ಕೆಲ ವರ್ಷಗಳಿಂದ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ತಲುಪಿ ಮಳೆ ಬಂದರೆ ಧಾರಾಕಾರವಾಗಿ ನೀರು ಸೋರುತ್ತಿತ್ತು. ಕಡತಗಳ ರಕ್ಷಣೆಯೇ ಸಿಬ್ಬಂದಿಗೆ ಸವಾಲಾಗಿತ್ತು. ಹಾಗಾಗಿ ಗೃಹ ಇಲಾಖೆ ಹೊಸ ಕಟ್ಟಡ ನಿರ್ಮಾಣಕ್ಕೆ ನಿರ್ಧರಿಸಿದೆ.

ಪಾರಂಪರಿಕ ಕಟ್ಟಡ ನೆಲಸಮಗೊಳಿಸುತ್ತಿರುವುದಕ್ಕೆ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ, ಇದು ಪಾರಂಪರಿಕ ಕಟ್ಟಡವಲ್ಲ ಎಂದು ಗೃಹ ಇಲಾಖೆ ಸ್ಪಷ್ಟಪಡಿಸಿದೆ.

ಈಗಾಗಲೇ ಪೊಲೀಸ್ ಠಾಣೆಯನ್ನು ತಾತ್ಕಾಲಿಕವಾಗಿ ಕೊಳಚೆ ನಿರ್ಮೂಲನಾ ಮಂಡಳಿಯ ನಾಲ್ಕನೇ ಮಹಡಿಗೆ ಸ್ಥಳಾಂತರ ಮಾಡಲಾಗಿದೆ. ನಾಗರಿಕರು ಅಲ್ಲಿಗೆ ತೆರಳಿ ದೂರು ನೀಡಬಹುದು. ಹೊಸ ಕಟ್ಟಡ ಕಾಮಗಾರಿ ಶೀಘ್ರದಲ್ಲಿಯೇ ಪ್ರಾಂಭವಾಗಲಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.



ಶೇಷಾದ್ರಿಪುರ ಪೊಲೀಸ್ ಠಾಣೆ

ಮೊದಲ ಲಾಕಪ್ ಡೆತ್: ರಾಜ್ಯದಲ್ಲಿ ಮೊದಲ ಲಾಕಪ್ ಡೆತ್ ನಡೆದ ಠಾಣೆ ಇದಾಗಿತ್ತು. 1958ರಲ್ಲಿ ನಡೆದ ಈ ಘಟನೆಯು ರಾಜ್ಯದಲ್ಲಿ ರಾಜಕೀಯ ಕೋಲಾಹಲಕ್ಕೆ ಕಾರಣವಾಗಿತ್ತು. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ವಿರುದ್ಧ ಬಂಡಾಯ ಎದ್ದಿದ್ದ ಕಾಂಗ್ರೆಸ್‌ನ ಕೆಲವರು ಈ ಪ್ರಕರಣವನ್ನು ತಮ್ಮ ರಾಜಕೀಯ ಹೋರಾಟಕ್ಕೆ ಬಳಸಿಕೊಂಡಿದ್ದರು. ಭಿನ್ನಮತ ಉಲ್ಬಣಗೊಂಡ ಪರಿಣಾಮವಾಗಿ 1958ರಲ್ಲಿ ಎಸ್. ನಿಜಲಿಂಗಪ್ಪ ರಾಜೀನಾಮೆ ನೀಡಿದ್ದರು. ಅದಕ್ಕೆ 'ಲಾಕಪ್ ಡೆತ್' ಪ್ರಕರಣವೂ ಒಂದು ಕಾರಣ ಎನ್ನುತ್ತಾರೆ ಆಗಿನ ರಾಜಕೀಯ ಘಟನಾವಳಿಗಳನ್ನು ಬಲ್ಲವರು.

1958ರ ಏಪ್ರಿಲ್ 9ರಂದು ಕಳ್ಳತನ ಆರೋಪ ಪ್ರಕರಣದಲ್ಲಿ ಠಾಣೆಗೆ ಕರೆತರಲಾಗಿದ್ದ ಮುನಿಯಮ್ಮ ಅವರು ಲಾಕಪ್‌ನಲ್ಲಿ ಮೃತಪಟ್ಟಿದ್ದರು. ರಾಜ್ಯದಲ್ಲಿ ದಾಖಲಾದ ಮೊದಲ ಲಾಕ್‌ಅಪ್ ಡೆತ್ ಪ್ರಕರಣ ಎಂದು ಈಗಲೂ ಹಲವು ಅಧಿಕಾರಿಗಳು ನೆನಪು ಮಾಡಿಕೊಳ್ಳುತ್ತಾರೆ.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಶಾಂತವೇರಿ ಗೋಪಾಲಗೌಡ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು. ಅಂದಿನ ಗೃಹ ಸಚಿವ ಪೂಣಚ್ಚ ಅವರು ಘಟನೆ ಸಮರ್ಥಿಸಿಕೊಳ್ಳುವಲ್ಲಿ ವಿಫಲರಾಗಿದ್ದರು. ನಂತರ ಈ ಘಟನೆ ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನಕ್ಕೆ ಕಾರಣವಾಯಿತು.

'ಶಿಥಿಲಾವಸ್ಥೆಯಲ್ಲಿರುವ ಶೇಷಾದ್ರಿಪುರ ಪೊಲೀಸ್ ಠಾಣೆ ಕಟ್ಟಡವನ್ನು ನೆಲಸಮಗೊಳಿಸಿ, ಅದೇ ಸ್ಥಳದಲ್ಲಿ ಹೊಸ ಕಟ್ಟಡ ನಿರ್ಮಿಸಲು ನಿರ್ಧರಿಸಲಾಗಿದೆ. ಇದು ಪಾರಂಪರಿಕ ಕಟ್ಟಡವಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ಕಾಲ್ತುಳಿತ ಪ್ರಕರಣ ತನಿಖಾ ಆಯೋಗದ ವ್ಯಾಪ್ತಿ ವಿಸ್ತರಣೆ

ಪ್ರಯಾಗರಾಜ್ (ಪಿಟಿಐ): ಮಹಾಕುಂಭ ಮೇಳದಲ್ಲಿ ಜನವರಿ 29ರಂದು ನಡೆದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ನ್ಯಾಯಾಂಗ ಆಯೋಗದ ಅವಧಿಯನ್ನು ವಿಸ್ತರಿಸಲಾಗಿದ್ದು, ಕಾಲ್ತುಳಿತದಲ್ಲಿ ಸಂಭವಿಸಿದ ಸಾವು ಮತ್ತು ಆಸ್ತಿಪಾಸ್ತಿ ನಷ್ಟದ ಕುರಿತ ತನಿಖೆಯನ್ನೂ ಅದರ ವ್ಯಾಪ್ತಿಗೆ ತರಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ಅಲಹಾಬಾದ್ ಹೈಕೋರ್ಟ್‌ಗೆ ತಿಳಿಸಿದೆ.

ಕಾಲ್ತುಳಿತದಲ್ಲಿ 30 ಜನರು ಮೃತಪಟ್ಟು ಹಲವರಿಗೆ ಗಾಯಗಳಾಗಿದ್ದವು. ಈ ಘಟನೆ ಬಳಿಕ ಮಹಾಕುಂಭ ಮೇಳದ ಆಡಳಿತ ವ್ಯವಸ್ಥೆಯು ಜಿಲ್ಲಾಡಳಿತದ ಜತೆ ಹೇಗೆ ಸಮನ್ವಯ ಸಾಧಿಸಿತು ಎಂಬುದರ ಕುರಿತೂ ಆಯೋಗ ಪರಿಶೀಲನೆ ನಡೆಸಲಿದೆ ಎಂದು ಸರ್ಕಾರ ಹೇಳಿದೆ.

ವಕೀಲ ಸುರೇಶ್ ಚಂದ್ರ ಪಾಂಡೆ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಅರುಣ್ ಬನ್ಸಾಲಿ ಮತ್ತು ನ್ಯಾಯಮೂರ್ತಿ ಕ್ಷಿತಿಜ್ ಶೈಲೇಂದ್ರ ಅವರನ್ನು ಒಳಗೊಂಡ ವಿಭಾಗೀಯ ಪೀಠ ವಿಚಾರಣೆ ನಡೆಸಿ, ವಿಲೇವಾರಿ ಮಾಡಿತು.


ನಿಧನ ವಾರ್ತೆ

ಎ.ಆರ್. ನಿರ್ಮಲ ಕುಮಾರ್

ಬೆಂಗಳೂರು: ನಗರದ ಉದ್ಯಮಿ ಎ.ಆರ್.ನಿರ್ಮಲ ಕುಮಾರ್ (83) ಅವರು ಮಂಗಳವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರ ರಿದ್ದಾರೆ. ಮೈಸೂರು ರಸ್ತೆಯ ಚಿತಾಗಾರದಲ್ಲಿ ಸಂಜೆ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಆಕಾರ್' ಉಪ್ಪು ತಯಾರಿಕೆ ಕಂಪನಿಯ ಸ್ಥಾಪಕ ಹಾಗೂ ಮಾಗಡಿ ರಸ್ತೆಯ ಜಿನ ಮಂದಿರದ ಆಡಳಿತ ಮಂಡಳಿಯ ಅಧ್ಯಕ್ಷ ರಾಗಿದ್ದರು. ಕರ್ನಾಟಕ ಜೈನ ಅಸೋಸಿಯೇಷನ್ ಉಪಾಧ್ಯಕ್ಷರಾಗಿ ಮತ್ತು ಶ್ರವಣಬೆಳಗೊಳದ 2006ರ ಮಹಾಮಸ್ತಕಾಭಿಷೇಕದ ಸಮಿತಿಯ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿಯೂ ನಿರ್ಮಲ ಕುಮಾರ್ ಸೇವೆ ಸಲ್ಲಿಸಿದ್ದರು.



ಮುಂಬೈ ರೇಸ್

ಮಾರ್ಕೆಟ್ ಕಿಂಗ್ ಗೆಲ್ಲುವ ನಿರೀಕ್ಷೆ


ರಾಜ್‌ಪಿಪ್ಲಾ ಟ್ರೋಫಿ ಬುಧವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಾರ್ಕೆಟ್ ಕಿಂಗ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 5:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:


1ನೇ ರೇಸ್: ಡ್ಯಾಶ್ 3, ಎಕ್ಸುಮಾ 2, ಸ್ಪ್ಲೆಂಡಿಡೊ 1
2ನೇ ರೇಸ್: ಮಾರ್ಕೆಟ್ ಕಿಂಗ್ 1, ಐರಿಶ್ ಗೋಲ್ಡ್ 2
3ನೇ ರೇಸ್: ಮೈಟಿ ಸ್ಪ್ಯಾರೊ 3, ಬಿಲೀವ್ 1, ಟ್ರೆಷರ್ ಗೋಲ್ಡ್ 2
4ನೇ ರೇಸ್: ಅಟೈನ್ಡ್ 1, ಮಿಲಾ 2, ವಾಲ್ಟರ್ 3
5ನೇ ರೇಸ್: ಆಕ್ಸಲ್‌ರಾಡ್ 5, ಆರ್ಟ್ ಕಲೆಕ್ಟರ್ 2, ಗೋಲ್ಡನ್ ಗ್ಲೋ 3
6ನೇ ರೇಸ್: ಬೆಟ್ಸಿ 1, ಲ್ಯೂಮಿನಾಸಿಟಿ 4, ಮೊಮೆಂಟ್ ಆಫ್ ಮ್ಯಾಡ್‌ನೆಸ್ 2

ಉತ್ತಮ ಬೆಟ್: ಅಟೈನ್ಡ್

ಜಾಕ್‌ಪಾಟ್ 2,3,4,5,6 | ಟ್ರಿಬಲ್ 3,4,5

ತಂತ್ರಜ್ಞಾನ





‘ಸ್ವರೈಲ್’ ಭಾರತೀಯ ರೈಲ್ವೆಯ ಸೂಪರ್ ಆ್ಯಪ್

ಸೂರ್ಯನಾರಾಯಣ ವಿ.

ದಿನನಿತ್ಯ ರೈಲುಗಳಲ್ಲಿ ಸಂಚರಿಸುವ ಕೋಟ್ಯಂತರ ಪ್ರಯಾಣಿಕರ ಅನುಕೂಲಕ್ಕಾಗಿ ಭಾರತೀಯ ರೈಲ್ವೆಯು ‘ಸ್ವರೈಲ್’ (SwaRail) ಎನ್ನುವ ಆ್ಯಪ್ ಅನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಸದ್ಯ ಇದು ಬೇಟಾ ಆವೃತ್ತಿಯಲ್ಲಿ ಆಂಡ್ರಾಯ್ಡ್ ಮತ್ತು ಐಒಎಸ್ ತಂತ್ರಾಂಶದ ಫೋನ್ ಬಳಕೆದಾರರಿಗೆ ಲಭ್ಯವಿದೆ.

ಸೆಂಟರ್ ಫಾರ್ ರೈಲ್ವೆ ಇನ್‌ಫರ್ಮೇಷನ್ ಸಿಸ್ಟಮ್ಸ್ (ಸಿಆರ್‌ಐಎಸ್) ಅಭಿವೃದ್ಧಿ ಪಡಿಸಿರುವ ‘ಸ್ವರೈಲ್’ ಅನ್ನು ‘ಸೂಪರ್‌ಆ್ಯಪ್’ ಎಂದು ರೈಲ್ವೆ ಇಲಾಖೆ ಬಣ್ಣಿಸಿದೆ. ಈ ಆ್ಯಪ್‌ನ ಮೂಲಕ ರೈಲ್ವೆಗೆ ಸಂಬಂಧಿಸಿದ ಎಲ್ಲ ಸೇವೆಗಳನ್ನು ಒಂದೇ ವೇದಿಕೆಯ ವ್ಯಾಪ್ತಿಗೆ ಅದು ತಂದಿದೆ. ಇಲ್ಲಿಯವರೆಗೂ ಪ್ರಯಾಣಿಕರು ಟಿಕೆಟ್ ಕಾಯ್ದಿರಿಸುವುದು ಸೇರಿದಂತೆ, ಪ್ರಯಾಣಕ್ಕೆ ಸಂಬಂಧಿಸಿದ ವಿವಿಧ ಸೇವೆಗಳನ್ನು ಪಡೆಯಲು ಐಆರ್‌ಸಿಟಿಸಿ ರೈಲ್ ಕನೆಕ್ಟ್, ಯುಟಿಎಸ್ ಮೊಬೈಲ್ ಸೇರಿದಂತೆ ಬೇರೆ ಬೇರೆ ಆ್ಯಪ್‌ಗಳನ್ನು ಬಳಸಬೇಕಿತ್ತು. ವಿವಿಧ ಆ್ಯಪ್‌ಗಳಲ್ಲಿ ಸಿಗುತ್ತಿದ್ದ ಸೇವೆಗಳೆಲ್ಲವೂ ಈಗ ಸ್ವರೈಲ್ ಆ್ಯಪ್ ಮೂಲಕ ಒಂದೇ ಯೂಸರ್ ಇಂಟರ್‌ಫೇಸ್‌ನಲ್ಲಿ ಲಭ್ಯವಿದ್ದು, ಪ್ರಯಾಣಿಕರು ಹಲವು ಆ್ಯಪ್‌ಗಳನ್ನು ಅವಲಂಬಿಸುವ ಅನಿವಾರ್ಯತೆ ತಪ್ಪಲಿದೆ. ಹೊಸ ಆ್ಯಪ್‌ನ ವಿನ್ಯಾಸ ಚೆನ್ನಾಗಿದ್ದು, ಬಳಕೆದಾರ ಸ್ನೇಹಿಯೂ ಆಗಿದೆ.

ಯಾವೆಲ್ಲ ಸೇವೆಗಳು?

ಮುಂಗಡ ಟಿಕೆಟ್ ಕಾಯ್ದಿರಿಸುವಿಕೆ (ರಿಸರ್ವ್ಡ್ ಟಿಕೆಟ್ ಬುಕಿಂಗ್), ಪ್ರಯಾಣದ ದಿನ ಸಾಮಾನ್ಯ ದರ್ಜೆಯ (ಜನರಲ್ ಕ್ಲಾಸ್) ಪ್ರಯಾಣದ ಟಿಕೆಟ್ (ಅನ್‌ರಿಸರ್ವ್ಡ್ ಟಿಕೆಟ್) , ಪ್ಲಾಟ್‌ಫಾರ್ಮ್ ಟಿಕೆಟ್ ಕಾಯ್ದಿರಿಸುವುವಿಕೆ, ಪಾರ್ಸೆಲ್ ಮತ್ತು ಸರಕುಗಳಿಗೆ ಸಂಬಂಧಿಸಿದ ವಿಚಾರಣೆ, ರೈಲುಗಳ ವೇಳಾಪಟ್ಟಿ, ಪಿಎನ್‌ಆರ್ ಸ್ಟೇಟಸ್ ಪರಿಶೀಲನೆ, ರೈಲಿನಲ್ಲಿ ಆಹಾರದ ಖರೀದಿ, ಕುಂದುಕೊರತೆಗಳ ಬಗ್ಗೆ ದೂರು ನೀಡುವುದು – ಇಂಥ ಹಲವು ಸೌಲಭ್ಯಗಳನ್ನು ಈ ಆ್ಯಪ್ ಹೊಂದಿದೆ.

ಆ್ಯಪ್‌ನಲ್ಲಿ ‘ಆರ್–ವ್ಯಾಲೆಟ್’ ಎಂಬ ಡಿಜಿಟಲ್ ವ್ಯಾಲೆಟ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಪ್ರಯಾಣಿಕರಿಗೆ ಟಿಕೆಟ್ ಕಾಯ್ದಿರಿಸುವಾಗ ಪಾವತಿಸಬೇಕಾದ ಹಣವನ್ನು ಮೊದಲೇ ಇದರಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಇದು ಅವಕಾಶ ಕಲ್ಪಿಸುತ್ತದೆ (ಈಗ ಬಳಕೆಯಲ್ಲಿರುವ ಯುಟಿಎಸ್ ಮೊಬೈಲ್ ಆ್ಯಪ್‌ನಲ್ಲೂ ಈ ಸೌಲಭ್ಯ ಇದೆ).

ರೈಲು ಸಂಚಾರದ ಬಗ್ಗೆ ಮಾಹಿತಿ ಪಡೆಯುವ, ಅಂದರೆ ರೈಲು ಯಾವ ಪ್ರದೇಶದಲ್ಲಿ ಸಂಚರಿಸುತ್ತಿದೆ ಎಂಬುದು ಸೇರಿದಂತೆ ನಿಲ್ದಾಣಕ್ಕೆ ಬರುವ, ಹೊರಡುವ ವಿವರಗಳನ್ನು ಆ್ಯಪ್‌ನಲ್ಲಿ ತಿಳಿಯಬಹುದು. ಪ್ಲಾಟ್‌ಫಾರ್ಮ್‌ನಲ್ಲಿ ರೈಲಿನ ನಿರ್ದಿಷ್ಟ ಬೋಗಿ ಯಾವ ಸ್ಥಳದಲ್ಲಿ ನಿಂತಿರುತ್ತದೆ ಎಂಬುದನ್ನೂ ಅರಿಯಬಹುದು ಎಂದು ಭಾರತೀಯ ರೈಲ್ವೆ ಹೇಳಿದೆ.

ಲಾಗಿನ್ ಸುಲಭ

ರೈಲ್ವೆ ಪ್ರಯಾಣಿಕರು ತಮ್ಮ ಮೊಬೈಲ್‌ನಲ್ಲಿ ಈಗಾಗಲೇ ‘ಐಆರ್‌ಸಿಟಿಸಿ ರೈಲ್ ಕನೆಕ್ಟ್’ ಅಥವಾ ‘ಯುಟಿಎಸ್ ಮೊಬೈಲ್ ಆ್ಯಪ್’ಗಳನ್ನು ಬಳಸುತ್ತಿದ್ದರೆ ಅದರ ವಿವರಗಳನ್ನೇ (ಯೂಸರ್ ಐಡಿ) ಸ್ವರೈಲ್ ಆ್ಯಪ್‌ನಲ್ಲಿ ನಮೂದಿಸಿ ಸುಲಭವಾಗಿ ಲಾಗಿನ್ ಆಗಬಹುದು. ಹೊಸ ಬಳಕೆದಾರರಾಗಿದ್ದರೆ ಮಾತ್ರ ಆ್ಯಪ್ ಡೌನ್‌ಲೋಡ್ ಮಾಡಿದ ಬಳಿಕ ನೋಂದಣಿ ಮಾಡಿಕೊಳ್ಳಬೇಕು. ಪಾಸ್‌ವರ್ಡ್, ಎಂ–ಪಿನ್, ಬಯೋಮೆಟ್ರಿಕ್ (ಹೆಬ್ಬೆಟ್ಟು, ಮುಖಚಹರೆ ಗುರುತು) ವಿಧಾನದ ಮೂಲಕವೂ ಲಾಗಿನ್ ಆಗಲು ಅವಕಾಶ ಕಲ್ಪಿಸಲಾಗಿದೆ.

ಸದ್ಯ ಆ್ಯಪ್ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಬಳಕೆಗೆ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ಪ್ರಾದೇಶಿಕ ಭಾಷೆಗಳನ್ನೂ ಅಳವಡಿಸಿಕೊಳ್ಳಲಾಗುವುದು ಎಂದು ರೈಲ್ವೆ ಇಲಾಖೆ ಹೇಳಿದೆ.

ಸಲಹೆ, ಸೂಚನೆಗಳಿಗೆ ಮನ್ನಣೆ

ಸದ್ಯ ಸ್ವರೈಲ್ ಆ್ಯಪ್ ಪರೀಕ್ಷಾರ್ಥ ಹಂತದಲ್ಲಿದ್ದು, ಇದನ್ನು ಬಳಸಿದ ಮೊಬೈಲ್ ಬಳಕೆದಾರರು ಸಿಆರ್‌ಐಎಸ್‌ನೊಂದಿಗೆ ಆ್ಯಪ್ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ಅಗತ್ಯವಿರುವ ಸುಧಾರಣಾ ಕ್ರಮಗಳ ಬಗ್ಗೆ ಸಲಹೆಗಳನ್ನೂ ನೀಡಬಹುದು. ಬಳಕೆದಾರರ ಅಭಿಪ್ರಾಯಗಳನ್ನು ಅಳವಡಿಸಿಕೊಂಡ ನಂತರ ಆ್ಯಪ್‌ನ ಅಂತಿಮ ಆವೃತ್ತಿಯನ್ನು ಭಾರತೀಯ ರೈಲ್ವೆ ಬಿಡುಗಡೆ ಮಾಡಲಿದೆ.

ಟ್ರಾಫಿಕ್ ಸಮಸ್ಯೆಗಳಿಗೆ ‘ಎ.ಐ.’ ಪರಿಹಾರಗಳು

ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರಿನಲ್ಲಿ ಕೃತಕ ಬುದ್ಧಿಮತ್ತೆ(ಎಐ) ಆಧಾರಿತ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆ ಅನುಷ್ಠಾನಗೊಳಿಸಲಾಗಿದ್ದು, ಎಐ ಆಧಾರಿತ ಕ್ಯಾಮೆರಾಗಳನ್ನು ಜಂಕ್ಷನ್‌ಗಳಲ್ಲಿ ಅಳವಡಿಸಲಾಗಿದೆ. ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವವರಿಗೆ ಅವರ ನೋಂದಣಿ ಸಂಖ್ಯೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಚಲನ್ ಕಳುಹಿಸುವ ವ್ಯವಸ್ಥೆ ಇದರಿಂದ ಜಾರಿಗೆ ಬಂದಂತಾಗಿದೆ. ಇಂಥದ್ದೇ ವ್ಯವಸ್ಥೆಯನ್ನು ಘಾಜಿಯಾಬಾದ್‌ನಲ್ಲಿ ಅಳವಡಿಸಲಾಗಿದೆ. ಕೃತಕ ಬುದ್ಧಿಮತ್ತೆ ಆಧಾರಿತ ಸಿಗ್ನಲ್‌ನಿಂದಾಗಿ ಕೇರಳದಲ್ಲಿ ಶೇ 50ರಷ್ಟು ಅಪಘಾತ ಪ್ರಕರಣಗಳು ಕಡಿಮೆಯಾಗಿದೆ ಎಂದು ಅಲ್ಲಿನ ಸಂಚಾರ ವಿಭಾಗದ ಪೊಲೀಸರು ಹೇಳಿದ್ದಾರೆ.

ಮಿತಿಮೀರಿ ಬೆಳೆಯುತ್ತಿರುವ ವಾಹನ ದಟ್ಟಣೆಯನ್ನು ನಿಯಂತ್ರಿಸಲು ಪರಿಣಾಮಕಾರಿ ತಂತ್ರಜ್ಞಾನ ಎಂದೇ ಜಗತ್ತಿನ ಹಲವು ರಾಷ್ಟ್ರಗಳು ಕೃತಕ ಬುದ್ಧಿಮತ್ತೆ ಆಧಾರಿತ ಟ್ರಾಫಿಕ್ ಸಿಗ್ನಲ್, ಕ್ಯಾಮೆರಾಗಳನ್ನು ಅಳವಡಿಸಿವೆ. ಬೆಂಗಳೂರು, ದೆಹಲಿ, ಕೇರಳ, ಉತ್ತರ ಪ್ರದೇಶ ರಾಜ್ಯಗಳಲ್ಲೂ ಈಗ ಇಂಥ ಸಿಗ್ನಲ್‌ಗಳು ಮಾನವ ಸಂಪನ್ಮೂಲ ಮೇಲಿನ ಹೊರೆಯನ್ನು ತಗ್ಗಿಸಿರುವುದರ ಜತೆಗೆ, ಅಧಿಕ ವಾಹನ ದಟ್ಟಣೆಯನ್ನು ನಿಯಂತ್ರಿಸುವಲ್ಲೂ ಹೆಚ್ಚು ನೆರವಾಗುತ್ತಿವೆ.

ಸಂಚಾರ ವ್ಯವಸ್ಥೆಯಲ್ಲಿ ಎ. ಐ.

ಭಾರತದ ಬಹುತೇಕ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಿಗ್ನಲ್‌ಗಳಿದ್ದರೂ ಇಂದಿಗೂ ಸಂಚಾರ ಠಾಣೆಯ ಪೊಲೀಸರೇ ರಸ್ತೆಯಲ್ಲಿ ನಿಂತು ಟ್ರಾಫಿಕ್ಕನ್ನು ನಿಯಂತ್ರಿಸುವುದು ಸಾಮಾನ್ಯ ದೃಶ್ಯವಾಗಿದೆ. ಆದರೆ ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ತಂತ್ರಜ್ಞಾನವು ಟ್ರಾಫಿಕ್ ಸಿಗ್ನಲ್‌ಗಳ ನಿರ್ವಹಣೆಯ ಆಲೋಚನೆಗಳನ್ನೇ ಬದಲಿಸಿದೆ. ಹೀಗಾಗಿ ಬೆಂಗಳೂರಿನಂತ ಅತಿ ಹೆಚ್ಚು ವಾಹನಗಳು ಗಿಜಿಗಿಡುವ ನಗರಗಳಲ್ಲೂ ದಿನದ 24 ಗಂಟೆಗಳ ಕಾಲ ಸ್ವಯಂಚಾಲಿತವಾಗಿ ಸಿಗ್ನಲ್‌ಗಳ ನಿರ್ವಹಣೆ ಸಾಧ್ಯವಾಗಿದೆ.

ಅತಿ ಹೆಚ್ಚು ವಾಹನ ದಟ್ಟಣೆ ಇರುವ ಸಮಯ, ದಿಕ್ಕು ಆಧರಿಸಿ ಸಿಗ್ನಲ್‌ಗಳು ಸಮಯ ನಿರ್ವಹಿಸುವ ತಂತ್ರಜ್ಞಾನ ಇದಾಗಿದೆ. ಇದಕ್ಕೆ ಹಲವು ಕ್ಯಾಮೆರಾಗಳು ಹಾಗೂ ಇಂಟರ್‌ನೆಟ್ ಆಫ್ ಥಿಂಗ್ಸ್ ಪೂರಕವಾಗಿ ನೆರವಾಗುತ್ತಿವೆ. ‘ಸಂಯೋಜಿತ ಸಂಚಾರಿ ಜಾರಿ ನಿರ್ವಹಣಾ ವ್ಯವಸ್ಥೆ’ ಸದ್ಯ ಟ್ರಾಫಿಕ್ ಸಿಗ್ನಲ್‌ಗಳಿಗೆ ನೆರವಾಗುತ್ತಿದೆ. ಬೆಂಗಳೂರಿನ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಆಯಾ ರಸ್ತೆಗಳಲ್ಲಿನ ವಾಹನ ದಟ್ಟಣೆಯನ್ನು ಗ್ರಹಿಸಿ ‘ಗ್ರೀನ್ ಸಿಗ್ನಲ್’ (ಹಸಿರು ನಿಶಾನೆ) ಅನ್ನು ನೀಡುವ ‘ಅಡ್ಯಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್’(ಎಟಿಸಿಎಸ್)ನ ಪ್ರಾಯೋಗಿಕ ಅನುಷ್ಠಾನ ಬಹುತೇಕ ಯಶಸ್ವಿಯಾಗಿದೆ.



ಈ ಹಿಂದಿನ ವ್ಯವಸ್ಥೆಯಲ್ಲಿ ವಾಹನಗಳಿರಲಿ ಅಥವಾ ಇಲ್ಲದಿರಲಿ ಪ್ರತಿ ಸಿಗ್ನಲ್‌ನಲ್ಲಿ ನಿರ್ದಿಷ್ಟ ಸಮಯ ಕಾಯುವುದು ಅನಿವಾರ್ಯವಾಗಿರುತ್ತಿತ್ತು. ಆದರೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಿಕೊಂಡ ನಂತರ, ಹೆಚ್ಚು ವಾಹನ ದಟ್ಟಣೆ ಇರುವ ಮಾರ್ಗಕ್ಕೆ ಹೆಚ್ಚು ಕಾಲ ‘ಹಸಿರು ನಿಶಾನೆ’ಯನ್ನೂ, ಕಡಿಮೆ ಇರುವಲ್ಲಿ ಕಡಿಮೆ ಸಮಯವನ್ನೂ ನೀಡುವ ವ್ಯವಸ್ಥೆ ಜಾರಿಗೆ ತರಲಾಗಿದೆ. ‘ವೆಹಿಕಲ್ ಆಕ್ಚುಯೇಟೆಡ್ ಕಂಟ್ರೋಲ್’ (ವಿಎಸಿ) ತಂತ್ರಜ್ಞಾನ ಇದಕ್ಕೆ ನೆರವಾಗಿದೆ.

ಬೆಂಗಳೂರಿನ ಪ್ರಮುಖ ಜಂಕ್ಷನ್‌ಗಳಲ್ಲಿ 1,500 ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದರೊಂದಿಗೆ ಸುಮಾರು ಒಂಬತ್ತು ಸಾವಿರ ಸಿಸಿಟಿವಿ ಕ್ಯಾಮೆರಾಗಳ ನೆರವನ್ನೂ ಪಡೆದು, ಟ್ರಾಫಿಕ್ ನಿರ್ವಹಣಾ ಕೊಠಡಿಯಲ್ಲಿರುವ ಬೃಹತ್ ಗೋಡೆ ಪರದೆಯ ಮೇಲೆ ಮೂಡುವಂತೆ ಬೆಂಗಳೂರು ಸಂಚಾರ ಪೊಲೀಸರು ಸಜ್ಜುಗೊಳಿಸಿರುವುದು ಈ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಗೆ ಒಂದು ಸ್ಪಷ್ಟ ಉದಾಹರಣೆ. ಈ ವ್ಯವಸ್ಥೆಯಿಂದಾಗಿ ಕಡಿಮೆ ಸಮಯದಲ್ಲಿ ಒಂದು ಜಂಕ್ಷನ್‌ನಿಂದ ಮತ್ತೊಂದು ಜಂಕ್ಷನ್‌ಗೆ ವಾಹನಗಳು ಸಂಚರಿಸಬಹುದಾಗಿದೆ. ಪ್ರತಿ ಸಿಗ್ನಲ್‌ನಲ್ಲಿ 10 ಸೆಕೆಂಡ್ ಸಮಯ ಉಳಿಸಿದರೂ 10 ಸಿಗ್ನಲ್ ದಾಟುವ ಹೊತ್ತಿಗೆ 100 ಸೆಕೆಂಡ್ ಸಮಯ ಉಳಿತಾಯವಾಗಲಿದೆ. ಇದು ಸಮಯ ಉಳಿತಾಯದ ಜತೆಗೆ, ಇಂಧನ ಉಳಿತಾಯಕ್ಕೂ ದಾರಿಯಾಗಲಿದೆ.

ನಗರ ಪ್ರದೇಶಗಳಲ್ಲಿ ಇಂಟರ್‌ನೆಟ್ ಆಫ್ ಥಿಂಗ್ಸ್ ತಂತ್ರಜ್ಞಾನವನ್ನು ಬಳಸಿಕೊಂಡು ವಾಹನಗಳ ಸಂಚಾರ ಮಾಹಿತಿ ಸಂಗ್ರಹಿಸಿ, ಇದನ್ನು ವಿಶ್ಲೇಷಿಸಿ ಭವಿಷ್ಯದ ಯೋಜನೆಗಳನ್ನು ರೂಪಿಸಲು ಸಾಧ್ಯ. ರಿಯಲ್ ಟೈಂ ಮಾಹಿತಿ ಕಲೆ ಹಾಕಲು ಸ್ಪೀಡ್ ಸೆನ್ಸರ್‌ಗಳು, ಕ್ಯಾಮೆರಾ, ರಾಡಾರ್ ಅಗತ್ಯ. ಈ ಎಲ್ಲಾ ಸಾಧನಗಳಿಂದ ಸಂಗ್ರಹಿಸುವ ಮಾಹಿತಿಯಿಂದ ವಾಹನ ದಟ್ಟಣೆಯ ನಿರ್ವಹಣೆ ಮಾತ್ರವಲ್ಲ, ಮಾಲಿನ್ಯ ಪ್ರಮಾಣವನ್ನೂ ತಗ್ಗಿಸಲು ಸಾಧ್ಯ ಎಂದು ಇಂಟೆಲ್ ಹೇಳಿದೆ.

ಸ್ಮಾರ್ಟ್ ರಸ್ತೆಗಳಿಂದ ಲಾಭಗಳು

- **ರಸ್ತೆ ಒತ್ತಡ ತಗ್ಗಲಿದೆ:** ಸ್ಮಾರ್ಟ್ ಸಿಗ್ನಲ್‌ಗಳಿಂದ ಅನಗತ್ಯ ಜಾಮ್ ತಪ್ಪಲಿದೆ. ದಟ್ಟಣೆ ಇರುವ ಮಾರ್ಗಕ್ಕೆ ಹೆಚ್ಚು ಅವಕಾಶ ನೀಡುವ ಮೂಲಕ ಕಾಯುವ ಸಮಯ ತಗ್ಗಲಿದೆ. ಆರಿಝೋನಾದ ಬೆಲ್ ಹೆದ್ದಾರಿಯಲ್ಲಿ ಗ್ರಿಡ್‌ಸ್ಮಾರ್ಟ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ.
- **ಸುರಕ್ಷತೆ ಹೆಚ್ಚಲಿದೆ:** ರಸ್ತೆಯಲ್ಲಿ ಅಪಘಾತ ಅಥವಾ ಇನ್ಯಾವುದೇ ಅಪರಾಧ ಚಟುವಟಿಕೆಗಳು ನಡೆದಲ್ಲಿ ಅವುಗಳನ್ನು ತಕ್ಷಣ ಪತ್ತೆ ಮಾಡಿ ಅಪರಾಧಿಗಳನ್ನು ಹಿಡಿಯುವ ಹಾಗೂ ಗಾಯಗೊಂಡವರನ್ನು ತ್ವರಿತವಾಗಿ ಆಸ್ಪತ್ರೆಗೆ ದಾಖಲಿಸಲು ಸಾಧ್ಯ.
- **ನಂಬರ್ ಪ್ಲೇಟ್ ಓದುವ ಕ್ಯಾಮೆರಾ:** ನಗರ ಪ್ರದೇಶ ಹಾಗೂ ಹೆದ್ದಾರಿಯಲ್ಲಿ ಸಾಗುವ ವಾಹನಗಳ ನೋಂದಣಿ ಸಂಖ್ಯೆ ಇರುವ ಫಲಕದ ಮಾಹಿತಿಯನ್ನು ಗ್ರಹಿಸುವ ಈ ಸ್ಮಾರ್ಟ್ ಕ್ಯಾಮೆರಾಗಳು, ಕೆಲವೇ ಕ್ಷಣಗಳಲ್ಲಿ ಆ ವಾಹನದ ಮಾಹಿತಿಯನ್ನು ಕಲೆ ಹಾಕಲಿದೆ. ಇದರಿಂದ ಪೊಲೀಸ್ ಕಾರ್ಯಾಚರಣೆಗಳನ್ನು ತ್ವರಿತವಾಗಿ ಮಾಡಲು ಅನುಕೂಲ ಆಗಲಿದೆ.
- **ಸಮಸ್ಯೆಗಳನ್ನು ಬೇಗನೆ ಗ್ರಹಿಸುವ ಸಾಮರ್ಥ್ಯ:** ಟ್ರಾಫಿಕ್ ನಿರ್ವಹಣಾ ಕೊಠಡಿಯಲ್ಲಿ ಕುಳಿತಿರುವ ತಜ್ಞರಿಗೆ ರಸ್ತೆಗಳ ಸಾಕ್ಷಾತ್ ದೃಶ್ಯ ಸಹಿತ ಮಾಹಿತಿಯನ್ನು ನೀಡುವ ಕೃತಕ ಬುದ್ಧಿ ಆಧಾರಿತ ತಂತ್ರಜ್ಞಾನದಿಂದ, ಮುಂದೆ ಎದುರಾಗಬಹುದಾದ ಸವಾಲುಗಳನ್ನು ತ್ವರಿತವಾಗಿ ಗ್ರಹಿಸಲು ಹಾಗೂ ಯೋಜನೆಗಳನ್ನು ರೂಪಿಸಲು ಸಾಧ್ಯ.

ಜಗತ್ತಿನ ಪ್ರಮುಖ ನಗರಗಳಲ್ಲಿ ...

- ಜಗತ್ತಿನ ಅತ್ಯಂತ ಅಪಾಯಕಾರಿ ರಸ್ತೆ ಎಂದೇ ಕುಖ್ಯಾತಿ ಪಡೆದಿರುವ ಭಾರತದ ರಾಷ್ಟ್ರೀಯ ಹೆದ್ದಾರಿ 1ರಲ್ಲಿ ತಿರುವುಗಳಲ್ಲಿ ಸ್ವಯಂ ಚಾಲಿತ ಹಾರ್ನ್ ಮೂಲಕ ಚಾಲಕರನ್ನು ಎಚ್ಚರಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ವಾಹನಗಳ ವೇಗವನ್ನು ಗ್ರಹಿಸಿ, ಎಚ್ಚರಿಕೆ ನೀಡುವ ಉದ್ದೇಶದಿಂದ ಸ್ವಯಂ ಚಾಲಿತ ಹಾರ್ನ್ ಅಳವಡಿಸಲಾಗಿದೆ.
- ಮಾಲಿನ್ಯವನ್ನು ತಗ್ಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿರುವ ಬ್ಯಾಟರಿ ಚಾಲಿತ ವಾಹನಗಳು ಚಲನೆಯಲ್ಲಿರುವಾಗಲೇ ಬ್ಯಾಟರಿ ಚಾರ್ಜ್ ಆಗುವಂತೆ ಲೇನ್ ಅಭಿವೃದ್ಧಿಪಡಿಸಿದ ಉದಾಹರಣೆಗಳೂ ಇವೆ. ಇಸ್ರೇಲ್‌ನ ಟೆಲ್ ಅವೀವ್ ಹಾಗೂ ಇಟಲಿಯಲ್ಲಿ ಬಸ್ಸುಗಳಿಗಾಗಿ ಇಂಥ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ರಸ್ತೆಗಳಲ್ಲಿ ಫೈಬರ್ ಆಪ್ಟಿಕ್ ಸೆನ್ಸರ್‌ಗಳನ್ನು ಅಳವಡಿಸುವ ಮೂಲಕ ವಾಹನಗಳ ಸಂಚಾರ, ರಸ್ತೆಗಳ ಸ್ಥಿತಿ ಹಾಗೂ ಅಪಘಾತವನ್ನು ಗ್ರಹಿಸಿ ತುರ್ತು ಪರಿಹಾರ ಕೇಂದ್ರಕ್ಕೆ ಮಾಹಿತಿ ನೀಡುವ ವ್ಯವಸ್ಥೆಯು ಅಮೆರಿಕದ ಕನಾಸಸ್ ನಗರದಲ್ಲಿ ಅಳವಡಿಸಲಾಗಿದೆ.
- ಹಾಲೆಂಡ್‌ನಲ್ಲಿ ಸ್ಮಾರ್ಟ್ ಹೆದ್ದಾರಿ ಯೋಜನೆಯಲ್ಲಿ ಸೌರ ತಂತ್ರಜ್ಞಾನವನ್ನು ಬಳಸಿ ಹೊಳೆವ ಮಾರ್ಗಫಲಕಗಳನ್ನು ಪ್ರದರ್ಶಿಸಲಾಗುತ್ತಿದೆ. ಹಗಲಿನಲ್ಲಿ ಚಾರ್ಜ್ ಆಗುವ ಈ ಫಲಕಗಳು, ರಾತ್ರಿ ವೇಳೆಯಲ್ಲಿ ಹೊಳೆಯುವ ಮೂಲಕ ಸುರಕ್ಷಿತ ಸಂಚಾರಕ್ಕೆ ಚಾಲಕರಿಗೆ ಮಾರ್ಗದರ್ಶನ ಮಾಡಲಿದೆ.

ಸಾರ್ವಜನಿಕ ಸಾರಿಗೆಯನ್ನು ಉತ್ತಮಪಡಿಸುವದರ ಜತೆಗೆ, ಇಂಧನ ಮಿತವ್ಯಯ, ಸುರಕ್ಷತೆ ಹಾಗೂ ಆರ್ಥಿಕ ಪ್ರಗತಿಗೂ ‘ಎಐ’ನ ಈ ತಂತ್ರಜ್ಞಾನ ನೆರವಾಗಲಿದೆ. ಸಾರಿಗೆ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಎಂಬ ತಂತ್ರಜ್ಞಾನವು ಕೇವಲ ಟ್ರಾಫಿಕ್‌ಗೆ ಮಾತ್ರವಲ್ಲದೆ, ಇನ್ನೂ ಹಲವು ಕ್ಷೇತ್ರಗಳಲ್ಲಿ ನೆರವಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

39. Develop the story using the clues given below:
In a village - a clever elephant – there a river nearby - go for bath daily - passing by a tailor shop - The tailor - bananas daily - one day bananas were not given- pricked needle – elephant angry - came with muddy water in its trunk - sprayed - tailor's shop dirty - he repented.

Ans:-

Once a clever elephant was living in a village.There was a river nearby the village in which the elephant would go for a bath daily. On its way, the elephant would take a quick detour passing by a tailor shop. The tailor was fond of elephants, so he gave bananas to it daily, this became a habit for both. On one such day the tailor was not in a pleasant mood and so he forgot to give banana to the elephant. The elephant decided to throw a tantrum which in turn irritated the tailor leading him to prick the elephant with a needle. The elephant became angry and brought some muddy water in its trunk and sprayed on the tailor's shop. The shop became very dirty, and the tailor repented for his action.

Moral: Think before you act.

40.Write a letter to your friend, inviting her and her family to attend on your brother's first birthday on 1st of January.

Ans :

Sangeetha
114, 6rd cross,
Bendre Extension.
Mangaluru
03/12/ 2024

Dear Janaki,

We all are Well and wish the same with all of there. Its long time since we met.

It is my baby brother Ramesh's birth day on 1st January. We have a pooja ceremony at 10.30 am. I take this opportunity to invite you and your parents to attend his first birthday and bless him. We all can have a good time here. Please reply soon about your date of arrival. Please convey my respects to ant and uncle.

Awaiting for your arrival

Your lovingly.
Sangeetha

(OR)

Write a informal letter to your father, telling him about performance in formative assessments and summative assessment of 9th standard. And tell him about your preparation for 10th standard exams.

Ans :

My dear father.

I am safe and in good health. How are you? I hope it's good on your side as well. I received your letter and noted the contents.

I'm very glad to write to you that I performed extremely well in my formative and summative assessments, scoring 92% or A+ grade in my 9th std. For the coming grade, since I am planning to join a reputed college I have decided to raise my bar and get better scores, therefore I am determined to prepare working very hard. Everyday I study for about 5-6 hours and practice the same before going to bed . I'm sure that I'll be able to score really well in my Board exams.

Please convey my due respects to grandparents and Mother. I hope to receive you reply at the earliest.

Your son,
Manjunath

To
Mr. Shiv Narayan Gowda
At and Post:- Kadime
TQ :- KUMTA
Dt:- Utter Kannada

41. Read the following passage and answer the questions that follow:

Man has altered many of the physical features of the earth with the tools of science. He has transformed woodlands and prairies into farmland. He has constructed lakes and dams to irrigate or to harness hydroelectric power. By cutting through mountains, he has almost modified the very face of the earth.

However his attempts to bring about change in the physical environment have not always been beneficial to the nature. Today pollution of the air and water endangers the health of the living organisms our planet. The automobile exhausts and the smokes from the factories are affecting our health. Pollution from oil is killing marine life throwing it out of balance.

Industrial and domestic wastes have choked several rivers. Conservationists strongly feel that if mankind and life were to survive on earth then the man must limit the growth of technology.

A. What are the effects of pollution?

Ans:- Currently pollution of the air and water endangers all the living creatures on the planet earth, including man. It is also affecting our health. Leakage of oil is killing the marine life. Industrial and domestic wastes have choked several rivers.

B. How has man altered the earth?

Ans:- Man has altered many of the physical features of the earth with the tools of science. He has transformed woodlands and prairies' into farmland. He has constructed lakes and dams to irrigate and harness hydroelectric power. By cutting through mountains, he has almost modified or altered the very face of the earth.

(Contd)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

REVISION : MODEL QUESTIONS

37) Multiple Choice Questions

1. The product/s formed when phenol is treated with excess of bromine water is/are
(i) o-bromophenol (ii) p- bromophenol
(iii) picric acid (iv) 2, 4, 6- tribromophenol
a) only (iii) b) only (iv)
c) both (i) and (ii) d) only (ii)
Ans:- b) only (iv)

2. Which of the following observation is shown by 2–methylpropan-2-ol with Lucas reagent?
a) Turbidity will be observed after five minutes.
b) No turbidity will be observed at room temperature.
c) Turbidity will be observed immediately.
d) Turbidity will be observed at room temperature but will disappear after five minutes.
Ans:-(c) Turbidity will be observed immediately.

3. The transition metal present in red pigment of blood haemoglobin is
a) cobalt b) nickel
c) iron d) copper.
Ans:- (c) iron

4. The geometry of the complex $Fe(CO)_5$ is
a) octahedral b) tetrahedral
c) trigonal bipyramidal d) square pyramidal
Ans:- (c) trigonal bipyramidal

5. The oxidation state of Fe in $[Fe(CO)_5]$ is
a) + 2 b) 0
c) + 3 d) + 5
Ans:-(b) 0


6. The gases liberated when primary alcohols react with thionyl chloride are
a) SO_2 and H_2 b) H_2 and HCl
c) SO_2 and HCl d) NO_2 and H_2
Ans:- (c) SO_2 and HC

7. Phenol molecule is less stable than phenoxide ion because
a) phenol resonance structures have charge separation but not in phenoxide ion.
b) phenoxide ion resonance structures have charge separation but not in phenol.
c) both Phenoxide ion and phenol resonance structures have charge separation
d) both Phenoxide ion and phenol resonance structures do not have charge separation
Ans:- (a) phenol resonance structures have charge separation but not in phenoxide ion


8. Glycerol is an example for
a) dihydric alcohol b) dihydric phenol
c) trihydric phenol d) trihydric alcohol
Ans:-(d) trihydric alcohol

9. Tollen's reagent is a
a) silver nitrate solution
b) ammonical silver nitrate solution
c) ammonium nitrate solution
d) silver chloride solution
Ans:- (b) ammonical silver nitrate solution

10)



The IUPAC name of ‘B’ is
(a) 3-methylbutan-2-ol (b) 2-methylbutan-3-ol
(c) 2-methylbutan-2-ol (d) pentan-2-ol.
Ans:(a): 3-methylbutan-2-ol



11. Carboxylic acids exists in dimeric form even in vapour phase due to
a) Hydrogen bond b) peptide bond
c) ionic bond d) metallic bond
Ans: (a) Hydrogen bond

12. The state of hybridization of orbitals of Nitrogen atom in amines is;
a) sp^2 b) sp^3
c) sp d) dsp^2
Ans:- (b) sp^3

13.Benzene diazonium chloride reacts with phenol to form p-hydroxy azobenzene in ……….
a) acidic medium b) neutral medium
c) basic medium
d) both acidic and neutral medium
Ans:- (c) basic medium

14. Thiamine is a chemical name of;
a) Vitamin A b) Vitamin B_1
c) Vitamin C d) Vitamin K
Ans:- (b) Vitamin B_1

15. The nitrogenous base adenine form hydrogen bonding with
a) Thymine b) Cytosine
c) Guanine d) None of the above
Ans:- (a) Thymine

II. Fill in the blanks by choosing the appropriate word from those given in the brackets: (phosgene, tin, hydrogen, molecularity, zinc, cellulose acetate)

16. The semi permeable membrane used in the reverse osmosis is ________________.
Ans:- **cellulose acetate**

17. The number of molecules taking part in the elementary reaction is called ________.
Ans:- **molecularity,**

18. The non-transitional metal present in brass is ________________.
Ans:- **zinc**

19. The poisonous gas formed when chloroform is exposed to air and lightis ________.
Ans:- **phosgene**

(Contd……….)

ಫಲಾನುಭವಿಗಳ ಪಾಲಿನ ₹9,500 ಕೋಟಿ ಪಾವತಿ

ವಸತಿ ಯೋಜನೆಗಳ ಅಡಿ ಬಡವರಿಗೆ ನೆರವು: ಜಮೀರ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದಲ್ಲಿ ರಾಜೀವ್‌ಗಾಂಧಿ ವಸತಿ ಯೋಜನೆಯಡಿಯ ಆಶ್ರಯ ಮನೆ (ಎಎಚ್‌ಪಿ) ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಹಂಚಿಕೆ ಆಗುತ್ತಿರುವ 2.28 ಲಕ್ಷ ಮನೆಗಳಿಗೆ ಫಲಾನುಭವಿಗಳು ಪಾವತಿಸಬೇಕಾದ ₹9,500 ಕೋಟಿ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಲು ನಿರ್ಧರಿಸಿದೆ' ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಬಿ.ಝೆಡ್.ಜಮೀರ್ ಅಹಮದ್ ಖಾನ್ ತಿಳಿಸಿದರು.

ಸಮೀಪದ ಗೋವಿಂದಾಪುರದಲ್ಲಿ ಶಿವಮೊಗ್ಗ ಮಹಾನಗರ ಪಾಲಿಕೆಯಿಂದ ಆಶ್ರಯ ವಸತಿ ಯೋಜನೆಯಡಿ ನಿರ್ಮಿಸಿರುವ 652 ಮನೆಗಳ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

'2017ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ವೇಳೆ ಆಶ್ರಯ ಯೋಜನೆಯಡಿ ₹47,863 ಮನೆಗಳು ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ 1.80 ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ. ಮನೆ ಕಟ್ಟಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ ₹3 ಲಕ್ಷ ಕೊಟ್ಟರೆ ಉಳಿದ ಮೊತ್ತವನ್ನು ಫಲಾನುಭವಿಗಳು ಪಾವತಿಸಬೇಕಿದೆ. ಆಗ ಮನೆಗಳು ಮಂಜೂರು ಆಗಿ ಒಂದೂವರೆ ವರ್ಷದೊಳಗೆ ಕಟ್ಟಿದ್ದರೆ ₹5 ಲಕ್ಷದೊಳಗೆ ಪೂರ್ಣವಾಗುತ್ತಿದ್ದವು. ವಿಳಂಬ ಆಗಿರುವುದರಿಂದ ಈಗ ಪ್ರತಿ ಮನೆಯ ವೆಚ್ಚ ₹ 7.80 ಲಕ್ಷ ಆಗಿದೆ' ಎಂದು ಹೇಳಿದರು.



ಆಶ್ರಯ ಯೋಜನೆಯಡಿ ಸಚಿವ ಜಮೀರ್ ಅಹಮದ್ ಖಾನ್ ಫಲಾನುಭವಿಗೆ ಸಾಂಕೇತಿಕವಾಗಿ ಮನೆಯ ಕೀ ವಿತರಣೆ ಮಾಡಿದರು. ಶಾಸಕ ಎಸ್‌.ಎನ್‌.ಚನ್ನಬಸಪ್ಪ, ಸಚಿವ ಮಧು ಬಂಗಾರಪ್ಪ, ಡಿ.ಎಸ್‌.ಅರುಣ್, ಡಾ.ಧನಂಜಯ ಸರ್ಜಿ, ಬಲ್ಕೀಶ್ ಬಾನು, ಜಿ.ಪಲ್ಲವಿ, ಎನ್‌.ರವಿಕುಮಾರ್, ಎಚ್‌.ಎಸ್‌.ಸುಂದರೇಶ್, ಡಾ.ಕವಿತಾ ಯೋಗಪ್ಪನವರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

> **ಬಸವ, ಅಂಬೇಡ್ಕರ್ ವಸತಿ ಯೋಜನೆಯಡಿ ಮನೆ ಕಟ್ಟುವ ಮೊತ್ತ ₹1.20 ಲಕ್ಷದಿಂದ ₹3.50 ಲಕ್ಷಕ್ಕೆ ಹೆಚ್ಚಿಸಲು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದೇನೆ**
> **ಜಮೀರ್ ಅಹಮದ್ ಖಾನ್,** ವಸತಿ ಸಚಿವ

'ಆಶ್ರಯ ಯೋಜನೆಯಡಿ ಫಲಾನುಭವಿಗಳು ₹2,100 ಕೋಟಿ ಪಾವತಿಸಬೇಕಿದೆ. ಇಲ್ಲಿಯವರೆಗೂ ಬರೀ ₹135 ಕೋಟಿ ಬಂದಿದೆ. ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಮನೆಗಳಿಗೆ ಫಲಾನುಭವಿಗಳು ₹7,400 ಕೋಟಿ ಪಾವತಿಸಬೇಕಿದ್ದು, ಬರೀ ₹310 ಕೋಟಿ ಕಟ್ಟಿದ್ದಾರೆ. ಫಲಾನುಭವಿಗಳಿಗೆ ಈ ಮೊತ್ತ ಹೊರೆಯಾಗಿದೆ. ಹಣ ಕಟ್ಟದೇ ಮನೆಗಳ ಹಂಚಿಕೆಯೂ ವಿಳಂಬವಾಗುತ್ತಿದೆ' ಎಂದರು.

'ಫಲಾನುಭವಿಗಳು ಹಣ ನೀಡುವವರೆಗೆ ಕಾದರೆ ಮನೆ ಹಂಚಿಕೆ ಮಾಡಲಾಗದು. ಬಡವರಿಗೆ ಅಷ್ಟೊಂದು ದುಡ್ಡು ಕಟ್ಟಲು ಆಗದು ಎಂಬುದನ್ನು ಮನವರಿಕೆ ಮಾಡಿದ್ದು, ಮುಖ್ಯಮಂತ್ರಿ ಒಪ್ಪಿದ್ದಾರೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು ಹಣ ಪಾವತಿಸಿ ಮೊದಲ ಹಾಗೂ ಎರಡನೇ ಹಂತದಲ್ಲಿ ಪೂರ್ಣಗೊಂಡಿರುವ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು. ಈಗಾಗಲೇ ತಮ್ಮ ಪಾಲು ತುಂಬಿರುವ ಫಲಾನುಭವಿಗಳಿಗೆ ಹಣ ವಾಪಸ್ ಮರಳಿಸಲಾಗುವುದು. ಮುಂದಿನ ಒಂದೂವರೆ ತಿಂಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸುವ ಗುರಿ ಹೊಂದಿದ್ದೇನೆ' ಎಂದು ಜಮೀರ್ ಅಹಮದ್ ಖಾನ್ ಹೇಳಿದರು.

'ಗ್ಯಾರಂಟಿ' ಹೊರೆ ಸಹಿಸಿಕೊಳ್ಳಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಯೋಜನೆಗಳಿಂದ ಹೊರೆ ಆಗುತ್ತಿರುವುದು ನಿಜ. ಅದು ಗೊತ್ತಿದ್ದೇ ನಾವು ಜಾರಿಗೆ ತಂದಿದ್ದೇವೆ. ಬಡವರಿಗಾಗಿ ಆಗುವ ಈ ಹೊರೆಯನ್ನು ನಾವು ಸಹಿಸಿಕೊಳ್ಳಬೇಕು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಡತನ ರೇಖೆಗಿಂತ ಕೆಳಗಿರುವವರಿಗೆ (ಬಿಪಿಎಲ್) ಮಾತ್ರ ಗ್ಯಾರಂಟಿ ಯೋಜನೆಗಳನ್ನು ಒದಗಿಸಬೇಕು ಎಂದು ತುರುವೇಕೆರೆ ಕ್ಷೇತ್ರದ ಜೆಡಿಎಸ್ ಶಾಸಕ ಎಂ.ಟಿ. ಕೃಷ್ಣಪ್ಪ ಸಲಹೆ ನೀಡಿದ್ದಾರೆ. ವಿರೋಧ ಪಕ್ಷಗಳು ಸಲಹೆಗಳನ್ನು ನೀಡಿದರೆ ಸರ್ಕಾರ ಚರ್ಚೆಗೆ ಮುಕ್ತವಾಗಿದೆ' ಎಂದು ಸ್ಪಷ್ಟಪಡಿಸಿದರು.

'ಗ್ಯಾರಂಟಿ ಯೋಜನೆಗಳು ಯಶಸ್ವಿ ಆಗುವುದು ಬಿಜೆಪಿಯವರಿಗೆ ಬೇಕಿಲ್ಲ. ಹೇಗಾದರೂ ಮಾಡಿ ಈ ಯೋಜನೆಗಳನ್ನು ಹತ್ತಿಕ್ಕಲು ಅವರು ಯತ್ನಿಸುತ್ತಿದ್ದಾರೆ' ಎಂದು ಟೀಕಿಸಿದರು.



ಜಿ.ಪರಮೇಶ್ವರ

ಒಪ್ಪಿಕೊಳ್ಳುವುದು ಖಚಿತ: 'ಜಾತಿ ಜನಗಣತಿ ವರದಿಯನ್ನು ನಮ್ಮ ಸರ್ಕಾರ ಖಂಡಿತವಾಗಿಯೂ ಒಪ್ಪಿಕೊಳ್ಳಲಿದೆ. ಈ ವಿಚಾರದಲ್ಲಿ ಯಾವುದೇ ಸಂಶಯ ಬೇಡವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ತಿಳಿಸಿದ್ದಾರೆ' ಎಂದು ಪರಮೇಶ್ವರ ಹೇಳಿದರು.

'ಜಾತಿ ಜನಗಣತಿಯು ವೈಜ್ಞಾನಿಕವಾಗಿ ನಡೆದಿದೆ. ಈ ವರದಿಯನ್ನು ಸಮಯ ನೋಡಿಕೊಂಡು ಮುಖ್ಯಮಂತ್ರಿ ಬಿಡುಗಡೆ ಮಾಡಲಿದ್ದಾರೆ' ಎಂದೂ ತಿಳಿಸಿದರು.

ಶಿಶು ಮಾರಾಟ: ಅಂಗನವಾಡಿ ಕಾರ್ಯಕರ್ತೆ ಅಮಾನತು

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ನವಜಾತ ಶಿಶು ಮಾರಾಟ ಪ್ರಕರಣದಲ್ಲಿ ಮಧ್ಯಸ್ಥಿಕೆ ವಹಿಸಿದ ಆರೋಪದ ಮೇಲೆ ಕುಣಿಗಲ್ ತಾಲ್ಲೂಕಿನ ಕೊತ್ತಗೆರೆ ಅಂಗನವಾಡಿ ಕಾರ್ಯಕರ್ತೆ ಜ್ಯೋತಿ ಅವರನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗಿದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವರದಿ ಆಧಾರದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಕುಣಿಗಲ್ ಆಸ್ಪತ್ರೆಯಲ್ಲಿ ಮಾಗಡಿಯ ಅವಿವಾಹಿತ ಯುವತಿ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಆ ಮಗುವಿನ ಮಾರಾಟಕ್ಕೆ ಮಧ್ಯಸ್ಥಿಕೆ ವಹಿಸಿದ್ದ ಜ್ಯೋತಿ, ಮುಬಾರಕ್ ಎಂಬುವವರಿಗೆ ₹60 ಸಾವಿರಕ್ಕೆ ಮಾರಾಟ ಮಾಡಿಸಿದ್ದರು. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿತ್ತು.

ನಿರ್ವಾಹಕನ ಮೇಲೆ ಹಲ್ಲೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಬಸ್ ಟಿಕೆಟ್ ದರ ಹೆಚ್ಚಳದಿಂದ ಕೋಪಗೊಂಡ ಪ್ರಯಾಣಿಕನೊಬ್ಬ ಕೆಕೆಆರ್‌ಟಿಸಿ ಬಸ್ ನಿರ್ವಾಹಕ ಹನುಮಪ್ಪ ಅವರ ಮೇಲೆ ಹಲ್ಲೆ ನಡೆಸಿದ ಘಟನೆ ತಾಲ್ಲೂಕಿನ ವಿರುಪಾಪುರಗಡ್ಡೆಯ (ಸೇತುವೆ) ಬಳಿ ಸೋಮವಾರ ನಡೆದಿದೆ.


ಹುಲಗಿಯಿಂದ ಗಂಗಾವತಿ ಹೊರಟಿದ್ದ ಕೆಕೆಆರ್‌ಟಿಸಿ ಬಸ್ ಅನ್ನು ವಿಜಯನಗರ ಜಿಲ್ಲೆಯ ಸೀತರಾಮ ತಾಂಡಾದ ನಿವಾಸಿ ಶ್ರೀಧರ ಲಂಬಾಣಿ ಹುಲಗಿಯಲ್ಲಿ ಹತ್ತಿದ್ದಾನೆ. ₹30 ನೀಡಿ ಹನುಮನಹಳ್ಳಿಗೆ ಹೋಗಲು ಟಿಕೆಟ್ ಪಡೆದಿದ್ದಾನೆ. ಹನುಮನಹಳ್ಳಿಗೆ ಮುನ್ನವೇ ವಿರುಪಾಪುರಗಡ್ಡೆ ಬಳಿ ಇಳಿದುಕೊಂಡ ಆತ, ಚಿಲ್ಲರೆ ನೀಡುವಂತೆ ನಿರ್ವಾಹಕರನ್ನು ಕೇಳಿದ್ದಾನೆ.

ಹುಲಗಿಯಿಂದ ಹನುಮನಹಳ್ಳಿ ಗ್ರಾಮಕ್ಕೆ ಟಿಕೆಟ್ ದರ ₹30 ಎಂದು ಹೇಳಿದ ನಿರ್ವಾಹಕನ ಅಂಗಿ ಹಿಡಿದು ಕೆಳಗಿಳಿಸಿದ ಪ್ರಯಾಣಿಕ, 'ಯಾರನ್ನು ಕೇಳಿ ಬಸ್ ಪ್ರಯಾಣ ದರ ಹೆಚ್ಚಿಸಲಾಗಿದೆ' ಎಂದು ಕೆನ್ನೆಗೆ ಹೊಡೆದಿದ್ದಾನೆ. ಅಲ್ಲದೇ ಕಲ್ಲು ಎತ್ತಿಕೊಂಡು ಹಣೆಗೆ ಹೊಡೆದು ಹಲ್ಲೆ ಮಾಡಿದ್ದಾನೆ. ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸತ್ಯ ಶಿವ ಸುಂದರಗಳ ಬೆಳಕು

• ಎಸ್. ಸೂರ್ಯಪ್ರಕಾಶ ಪಂಡಿತ್

ಮನುಷ್ಯನಿಗೆ ಭಯವನ್ನು ಉಂಟುಮಾಡುವಂಥ ಪ್ರಮುಖ ಸಂಗತಿಗಳು ಸಾವು, ನೋವು ಮತ್ತು ಕತ್ತಲು. ಈ ಮೂರರ ಬಗ್ಗೆ ಸರಿಯಾದ ಅರಿವನ್ನು ದಕ್ಕಿಸಿಕೊಂಡರೆ ಆಗ ಅವನ ಬದುಕು ಸತ್ಯ, ಶಿವ ಮತ್ತು ಸುಂದರ ಆಗಬಲ್ಲದು. ಇಂಥದೊಂದು ಸಂದೇಶವನ್ನು ಹೊತ್ತ ಮಹಾಪರ್ವವೇ ಶಿವರಾತ್ರಿ.



ಇಂದು ಶಿವರಾತ್ರಿ

ಶಿವ ಎಂದರೆ ಮಂಗಳಕರ, ಒಳಿತನ್ನು ಉಂಟುಮಾಡುವವನು ಎಂದು ಅರ್ಥ. ಹೀಗಾಗಿಯೇ ಅವನು ನಮ್ಮ ಬದುಕಿನ ಕತ್ತಲು, ಸಾವು ಮತ್ತು ನೋವುಗಳನ್ನು ದೂರ ಮಾಡಬಲ್ಲ. ಸ್ವಾರಸ್ಯ ಎಂದರೆ ಈ ಮೂರು ವಿವರಗಳಿಗೂ ಶಿವನಿಗೂ ನೇರ ನಂಟಿದೆ.

ಶಿವನಿಗಿರುವ ಹಲವು ಹೆಸರುಗಳಲ್ಲಿ 'ರುದ್ರ' ಎಂಬುದೂ ಒಂದು. ಇದರ ಅರ್ಥ 'ಅಳುವನ್ನು ಉಂಟುಮಾಡುವವನು'. ಶಿವನಿಗೇಕೆ ನಮಗೆ ಅಳುವನ್ನುಂಟುಮಾಡುವ ತವಕ? ಅಳುವನ್ನು ಕೊಡುವವನಿಗಷ್ಟೆ ಗೊತ್ತಿರುತ್ತದೆ, ಅದನ್ನು ನಿಲ್ಲಿಸುವ ಪರಿ, ಅಲ್ಲವೆ? ಅಳು ಎಂದರೆ ಅದು ನಮ್ಮ ನೋವಿಗೆ ಒದಗಿದ ಅಭಿವ್ಯಕ್ತಿ. ನಮ್ಮ ನೋವನ್ನು ತಪ್ಪಿಸಬಲ್ಲ, ಅಳುವನ್ನು ನಿಲ್ಲಿಸಬಲ್ಲ ದೈವವೇ ರುದ್ರರೂಪಿಯಾದ ಶಿವ. ನಾವು ಶಿವರಾತ್ರಿಯಂದು ಶಿವನಿಗೆ ಮಾಡುವ ಅಭಿಷೇಕ, ಅದು 'ರುದ್ರಾಭಿಷೇಕ.' ಕೇವಲ ಅಭಿಷೇಕಕ್ಕೇ ಶಿವನು ಒಲಿಯುತ್ತಾನಂತೆ!

ಶಿವನನ್ನು ನಾವು ರಾತ್ರಿಯಲ್ಲಿ ಪೂಜಿಸುತ್ತೇವೆ. ರಾತ್ರಿ ಎಂದರೆ ಕತ್ತಲು ತಾನೆ? ಕತ್ತಲು ರಹಸ್ಯಕ್ಕೂ ಪ್ರಮಾದಕ್ಕೂ ಅಜ್ಞಾನಕ್ಕೂ ಸಂಕೇತವಾಗಬಲ್ಲದು. ಶಿವನ ರಹಸ್ಯವನ್ನು ಅರಿಯುವುದು ಸುಲಭವಲ್ಲ; ಅವನನ್ನು ದೇವತೆಗಳೂ ಆರಾಧಿಸುತ್ತಾರೆ, ಭೂತಗಣ–ರಾಕ್ಷಸಗಣಗಳೂ ಪೂಜಿಸುತ್ತವೆ. ಕತ್ತಲೆಯಲ್ಲಿ ನಮಗೆ ಸರಿಯಾಗಿ ಜಗತ್ತು ಕಾಣದು; ಕತ್ತಲೆಯಲ್ಲಿ ತಪ್ಪುಗಳು ಆಗುವುದು ಸಹಜ; ಇದೇ ಅಜ್ಞಾನ. ಬೆಳಕಿನಲ್ಲಿ ವಸ್ತುವಿವರಗಳು ಚೆನ್ನಾಗಿ ಕಾಣುತ್ತವೆ; ಇದೇ ಜ್ಞಾನ. 'ಶಿವರಹಸ್ಯ' ಎಂದರೆ ಅದು ನಮ್ಮ ಒಳಿತಿನ ರಹಸ್ಯವೂ ಹೌದು. ಪ್ರಮಾದವನ್ನು ಗೆಲ್ಲುವುದರಲ್ಲಿ, ಅಜ್ಞಾನವನ್ನು ನಾಶಮಾಡಿಕೊಳ್ಳುವುದರಲ್ಲಿ ನಮ್ಮ ಒಳಿತಿನ ರಹಸ್ಯ ಅಡಗಿದೆ. ಶಿವರಾತ್ರಿ ಈ ಸಂದೇಶವನ್ನು ನಮಗೆ ಮುಟ್ಟಿಸುತ್ತಿದೆ. ರಾತ್ರಿಯಲ್ಲಿ ಎಚ್ಚರವಾಗಿರುವುದು ಎಂದರೆ ನಿದ್ರೆಗೆ ವಶವಾಗದಿರುವುದು ಎಂದು; ಅಜ್ಞಾನಕ್ಕೆ ಸೋಲದಿರುವುದು; 'ಶವಸ್ಥಿತಿ'ಯನ್ನು ಬಿಟ್ಟು 'ಶಿವಸ್ಥಿತಿ'ಯಲ್ಲಿ ನಮ್ಮ ಭಾವ–ಬುದ್ಧಿಗಳನ್ನು ನೆಲೆಗೊಳಿಸುವುದು. ಇದೇ ಶಿವರಾತ್ರಿಯ ಜಾಗರಣೆಯ ರಹಸ್ಯ. ಕತ್ತಲೆಯಲ್ಲೂ ಕಾಣಬಲ್ಲವನು, ಕತ್ತಲೆಯನ್ನೂ ಬೆಳಕಾಗಿಸಬಲ್ಲವನು ಶಿವ. ಅವನೇ ಜ್ಞಾನಸ್ವರೂಪಿ. ಜ್ಞಾನ ಎಂದರೆ ಬೆಳಕು ತಾನೆ? ಜೀವನವನ್ನು ಸ್ಪಷ್ಟವಾಗಿ ಕಾಣಿಸಬಲ್ಲ ವಿವರಗಳೇ ದಿಟವಾದ ಜ್ಞಾನವಲ್ಲವೆ? ಅದನ್ನು ನೀಡುವವನೇ ಶಿವ. 'ಪ್ರಮಾದಗಳಿಗೆ ಜಾರದಂತೆ ನಮ್ಮನ್ನು ಎಚ್ಚರವಾಗಿರಿಸು' ಎಂದು ಅವನಲ್ಲಿ ಬೇಡಿಕೊಳ್ಳುವುದೇ ಜಾಗರಣೆಯ ದಿಟವಾದ ಉದ್ದೇಶ.

ಮನುಷ್ಯನ ಕೊನೆ ಎಂದರೆ ಸಾವು; ಇದರ ಭಯ ಯಾರಿಗೆ ತಾನೆ ಇರದು? ಆದರೆ ಈ ಭಯದಿಂದ ಬಿಡುಗಡೆ ಸಾಧ್ಯವೆ? ಹೇಗೆ? ಇದಕ್ಕೆ ಉತ್ತರವೇ 'ಶಿವ'. ಅವನು ಮೋಕ್ಷಕಾರಕ. ಮೋಕ್ಷ ಎಂದರೆ ಶಾಶ್ವತ–ಅಶಾಶ್ವತವಾದವುಗಳ ಸರಿಯಾದ ತಿಳಿವಳಿಕೆ; ನಮ್ಮತನದ ಸರಿಯಾದ ತಿಳಿವಳಿಕೆ. ಆನಂದವೇ ಶಾಶ್ವತ; ಅದೇ ನಮ್ಮ ನೆಲೆ; ಅದು ಶಿವನ ಲೀಲೆ – ಎಂಬ ಕಾಣ್ಕೆಯೇ ಮೋಕ್ಷ. ಶಿವನ ತಾಂಡವಕ್ಕೆ ಎರಡು ಆಯಾಮಗಳು: ಲಯ ಮತ್ತು ಸೃಷ್ಟಿ; ಅವನು ನಮ್ಮ ಅಜ್ಞಾನವನ್ನೂ ನಾಶಮಾಡುತ್ತಾನೆ, ನಮ್ಮಲ್ಲಿ ಜ್ಞಾನವನ್ನೂ ಜಾಗರಿತಗೊಳಿಸುತ್ತಾನೆ; ಪ್ರಳಯ ತಾಂಡವ ಮತ್ತು ಆನಂದ ತಾಂಡವ – ಎರಡೂ ಅವನ ಹೆಜ್ಜೆಗಳೇ.

ಶಿವನನ್ನು ಆರಾಧಿಸಲು ಒದಗಿದ ವಿಶೇಷ ಪರ್ವದಿನವೇ ಮಹಾಶಿವರಾತ್ರಿ. ಈಗ ನಡೆಯುತ್ತಿರುವ ಮಹಾಕುಂಭಮೇಳದ ಸಮಾಪ್ತಿ ಆಗುವುದು ಕೂಡ ಶಿವರಾತ್ರಿಯಂದೇ. ದೇವಲೋಕದ ಗಂಗೆಯನ್ನು ಭೂಮಿಗೆ ತಂದವನೇ ಶಿವ. ಗಂಗೆ ನಮ್ಮ ಮೈ–ಮನಗಳಿಗೆ ಅಂಟಿದ ಕೊಳೆಗಳನ್ನು ತೊಳೆದು, ನಮ್ಮಲ್ಲಿರುವ ಶಿವನ ಬೆಳಕನ್ನು ಕಾಣಿಸುವವಳು. ಆ ಬೆಳಕನ್ನು ಕಾಣಬಲ್ಲ ಶಕ್ತಿ ಒದಗಿದರೆ, ಆಗ ನಮ್ಮ ಜೀವನವು ಸತ್ಯ ಶಿವ ಸುಂದರಗಳ ನೆಲೆಯೇ ಹೌದು. ❖



ಸುಭಾಷಿತ

ನೀವು ಸೇವಿಸುವ ಅನ್ನವನ್ನು ಬೇಯಿಸುವ ನೀರು ನಿಮ್ಮ ದುಡಿಮೆಯ ಬೆವರೋ ಬೇರೆಯವರ ಕಣ್ಣೀರೋ?

–ಡಿ.ವಿ.ಗುಂಡಪ್ಪ

ಬೆಂಗಳೂರು ಅಭಿವೃದ್ಧಿಗೆ ಎಸ್‌ಪಿವಿ ರಚನೆ ನಗರಾಡಳಿತ ಮತ್ತಷ್ಟು ಜಟಿಲ?

ಬೆಂಗಳೂರಿನ ಬೃಹತ್ ಮೂಲಸೌಕರ್ಯ ಯೋಜನೆಗಳ ಅನುಷ್ಠಾನ ಮತ್ತು ಮೇಲುಸ್ತುವಾರಿಗಾಗಿ ವಿಶೇಷ ಉದ್ದೇಶ ಘಟಕ (ಎಸ್‌ಪಿವಿ) ಒಂದನ್ನು ಅಸ್ತಿತ್ವಕ್ಕೆ ತರುವ ರಾಜ್ಯ ಸರ್ಕಾರದ ಪ್ರಸ್ತಾವವು ರಾಜಧಾನಿಯ ವ್ಯಾಪ್ತಿಯಲ್ಲಿನ ನಗರಾಭಿವೃದ್ಧಿ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವ ಸದುದ್ದೇಶದಿಂದ ಕೂಡಿದೆ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಆದರೆ, ಇದು ಅಧಿಕಾರ ವಿಭಜನೆಯೊಂದಿಗೆ ಹೊಣೆಗಾರಿಕೆಯನ್ನು ದುರ್ಬಲಗೊಳಿಸುವ ಅಪಾಯವನ್ನೂ ಹೊಂದಿದೆ. ಎಸ್‌ಪಿವಿ ರಚನೆಯ ಕುರಿತು ಚರ್ಚೆಗಳು ಮುಂದುವರಿದಿರುವಂತೆಯೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬಳಿ ಇನ್ನು ಯಾವ ಅಧಿಕಾರ ಉಳಿಯುತ್ತದೆ ಮತ್ತು ನಗರಾಡಳಿತದ ನಿರ್ವಹಣೆಯ ವಿಚಾರದಲ್ಲಿ ಬಿಬಿಎಂಪಿಯ ಪಾತ್ರವೇನು ಎಂಬ ಗಂಭೀರ ಪ್ರಶ್ನೆಗಳು ಉದ್ಭವಿಸುತ್ತವೆ. ಮುಂಬೈ ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಎಂಎಂಆರ್‌ಡಿಎ) ಮಾದರಿಯಲ್ಲಿ ರಚಿಸಲು ಉದ್ದೇಶಿಸಿರುವ ಎಸ್‌ಪಿವಿ ಸ್ಥಾಪನೆಯ ಘೋಷಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂಬರುವ ಬಜೆಟ್‌ನಲ್ಲಿ ಪ್ರಕಟಿಸುವ ಸಾಧ್ಯತೆ ಇದೆ. ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ಎಸ್‌ಪಿವಿಯು ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್‌ಗಳು, ಡಬಲ್ ಡೆಕರ್ ಮಾರ್ಗಗಳ ನಿರ್ಮಾಣ, ರಸ್ತೆಗಳ ವೈಟ್ ಟಾಪಿಂಗ್‌ನಂತಹ ಬೃಹತ್ ಮೂಲಸೌಕರ್ಯ ಯೋಜನೆಗಳ ಅನುಷ್ಠಾನ ಮತ್ತು ಮೇಲುಸ್ತುವಾರಿಯನ್ನು ನಿರ್ವಹಿಸಲಿದೆ. ರಾಜಕೀಯ ಉದ್ದೇಶಗಳಿಗಾಗಿ ಸೃಷ್ಟಿಸಲಾದ ವಿವಿಧ ಸಂಸ್ಥೆಗಳು ಬೆಂಗಳೂರಿನ ನಗರ ಯೋಜನೆ, ಸೇವೆ ಪೂರೈಕೆ, ಸ್ಥಳೀಯ ಸಾರಿಗೆಯಂತಹ ಹೊಣೆಗಾರಿಕೆ ನಿರ್ವಹಣೆಯ ಜವಾಬ್ದಾರಿಗಳನ್ನು ತೆಗೆದುಕೊಂಡಿವೆ. ಪರಿಣಾಮವಾಗಿ, ಬಿಬಿಎಂಪಿಯ ಅಧಿಕಾರ ವ್ಯಾಪ್ತಿ ಮತ್ತು ಜವಾಬ್ದಾರಿಗಳನ್ನು ಹಂತ ಹಂತವಾಗಿ ಕುಗ್ಗಿಸಲಾಗುತ್ತಿದೆ. 2020ರಲ್ಲಿ ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ ಅಸ್ತಿತ್ವಕ್ಕೆ ತರುವ ಮೂಲಕ ಬಿಬಿಎಂಪಿಯ ಅಧಿಕಾರ ವ್ಯಾಪ್ತಿಯನ್ನು ಇನ್ನಷ್ಟು ಕಡಿತಗೊಳಿಸಲಾಗಿತ್ತು. ಈಗ ಬಿಬಿಎಂಪಿಯ ಜವಾಬ್ದಾರಿಯು ಬೆಂಗಳೂರಿನ ರಸ್ತೆಗಳ ನಿರ್ವಹಣೆಗಷ್ಟೇ ಕೇಂದ್ರೀಕರಿಸಿದಂತಿದೆ.



ಅಗತ್ಯವಿರುವ ಸೇವೆಗಳನ್ನು ಸಮರ್ಪಕವಾಗಿ ಒದಗಿಸಲು ಅನುವಾಗುವಂತೆ ಬಿಬಿಎಂಪಿಯನ್ನು ಸಶಕ್ತಗೊಳಿಸಿದಾಗ ಮಾತ್ರ ಬೆಂಗಳೂರು ಒಂದು ಜಾಗತಿಕ ನಗರವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ

ಹೊಸದಾಗಿ ರಚನೆಯಾಗಲಿರುವ ಎಸ್‌ಪಿವಿಗೆ ವಹಿಸಲು ಉದ್ದೇಶಿಸಿರುವ ಜವಾಬ್ದಾರಿಗಳು ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಳಿ ಇವೆ. ಅತ್ಯುತ್ತಮ ಗುಣಮಟ್ಟದ ಮೂಲಸೌಕರ್ಯ ಮತ್ತು ಸುಸ್ಥಿರ ಅಭಿವೃದ್ಧಿಯೊಂದಿಗೆ ಬೆಂಗಳೂರು ನಗರವನ್ನು ಜಾಗತಿಕ ಮಟ್ಟದ ತಾಣವನ್ನಾಗಿ ಪರಿವರ್ತಿಸುವ ಗುರಿಯನ್ನು ಬಿಡಿಎ ಹೊಂದಿದೆ ಎಂಬುದು ಪ್ರಾಧಿಕಾರದ ಧ್ಯೇಯೋದ್ದೇಶಕ್ಕೆ ಸಂಬಂಧಿಸಿದ ಘೋಷಣೆಯಲ್ಲೇ ಇದೆ. ಸಮಗ್ರ ನಗರಾಭಿವೃದ್ಧಿ ಯೋಜನೆಗಳ ಅನುಷ್ಠಾನದ ಉದ್ದೇಶವನ್ನೇ ಮರೆತಂತಿರುವ ಬಿಡಿಎ, ಇತ್ತೀಚಿನ ಕೆಲವು ವರ್ಷಗಳಿಂದ ಬಡಾವಣೆಗಳ ನಿರ್ಮಾಣ ಮತ್ತು ನಿವೇಶನಗಳ ಹಂಚಿಕೆಗೆ ಸೀಮಿತವಾಗಿ ಕೆಲಸ ಮಾಡುತ್ತಿದೆ. ಆ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರಿಯಲ್ ಎಸ್ಟೇಟ್ ಸಂಸ್ಥೆಯಾಗಿ ಬದಲಾಗಿದೆ. ಉದ್ದೇಶಿತ ಎಸ್‌ಪಿವಿ ರಚನೆಯು ಬೆಂಗಳೂರು ನಗರಾಡಳಿತವನ್ನು ಮತ್ತಷ್ಟು ಜಟಿಲಗೊಳಿಸುವ ಸಾಧ್ಯತೆಯೂ ಇದೆ. ಇದು ಮತ್ತೊಂದು ಸ್ತರದ ಅಧಿಕಾರಶಾಹಿಯ ಸೃಷ್ಟಿಗೆ ಕಾರಣವಾಗುವುದಲ್ಲದೆ, ಜವಾಬ್ದಾರಿಗಳ ಪುನರಾವರ್ತನೆ, ಸ್ಪಷ್ಟತೆಯ ಕೊರತೆ ಮತ್ತು ಕಡತ ವಿಲೇವಾರಿಯಲ್ಲಿನ ವಿಳಂಬಕ್ಕೆ ಎಡೆಮಾಡುವ ಸಾಧ್ಯತೆ ಇದೆ. ಇರುವ ವ್ಯವಸ್ಥೆಯನ್ನು ವಿಭಜಿಸಿ ಹೊಸ ಹೊಸ ಸಂಸ್ಥೆಗಳನ್ನು ಸೃಷ್ಟಿಸುವುದರಿಂದ ಬೆಂಗಳೂರಿನ ಭವಿಷ್ಯ ಉತ್ತಮವಾಗುವುದಿಲ್ಲ. ಆಧುನಿಕ ಮಹಾನಗರವೊಂದರ ಸಮಸ್ಯೆ, ಸವಾಲುಗಳನ್ನು ಪರಿಹರಿಸಲು ಸಾಮರ್ಥ್ಯವುಳ್ಳ ಸದೃಢ ಹಾಗೂ ವ್ಯವಸ್ಥಿತವಾದ ನಗರಾಡಳಿತ ವ್ಯವಸ್ಥೆಯು ಬೆಂಗಳೂರಿಗೆ ತುರ್ತಾಗಿ ಬೇಕಿದೆ.

ಎಸ್‌ಪಿವಿ ರಚನೆಯು ತಾತ್ಕಾಲಿಕ ಪರಿಹಾರವಾಗಿ ಕಾಣಿಸಬಹುದು. ಆದರೆ, ಬಿಬಿಎಂಪಿಯ ಪಾತ್ರವನ್ನು ಗೌಣಗೊಳಿಸುವ ಪ್ರಯತ್ನವು ಭವಿಷ್ಯದ ದಿನಗಳಲ್ಲಿ ನಗರದ ಅಭಿವೃದ್ಧಿಗೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಬಹುದು. ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಮತ್ತು ಜವಾಬ್ದಾರಿಗಳ ನಿರ್ವಹಣೆಯಲ್ಲಿ ಬಿಬಿಎಂಪಿಯ ಪಾತ್ರವಿಲ್ಲದಂತೆ ಮಾಡುವ ಬದಲು ಅದನ್ನು ಸಶಕ್ತಗೊಳಿಸುವ ಮೂಲಕ ರಾಜ್ಯ ಸರ್ಕಾರವು ಈ ರೀತಿ ಪರ್ಯಾಯ ಹೊಸ ಸಂಸ್ಥೆಗಳ ರಚನೆಗೆ ಮುಂದಾಗುತ್ತಿರುವುದು [illegible] ಆದರೆ, ಸಂಸ್ಥೆಗಳ ವಿಭಜನೆ ಮತ್ತು ಬಹುಹಂತದ ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸುವುದರಿಂದ ಈ ಸಮಸ್ಯೆ ಪರಿಹಾರವಾಗದು. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಈಗಾಗಲೇ ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಕೊರತೆ ಇದೆ. ಹೀಗೆ ಬಿಬಿಎಂಪಿಯ ಕೆಲಸಗಳನ್ನು ನಿರ್ವಹಿಸಲು ಎಸ್‌ಪಿವಿ ರಚಿಸುವಂತಹ ಕ್ರಮಗಳು ಹೊಣೆಗಾರಿಕೆ ಮತ್ತು ಪಾರದರ್ಶಕತೆ ಮತ್ತಷ್ಟು ಕುಸಿಯಲು ಕಾರಣವಾಗಬಹುದು. ಅಧಿಕಾರಶಾಹಿಯಲ್ಲಿ ಮತ್ತಷ್ಟು ಸ್ತರಗಳನ್ನು ಸೃಷ್ಟಿಸುವ ಬದಲಿಗೆ ಬಿಬಿಎಂಪಿಯಲ್ಲಿ ಸುಧಾರಣೆಗಳನ್ನು ತಂದು, ನಗರಾಡಳಿತವನ್ನು ಬಲಪಡಿಸುವುದಕ್ಕೆ ರಾಜ್ಯ ಸರ್ಕಾರ ಆದ್ಯತೆ ನೀಡಬೇಕು. ಪಾಲಿಕೆಯ ಅಧಿಕಾರಶಾಹಿಯ ಮೇಲೆ ಹಿಡಿತ ಸಾಧಿಸಿ, ಬಿಬಿಎಂಪಿಯ ಕಾರ್ಯನಿರ್ವಹಣೆಯನ್ನು ಸರಿದಾರಿಗೆ ತರಬೇಕು. ನಗರಕ್ಕೆ ಅಗತ್ಯವಿರುವ ಸೇವೆಗಳನ್ನು ಸಮರ್ಪಕವಾಗಿ ಒದಗಿಸಲು ಅನುವಾಗುವಂತೆ ಬಿಬಿಎಂಪಿಯನ್ನು ಸಶಕ್ತಗೊಳಿಸಬೇಕು. ಆಗ ಮಾತ್ರ ಬೆಂಗಳೂರಿನ ನಿಜವಾದ ಸಾಮರ್ಥ್ಯದ ಅರಿವಾಗುತ್ತದೆ ಮತ್ತು ಇದು ಒಂದು ಜಾಗತಿಕ ನಗರವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

ದಿನದ ಟ್ವೀಟ್

ಜಾಗ್ರತೆ ವಹಿಸಿ

ಅಜಾಗರೂಕ ಚಾಲನೆ ಮತ್ತು ಅಜಾಗರೂಕವಾಗಿ ರಸ್ತೆ ದಾಟಿದ್ದು ಈ ಅಪಘಾತಕ್ಕೆ ಕಾರಣ.

(ಚಿತ್ರದುರ್ಗ ಜಿಲ್ಲೆಯಲ್ಲಿ ಕುಟುಂಬವೊಂದರ ಸದಸ್ಯರು ರಾತ್ರಿ ಹೆದ್ದಾರಿ ದಾಟುತ್ತಿದ್ದಾಗ ಕಾರು ಡಿಕ್ಕಿ ಹೊಡೆದು ಮಹಿಳೆಯೊಬ್ಬರು ಸಾವಿಗೀಡಾಗಿರುವುದಕ್ಕೆ ಪ್ರತಿಕ್ರಿಯೆ)



ವಿಘ್ನೇಶ್ ಭಟ್

ಕಿಡಿನುಡಿ

ಪುಂಡಾಟಿಕೆ ಹೀಗೇ ಮುಂದುವರಿದರೆ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಜೈಲಿಗೆ ಅಟ್ಟಬೇಕಾಗುತ್ತದೆ. ನಾವು ಕನ್ನಡಿಗರು ಬೇರೆ ಭಾಷೆಯನ್ನು ಪ್ರೀತಿಸುತ್ತೇವೆ, ಗೌರವಿಸುತ್ತೇವೆ. ಆದರೆ ಈ ರಾಜ್ಯದಲ್ಲಿ ವಾಸವಿರುವ ಅನ್ಯ ಭಾಷಿಕರು ಈ ನೆಲದ ಭಾಷೆ ಮತ್ತು ಕಾನೂನನ್ನು ಗೌರವಿಸಿ, ಪಾಲಿಸಬೇಕು.



ಶಿವರಾಜ್ ಎಸ್. ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ

25 ವರ್ಷಗಳ ಹಿಂದೆ

ಶನಿವಾರ, 26-2-2000

● **ಅಸ್ನೋಟಿಕರ್ ಕೊಲೆ ಸುಳಿವು ನೀಡಿದವರಿಗೆ ಲಕ್ಷ ರೂ.**

ಕಾರವಾರ, ಫೆ. 25– ಕಾಂಗ್ರೆಸ್ ಶಾಸಕ ವಸಂತ ಅಸ್ನೋಟಿಕರ್ ಕೊಲೆಯಾಗಿ ಒಂದು ವಾರ ಕಳೆಯುತ್ತ ಬಂದಿದ್ದರೂ ಈ ಪ್ರಕರಣದ ಪಾತಕಿಗಳ ಬಗೆಗೆ ಪೊಲೀಸರಿಗೆ ಇದುವರೆಗೆ ಯಾವುದೇ ಖಚಿತ ಸುಳಿವು ದೊರೆತಿಲ್ಲ.

ಬಹುಶಃ ಈ ಹಿನ್ನೆಲೆಯಲ್ಲಿಯೇ ಕೊಲೆ ಆರೋಪಿಗಳ ಬಗೆಗೆ ಸುಳಿವು ನೀಡುವ ಸಾರ್ವಜನಿಕರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ನೀಡಲಾಗುವುದು ಎಂದು ಸಿಒಡಿ ಮಹಾನಿರ್ದೇಶಕ ವಿ.ವಿ. ಭಾಸ್ಕರ್ ಪ್ರಕಟಿಸಿದರು.

● **ರೈಲು ಪ್ರಯಾಣ ದರದಲ್ಲಿ ಹೆಚ್ಚಳವಿಲ್ಲ**

ನವದೆಹಲಿ, ಫೆ. 25 (ಯುಎನ್‌ಐ, ಪಿಟಿಐ)– ಪ್ರಯಾಣ ದರಗಳಲ್ಲಿ ಯಾವುದೇ ಹೆಚ್ಚಳವಿಲ್ಲದೆ ಸರಕು ಸಾಗಾಣಿಕೆ ದರವನ್ನು ಪುನರ್ ಪರಿಶೀಲಿಸುವ ಮೂಲಕ ರೈಲ್ವೆಗೆ 600 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಸಂಗ್ರಹಿಸುವ ಗುರಿ ಹೊಂದಿದ ರೈಲ್ವೆ ಮುಂಗಡಪತ್ರವನ್ನು ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ಅವರು ಇಂದು ಲೋಕಸಭೆಯಲ್ಲಿ ಮಂಡಿಸಿದರು.

50 ವರ್ಷಗಳ ಹಿಂದೆ

ಬುಧವಾರ, 26-2-1975

● **ಪಕ್ಷಪಾತ ಆಪಾದನೆ: ಅರಸು ನಿರಾಕರಣೆ**

ಬೆಂಗಳೂರು, ಫೆ. 25– ತಮ್ಮ ಸರ್ಕಾರ ಯಾರ ಬಗ್ಗೆಯೂ ಪಕ್ಷಪಾತ ತೋರಿಲ್ಲವೆಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ವಿಧಾನಪರಿಷತ್ತಿನಲ್ಲಿ ಇಂದು 'ದಾಖಲೆ ಪತ್ರಗಳ ಆಧಾರದೊಂದಿಗೆ' ಪ್ರತಿಪಾದಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ, ತಮ್ಮ ಮೇಲೆ ಹಾಗೂ ತಮ್ಮ ಆಡಳಿತದ ವಿರುದ್ಧ ಆಪಾದನೆಗಳನ್ನು ಮಾಡಿದ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು 'ಹುಲ್ಲಿನ ಮೆದೆಯಲ್ಲಿ ಸೂಜಿಯನ್ನು ಹುಡುಕುವ' ಪ್ರಯತ್ನ ಮಾಡಿದ್ದಾರೆ ಎಂದರು.

● **ಉಪಖಂಡದ ಶಾಂತಿ, ಭದ್ರತೆಗೆ ಧಕ್ಕೆ: ಚವಾಣ್**

ನವದೆಹಲಿ, ಫೆ. 25– ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಪುನರಾರಂಭಿಸುವ ಅಮೆರಿಕದ ನಿರ್ಧಾರವನ್ನು 'ಪ್ರಗತಿ ವಿರೋಧಿ' ಎಂದು ತೀವ್ರವಾಗಿ ಖಂಡಿಸಿದ ವಿದೇಶಾಂಗ ಸಚಿವ ವೈ.ಬಿ. ಚವಾಣ್ ಅವರು, ಇದರಿಂದ ಉಪಖಂಡದಲ್ಲಿ ಶಾಂತಿ, ಸುಭದ್ರತೆಗೆ ಸಹಾಯ ಆಗುವುದಿಲ್ಲವೆಂದು ಒತ್ತಿ ಹೇಳಿದರು.

ಶಸ್ತ್ರಾಸ್ತ್ರ ಸರಬರಾಜು ಕುರಿತ ಹತ್ತು ವರ್ಷಗಳ ನಿಷೇಧ ರದ್ದುಗೊಳಿಸುವ ಅಮೆರಿಕದ ನಿರ್ಧಾರದ ಬಗ್ಗೆ ಇಂದು ಅವರು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಏಕರೀತಿಯ ಹೇಳಿಕೆ ನೀಡಿದರು.

ಜನರ ತೀರ್ಪು ಮತ್ತು ಸುಪ್ರೀಂ ಕೋರ್ಟ್ ಮಾತುಗಳು ಹೊಸ ಆಸೆಯೊಂದನ್ನು ಮೂಡಿಸಿವೆ

ದೆಹಲಿ ಫಲಿತಾಂಶ: ಉಚಿತ ಕೊಡುಗೆ ಅಂತ್ಯ?



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ರಾಜಕೀಯ ಪಕ್ಷಗಳು ಚುನಾವಣೆಗಳ ಸಂದರ್ಭದಲ್ಲಿ ಜನರಿಗೆ ಪ್ರಲೋಭನೆ ಒಡ್ಡುವುದರ ಬಗ್ಗೆ ಸುಪ್ರೀಂ ಕೋರ್ಟ್ ಈಚೆಗೆ ಆಡಿರುವ ಮಾತುಗಳು ಹಾಗೂ ದಶಕದ ಹಿಂದೆ ಉಚಿತ ಕೊಡುಗೆಗಳ ಸಂಸ್ಕೃತಿಯನ್ನು ಪಸರಿಸಿದ ಆಮ್ ಆದ್ಮಿ ಪಕ್ಷವು (ಎಎಪಿ) ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವುದು, ಮತದಾರರಿಗೆ ಲಂಚ ನೀಡುವ ಪ್ರವೃತ್ತಿಯನ್ನು ಕೊನೆಗೊಳಿಸಲು ನ್ಯಾಯಾಲಯ ಅಥವಾ ಜನಸಮೂಹ ಮುಂದಾಗುತ್ತದೆ ಎಂಬ ಸಣ್ಣ ಆಸೆಯೊಂದನ್ನು ಮೂಡಿಸಿದೆ. ಉಚಿತ ಕೊಡುಗೆಗಳು ದೇಶದ ಅರ್ಥ ವ್ಯವಸ್ಥೆಯನ್ನು ಖಂಡಿತವಾಗಿಯೂ ಹಾಳುಮಾಡುತ್ತವೆ.

ಉಚಿತ ಕೊಡುಗೆಗಳ ಘೋಷಣೆ ಇದ್ದರೂ ದೆಹಲಿಯ ಜನ ಎಎಪಿಯನ್ನು ತಿರಸ್ಕರಿಸಿದ್ದಾರೆ. ಆರ್ಥಿಕವಾಗಿ ಅಪಾಯಕಾರಿಯಾಗಿರುವ ಇಂತಹ ಕೊಡುಗೆಗಳನ್ನು ನೀಡುವುದರ ವಿರುದ್ಧ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ತೀಕ್ಷ್ಣ ಮಾತುಗಳನ್ನು ಆಡಿದ್ದಾರೆ. 'ಪರಾವಲಂಬಿ ವರ್ಗವನ್ನು ಸೃಷ್ಟಿಸುತ್ತಿವೆ' ಎಂದು ಗವಾಯಿ ಅವರು ರಾಜಕೀಯ ಪಕ್ಷಗಳಿಗೆ ಛೀಮಾರಿ ಹಾಕಿದ್ದಾರೆ. ವೈಯಕ್ತಿಕವಾಗಿ ಕಂಡಿರುವುದನ್ನು ಆಧರಿಸಿ ಕೆಲವು ಮಾತು ಹೇಳಿರುವ ಅವರು, ಉಚಿತ ಕೊಡುಗೆಗಳು ಜನ ಕೆಲಸ ಮಾಡುವುದನ್ನು ನಿರುತ್ತೇಜಿಸುತ್ತಿವೆ ಎಂದಿದ್ದಾರೆ. ಇಂತಹ ಪ್ರಲೋಭನೆಗಳ ಕಾರಣದಿಂದಾಗಿ ಮಹಾರಾಷ್ಟ್ರದಲ್ಲಿ ಕಾರ್ಮಿಕರ ಸಂಖ್ಯೆ ಕಡಿಮೆ ಆಗುತ್ತಿದೆ ಎಂದಿದ್ದಾರೆ. ಲಾಡ್ಕಿ ಬಹೀಣ್‌ನಂತಹ ಯೋಜನೆಗಳ ಕಾರಣದಿಂದಾಗಿ ಜನ ಕೆಲಸ ಮಾಡಲು ಮನಸ್ಸು ಮಾಡುತ್ತಿಲ್ಲ. ಕೆಲಸ ಮಾಡದೆಯೇ ಅವರಿಗೆ ಉಚಿತ ಪಡಿತರ ಮತ್ತು ಹಣ ಸಿಗುತ್ತಿದೆ. ಇದರ ಪರಿಣಾಮವಾಗಿ ಕಾರ್ಮಿಕರ ಕೊರತೆ ಉಂಟಾಗಿದೆ ಎಂದಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಘೋಷಿಸುವ ಇಂತಹ ಪ್ರಲೋಭನೆಗಳ ವಿಚಾರದಲ್ಲಿ ನ್ಯಾಯಮೂರ್ತಿಯವರು ಹಿಂದೆಯೂ ತೀಕ್ಷ್ಣವಾಗಿ ಮಾತನಾಡಿದ್ದಿದೆ. ಯಾವುದೇ ಕೆಲಸ ಮಾಡದೆ ಇರುವವರಿಗೆ ಕೊಡಲು ಸರ್ಕಾರಗಳ ಬಳಿ ಹಣವಿರುತ್ತದೆ, ಆದರೆ ನ್ಯಾಯಾಂಗದ ಅಧಿಕಾರಿಗಳಿಗೆ ಪಿಂಚಣಿ, ವೇತನ ನೀಡುವಾಗ ಹಣದ ಕೊರತೆ ಉಂಟಾಗುತ್ತದೆ ಎಂದು ಅವರು ಈಚೆಗೆ ಒಮ್ಮೆ ಹೇಳಿದ್ದರು.

ಉಚಿತ ಕೊಡುಗೆಗಳ ಸಂಸ್ಕೃತಿಯನ್ನು ತಮಿಳುನಾಡಿನ ರಾಜಕೀಯ ಪಕ್ಷಗಳು ಎರಡು ದಶಕಗಳ ಹಿಂದೆ ಹುಟ್ಟುಹಾಕಿದವು. ಮತದಾರರಿಗೆ ಟಿ.ವಿ., ಮಿಕ್ಸರ್, ಕಂಪ್ಯೂಟರ್, ಲ್ಯಾಪ್‌ಟಾಪ್, ಮನೆಬಳಕೆಯ ಕೆಲವು ಉಪಕರಣಗಳು, ಉಚಿತ ಪಡಿತರದಂತಹ ಕೊಡುಗೆಗಳನ್ನು ಅವು ನೀಡಲಾರಂಭಿಸಿದವು. ಈ ಕಾಯಿಲೆಯು ನೆರೆಯ ಕರ್ನಾಟಕ, ಕೇರಳ ಸೇರಿದಂತೆ ಇತರ ರಾಜ್ಯಗಳಿಗೆ ಬಹುಕಾಲ ಹಬ್ಬಿರಲಿಲ್ಲ. ಆದರೆ ಅರವಿಂದ ಕೇಜ್ರಿವಾಲ್ ಅವರು ರಾಜಕೀಯ ಪ್ರವೇಶಿಸಿದ ನಂತರ ಅದು ಬದಲಾಯಿತು. ಅವರ ಎಎಪಿಯು 2014ರಲ್ಲಿ 200 ಯೂನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಬಸ್ಸುಗಳಲ್ಲಿ ಉಚಿತ ಪ್ರಯಾಣ, ಮಹಿಳೆಯರಿಗೆ ಹಣದ ನೆರವಿನ ಮೂಲಕ ದೆಹಲಿಯ ಮತದಾರರನ್ನು ಸೆಳೆಯಿತು. ಈ ಪ್ಯಾಕೇಜ್ ಅದೆಷ್ಟು ಆಕರ್ಷಕವಾಗಿತ್ತೆಂದರೆ, ಎಎಪಿಯು ದೆಹಲಿ ವಿಧಾನಸಭೆಯ 70 ಸೀಟುಗಳ ಪೈಕಿ 67 ಸೀಟುಗಳನ್ನು ಗೆದ್ದುಕೊಂಡಿತು. ಎಎಪಿಯು ಬಿಜೆಪಿಗಿಂತ ಶೇಕಡ 22ರಷ್ಟು ಹೆಚ್ಚು ಮತಗಳನ್ನು ಗಳಿಸಿತು, ಚುನಾವಣಾ ಇತಿಹಾಸ ಸೃಷ್ಟಿಸಿತು. ಆಗ ಕಾಂಗ್ರೆಸ್ ಒಂದು ಸ್ಥಾನವನ್ನೂ ಗೆಲ್ಲಲಿಲ್ಲ.

ಮತದಾರರನ್ನು ಸೆಳೆಯುವ ಇಂತಹ ಯೋಜನೆಗಳನ್ನು ಎಎಪಿಯು 2019ರ ವಿಧಾನಸಭಾ ಚುನಾವಣೆಯಲ್ಲಿಯೂ ಮುಂದುವರಿಸಿತು. ಆಗ ಅದು 70 ಸ್ಥಾನಗಳ ಪೈಕಿ 62ರಲ್ಲಿ ಗೆಲುವು ಸಾಧಿಸಿತು. 2014ರಲ್ಲಿ ಮೂರು ಸ್ಥಾನ ಗೆದ್ದುಕೊಂಡಿದ್ದ ಬಿಜೆಪಿಯು 2019ರಲ್ಲಿ ಎಂಟು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು. ಆದರೆ ಎಎಪಿಗೆ ಹೋಲಿಸಿದಾಗ ಬಹಳ ಹಿಂದಿತ್ತು. ಕಳೆದ ಹತ್ತು ವರ್ಷಗಳಲ್ಲಿ ದೆಹಲಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ಸಿನ ಪರಿಸ್ಥಿತಿ ಹೇಗಿತ್ತೆಂದರೆ, ಎಎಪಿ ನೀಡುವ ಕೊಡುಗೆಗಳಿಗೆ ಪ್ರತಿಯಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಕೂಡ ಅಂಥ ಕೊಡುಗೆಗಳನ್ನು ಘೋಷಿಸದೇ ಇದ್ದರೆ ಅವು ಮತ್ತೆ ಪುಟಿದೇಳಲು ಸಾಧ್ಯವೇ ಇಲ್ಲ ಎಂಬಂತೆ ಅನ್ನಿಸುತ್ತಿತ್ತು. ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಹಿನ್ನಡೆ ಮುಂದುವರಿಯಿತಾದರೂ, ಅದರ ನಾಯಕರು ಹೊಸ ಕಾರ್ಯತಂತ್ರ ರೂಪಿಸಿದರು. ಪಕ್ಷವು ಕರ್ನಾಟಕದಲ್ಲಿ ಉಚಿತ ಕೊಡುಗೆಗಳ ದೊಡ್ಡ ಯೋಜನೆಯನ್ನು ರೂಪಿಸಿತು. 2023ರಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿತು. ಮಹಿಳೆಯರಿಗೆ ತಿಂಗಳಿಗೆ ₹2,000, ಅವರಿಗೆ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮತ್ತು ಮನೆಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಘೋಷಣೆಗಳ ಮೂಲಕ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಸೋಲಿಸಿತು. ಈ ಘೋಷಣೆಗಳಲ್ಲದೆ ಇತರ ಕೆಲವು ಘೋಷಣೆಗಳೂ ಇದ್ದವು.

ದೆಹಲಿಯಲ್ಲಿ ಎಎಪಿ ಎದುರು ಹಾಗೂ ಕರ್ನಾಟಕದಲ್ಲಿ ಕಾಂಗ್ರೆಸ್ ಎದುರು ಸೋಲು ಕಂಡ ಬಿಜೆಪಿಯು ಆ ಪಕ್ಷಗಳ ಮಾದರಿಯನ್ನು ತಾನೂ ಅನುಕರಿಸದೇ ಇದ್ದರೆ ಜನರ ಎದುರು ತೊಂದರೆ ಎದುರಿಸಬೇಕಾಗುತ್ತದೆ ಎಂದು ಭಾವಿಸಿತು. ಇದರ ಪರಿಣಾಮವಾಗಿ ಬಿಜೆಪಿ ಕೂಡ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಮತ್ತು ತೆಲಂಗಾಣದಲ್ಲಿ ಉಚಿತ ಕೊಡುಗೆಗಳ ಘೋಷಣೆ ಮಾಡಿತು. 2023ರ ನವೆಂಬರ್‌ನಲ್ಲಿ ನಡೆದ ಈ ರಾಜ್ಯಗಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯು ಲಾಡ್ಲಿ ಲಕ್ಷ್ಮಿ ಯೋಜನೆ (ಮಹಿಳೆಯರಿಗೆ ತಿಂಗಳಿಗೆ ₹1,250 ಕೊಡುವ ಯೋಜನೆ), ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳಿಗೆ ಸ್ಕೂಟಿ ನೀಡುವಂತಹ ಘೋಷಣೆಗಳನ್ನು ಮಾಡಿತು.

ಬಡವರ ಜೀವನಮಟ್ಟವನ್ನು ಸುಧಾರಿಸಲು ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂವಿಧಾನದ ನಿರ್ದೇಶನ ತತ್ವಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಹೇಳುತ್ತವೆ. ಅಂತಹ ಕ್ರಮಗಳು ಜಾರಿಯಲ್ಲಿ ಇವೆ. ಆದರೆ ಎಎಪಿಯು ಎಲ್ಲ ವರ್ಗಗಳ ಮಹಿಳೆಯರಿಗೂ ಅನ್ವಯವಾಗುವಂತಹ ಉಚಿತ ಬಸ್ ಪ್ರಯಾಣ, ತಿಂಗಳಿಗೊಮ್ಮೆ ಹಣಕಾಸಿನ ನೆರವು ಮುಂತಾದ ಘೋಷಣೆಗಳನ್ನು ಮಾಡಿತು. ಇದೇ ಮಾದರಿಯನ್ನು ಕರ್ನಾಟಕದಲ್ಲಿ ಅನುಕರಿಸಿದ ಕಾಂಗ್ರೆಸ್, ಮಹಿಳೆಯರಿಗೆಲ್ಲರಿಗೂ ಉಚಿತ ಬಸ್ ಪ್ರಯಾಣ ಸೌಲಭ್ಯ, ತಿಂಗಳಿಗೊಮ್ಮೆ ಆರ್ಥಿಕ ನೆರವು, ಎಲ್ಲ ಕುಟುಂಬಗಳಿಗೆ ತಿಂಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ಘೋಷಣೆಗಳನ್ನು ಮಾಡಿತು. ಕಾಂಗ್ರೆಸ್ ಮತ್ತು ಎಎಪಿಯ ಹಾದಿಯಲ್ಲಿ ಬಿಜೆಪಿ ಹಾಗೂ ಇತರ ರಾಜಕೀಯ ಪಕ್ಷಗಳೂ ಸಾಗಿದವು. 2024ರ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಇದೇ ಬಗೆಯ ಘೋಷಣೆಗಳು ಬಂದವು. ಈ ಎರಡು ರಾಜ್ಯಗಳಲ್ಲಿ ಬಿಜೆಪಿ ಸಾಧಿಸಿದ ಯಶಸ್ಸು, ಉಚಿತ ಕೊಡುಗೆಗಳು ಬೊಕ್ಕಸವನ್ನು ಬರಿದು ಮಾಡುವ ಯೋಜನೆಗಳಾದರೂ ಅವು ಅನಿವಾರ್ಯ ಎಂಬುದನ್ನು ಖಚಿತಪಡಿಸಿದಂತೆ ಇತ್ತು.

ಆದರೆ ಈ ಮೊದಲೇ ಉಲ್ಲೇಖಿಸಿರುವಂತೆ 2025ರಲ್ಲಿ ಆಗಿರುವ ಎರಡು ಬೆಳವಣಿಗೆಗಳು ಮತದಾರರ ಮುಂದೆ ಇರಿಸುವ ಪ್ರಲೋಭನೆಗಳನ್ನು ನಿಲ್ಲಿಸಲು ಆಗದಿದ್ದರೂ ಅವುಗಳನ್ನು ಕಡಿಮೆ ಮಾಡಬಹುದು ಎಂಬ ಭರವಸೆ ಮೂಡಿಸಿವೆ. ದೆಹಲಿಯಲ್ಲಿ ಎಎಪಿ ಕಂಡಿರುವ ಸೋಲು ಮೊದಲ ಭರವಸೆಯನ್ನು ಮೂಡಿಸಿದೆ. ಎರಡನೆಯ ಭರವಸೆ, ನ್ಯಾಯಮೂರ್ತಿ ಗವಾಯಿ ಅವರು ಎಗ್ಗಿಲ್ಲದ ಈ ಉಚಿತ ಕೊಡುಗೆಗಳ ಬಗ್ಗೆ ಆಡಿರುವ ಮಾತುಗಳು. ಉಚಿತ ಕೊಡುಗೆಗಳಿಗೆ ಸಂಬಂಧಿಸಿದ ವಿಚಾರವು ಸುಪ್ರೀಂ ಕೋರ್ಟ್‌ನ ಇನ್ನೊಂದು ಪೀಠದ ಮುಂದಿದೆ. ಕೊಡುಗೆಗಳ ಪರವಾಗಿ ಹಾಗೂ ವಿರುದ್ಧವಾಗಿ ಇರುವವರು ಬಲವಾಗಿ ವಾದ ಮಂಡಿಸುತ್ತಾರೆ ಎಂಬುದು ನಿಜ. ಬಡತನದ ನಿರ್ಮೂಲನೆಗೆ ಹಾಗೂ ಜನರ ಜೀವನಮಟ್ಟ ಸುಧಾರಣೆಗೆ ಸಂವಿಧಾನವು ಸರ್ಕಾರಗಳಿಗೆ ನೀಡಿರುವ ಸಲಹೆಯನ್ನು ಕೋರ್ಟ್ ಯಾವ ರೀತಿ ಗ್ರಹಿಸುತ್ತದೆ ಎಂಬುದರ ಮೇಲೆ ಹೆಚ್ಚಿನ ಅಂಶಗಳು ತೀರ್ಮಾನವಾಗಲಿವೆ.



ಚುರುಮುರಿ



ಬೆಟ್ಟಗಳ ಕುಶಲೋಪರಿ

● ಮಣ್ಣೆ ರಾಜು

ದುರ್ಗಿ ಬೆಟ್ಟಕ್ಕೆ ಬೆಂಕಿ ಬಿದ್ದ ವಿಚಾರ ಕೇಳಿ ಇತರ ಬೆಟ್ಟಗಳು ಮರುಕಪಟ್ಟವು. ದುರ್ಗಿ ಬೆಟ್ಟಕ್ಕೆ ವಿಡಿಯೊ ಕಾಲ್ ಮಾಡಿ ಆರೋಗ್ಯ ವಿಚಾರಿಸಿದವು, ಅದರ ಸುಟ್ಟ ಗಾಯಗಳನ್ನು ನೋಡಿ ಸಂಕಟಪಟ್ಟವು.

'ಈಗ ಆರೋಗ್ಯ ಹೇಗಿದೆ? ಬೆಂಕಿ ಆರಿದೆಯೇ?' ನಂದಿನಿ ಬೆಟ್ಟ ಕೇಳಿತು.

'ಬೆಂಕಿ ಆರಿದೆ, ಕಾವು, ನೋವು ಆರಿಲ್ಲ. ನೀನು ಹುಷಾರು, ಬೇಸಿಗೆಯಲ್ಲಿ ಬೆಂಕಿ ಹಚ್ಚುವ ಕಿಡಿಗೇಡಿಗಳಿರುತ್ತಾರೆ' ನರಳುತ್ತಾ ಹೇಳಿತು ದುರ್ಗಿ ಬೆಟ್ಟ.

'ಹಿಂದೆ, ನನ್ನ ಬುಡಕ್ಕೂ ಬೆಂಕಿ ಬಿದ್ದಿತ್ತು. ಸುಟ್ಟ ಗಾಯದ ಕಲೆ ಇನ್ನೂ ಹಾಗೇ ಇದೆ. ಕಿಡಿ ಹಚ್ಚುವ ಕಿಡಿಗೇಡಿಗಳಿಗೆ ಕಡಿವಾಣ ಹಾಕುವವರಿಲ್ಲವೇ?' ನಂದಿನಿ ಬೆಟ್ಟಕ್ಕೆ ಕೋಪ.

'ಕಾಡುಪ್ರಾಣಿಗಳು ಯಾವತ್ತೂ ನಮಗೆ ತೊಂದರೆ ಮಾಡಿಲ್ಲ, ನಾಡಪ್ರಾಣಿಗಳೇ ಅಪಾಯಕಾರಿ' ಶಿವಲೀಲಾ ಬೆಟ್ಟ ಹೇಳಿತು.

'ನಮಗೆ 'ಧ್ವನಿ' ಇದ್ದಿದ್ದರೆ, 'ಕಿಡಿ'ಗೇಡಿಗಳಿಗೆ ಶಿಕ್ಷೆ ಆಗಬೇಕು, ಪ್ರತಿ ಬೆಟ್ಟದಲ್ಲೂ ಫೈರ್ ಸ್ಟೇಷನ್, ಪೊಲೀಸ್ ಸ್ಟೇಷನ್ ಸ್ಥಾಪಿಸಬೇಕು ಅಂತ ಹೋರಾಟ ಮಾಡಿ ಸರ್ಕಾರವನ್ನು ಒತ್ತಾಯಿಸಬಹುದಿತ್ತು' ಕೃಷ್ಣಗಿರಿ ಬೆಟ್ಟ ನೊಂದುಕೊಂಡಿತು.

'ಶಿಶಿರಗಿರಿ ಬೆಟ್ಟ ಇತ್ತೀಚೆಗೆ ಫೋನ್ ಮಾಡಲಿಲ್ಲ, ಆ ಬೆಟ್ಟ ಆರೋಗ್ಯವಾಗಿದೆಯೇ?' ದುರ್ಗಿ ಬೆಟ್ಟ ವಿಚಾರಿಸಿತು.

'ಇನ್ನೆಲ್ಲಿ ಶಿಶಿರಗಿರಿ ಬೆಟ್ಟ, ಅದರ ಆಯುಷ್ಯ ಮುಗಿದೋಯ್ತು. ಹೋದ ವರ್ಷ ಕಲ್ಲುಗಣಿಗಾರಿಕೆಯವರು ಬೆಟ್ಟವನ್ನು ಪುಡಿ ಮಾಡಿ ನಾಮಾವಶೇಷ ಮಾಡಿದರು. ಶಿಶಿರಗಿರಿ ಬೆಟ್ಟ ಇನ್ನು ನೆನಪು ಮಾತ್ರ' ಕೃಷ್ಣಗಿರಿ ಬೆಟ್ಟ ದುಃಖಿಸಿತು.

'ದೇವಸ್ಥಾನವಿದ್ದರೆ ಯಾರೂ ಬೆಟ್ಟದ ಸಹವಾಸಕ್ಕೆ ಬರೋಲ್ಲ ಅಂತ ಹಿಂದಿನವರು ಬೆಟ್ಟದ ಮೇಲೆ ದೇವಸ್ಥಾನ ಕಟ್ಟುತ್ತಿದ್ದರು. ಶಿಶಿರಗಿರಿ ಬೆಟ್ಟದ ಮೇಲೂ ದೇವಸ್ಥಾನ ಇತ್ತಲ್ವಾ?'

'ಇತ್ತು, ದೇವಸ್ಥಾನವನ್ನು ಸ್ಥಳಾಂತರಿಸಿ ಬೆಟ್ಟವನ್ನು ಒಡೆದರು. ದೇಶದ ಅಭಿವೃದ್ಧಿಗಾಗಿ ಕಟ್ಟಡ, ರಸ್ತೆ ನಿರ್ಮಾಣ ಮಾಡಲು ಕಲ್ಲು, ಜಲ್ಲಿಗಾಗಿ ಬೆಟ್ಟಗಳನ್ನು ಒಡೆಯುವುದು ಅನಿವಾರ್ಯವಂತೆ!'

ನಿಟ್ಟುಸಿರುಬಿಟ್ಟ ದುರ್ಗಿ ಬೆಟ್ಟ, 'ನಮ್ಮಗಳ ಆಯುಷ್ಯ ಎಷ್ಟಿದೆಯೋ...' ಎಂದು ವಿಡಿಯೊ ಕಾಲ್ ಕಟ್ ಮಾಡಿತು.

ಸಂಗತ

ಪೋಷಕರ ಸಹಭಾಗಿತ್ವ: ಬಹುಮುಖಿ ಪರಿಣಾಮ

ಪೋಷಕರು– ಶಿಕ್ಷಕರ ಸೌಹಾರ್ದ ಭೇಟಿಗಳು ಹೆಚ್ಚಿದಷ್ಟೂ ವಿದ್ಯಾರ್ಥಿಗಳಲ್ಲಿ ಶಿಸ್ತು, ಕಲಿಕೆ, ಸದ್ವರ್ತನೆಯ ಗುಣಗಳು ಸಹಜವಾಗಿ ಉತ್ತಮಗೊಳ್ಳುತ್ತವೆ

● ಎಚ್.ಬಿ.ಚಂದ್ರಶೇಖರ್

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ, ಪೋಷಕ, ವಿದ್ಯಾರ್ಥಿಗಳನ್ನು ಒಳಗೊಂಡ ತ್ರಿಕೋನವು ಪ್ರಮುಖ ಪಾತ್ರ ವಹಿಸುತ್ತದೆ. ಈ ತ್ರಿಕೋನವು ಸಮಬಾಹು ತ್ರಿಕೋನವಾಗಿದ್ದು, ಎಲ್ಲ ಮೂರು ಬಾಹುಗಳೂ ಸಮಾನ ಪಾತ್ರ, ಜವಾಬ್ದಾರಿ ವಹಿಸಿದಲ್ಲಿ ಮಾತ್ರ ವಿದ್ಯಾರ್ಥಿಯ ಅಭಿವೃದ್ಧಿ ಸಾಧ್ಯ.

ಹೆಚ್ಚಿನ ವೇಳೆ ತಮ್ಮ ಮಕ್ಕಳನ್ನು ಶಾಲೆ, ಕಾಲೇಜಿಗೆ ಸೇರಿಸುವುದಕ್ಕೆ ಮಾತ್ರ ಪೋಷಕರ ಜವಾಬ್ದಾರಿ ಸೀಮಿತವಾಗಿರುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗೆಗಿನ ಮಾಹಿತಿಯು ಪ್ರಗತಿ ಪತ್ರದ ಮೂಲಕ ಆಗಾಗ್ಗೆ ಪೋಷಕರಿಗೆ ತಿಳಿಯುತ್ತದೆ. ಕಡಿಮೆ ಅಂಕ ಬಂದಾಗ ಮಾತ್ರ ಕೆಲ ಪೋಷಕರು ಶಿಕ್ಷಕರನ್ನು ಭೇಟಿಯಾಗಿ ತಮ್ಮ ಆತಂಕವನ್ನು ಹೊರಹಾಕುತ್ತಾರೆ. ಇನ್ನು ಪೋಷಕರು ಶಾಲೆಗೆ ಬಂದರೆ ಶಾಲೆಯ ಶೈಕ್ಷಣಿಕ ಸಮಯ ನಷ್ಟ, ಅದರಿಂದ ಹೆಚ್ಚಿನ ಉಪಯೋಗವಾಗದು ಎಂಬ ಧೋರಣೆ ಕೆಲ ಶಾಲೆಗಳದ್ದಾಗಿರುತ್ತದೆ. ತಾವು ಸಭೆಗಳನ್ನು ಆಯೋಜಿಸಿದರೂ ಬೆರಳೆಣಿಕೆಯಷ್ಟು ಪೋಷಕರು ಮಾತ್ರ ಹಾಜರಾಗುತ್ತಾರೆ ಎಂಬ ದೂರು ಸಾಮಾನ್ಯವಾಗಿ ಹೆಚ್ಚಿನ ಶಾಲೆಗಳದ್ದಾಗಿರುತ್ತದೆ.

ಈ ಶೈಕ್ಷಣಿಕ ಸಾಲಿನಲ್ಲಿ ಪೋಷಕರನ್ನು ಶಾಲೆಗೆ ಆಹ್ವಾನಿಸಿ, ವ್ಯವಸ್ಥಿತವಾಗಿ ಸಭೆ ನಡೆಸುವುದರ ಪ್ರಾಮುಖ್ಯ ಹಾಗೂ ವಿಧಾನದ ಕುರಿತು ಶಿಕ್ಷಕರನ್ನು ಸಜ್ಜುಗೊಳಿಸುವ ಉಪಕ್ರಮವೊಂದನ್ನು ಶಿಕ್ಷಣ ಇಲಾಖೆಯು ಬೆಂಗಳೂರು ನಗರ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಆಯೋಜಿಸಿತ್ತು. ಈ ಸಂಬಂಧ, ವರ್ಷದಲ್ಲಿ ಮೂರು ಬಾರಿ ಪೋಷಕರ ಸಭೆಗಳನ್ನು ಯಾವ ರೀತಿ ನಡೆಸಬೇಕು ಎಂಬ ಬಗ್ಗೆ ವಿಸ್ತೃತ ಮಾರ್ಗಸೂಚಿಯ ಸಹಿತ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿತ್ತು.


ಪೋಷಕರ ಸಭೆಗಳಿಗೆ ಪೋಷಕರು ಸರಿಯಾಗಿ ಹಾಜರಾಗುವುದಿಲ್ಲ ಎಂಬ ಸಾಮಾನ್ಯ ಧೋರಣೆಗೆ ವಿರುದ್ಧವಾದ ಅಭಿಪ್ರಾಯವನ್ನು ಇತ್ತೀಚೆಗೆ ನಡೆದ ಆಯ್ದ ಶಾಲೆಗಳ ಶಿಕ್ಷಕರ ಅನುಭವ ಹಂಚಿಕೆ ಸಭೆಯಲ್ಲಿ ಶಿಕ್ಷಕರು ಹಂಚಿಕೊಂಡದ್ದು ವಿಶೇಷವೆನಿಸಿತು. ಪೋಷಕರನ್ನು ತೊಡಗಿಸಿಕೊಳ್ಳುವ ದಿಸೆಯಲ್ಲಿ ಶಾಲೆಗಳು ಕೈಗೊಂಡ ನವೀನ ಪ್ರಯತ್ನಗಳ ಫಲವಾಗಿ ಸಭೆಗಳಿಗೆ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ಸಕ್ರಿಯವಾಗಿ ಪಾಲ್ಗೊಂಡರು. ಮೊದಲ ಪೋಷಕರ ಸಭೆಯಲ್ಲಿ ಶೇ 20ರಿಂದ ಶೇ 30ರಷ್ಟು ಪೋಷಕರ ಹಾಜರಾತಿ ಇದ್ದದ್ದು, ಎರಡು ಮತ್ತು ಮೂರನೇ ಸಭೆಗಳಲ್ಲಿ ಕ್ರಮವಾಗಿ ಶೇ 60 ಹಾಗೂ ಶೇ 90ಕ್ಕಿಂತ ಹೆಚ್ಚಾಗಿದ್ದ ಬಗ್ಗೆ ಶಿಕ್ಷಕರು ಆಸಕ್ತಿ, ಉತ್ಸಾಹದಿಂದ ವಿವರಿಸಿದರು.

ಪೋಷಕರ ಸಭೆಗೆ ವಿಶೇಷವಾಗಿ ಸಿದ್ಧಪಡಿಸಿದ ಚಂದದ ಆಹ್ವಾನಪತ್ರಗಳನ್ನು ಮಕ್ಕಳ ಮೂಲಕ ಕಳುಹಿಸಿ, ಹಾಜರಾಗಲು ಶಿಕ್ಷಕರು ಮಾಡಿದ್ದ ಪ್ರೀತಿಯ ಮನವಿಗೆ ಪೋಷಕರು ಓಗೊಡದೇ ಇರಲಾಗಲಿಲ್ಲ. ಪೋಷಕರು ಶಾಲೆಗೆ ಬಂದಾಗ ಅವರಿಗೆ ಗುಲಾಬಿ ಹೂ ನೀಡಿ ಸ್ವಾಗತಿಸಿ, ಹಾಜರಾದ ಪೋಷಕರ ಭಾವಚಿತ್ರಗಳನ್ನು 'ಶಾಲೆಯ ಕೃತಜ್ಞತಾ ಫಲಕ'ದಲ್ಲಿ ಪ್ರಕಟಿಸಲಾಯಿತು. ಹಾಜರಾಗದೇ ಇದ್ದ ಪೋಷಕರಿಗೆ ಆ ಸುದ್ದಿ ತಲುಪಿ, ತಾವೂ ಮುಂದಿನ ಪೋಷಕರ ಸಭೆಗೆ ಹಾಜರಾಗಬೇಕು ಎಂಬ ಸಂಕಲ್ಪ ಮಾಡುವಂತೆ ಪ್ರೇರೇಪಿಸಿತು.

ಒಂದು ಶಾಲೆಯಂತೂ ಪೋಷಕರಿಗಾಗಿ ಆಹಾರ ಮೇಳ, ಥ್ರೋಬಾಲ್, ಮ್ಯೂಸಿಕಲ್ ಚೇರ್ ಆಟದಂತಹ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿತ್ತು. ಈ ಮೂಲಕ ಪೋಷಕರ ದುಗುಡವನ್ನು ಕಡಿಮೆ ಮಾಡಿ, ಅವರಲ್ಲಿ ಆಸಕ್ತಿ, ಹುಮ್ಮಸ್ಸು, ಉತ್ಸಾಹ, ಸಂತಸ ಉಂಟಾಗುವಂತೆ ಕ್ರಮ ಕೈಗೊಂಡಿತು.

ಇನ್ನೊಂದು ಶಾಲೆಯಲ್ಲಿ 'ಪೋಷಕರ ಪ್ರತಿಭಾನ್ವೇಷಣೆ' ಕಾರ್ಯಕ್ರಮ ಆಯೋಜಿಸಿ, ಪೋಷಕರಲ್ಲಿರುವ ವಿವಿಧ ಪ್ರತಿಭೆಗಳನ್ನು ಗುರುತಿಸಿ, ಅವರ ಮೂಲಕ ಶಾಲೆಯ ವಿದ್ಯಾರ್ಥಿ ಸಮೂಹಕ್ಕೆ ತರಬೇತಿ ಕೊಡಿಸುವ ಕಾರ್ಯ ಕೈಗೊಂಡಿದ್ದು, ವಿಭಿನ್ನವಾದ ಪ್ರಯತ್ನವೆನಿಸಿತು.

ಬಹುತೇಕ ಎಲ್ಲಾ ಪೋಷಕರು ತಮ್ಮ ದೈನಂದಿನ ಕೆಲಸಗಳಿಗೆ ತೆರಳಬೇಕಾದ್ದರಿಂದ ಶಾಲೆಯು ಆಯೋಜಿಸುವ ಸಭೆಗಳಿಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಇದನ್ನು ಗಮನಿಸಿದ ಒಂದು ಶಾಲೆಯು ಪೋಷಕರೊಂದಿಗೆ ಚರ್ಚಿಸಿ, ಅವರಿಗೆ ಅನುಕೂಲಕರ ಸಮಯವಾದ ಬೆಳಗಿನ 7.30ರಿಂದ 9.30ರವರೆಗೆ ಪೋಷಕರ ಸಭೆಯನ್ನು ಆಯೋಜಿಸಿತ್ತು. ಇದರಿಂದ ಸಭೆಗೆ ಪೋಷಕರ ಹಾಜರಿ ಶೇ 95 ಮೀರಿತ್ತು.



ಸಾಮಾನ್ಯವಾಗಿ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳ ಕಲಿಕೆ, ಶಿಸ್ತು, ತುಂಟತನದಂತಹ ವಿಷಯಗಳ ಬಗ್ಗೆ ಒಂದಷ್ಟು ತಕರಾರು, ದೂರು ಇರುತ್ತದೆ. ಈ ಕುರಿತು ಪೋಷಕರ ಬಳಿ ದೂರು ದಾಖಲಿಸುವ ಕಾತರ ಅವರಲ್ಲಿ ಇರುತ್ತದೆ. ಪೋಷಕರನ್ನು ಕಂಡ ತಕ್ಷಣ ತಮ್ಮ ಮಕ್ಕಳ ಕುರಿತಾದ ದೂರುಗಳ ಪಟ್ಟಿಯನ್ನು ಹೇಳಲು ಶಿಕ್ಷಕರು ಶುರು ಮಾಡುವುದರಿಂದ, ಪೋಷಕರು ಶಾಲೆಯತ್ತ ಮುಖ ಮಾಡಲು ಹಿಂಜರಿಯುವಂತೆ ಆಗುತ್ತದೆ. ಇದಕ್ಕೆ ಬದಲಾಗಿ ಪೋಷಕರನ್ನು ಪ್ರೀತಿ, ಗೌರವದಿಂದ ಕಂಡು, ತಮ್ಮ ಮಕ್ಕಳಲ್ಲಿರುವ ಕೆಲ ಒಳ್ಳೆಯ ಗುಣಗಳ ಬಗ್ಗೆ ತಿಳಿಸಿ, ಇನ್ನಷ್ಟು ಪ್ರಗತಿಗೆ ಸಹಕಾರ ಕೋರುವ ಪ್ರಯತ್ನ ಖಂಡಿತ ಫಲ ನೀಡುತ್ತದೆ.

ಪೋಷಕರು- ಶಿಕ್ಷಕರ ಸೌಹಾರ್ದ ಭೇಟಿಗಳು ಹೆಚ್ಚಿದಷ್ಟೂ ವಿದ್ಯಾರ್ಥಿಗಳಲ್ಲಿ ಶಿಸ್ತು, ಕಲಿಕೆ, ಸದ್ವರ್ತನೆಯ ಗುಣಗಳು ಸಹಜವಾಗಿ ಉತ್ತಮಗೊಳ್ಳುತ್ತವೆ. ಈ ದಿಸೆಯಲ್ಲಿ ಶಾಲೆಗಳು ಅವರ ಸ್ಥಳೀಯ ಅಗತ್ಯಗಳಿಗೆ ತಕ್ಕಂತಹ ವಿನೂತನ, ನವೀನ ಪ್ರಯತ್ನಗಳನ್ನು ಕೈಗೊಳ್ಳಬೇಕಾದುದು ಅಗತ್ಯ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಕಲಾಪದ ಮಹತ್ವ ಅರಿಯಲಿ

ಭೋಜನದ ಬಳಿಕ ಕೆಲ ಹೊತ್ತು ನಿದ್ದೆಗೆ ಜಾರುವ ಅಭ್ಯಾಸ ಇರುವ ಶಾಸಕರು ಆ ನೆಪದಲ್ಲಿ ವಿಧಾನಮಂಡಲದ ಕಲಾಪದಿಂದ ಹೊರಗುಳಿಯುವುದನ್ನು ತಪ್ಪಿಸಲು ಅವರಿಗಾಗಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಮೊಗಸಾಲೆಯಲ್ಲಿಯೇ ಸುಖಾಸೀನ ಕುರ್ಚಿಗಳನ್ನು ಅಳವಡಿಸಲು ನಿರ್ಧರಿಸಿರುವುದನ್ನು (ಪ್ರ.ವಾ., ಫೆ. 25) ಓದಿ ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ವಿಧಾನಸಭಾ ಕಲಾಪ ನಡೆಯುವ ಸಮಯದಲ್ಲೇ ಕೆಲವು ಸಚಿವರು, ಶಾಸಕರು ನಿದ್ದೆಗೆ ಜಾರುವುದನ್ನು ನೋಡುತ್ತಿರುತ್ತೇವೆ. ಇನ್ನು ಸುಖಾಸನದ ವ್ಯವಸ್ಥೆ ಮಾಡಿದರೆ ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತೆ ಆಗುವುದರಲ್ಲಿ ಸಂಶಯವಿಲ್ಲ. ಮಧ್ಯಾಹ್ನ ಊಟದ ನಂತರ ಹೊರಗೆ ಹೋಗುವ ಕೆಲವು ಶಾಸಕರು ಮರಳಿ ಬರುವ ಸಾಧ್ಯತೆ ಇಲ್ಲದಿರುವುದರಿಂದ ಈ ರೀತಿಯ ವ್ಯವಸ್ಥೆಯನ್ನು ಮಾಡುವುದಾಗಿ ಸಭಾಧ್ಯಕ್ಷರು ಹೇಳಿರುವುದು ನಮ್ಮ ಜನನಾಯಕರ ಮನಃಸ್ಥಿತಿಯನ್ನು ಬಿಂಬಿಸುವಂತಿದೆ. ಇದರಿಂದ ಅವರು ಸಮಾಜಕ್ಕೆ ಯಾವ ರೀತಿಯ ಸಂದೇಶವನ್ನು ಕೊಡುತ್ತಾರೆ ಎಂಬುದು ವೇದ್ಯವಾಗುತ್ತದೆ.

ಜನರ ಪ್ರತಿನಿಧಿಗಳಾಗಿ ಆಯ್ಕೆಯಾದ ಈ ನಾಯಕರು ಕಲಾಪದಲ್ಲಿ ಸಂಪೂರ್ಣವಾಗಿ ಭಾಗವಹಿಸದೇ ಇದ್ದರೆ ಮೂಲ ಉದ್ದೇಶಕ್ಕೆ ಅಪಚಾರ ಮಾಡಿದಂತೆ ಆಗುತ್ತದೆ. ಕಲಾಪಗಳಿಗೆ ಬಹಳಷ್ಟು ಹಣ ಹಾಗೂ ಸಮಯವನ್ನು ವ್ಯಯ ಮಾಡುತ್ತಿರುವುದು ಪ್ರಯೋಜನಕ್ಕೆ ಬರುವುದಿಲ್ಲ. ಈ ಬಗ್ಗೆ ಎಲ್ಲ ಜನಪ್ರತಿನಿಧಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಕಡೂರು ಫಣಿಶಂಕರ್, ಬೆಂಗಳೂರು

ಮೈಕ್ ಇಲ್ಲದೆ ವ್ಯಾಪಾರ ಮಾಡಲಾಗದೇ?

ಎಲ್ಲ ಬಗೆಯ ವ್ಯಾಪಾರಿಗಳೂ ಮೈಕ್ ಹಾಕಿಕೊಂಡೇ ವ್ಯಾಪಾರ ಮಾಡುವುದರಿಂದ ಬೀದಿಗಳು ಗದ್ದಲದ ಕೂಪವಾಗಿವೆ ಎಂದು ಹುರುಕಡ್ಲಿ ಶಿವಕುಮಾರ ಅವರು ಅಭಿಪ್ರಾಯಪಟ್ಟಿರುವುದು (ವಾ.ವಾ., ಫೆ. 25) ಸರಿಯಾಗಿದೆ. ಬೆಂಗಳೂರಿನಲ್ಲಿ ಶಬ್ದಮಾಲಿನ್ಯ ಮಿತಿಮೀರಿದೆ. ವಾಹನಗಳ ವಿಚಿತ್ರವಾದ ಕರ್ಕಶ ಶಬ್ದಗಳು, ತರಕಾರಿ ಹಾಗೂ ಇತರ ಪದಾರ್ಥಗಳ ಮಾರಾಟಗಾರರ ಮೈಕ್ ಶಬ್ದ ಅತ್ಯಂತ ಕಿರಿಕಿರಿ ಉಂಟು ಮಾಡುತ್ತದೆ. ಚಿಕ್ಕಂದಿನಿಂದಲೂ ನಾವು ನೋಡಿದ ಹಾಗೆ ಬೀದಿ ವ್ಯಾಪಾರಿಗಳು ಜೋರಾಗಿ ಕೂಗುತ್ತಾ ತಿರುಗುತ್ತಿದ್ದರು. ಆಗಲೂ ಜನ ಹೊರಬಂದು ಆ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದರು. ಕೋವಿಡ್‌ನಿಂದ ಲಾಕ್‌ಡೌನ್ ಆಗುವವರೆಗೂ ಇದೇ ರೀತಿ ಇತ್ತು. ಲಾಕ್‌ಡೌನ್ ನಂತರ ಈ ಮೈಕ್ ಹಾವಳಿ ಹೆಚ್ಚಾಗಿದೆ. ಇದರ ಹಾವಳಿ ಎಷ್ಟಿದೆಯೆಂದರೆ, ಕೆಲವೊಮ್ಮೆ ನಾವು ಮನೆಯಲ್ಲಿ ಪರಸ್ಪರ ಮಾತನಾಡುವುದೂ ಕೇಳಿಸುವುದಿಲ್ಲ. ವ್ಯಾಪಾರಿಗಳೂ ಮನುಷ್ಯರು, ಹಾಗಾಗಿ ಕಿರುಚಿ ಕಿರುಚಿ ಅವರ ಗಂಟಲು ಹಾಳಾಗುವುದಿಲ್ಲವೇ ಎಂದು ಕೆಲವರಿಗೆ ಅನ್ನಿಸಬಹುದು. ಇದು ಅನಾದಿ ಕಾಲದಿಂದಲೂ ಇದ್ದ ಪದ್ಧತಿ. ಈಗ ಕೋವಿಡ್ ನಂತರ ಮಾತ್ರ ವ್ಯಾಪಾರಿಗಳ ಗಂಟಲಿಗೆ ತೊಂದರೆ ಆಗುತ್ತದೆ ಎನ್ನುವುದು ಎಷ್ಟು ಸರಿ? ಈಗಲೂ ನಾನು ನೋಡಿದಂತೆ ಎಷ್ಟೋ ವ್ಯಾಪಾರಿಗಳು ಮೈಕ್ ಇಲ್ಲದೆ ವ್ಯಾಪಾರ ಮಾಡುತ್ತಿದ್ದಾರೆ. ಅವರಿಗೆ ತೊಂದರೆ ಆಗುತ್ತಿಲ್ಲವೇ?

ಇನ್ನು ದ್ವಿಚಕ್ರ ವಾಹನಗಳನ್ನು ವೇಗವಾಗಿ ಓಡಿಸುವುದು, ಸೈಲೆನ್ಸರ್ ತೆಗೆದು ವಿಚಿತ್ರವಾಗಿ ಶಬ್ದ ಮಾಡಿಕೊಂಡು ಓಡಿಸುವುದು, ವ್ಹೀಲಿ ಮಾಡಿ ಸಾರ್ವಜನಿಕರಿಗೆ ತೊಂದರೆ ಕೊಡುವುದು, ಇವೆಲ್ಲದಕ್ಕೂ ಕಡಿವಾಣ ಹಾಕುವುದು ಪೊಲೀಸರು ಹಾಗೂ ಸರ್ಕಾರದ ಕರ್ತವ್ಯ. ಇಂತಹ ಪ್ರಕರಣಗಳನ್ನು ನೋಡಿದಾಗ ಪೊಲೀಸರಿಗೆ ಮಾಹಿತಿ ಮುಟ್ಟಿಸುವುದೂ ಸಾರ್ವಜನಿಕರ ಕರ್ತವ್ಯ ಎಂಬುದನ್ನು ಮರೆಯಬಾರದು.

ಎಸ್.ವಿ.ಗೋಪಾಲ್ ರಾವ್, ಬೆಂಗಳೂರು

ಗೌಜು– ಗದ್ದಲ ಸಹಿಸುವುದೆಂತು?

ಮಂಡ್ಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮತ್ತು ಹಿರಿಯರಾದ ಗೊ.ರು.ಚನ್ನಬಸಪ್ಪ ಅವರನ್ನು ಇತ್ತೀಚೆಗೆ ಅನೌಪಚಾರಿಕವಾಗಿ ಭೇಟಿಯಾಗಲು ಒಬ್ಬ ಸ್ನೇಹಿತ ಮತ್ತು ನಾನು ಬೆಂಗಳೂರಿನ ಅವರ ಮನೆಗೆ ಹೋಗಿದ್ದೆವು. ಅವರು ನಮ್ಮನ್ನು ಬರಮಾಡಿಕೊಂಡು, ಶ್ರವಣಸಾಧನ ಅಳವಡಿಸಿಕೊಂಡ ತಮ್ಮ ಒಂದು ಕಿವಿಯ ಕಡೆ ಕುಳಿತುಕೊಂಡು ಮಾತನಾಡಲು ಹೇಳಿದರು. ಅವರ ಮತ್ತೊಂದು ಕಿವಿಯು ಅವರ ಮನೆಯ ಸಮೀಪ ಇರುವ ಒಬ್ಬ ಚಿತ್ರನಟನ ಅಭಿಮಾನಿಗಳು ಆತನ ಹುಟ್ಟುಹಬ್ಬದ ಆಚರಣೆ ನಿಮಿತ್ತ ಸಿಡಿಸಿದ ಪಟಾಕಿ ಸಪ್ಪಳದಿಂದ ತೀವ್ರ ಹಾನಿಗೆ ಒಳಗಾಗಿರುವುದಾಗಿ ಹೇಳಿದರು. ನಟನ ಅಭಿಮಾನಿಗಳಿಂದ ಉಂಟಾಗುವ ಸದ್ದುಗದ್ದಲದ ಕುರಿತು ನೋವಿನಿಂದ ವಿವರಿಸಿದರು.

ಅವರ ಮನೆ ಪ್ರದೇಶದಲ್ಲಿ ವಿಕಾರವಾಗಿ ಶಬ್ದ ಮಾಡುತ್ತಾ ಓಡಾಡುವ ದ್ವಿಚಕ್ರ ವಾಹನಗಳನ್ನೂ ಗಮನಿಸಬಹುದಾಗಿದೆ. ಇಂತಹ ಗದ್ದಲ, ಅತಿರೇಕಗಳ ಬಗ್ಗೆ ಪೊಲೀಸರು ನಿಗಾ ಇಡಬೇಕಾದ ಅಗತ್ಯ ಇದೆ. ರಾತ್ರಿ ಹೊತ್ತು ಬೀದಿನಾಯಿಗಳ ಅರಚಾಟ ಕೂಡ ಈ ಪ್ರದೇಶದಲ್ಲಿ ಜೋರಾಗಿದೆ. ಈ ಎಲ್ಲಾ ಗೌಜು-ಗದ್ದಲವನ್ನು ನೋಡಿದರೆ 'ಸಂತೆಯೊಳಗೊಂದು ಮನೆಯ ಮಾಡಿ...' ಎಂಬ ಅಕ್ಕನ ವಚನ ನೆನಪಾಗುತ್ತದೆ. ಆದರೆ ಇಂತಹ ಸದ್ದುಗದ್ದಲ ವಿಪರೀತವಾದರೆ ವಯೋವೃದ್ಧರು, ಪುಟ್ಟ ಮಕ್ಕಳು ಸಹಿಸುವುದೆಂತು?

ವೆಂಕಟೇಶ ಮಾಚಕನೂರ, ಧಾರವಾಡ

ಸರ್ಕಾರಿ ನೌಕರರಿಗೆ ಬೇಡ 'ಗ್ಯಾರಂಟಿ'

ಏಳನೇ ವೇತನ ಆಯೋಗದ ನಂತರ ರಾಜ್ಯ ಸರ್ಕಾರಿ ನೌಕರರಿಗೆ ಉತ್ತಮ ವೇತನ ದೊರಕುತ್ತಿದ್ದು, ಎಲ್ಲಾ ನೌಕರರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆ. ಸಮಾಜದಲ್ಲಿ ಗೌರವಯುತವಾದ ಸ್ಥಾನ ಗಳಿಸಿದ್ದಾರೆ. ಇಂತಹ ಸರ್ಕಾರಿ ನೌಕರರಿಗೆ ಗ್ಯಾರಂಟಿ ಯೋಜನೆಯಡಿ ಉಚಿತ ಸೌಲಭ್ಯ ಒದಗಿಸುವುದು ಎಷ್ಟರಮಟ್ಟಿಗೆ ಸರಿ? ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರು ಗ್ಯಾರಂಟಿ ಯೋಜನೆಯ ಪ್ರಮುಖ ಫಲಾನುಭವಿಗಳಾಗಬೇಕು. ಆದರೆ ಸರ್ಕಾರಿ ನೌಕರರು, ಶಕ್ತಿ ಮತ್ತು ಗೃಹಜ್ಯೋತಿ ಗ್ಯಾರಂಟಿ ಯೋಜನೆಗಳಡಿ ಉಚಿತ ಸೌಲಭ್ಯ ಪಡೆಯುತ್ತಿರುವುದು ಸರ್ಕಾರಕ್ಕೆ ಆರ್ಥಿಕ ಹೊರೆಯಷ್ಟೆ.

ನೌಕರರು ಈಗಾಗಲೇ ಸರ್ಕಾರದಿಂದ ಹಲವು ಯೋಜನೆಗಳ ಲಾಭ ಪಡೆಯುತ್ತಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರವು ಸರ್ಕಾರಿ ನೌಕರರನ್ನು ಗ್ಯಾರಂಟಿ ಯೋಜನೆಗಳಿಂದ ಕಡ್ಡಾಯವಾಗಿ ಹೊರಗಿಡಬೇಕು. ಇದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಉಳಿತಾಯವಾಗುತ್ತದೆ. ಅಲ್ಲದೆ ಅರ್ಹ ಫಲಾನುಭವಿಗಳು ಯೋಜನೆಗಳ ಲಾಭ ಪಡೆಯಲು ಸಹಕಾರಿಯಾಗುತ್ತದೆ.

ಗಣೇಶ ಆರ್., ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮೆಣಸಿನಕಾಯಿ ದರ ಕುಸಿತ
ರಾಜ್ಯದ ರೈತರಿಗೆ ಸಿಕ್ಕಿಲ್ಲ ನೆರವು



ಶೇ 50ರಷ್ಟು ಕುಸಿತ

ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ರಾಯಚೂರು, ಕಲಬುರಗಿ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತದೆ. ಬ್ಯಾಡಗಿ ಮೆಣಸಿನಕಾಯಿಯಲ್ಲಿ ಬ್ಯಾಡಗಿ ಡಬ್ಬಿ, ಬ್ಯಾಡಗಿ ಕಡ್ಡಿ ಎಂಬ ಎರಡು ಪ್ರಮುಖ ತಳಿಗಳಿವೆ. ಮೆಣಸಿನಕಾಯಿ ಗುಣಮಟ್ಟದ ಆಧಾರದಲ್ಲಿ ಧಾರಣೆ ನಿಗದಿ ಮಾಡಲಾಗುತ್ತದೆ. ಜಿಲ್ಲಾವಾರು ಧಾರಣೆಯಲ್ಲಿ ವ್ಯತ್ಯಾಸವಿದೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ಮಾರುಕಟ್ಟೆಯಲ್ಲಿ ಈ ವರ್ಷ ಆವಕ ಕಡಿಮೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬೆಲೆಯೂ ಶೇ 50ರಷ್ಟು ಕುಸಿದಿದೆ. ಕಳೆದ ವರ್ಷ ಜನವರಿಯಲ್ಲಿ ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹3,009 ಹಾಗೂ ಗರಿಷ್ಠ ₹61,111 ಇತ್ತು. ಡಬ್ಬಿ ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹3,109ದಿಂದ ಗರಿಷ್ಠ ₹62,269 ಸಾವಿರದವರೆಗೆ ಮಾರಾಟವಾಗಿತ್ತು. ಗುಂಟೂರು ಮೆಣಸಿನಕಾಯಿ ಕಳೆದ ವರ್ಷ ಕನಿಷ್ಠ ₹1,509 ಹಾಗೂ ಗರಿಷ್ಠ ₹19,429 ಇತ್ತು.

ಮಂಗಳವಾರ (ಫೆ. 25) ಕಡ್ಡಿ ಒಣ ಮೆಣಸಿನಕಾಯಿ ಕ್ವಿಂಟಲ್‌ಗೆ ಕನಿಷ್ಠ ₹1,600 ಹಾಗೂ ಗರಿಷ್ಠ ₹ 33,399 ಇದ್ದರೆ, ಡಬ್ಬಿ ಮೆಣಸಿನಕಾಯಿಗೆ ₹ 2,809 ರಿಂದ ₹ 37,999 ಇತ್ತು. ಗುಂಟೂರು ಮೆಣಸಿನಕಾಯಿ ಕ್ವಿಂಟಲ್‌ಗೆ ಕನಿಷ್ಠ ₹969 ಹಾಗೂ ಗರಿಷ್ಠ ₹16,409ಕ್ಕೆ ಮಾರಾಟವಾಗಿದೆ.

25% ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಮೆಣಸಿನಕಾಯಿಯಲ್ಲಿ ಕರ್ನಾಟಕದ ಪಾಲು

3.25 ಲಕ್ಷ ಎಕರೆ ವಿವಿಧ ಜಿಲ್ಲೆಗಳಲ್ಲಿ ಮೆಣಸಿನಕಾಯಿ ಬೆಳೆಯುವ ಅಂದಾಜು ವಿಸ್ತೀರ್ಣ

0.5ರಿಂದ 1.25 ಟನ್ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಪ್ರತಿ ಹೆಕ್ಟೇರ್‌ಗೆ ಬರುವ ಮೆಣಸಿನಕಾಯಿ ಇಳುವರಿ

3.75ರಿಂದ 5 ಟನ್ ಬಳ್ಳಾರಿ, ರಾಯಚೂರು, ಕಲಬುರಗಿ ಜಿಲ್ಲೆಗಳಲ್ಲಿ ಪ್ರತಿ ಹೆಕ್ಟೇರ್‌ಗೆ ಸಿಗುವ ಇಳುವರಿ

₹1 ಲಕ್ಷದಿಂದ ₹1.50 ಲಕ್ಷ ಮೆಣಸಿನಕಾಯಿ ಬೆಳೆಯಲು ಪ್ರತಿ ಎಕರೆಗೆ ಆಗುವ ವೆಚ್ಚ

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ಮೆಣಸಿನಕಾಯಿ ಬೆಳೆದ ರೈತರು ಈ ಬಾರಿ ಕೈ ಸುಟ್ಟುಕೊಂಡಿದ್ದಾರೆ. ಮಳೆ ಹೆಚ್ಚಾಗಿದ್ದರಿಂದ ಕಾಡಿದ ಕೊಳೆರೋಗ ಹಾಗೂ ಇತರ ಕಾರಣಗಳಿಂದ ಇಳುವರಿ ಕುಸಿತವಾಗಿ ಆದ ನಷ್ಟ ಒಂದೆಡೆಯಾದರೆ ಕಟಾವಿನ ಬಳಿಕ ಮಾರುಕಟ್ಟೆಯಲ್ಲಿ ಸಮರ್ಪಕ ದರ ಸಿಗದೆ ಬೆಳೆಯಲು ಮಾಡಿದ ವೆಚ್ಚವೂ ಕೈಗೆ ಸಿಗದಂತಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮೆಣಸಿನಕಾಯಿ ದರ ಶೇ 35ರಿಂದ ಶೇ 50ರವರೆಗೆ ಕುಸಿತಕಂಡಿದೆ.

ಅತ್ತ, ನೆರೆಯ ಆಂಧ್ರಪ್ರದೇಶದಲ್ಲೂ ಜಗತ್ಪ್ರಸಿದ್ಧ ಗುಂಟೂರು ಮೆಣಸಿನ ಧಾರಣೆ ಗಣನೀಯವಾಗಿ ಕುಸಿದಿದೆ. 2022-23ರಲ್ಲಿ ಕ್ವಿಂಟಲ್‌ಗೆ ₹20,500, 2023-24ರಲ್ಲಿ ಕ್ವಿಂಟಲ್‌ಗೆ ₹20 ಸಾವಿರ ಸಿಕ್ಕಿದ್ದರೆ ಈ ಬಾರಿ ₹11 ಸಾವಿರಕ್ಕೆ ಕುಸಿದಿದೆ. ಬೆಳೆಗಾರರ ಸಂಕಷ್ಟಕ್ಕೆ ಧಾವಿಸುವಂತೆ ರಾಜ್ಯ ಸರ್ಕಾರವನ್ನು ರೈತರು ಒತ್ತಾಯಿಸಿದ್ದರು. ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪಾಲುದಾರ ಪಕ್ಷ ತೆಲುಗುದೇಶಂ ನೇತೃತ್ವದ ಸರ್ಕಾರವು ಕೇಂದ್ರದ ಮೇಲೆ ಒತ್ತಡ ಹೇರಿದ ಕಾರಣಕ್ಕೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯ ಅಡಿಯಲ್ಲಿ ಗುಂಟೂರು ಮೆಣಸಿನಕಾಯಿಯನ್ನು ಕ್ವಿಂಟಲ್‌ಗೆ ₹11,781ರಂತೆ ಖರೀದಿಸಲು ಕೇಂದ್ರ ಒಪ್ಪಿಕೊಂಡಿದೆ. ಹೀಗಾಗಿ ಅಲ್ಲಿನ ರೈತರು ಹೆಚ್ಚು ನಷ್ಟ ಅನುಭವಿಸುವುದು ತಪ್ಪಿದಂತಾಗಿದೆ.

ಕರ್ನಾಟಕದಲ್ಲಿ ಮೆಣಸಿನಕಾಯಿ ಬೆಲೆಯು ಕುಸಿದಿರುವುದರಿಂದ ಹಲವು ಜಿಲ್ಲೆಗಳ ಲಕ್ಷಾಂತರ ರೈತರು ನಷ್ಟ ಅನುಭವಿಸುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಧ್ಯಪ್ರವೇಶಿಸಿ, ಮೆಣಸಿನಕಾಯಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ ನಷ್ಟವಾಗುವುದನ್ನು ತಪ್ಪಿಸಬೇಕು ಎಂದು ಬೆಳೆಗಾರರು ರೈತ ಸಂಘಟನೆಗಳ ಮುಖಂಡರು, ಆಗ್ರಹಿಸುತ್ತಲೇ ಇದ್ದಾರೆ.

‘ಆದರೆ, ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲಿ ಈ ಬಗ್ಗೆ ಗಮನಹರಿಸಿಲ್ಲ. ಆಂಧ್ರಪ್ರದೇಶ ರೈತರ ಸಂಕಷ್ಟಕ್ಕೆ ಅಲ್ಲಿನ ರಾಜ್ಯ ಸರ್ಕಾರ ಮಾತ್ರವಲ್ಲ, ಕೇಂದ್ರ ಸರ್ಕಾರವೂ ಸ್ಪಂದಿಸಿದೆ. ನಮ್ಮ ಕಷ್ಟಕ್ಕೆ ಎರಡೂ ಸರ್ಕಾರಗಳು ಯಾಕೆ ಕಿವಿಗೊಡುತ್ತಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

ಪೂರಕ ಮಾಹಿತಿ: ಹುಬ್ಬಳ್ಳಿ ಮತ್ತು ಕಲಬುರಗಿ ಬ್ಯೂರೊ



ದರ ಕುಸಿತ ಏಕೆ?

- ಮೆಣಸಿನಕಾಯಿಗೆ ಬೇಡಿಕೆ ಕಡಿಮೆಯಾಗಿದೆ
- ಕಳೆದ ವರ್ಷದ ದಾಸ್ತಾನು ಹೆಚ್ಚಿನ ಪ್ರಮಾಣದಲ್ಲಿದೆ
- ಆಂಧ್ರಪ್ರದೇಶದಿಂದಲೂ ಪೂರೈಕೆಯಾಗುತ್ತಿದೆ
- ಮೆಣಸಿನಕಾಯಿ ಖರೀದಿಗೆ ಮಸಾಲೆ ತಯಾರಿಕಾ ಕಂಪನಿಗಳು ಮುಂದಾಗುತ್ತಿಲ್ಲ

ಎಂಎಸ್‌ಪಿಗೆ ಕೇಂದ್ರಕ್ಕೆ ಮನವಿ



ಮಾರುಕಟ್ಟೆಯಲ್ಲಿ ಯಾವುದೇ ಉತ್ಪನ್ನದ ದರ ಏರಿಳಿತ ಸಾಮಾನ್ಯ. ಇಳುವರಿ ಪ್ರಮಾಣ ಈ ಏರಿಳಿತಕ್ಕೆ ಕಾರಣವಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಮೆಣಸಿನಕಾಯಿ ಧಾರಣೆ ಭಾರಿ ಏರಿಕೆ ಆಗಿರುವುದನ್ನು ನೋಡಿದ್ದೇವೆ. ಆದರೆ, ಈ ಬಾರಿ ಮೆಣಸಿನಕಾಯಿ ಆವಕ ಮತ್ತು ದರ ಕುಸಿದಿದೆ. ಈ ವಿಚಾರವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸುವಂತೆ ಮನವಿ ಮಾಡುತ್ತೇವೆ. ಕೇಂದ್ರ ಸರ್ಕಾರ ಮಂಜೂರಾತಿ ನೀಡಿದರೆ ಖರೀದಿ ಕೇಂದ್ರಗಳ ಮೂಲಕ ಎಂಎಸ್‌ಪಿ ಅಡಿ ಮೆಣಸಿನಕಾಯಿ ಖರೀದಿಸಲು ಸರ್ಕಾರ ಸಿದ್ಧವಾಗಿದೆ.

ಶಿವಾನಂದ ಎಸ್. ಪಾಟೀಲ, ಕೃಷಿ ಮಾರುಕಟ್ಟೆ ಸಚಿವ

ಕೇಂದ್ರದ ಮೇಲೆ ಚಂದ್ರಬಾಬು ನಾಯ್ಡು ಒತ್ತಡ

ಭಾರತದಲ್ಲಿ ಬೆಳೆಯುವ ಮೆಣಸಿನಕಾಯಿಯ ಪೈಕಿ ಶೇ 40ರಷ್ಟು ಆಂಧ್ರದಲ್ಲೇ ಬೆಳೆದರೆ, ಅದರಲ್ಲಿ ಶೇ 15ರಷ್ಟು ಪಾಲು ಗುಂಟೂರು ಜಿಲ್ಲೆಯಲ್ಲೇ ಬೆಳೆಯುತ್ತಾರೆ. ಗುಂಟೂರಿನ ಮಿರ್ಚಿ ಯಾರ್ಡ್ ಏಷ್ಯಾದಲ್ಲಿಯೇ ಅತಿ ದೊಡ್ಡ ಮೆಣಸಿನಕಾಯಿ ಮಾರುಕಟ್ಟೆಯಾಗಿದೆ. ಈ ವರ್ಷ ಬೆಲೆ ಕುಸಿಯುತ್ತಿದ್ದಂತೆಯೇ ವೈಎಸ್‌ಆರ್‌ಸಿಪಿ ಈ ವಿಚಾರವನ್ನು ಕೈಗೆತ್ತಿಕೊಂಡಿತು. ಅದರ ಮುಖಂಡ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಗುಂಟೂರಿನ ಮಿರ್ಚಿ ಯಾರ್ಡ್‌ಗೆ ಭೇಟಿ ನೀಡಿ ರೈತರ ಅಹವಾಲು ಆಲಿಸಿದರು. ರಾಜ್ಯದಲ್ಲಿ ಬೆಳೆಯುವ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ದೊರಕುತ್ತಿಲ್ಲ ಎಂದು ಟಿಡಿಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಅದಾದ ಎರಡೇ ದಿನಗಳಲ್ಲಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಮೆಣಸಿನಕಾಯಿ ಬೆಳೆಗಾರರು, ಮಾರಾಟಗಾರರು, ರಫ್ತುದಾರರು, ಕಮಿಷನ್ ಏಜೆಂಟ್‌ಗಳ ಜತೆ ಸಭೆ ನಡೆಸಿದರಲ್ಲದೆ, ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯ (ಎಂಐಎಸ್) ಮೂಲಕ ರೈತರ ನೆರವಿಗೆ ನಿಲ್ಲುವಂತೆ ಕೇಂದ್ರಕ್ಕೆ ಮೂರು ಪತ್ರ ಬರೆದರು. ಕೇಂದ್ರ ಕೃಷಿ ಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಜತೆಗೆ ಮಾತನಾಡಿದರು. ಎಂಐಎಸ್ ಅಡಿ ರಾಜ್ಯವೂ ಶೇ 50ರಷ್ಟು ಪಾಲು ಹಂಚಿಕೊಳ್ಳಬೇಕಿದ್ದು, ಸದ್ಯ ಕೇಂದ್ರವೇ ಶೇ 100ರಷ್ಟು ವೆಚ್ಚ ಭರಿಸಬೇಕು ಮತ್ತು ಯೋಜನೆಯ ಅಡಿ ಒಟ್ಟು ಉತ್ಪನ್ನದ ಶೇ 25ರಷ್ಟು ಬೆಳೆಯನ್ನು ಮಾತ್ರವೇ ಕೊಳ್ಳಲು ಅವಕಾಶವಿದ್ದು, ಅದನ್ನು ಶೇ 75ಕ್ಕೆ ಹೆಚ್ಚಿಸಬೇಕು ಎಂದೂ ನಾಯ್ಡು ಕೇಂದ್ರವನ್ನು ಕೋರಿದ್ದರು. ನಾಯ್ಡು ಅವರ ಪ್ರಯತ್ನಕ್ಕೆ ಕೇಂದ್ರ ಸರ್ಕಾರವು ತಕ್ಷಣವೇ ಸ್ಪಂದಿಸಿದೆ. ಎಂಐಎಸ್ ಅಡಿ ಮೆಣಸಿನಕಾಯಿಯನ್ನು ಖರೀದಿಸಲು ಕೇಂದ್ರ ಸರ್ಕಾರ ಮುಂದೆ ಬಂದಿದೆ. ಕ್ವಿಂಟಲ್‌ಗೆ ₹11,781ರಂತೆ 2.58 ಲಕ್ಷ ಟನ್ ಮೆಣಸಿನಕಾಯಿ ಖರೀದಿಸಲು ಕೇಂದ್ರವು ಆದೇಶ ನೀಡಿದೆ.



ಏನಿದು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ?

ಸುಗ್ಗಿ ಕಾಲದಲ್ಲಿ ರೈತರ ಉತ್ಪನ್ನಗಳ ಬೆಲೆಯು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರಕ್ಕೆ ಕುಸಿದಾಗ, ತಮ್ಮ ಉತ್ಪನ್ನವನ್ನು ಕಡಿಮೆ ಬೆಲೆಗೆ ಮಾರುವ ಅನಿವಾರ್ಯದಿಂದ ರೈತರನ್ನು ರಕ್ಷಿಸಲು ಮಾರುಕಟ್ಟೆಯಲ್ಲಿ ಕೇಂದ್ರ ಸರ್ಕಾರವು ಮಧ್ಯಪ್ರವೇಶ ಮಾಡುವ ಯೋಜನೆ ಇದು. ಯೋಜನೆಯ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶವು 50:50ರ ಅನುಪಾತದಲ್ಲಿ ಹಂಚಿಕೊಳ್ಳಬೇಕು. ಈಶಾನ್ಯ ರಾಜ್ಯಗಳ ವಿಚಾರದಲ್ಲಿ ಈ ಅನುಪಾತವು 75:25 ಇರುತ್ತದೆ. ಒಟ್ಟು ಉತ್ಪನ್ನದ ಪೈಕಿ ಶೇ 25ರಷ್ಟನ್ನು ಮಾತ್ರ ಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ. ಈ ಯೋಜನೆಯ ಲಾಭ ಪಡೆಯಲು ರಾಜ್ಯ/ಕೇಂದ್ರಾಡಳಿತ ಪ್ರದೇಶವು ನಿಗದಿತ ಬೆಳೆಯ ಬಗ್ಗೆ ಸಂಪೂರ್ಣ ವಿವರಗಳುಳ್ಳ ಪ್ರಸ್ತಾವವನ್ನು ಕೇಂದ್ರಕ್ಕೆ ಸಲ್ಲಿಸಬೇಕು.

ಸರ್ಕಾರ ನೆರವಿಗೆ ಬರಬೇಕು



ಆಂಧ್ರಪ್ರದೇಶದ ಬೆಳೆಗಾರರ ಸಂಕಷ್ಟಕ್ಕೆ ಅಲ್ಲಿನ ಸರ್ಕಾರ ಸ್ಪಂದಿಸಿದೆ. ಕೇಂದ್ರದ ಮೇಲೆ ಒತ್ತಡ ತಂದು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಮೆಣಸಿನಕಾಯಿ ಖರೀದಿಸುವಂತೆ ಮಾಡಲು ಯಶಸ್ವಿಯಾಗಿದೆ. ಅಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳೆರಡೂ ರೈತರ ಪರ ಕೆಲಸ ಮಾಡಿವೆ. ನಮ್ಮಲ್ಲಿ ಎರಡೂ ಪಕ್ಷಗಳೂ ರೈತರ ಕಾಳಜಿ ವಹಿಸುತ್ತಿಲ್ಲ. ಕರ್ನಾಟಕದಲ್ಲೂ ರೈತರಿಗೆ ಬೆಂಬಲ ಬೆಲೆ ನೀಡದಿದ್ದರೆ ಅಥವಾ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ನೆರವಿಗೆ ಬಾರದಿದ್ದರೆ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ

ಕರೂರು ಮಾಧವ ರೆಡ್ಡಿ, ಅಧ್ಯಕ್ಷ, ರಾಜ್ಯ ರೈತ ಸಂಘ

ಬೆಂಬಲ ಬೆಲೆ ಬೇಕು



ರೈತರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಮೆಣಸಿನಕಾಯಿ ಬೆಳೆದಿದ್ದಾರೆ. ಆದರೆ, ಫಸಲು ಬರುವ ಸಂದರ್ಭದಲ್ಲಿ ಬೆಲೆ ತೀವ್ರವಾಗಿ ಕುಸಿದಿದೆ. ಬೆಳೆಗಾರರು ಸಂಕಷ್ಟದಲ್ಲಿ ಸಿಲುಕಿರುವ ಈ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಂಬಲ ಬೆಲೆ ಘೋಷಿಸಬೇಕು. ಖರೀದಿ ಕೇಂದ್ರ ಆರಂಭಿಸಬೇಕು

ಬೆಳಗಲ್ ಮಲ್ಲಿಕಾರ್ಜುನ, ರೈತ ಮುಖಂಡ, ತೆಕ್ಕಲಕೋಟೆ, ಬಳ್ಳಾರಿ ಜಿಲ್ಲೆ

ಎರಡೆರಡು ಹೊಡೆತ



ಬೆಲೆ ಕುಸಿತದಿಂದ ರೈತರು ತೀವ್ರ ಆತಂಕ ಪಡುವಂತಾಗಿದೆ. ಕಳೆದ ವರ್ಷ ₹38 ಸಾವಿರಕ್ಕೆ ಮಾರಾಟವಾಗಿದ್ದ ಬ್ಯಾಡಗಿ ಮೆಣಸಿನಕಾಯಿ ಈ ವರ್ಷ ₹13,200ಕ್ಕೆ ಮಾರಾಟವಾಗಿದೆ. ಎರಡು ಎಕರೆ ಪ್ರದೇಶದಲ್ಲಿ ಬೆಳೆದಿದ್ದೇನೆ. ಪ್ರತಿ ಎಕರೆಗೆ ಅಂದಾಜು ₹1 ಲಕ್ಷ ಖರ್ಚು ಮಾಡಿದ್ದೇನೆ. ಈ ವರ್ಷ ಕೊಳೆರೋಗದಿಂದ ಬೆಳೆ ರಕ್ಷಣೆ ಸವಾಲಾಗಿ ಪರಿಣಮಿಸಿತ್ತು. ಇದೀಗ ಧಾರಣೆ ಕುಸಿತ ಮತ್ತೊಂದು ಹೊಡೆತ ನೀಡಿದೆ

ಮುಕ್ತಾರ್‌ಪಾಶಾ ಗುಡಗಿ ಕವಿತಾಳ, ರಾಯಚೂರು ಜಿಲ್ಲೆ

ಖರ್ಚೂ ಬಂದಿಲ್ಲ



ಎರಡು ಎಕರೆಯಲ್ಲಿ ಮೆಣಸಿನಕಾಯಿ ಬೆಳೆದಿದ್ದು, ಇದಕ್ಕಾಗಿ ₹1 ಲಕ್ಷ ಸಾಲ ಮಾಡಿದ್ದೇನೆ. ಬೆಳೆಗೆ ರೋಗ ವಿಪರೀತವಾಗಿ ಇಳುವರಿ ಕಡಿಮೆಯಾಗಿತ್ತು. ಈಗ ಪ್ರತಿ ಕ್ವಿಂಟಲ್ ಮೆಣಸಿನಕಾಯಿಗೆ ₹8,000ದಿಂದ ₹10 ಸಾವಿರ ಸಿಗುತ್ತಿದೆ. ಬರೀ ₹80 ಸಾವಿರ ಹಣ ಬಂದಿದ್ದು, ಹಾಕಿದ ಬಂಡವಾಳವೂ ವಾಪಸ್ ಬಂದಿಲ್ಲ

ಲಕ್ಷಪ್ಪ ದತ್ತಪ್ಪ ಎಲ್ಲಗೋಳ, ಬಳೂರ್ಗಿ, ಅಫಜಲಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

ಸಿನಿ ಬಿಟ್ಸ್



ಅಪೂರ್ವ, ಅಭಿಮನ್ಯು ಕಾಶಿನಾಥ್, ಉಪೇಂದ್ರ

‘ಸೂರಿ..’ಗೆ ಉಪೇಂದ್ರ ಸಾಥ್

ಅಭಿಮನ್ಯು ಕಾಶಿನಾಥ್, ಅಪೂರ್ವ ಜೋಡಿಯಾಗಿ ನಟಿಸಿರುವ ‘ಸೂರಿ ಲವ್ಸ್ ಸಂಧ್ಯಾ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ-ನಿರ್ದೇಶಕ ಉಪೇಂದ್ರ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರಕ್ಕೆ ಯಾದವ್ ರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

‘ಇಂಥ ತಂಡದ ಜೊತೆ ನಿಲ್ಲುವುದಕ್ಕೆ ಹೆಮ್ಮೆ ಪಡುತ್ತೇನೆ. ನಾನು ಈ ಚಿತ್ರವನ್ನು ನೋಡಿ ಮಾತನಾಡುತ್ತಿರುವೆ. ನಾಯಕ-ನಾಯಕಿ ಇಬ್ಬರೂ ಚೆನ್ನಾಗಿ ನಟಿಸಿದ್ದಾರೆ. ಈ ಸಂದರ್ಭದಲ್ಲಿ ಅಭಿ ತಂದೆ ಕಾಶಿನಾಥ್ ಬದುಕಿದ್ದು, ಈ ಚಿತ್ರ ನೋಡಬೇಕಿತ್ತು. ತುಂಬಾ ಖುಷಿಪಟ್ಟಿರುತ್ತಿದ್ದರು. ಅವರೀಗ ನಮ್ಮ ಜೊತೆಗೆ ಇಲ್ಲದಿದ್ದರೂ ಅವರ ಆಶೀರ್ವಾದ ಸದಾ ಜೊತೆಗಿರುತ್ತದೆ. ಈ ಚಿತ್ರದ ಕ್ಲೈಮ್ಯಾಕ್ಸ್ ನೋಡಬೇಕು. ಹೃದಯ ಕಿತ್ತುಕೊಂಡು ಬರುವಷ್ಟು ಫೀಲ್ ಆಗುತ್ತದೆ. ಛಾಯಾಚಿತ್ರಗ್ರಹಣ, ಮೇಕಿಂಗ್ ಎಲ್ಲವೂ ಚೆನ್ನಾಗಿದೆ’ ಎಂದು ತಂಡದ ಕೆಲಸ ಶ್ಲಾಘಿಸಿದರು ಉಪೇಂದ್ರ.

ಚಿತ್ರ ಮಾರ್ಚ್ 6ರಂದು ತೆರೆಗೆ ಬರಲಿದೆ. ಕೆ.ಟಿ. ಮಂಜುನಾಥ್ ಬಂಡವಾಳ ಹೂಡಿದ್ದಾರೆ. ಪ್ರತಾಪ್ ನಾರಾಯಣ್, ಪ್ರದೀಪ್ ಕಾಬ್ರಾ, ‘ಭಜರಂಗಿ’ ಪ್ರಸನ್ನ, ಖುಷಿ ಆಚಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎಸ್.ಎನ್. ಅರುಣಗಿರಿ ಸಂಗೀತ ಸಂಯೋಜಿಸಿದ್ದು, ಶ್ರೀನಿವಾಸ್ ಛಾಯಾಚಿತ್ರಗ್ರಹಣವಿದೆ.

‘ಡ್ಯೂಡ್’ ಎನ್ನುತ್ತಿರುವ ತೇಜ್

ಈ ಹಿಂದೆ ‘ರಿವೈಂಡ್’, ‘ರಾಮಾಚಾರಿ 2.0’ ಚಿತ್ರಗಳಲ್ಲಿ ನಟಿಸಿ, ನಿರ್ದೇಶಿಸಿದ್ದ ತೇಜ್ ‘ಡ್ಯೂಡ್’ ಎನ್ನುತ್ತ ಬಂದಿದ್ದಾರೆ. ಫುಟ್ಬಾಲ್ ಕುರಿತಾದ ಕಥೆ ಹೊಂದಿರುವ ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟಿ ಮೇಘನಾ ರಾಜ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಈಗಾಗಲೇ ಚಿತ್ರದ ಅರ್ಧದಷ್ಟು ಚಿತ್ರೀಕರಣ ಮುಗಿದಿದೆ. ನಾನು ನನ್ನ ವೃತ್ತಿಜೀವನದಲ್ಲಿ ಎಂಟು ಸಿನಿಮಾ ಮಾಡಿದ್ದೇನೆ. ಇದು ವೈಯಕ್ತಿಕವಾಗಿ ನನಗೆ ಬಹಳ ವಿಶೇಷವಾದ ಸಿನಿಮಾ. ಮಹಿಳೆಯರ ಶಕ್ತಿಯನ್ನು ತೋರಿಸುವ ಚಿತ್ರ. 12 ನಾಯಕಿಯರಿದ್ದಾರೆ. ಈ ಚಿತ್ರವನ್ನು ಪುನೀತ್ ರಾಜ್‌ಕುಮಾರ್ ಅವರಿಗೆ ಅರ್ಪಿಸುತ್ತಿದ್ದೇವೆ. ಈ ವರ್ಷದ ಕೊನೆಯಲ್ಲಿ ಚಿತ್ರವನ್ನು ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳದಲ್ಲಿ ಬಿಡುಗಡೆ ಮಾಡುವ ಯೋಚನೆ ಇದೆ’ ಎಂದರು ಚಿತ್ರದ ನಟ, ನಿರ್ದೇಶಕ ತೇಜ್.

ಪಾನಾರೋಮಿಕ್ ಸ್ಟುಡಿಯೋ ಚಿತ್ರವನ್ನು ನಿರ್ಮಿಸುತ್ತಿದೆ. ಸಾನ್ಯಾ ಕಾವೇರಮ್ಮ, ರಾಘವೇಂದ್ರ ರಾಜ್‌ಕುಮಾರ್, ರಂಗಾಯಣ ರಘು, ಸುಂದರ್ ರಾಜ್, ವಿಜಯ್ ಚೆಂಡೂರು, ಸ್ಪರ್ಶ ರೇಖಾ ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ಎಮಿಲ್ ಮೊಹಮ್ಮದ್ ಸಂಗೀತ ಸಂಯೋಜನೆ ಇದ್ದು, ಪ್ರೇಮ್ ಛಾಯಾಚಿತ್ರಗ್ರಹಣವಿದೆ.



ಸಾನ್ಯಾ ಕಾವೇರಮ್ಮ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳಲ್ಲಿ ಕರ್ನಾಟಕದ ಪ್ರಾರ್ಥನಾ ಸ್ಥಳಗಳಿಗೆ ಸಂಬಂಧಿಸಿದ ಸುದ್ದಿ ವ್ಯಾಪಕವಾಗಿ ಹರಿದಾಡುತ್ತಿದೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಹಿಂದೂ ದೇವಾಲಯಗಳಿಂದ ₹445 ಕೋಟಿ ಲೂಟಿ ಹೊಡೆದು, ಈ ಪೈಕಿ ₹330 ಕೋಟಿಯನ್ನು ಮಸೀದಿ ಮತ್ತು ಚರ್ಚ್‌ಗಳಿಗೆ ಕೊಡುಗೆಯಾಗಿ ನೀಡಿದೆ ಎಂದು ಸಿಎನ್‌ಎನ್-ನ್ಯೂಸ್ 18 ವಾಹಿನಿಯ ಸ್ಕ್ರೀನ್ ಶಾಟ್ ಅನ್ನು ಹಂಚಿಕೊಳ್ಳುವ ಮೂಲಕ ಕೆಲವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಈ ಕುರಿತ ವಾಸ್ತವಾಂಶ ಪರಿಶೀಲಿಸುವ ಸಲುವಾಗಿ ಕರ್ನಾಟಕ ಸರ್ಕಾರದ 2024–25ರ ಬಜೆಟ್ ಅನ್ನು ಪರಿಶೀಲಿಸಿದಾಗ, ಸರ್ಕಾರವು ವಕ್ಫ್ ಸ್ವತ್ತುಗಳ ಅಭಿವೃದ್ಧಿ ಮತ್ತು ಕ್ರೈಸ್ತ ಸಮುದಾಯದ ಪ್ರಗತಿಗೆ ₹330 ಕೋಟಿ ನೀಡಿರುವುದು ಸತ್ಯ ಎನ್ನುವುದು ಕಂಡುಬಂತು. ಆದರೆ, ಈ ಹಣವನ್ನು ನೀಡಿರುವುದು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಹಣದಿಂದಲೇ ಹೊರತು ಹಿಂದೂ ದೇವಾಲಯಗಳಿಂದ ಸಂಗ್ರಹಿಸಿದ ಮೊತ್ತದಿಂದ ಅಲ್ಲ ಎನ್ನುವುದು ತಿಳಿಯಿತು. ದೇವಾಲಯಗಳಿಂದ ಸಂಗ್ರಹಿಸಿದ ಹಣವನ್ನು ದೇವಾಲಯಗಳ ಅಭಿವೃದ್ಧಿಗೇ ಬಳಸಿರುವುದು ಕೂಡ ಬಜೆಟ್ ಪ್ರತಿಯಿಂದ ತಿಳಿಯಿತು. ಹಿಂದೂ ದೇವಾಲಯಗಳ ಹಣವನ್ನು ದೇವಾಲಯಗಳ ಅಭಿವೃದ್ಧಿಗೆ ಮಾತ್ರ ಬಳಸಲಾಗುವುದು ಎಂದು ರಾಜ್ಯ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು 2024ರ ಫೆ.16ರಂದು ಪ್ರಕಟಣೆಯನ್ನೂ ನೀಡಿದ್ದಾರೆ. ಹಳೆಯ ಪೋಸ್ಟ್ ಅನ್ನು ಕೆಲವರು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಸ್ವಾಧ್ಯಾಯ ಎಂದರೆ ಏನು?

ನುಡಿ ಬೆಳಗು — 140



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಒಬ್ಬ ಗೃಹಸ್ಥ ಇದ್ದ. ಅವ ಸತಿಯ ಪಕ್ಕ ಇದ್ದರೆ ಪತಿ ಆಗ್ತಾನೆ. ಮಕ್ಕಳ ಸಂಬಂಧದಲ್ಲಿ ಅಪ್ಪ ಆಗುತ್ತಾನೆ. ಅಂಗಡಿಗೆ ಹೋಗಿ ಕುಳಿತರೆ ಮಾಲೀಕ ಆಗುತ್ತಾನೆ. ಪತಿಯೂ ಹೌದು, ಅಪ್ಪನೂ ಹೌದು, ಮಾಲೀಕನೂ ಹೌದು. ಎಲ್ಲವೂ ಹೌದು. ಆದರೆ ನಿಜವಾಗಿ ಯಾರು? ಸತಿಯೂ ಇಲ್ಲ, ಮಕ್ಕಳೂ ಇಲ್ಲ, ಅಂಗಡಿಯೂ ಇಲ್ಲದೆ ಇದ್ದಾಗ ನಾನು ಯಾರು ಅನ್ನೋದು ಗೊತ್ತಾಗೋದಿಲ್ಲ ಎಂಬ ಸತ್ಯ ನಮಗೆ ಗೊತ್ತಾಗುತ್ತದೆ. ನಾನು ಯಾರು ಅನ್ನೋದು ಗೊತ್ತಾಗೋದಿಲ್ಲ ಎನ್ನುವುದು ಗೊತ್ತಾಗೋದಕ್ಕೆ ಪತಂಜಲಿ ಮಹರ್ಷಿಗಳು ‘ಸ್ವಾಧ್ಯಾಯ’ ಎಂದು ಕರೆದರು. ಸ್ವಾಧ್ಯಾಯ ಅಂದ್ರ ನಮ್ಮೊಳಗೆ ನಾವೇ ಓದಿಕೊಳ್ಳುವುದು. ಬೇರೆಯವರನ್ನು ಓದೋದಲ್ಲ. ಪುಸ್ತಕಗಳನ್ನು ಓದೋದಲ್ಲ. ನಮ್ಮ ಮಸ್ತಕವನ್ನೇ ಓದೋದು.

‘ನಿನ್ನ ಒಳಗೆ ಹೋಗಿ ನೋಡು, ಯಾರು ನೀನು ಅಂತ. ಎಲ್ಲ ಸಂಬಂಧಗಳ ಜೊತೆಗೆ ನೀನು ಯಾರು ಎಂದು ಹೇಳುತ್ತೀಯ, ಎಲ್ಲ ಸಂಬಂಧಗಳನ್ನು ತೆಗೆದಾಗಲೂ ನೀನು ಇದ್ದೀಯಲ್ಲ. ಹಾಗಾದರೆ ನೀನು ಯಾರು? ಯಾರು ನಾನು ಎಂದು ವಿಚಾರ ಮಾಡು’ ಎಂದು ನಿಜಗುಣರು ಹೇಳ್ತಾರೆ. ಇದೇ ಮಾತನ್ನು ಸಾಕ್ರಟೀಸ್ ಹೇಳ್ತಾರೆ. ಶಂಕರಾಚಾರ್ಯರೂ ಇದನ್ನೇ ಹೇಳ್ತಾರೆ. ನಾನು ಯಾರು ಅನ್ನೋದನ್ನು ತಿಳಿಯಬೇಕಲ್ಲ ಮನುಷ್ಯ. ಇಮ್ಯಾನ್ಯುಯಲ್ ಕಾಂಟ್ ಅಂತ ಒಬ್ಬ ಜರ್ಮನಿಯ ತತ್ವಜ್ಞಾನಿಗಳಿದ್ದರು. ಅವರನ್ನು ಭೇಟಿ ಮಾಡಲು ತುಂಬಾ ಜನ ಬರುತ್ತಿದ್ದರು. ಕಾಂಟ್‌ಗೆ 70 ವರ್ಷ ಆದಾಗ ಮನೆಯ ಕಟ್ಟೆ ಮೇಲೆ ಕುಳಿತಿದ್ದರು. ಆಗ ಒಬ್ಬ ವ್ಯಕ್ತಿ ಬಂದ. ಅವನಿಗೆ ಕಾಂಟ್ ಯಾರು ಎಂದು ಗೊತ್ತಿರಲಿಲ್ಲ. ಅವರಿಗೇ, ‘ಇಮ್ಯಾನ್ಯುಯಲ್ ಕಾಂಟ್ ಎಲ್ಲಿದ್ದಾರೆ’ ಎಂದು ಕೇಳಿದ. ಅದಕ್ಕೆ ಅವರು ‘ನಾನು ಅವನನ್ನು ಹುಡುಕಲು ಆರಂಭಿಸಿ 70 ವರ್ಷ ಆಯಿತು. ಇನ್ನೂ ನನಗೆ ಸಿಕ್ಕಿಲ್ಲ’ ಎಂದು ಉತ್ತರಿಸಿದರು.

‘ಲೋಕದ ಡೊಂಕ ನೀವೇಕೆ ತಿದ್ದುವಿರಿ. ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಕೂಡಲ ಸಂಗ’ ಎಂದು ಬಸವಣ್ಣನವರು ಹೇಳಿದ್ದಾರೆ. ನೆರೆ ಮನೆ ಯಾವುದು? ಬಸವಣ್ಣನವರ ಪ್ರಕಾರ, ನಮ್ಮ ದೇಹವೇ ನಮ್ಮ ನೆರೆಮನೆ. ಅದರೊಳಗೆ ಇರುವ ಆತ್ಮ ಗುರುಮನೆ. ಅದನ್ನು ತಿಳಿದು ಬದುಕಿದರೆ ನಿನ್ನ ದೇಹವೇ ಅರಮನೆ. ತಿಳಿಯದೇ ಬದುಕಿದರೆ ನಿನ್ನ ದೇಹವೇ ಸೆರೆಮನೆಯಾಗಿ ಬಿಡುತ್ತೈತಿ. ಇದನ್ನು ತಿಳಕೋಬೇಕು. ಒಳಗೆ ತಿಳಕೋ ಅಷ್ಟೆ. ಸ್ವಾಧ್ಯಾಯ ಎಂದರೆ ಒಳಗಿನ ಹುಡುಕಾಟ. ಆತ್ಮವಿಮರ್ಶೆ. ನಾನು ಯಾರು? ಯಾತಕ್ಕಾಗಿ ಭೂಮಿಗೆ ಬಂದೆ. ಏನನ್ನು ಮಾಡಬೇಕು ಅನ್ನೋದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದೇ ಸ್ವಾಧ್ಯಾಯ. ನನ್ನ ಸೋಲಿಗೆ ಕಾರಣ ಏನು, ನನ್ನ ಬಂಧನಕ್ಕೆ ಕಾರಣ ಏನು? ನನ್ನ ದುಃಖಕ್ಕೆ ಕಾರಣ ಏನು? ನನ್ನ ನೋವಿಗೆ ಕಾರಣ ಏನು... ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುವುದೇ ಸ್ವಾಧ್ಯಾಯ. ನಾವು ನಮ್ಮ ಮಕ್ಕಳಿಗೆ ಬುದ್ಧಿ ಬರುವುದಕ್ಕೆ ಮೊದಲೇ ರೊಕ್ಕ ಕೊಟ್ಟರೆ ಅವು ಕೆಟ್ಟ ಮಕ್ಕಳಾಗುತ್ತಾರೆ. ಬಡತನವನ್ನು ಕಲಿಸಿದರೆ ಅವರು ಒಳ್ಳೆಯ ಮಕ್ಕಳಾಗುತ್ತಾರೆ. ಮಕ್ಕಳಿಗೆ ಸಂಪತ್ತು ಕೊಡೋದು ತಂದೆಯ ಜವಾಬ್ದಾರಿಯಲ್ಲ. ಕೊಟ್ಟ ಸಂಪತ್ತನ್ನು ಹೇಗೆ ಬಳಸಬೇಕು ಎನ್ನುವ ಸಂಸ್ಕಾರ ಕೊಡೋದು ತಂದೆಯ ಜವಾಬ್ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಫೆಬ್ರುವರಿ 26, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣತ್ರಯೋದಶಿ ಗಂ. 11-09 ನಕ್ಷತ್ರ: ಶ್ರವಣ ಗಂ. 17-23 ಯೋಗ: ಪರಿಘ ಗಂ. 26-57 ಕರಣ: ವಣಿಜ ಗಂ. 11-09, ಕುಂಭ ಮಾಸದ 14 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-51 **ಸೂರ್ಯಾಸ್ತ:** 06-35
ಮುಸ್ಲಿಂ ದಿನಾಂಕ: 27 ಶಬನ್, ದಿನ ವಿಶೇಷ : ಮಹಾ ಶಿವರಾತ್ರಿ
ಅದೃಷ್ಟ ಸಂಖ್ಯೆ: 3, 7

ಮೇಷ: ಎಲ್ಲರೊಂದಿಗೆ ಸಹಕಾರ ಮನೋಭಾವದಿಂದ ಮುಂದುವರೆಯುವುದರಿಂದ ಹೆಚ್ಚಿನ ಯಶಸ್ಸು ಸಿಗುತ್ತದೆ. ನಿಮ್ಮ ಈಗಿನ ಸ್ಥಾನಮಾನಕ್ಕೆ ಕಾರಣವಾದವರನ್ನು ಗೌರವಿಸುವುದು ಆದ್ಯ ಕರ್ತವ್ಯವಾಗಿದೆ.

ವೃಷಭ: ಉದ್ಯೋಗದಲ್ಲಿ ನಿಮ್ಮ ಪ್ರಾಮಾಣಿಕತನದ ಫಲವಾಗಿ ಗೌರವವು ಅಯಾಚಿತವಾಗಿ ಸಿಗಲಿದೆ. ಬೇರೆಯವರ ರಕ್ತ ಅಥವಾ ಗಾಯವನ್ನು ನೋಡಿ ಗಾಬರಿಗೊಳ್ಳುವಿರಿ. ಉಪಯುಕ್ತ ಮಾಹಿತಿಗಾಗಿ ಗ್ರಂಥಾಲಯಕ್ಕೆ ಹೋಗುವಿರಿ.

ಮಿಥುನ: ತಂದೆಯೊಡನೆ ಕೂಡಿ ಅಧ್ಯಾತ್ಮಿಕ ಚಟುವಟಿಕೆಗಳಲ್ಲಿ ವಿಶೇಷ ಪಾತ್ರ ವಹಿಸುವ ಅವಕಾಶ ಈ ದಿನ ನಿಮ್ಮದಾಗಲಿದೆ. ನಿಮಗಿಂತ ಹಿರಿಯರಿಂದ ಪ್ರಶಂಸೆಗೆ ಒಳಗಾಗುವುದು ನಿಮಗೆ ಸಂತಸವನ್ನು ತಂದುಕೊಡುವುದು.

ಕರ್ಕಾಟಕ: ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ತಂದೆ ತಾಯಿಯರ ಮಾತು ಹೊಸ ಪ್ರಯತ್ನಕ್ಕೆ ಸ್ಫೂರ್ತಿಯನ್ನು ತಂದುಕೊಡಲಿದೆ.

ಸಿಂಹ: ತಾಯಿಯವರ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಿ, ಅದರಲ್ಲೂ ಹೊಟ್ಟೆಗೆ ಸಂಬಂಧಿಸಿದ ರೋಗ ಲಕ್ಷಣಗಳು ಅನುಭವಕ್ಕೆ ಬಂದಲ್ಲಿ, ತಡಮಾಡದೆ ಸರಿಯಾದ ವೈದ್ಯರಿಂದ ಚಿಕಿತ್ಸೆ ಪಡೆಯುವುದು ಉತ್ತಮ.

ಕನ್ಯಾ: ಹಲವಾರು ಅವಕಾಶಗಳು ಇದ್ದರೂ ಗೊಂದಲಗೊಳ್ಳದೆ ಸರಿಯಾಗಿರುವುದನ್ನೇ ಆಯ್ಕೆ ಮಾಡಿಕೊಳ್ಳುವಿರಿ. ಕಟ್ಟಿಗೆ ಅಥವಾ ಇಂಧನದ ಮಾರಾಟವು ಲಾಭವನ್ನು ತಂದುಕೊಡಲಿದೆ. ನೀರಿನ ಸಮಸ್ಯೆ ಉಂಟಾಗಬಹುದು.

ತುಲಾ: ವಾರಾಂತ್ಯದಲ್ಲಿ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳುವ ಯೋಜನೆಯನ್ನು ಮಾಡುವಿರಿ. ಈಗ ಚಿನ್ನದ ಖರೀದಿಗೆ ಅಷ್ಟು ಒಳ್ಳೆಯ ಸಮಯವಲ್ಲದಿದ್ದರೂ ಖರೀದಿಯ ಅನಿವಾರ್ಯ ಉಂಟಾಗಬಹುದು.

ವೃಶ್ಚಿಕ: ಹೊತ್ತು-ಗೊತ್ತು, ಆಹಾರ, ವಿಶ್ರಾಂತಿಯಿಲ್ಲದೆ ದುಡಿಯುವ ನಿಮ್ಮ ಬಗ್ಗೆ ಬೇರೆಯವರರು ಅಸೂಯೆ ಪಡುವುದರಿಂದ ಸ್ವಲ್ಪ ಮಟ್ಟಿನ ಆರೋಗ್ಯ ಸಮಸ್ಯೆ ಉಂಟಾಗಬಹುದು. ಸಂತಾನದ ಶುಭ ಸುದ್ದಿ ಕೇಳುವಿರಿ.

ಧನು: ಕಾರ್ಯ ಸಾಧನೆಗೆ ಕೆಲವರ ಅಡ್ಡಗಾಲು ಹಾಗೂ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಇದರಿಂದಾಗಿ ಕಿಂಚಿತ್ ಕಾರ್ಯಸಿದ್ಧಿ ಯಾದರೂ ನೆಮ್ಮದಿ ಕಂಡು ಬರಲಿದೆ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಮಕರ: ಮಕ್ಕಳ ಮೇಲಿನ ಅತಿಯಾದ ವ್ಯಾಮೋಹದಿಂದ ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಘಟನೆ ನಿಮ್ಮ ಬಾಳಲ್ಲಿ ನಡೆಯಬಹುದು. ಕಾಗದದ ಆಮದು ಹಾಗೂ ರಫ್ತು ಉದ್ಯಮದವರಿಗೆ ಉತ್ತಮ ಆದಾಯವಿರುವುದು.

ಕುಂಭ: ಹೊಸ ಆಕಾಂಕ್ಷೆ ಹಾಗೂ ಜೀವನದ ಗುರಿಗಳನ್ನು ಅರಿತುಕೊಂಡು ಮುಂದುವರಿಯುವಿರಿ. ಜೀವನ ಸಂಗಾತಿಯ ದೂರ ಪ್ರಯಾಣವು ದುಃಖವನ್ನು ತರುವುದು. ನೆಮ್ಮದಿ ಪ್ರಾಪ್ತಿಗಾಗಿ ಸ್ತೋತ್ರ ಪಠಣ ಮಾಡಿ.


ಮೀನ: ವ್ಯವಹಾರಸ್ಥರು ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಒಪ್ಪಿಕೊಳ್ಳಲು ಈ ದಿನ ಸೂಕ್ತವಲ್ಲ. ಕೆಲಸಗಳು ಪೂರ್ವ ಯೋಜನೆಯಂತೆ ನಡೆಯುವುದು ಕಷ್ಟಕರ. ವೃತ್ತಿಯಲ್ಲಿ ಶ್ರಮಪಡುವ ಮನೋಭಾವವಿರಲಿ.

ಪದಬಂಧ 5965

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅದಲು ಬದಲು ಅಥವಾ ವಿರೋಧ ಎಂದರೂ ಸರಿ (3)
3.ಧಣಿಯನ್ನು ನೋಡಲು ಸೇರಿದ ಗುಂಪು! (3)
5.ಗರುಡನ ಹತ್ತಿರ ಕಾಣುತ್ತಿರುವ ಚರ್ಮವಾದ್ಯ (4)
7.ಭಜನೆ ಮಾಡುತ್ತಲೇ ಬೇರೆಯಾಗುವಿಕೆ! (4)
9.ನಿಜವಾಗಿಯೂ ರಾತ್ರಿಯಿದು! (3)
11.ಪೂಜ್ಯಳಾದ ಹೆಂಗಸು (2)
12.ಲಡಾಯಿ ನಡೆಯುವಾಗ ಕಾಣಿಸಿದ ದಾರದ ಉಂಡೆ (2)
13.ವಸತಿ ಹತ್ತಿರ ಉಪಪತ್ನಿ ಬಂದಿದ್ದಾಳೆ (3)
15.ಇದಿನ್ನೂ ಎಳೆ ಮಗು (4)
19.ಕೊಬ್ಬಿದ ಆನೆಯಿದು (4)
20.ಬಣ್ಣ ಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ (3)
21.ಲೀಲಾಜಾಲವಾಗಿ ನಡೆದ ಏಲಂ (3)

ಮೇಲಿಂದ ಕೆಳಕ್ಕೆ
1.ಸನಿಹದಲ್ಲಿರುವವ ಕೆಟ್ಟ ಚಟವುಳ್ಳವನು (3)
2.ಸರ ತಂದದ್ದಕ್ಕೇ ಈ ಸಂಭ್ರಮ! (4)
4.ಅನುಜನ ಬಳಿಯಿರುವ ರಾಕ್ಷಸ (3)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ಎಲ್ಲೆ ಬಳಿ ತಲೆದೋರಿದ ಶೀತ (3)
10.ವಾಸಸ್ಥಾನ ಇಲ್ಲಿದೆ (3)
11.ಆರೋಹಣದಲ್ಲಿರುವ ಸವಾರ ಕಾಣುತ್ತಿದ್ದಾನೆಯೇ? (3)
14.ಎಳ್ಳು ನೀರು ಬಿಡುವಿಕೆ (4)
16.ಪರ್ಣ ಶಾಲೆಯ ಹತ್ತಿರವಿರುವ ಗರುಡ (3)
17.ಸುಗಮವಾಗಿ ಕಿತ್ತಿರುವ ಹೂ (2)
18.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



5964ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖಚಿತ 3.ರಹದಾರಿ
5.ಆರಿದ್ರ 6.ರವಾನೆ
8.ಕಸಿವಿಸಿ 9.ನವಮಾಸ
11.ಕದಪು 13.ಶಪಥ
16.ತ್ರಯೋದಶಿ 17.ಜಹಜು

ಮೇಲಿಂದ ಕೆಳಕ್ಕೆ:
1.ಖಳನಾಯಕ 2.ತಮಾಷೆ
3.ರಚಾಮಾವಾ 4.ರಿಪೇರಿ
6.ರಸಿಕ 7.ನೆನಪು
10.ಸರಬರಾಜು 12.ದರವೇಶಿ
14.ಪವಿತ್ರ 15.ಮನುಜ

ಸುಡೊಕು 6350

		4		7	1			3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6349 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ನಿರ್ವಾಹಕನ ಮೇಲೆ ಹಲ್ಲೆ ಪ್ರಕರಣದ ಪ್ರತಿಧ್ವನಿ • ನಾಲ್ಕನೇ ದಿನವು ಗಡಿದಾಟದ ಉಭಯ ರಾಜ್ಯಗಳ ಸಾರಿಗೆ ಬಸ್‌ಗಳು

ಮಹಾರಾಷ್ಟ್ರ ಜೊತೆ ಚರ್ಚೆಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ



ರಾಮಲಿಂಗಾ ರೆಡ್ಡಿ

ಬೆಂಗಳೂರು: 'ಬೆಳಗಾವಿಯಲ್ಲಿ ಮರಾಠಿ ಭಾಷಿಕರು ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವ ಕುರಿತು ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಲು ಮುಖ್ಯ ಕಾರ್ಯದರ್ಶಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ನಿರ್ವಾಹಕನ ಮೇಲೆ ಹಲ್ಲೆ ಕುರಿತು ಮಂಗಳವಾರ ಮುಖ್ಯಮಂತ್ರಿ ಅವರ ಜೊತೆಗೆ ಚರ್ಚಿಸಿದ ಬಳಿಕ ಮಾತನಾಡಿದ ಸಚಿವರು, 'ಮಹಾರಾಷ್ಟ್ರಕ್ಕೆ ನಿತ್ಯ ತೆರಳುತ್ತಿದ್ದ ರಾಜ್ಯದ 509 ಮತ್ತು ಮಹಾರಾಷ್ಟ್ರದಿಂದ ಬರುತ್ತಿದ್ದ 130 ಬಸ್‌ಗಳ ಸಂಚಾರ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ' ಎಂದರು.

'ರಾಜ್ಯದ ಬಸ್‌ಗಳಿಗೆ ಮಹಾರಾಷ್ಟ್ರದವರು ಕಪ್ಪು ಮಸಿ ಬಳಿದಿದ್ದಾರೆ. ಮಹಾರಾಷ್ಟ್ರ ಬಸ್‌ಗೆ ನಮ್ಮವರು ಬಣ್ಣ ಬಳಿದಿಲ್ಲ. ಇದನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತಂದಿದ್ದೇನೆ. ಮಹಾರಾಷ್ಟ್ರ ಸರ್ಕಾರ ಮತ್ತು ಪೊಲೀಸ್ ಅಧಿಕಾರಿಗಳ ಜೊತೆಗೆ ಚರ್ಚಿಸಲು ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಮುಖ್ಯಮಂತ್ರಿ ಸೂಚಿಸಿದರು' ಎಂದು ತಿಳಿಸಿದರು.

'ಮಹಾರಾಷ್ಟ್ರದವರಿಗೆ ಅನ್ಯಾಯ ಆಗಿದ್ದರೆ ಪ್ರತಿಭಟಿಸಲಿ. ಆದರೆ, ಬಸ್‌ಗಳಿಗೆ ಹಾನಿ ಮಾಡುವುದು ಸರಿಯಲ್ಲ. ಎಂಇಎಸ್ ಪುಂಡರ ಹಾವಳಿ ತಡೆಯಲು ಗೃಹ ಸಚಿವರು ಪೊಲೀಸರಿಗೆ ಸೂಚನೆ ನೀಡಿದ್ದಾರೆ' ಎಂದೂ ಹೇಳಿದರು.



ಬೆಳಗಾವಿಯ ರಾಣಿ ಚನ್ನಮ್ಮನ ವೃತ್ತದಲ್ಲಿ ಕರವೇ (ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಕನ್ನಡ ಮಾತನಾಡಿ ಎಂದವರ ಮೇಲೆ ಹಲ್ಲೆಯಾಗುತ್ತದೆ ಎಂಬುದು ಆಘಾತ, ಆತಂಕ ಮೂಡಿಸಿದೆ. ಗಡಿ ಭಾಗದ ಕನ್ನಡಿಗರಿಗೆ ರಕ್ಷಣೆ ಒದಗಿಸಬೇಕು
ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಶಿವಸೇನಾವನ್ನು ಕೇಂದ್ರ ನಿಷೇಧಿಸಬೇಕು. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮರಾಠಿಯಲ್ಲಿ ಮಾತನಾಡುವುದನ್ನು ಬಿಡಬೇಕು
ಪ್ರವೀಣ ಶೆಟ್ಟಿ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ

ಬೆಳಗಾವಿಯ ಜನಪ್ರತಿನಿಧಿಗಳು ಮತಗಳ ಆಸೆಗೆ ಮರಾಠಿಗರ ಜತೆ ಒಳಒಪ್ಪಂದ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು
ಟಿ.ಎ.ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ

ಕನ್ನಡ, ಮರಾಠಿ ಭಾಷಾ ಬಾಂಧವ್ಯ ಹದಗೆಡಿಸುವ ಮಹಾರಾಷ್ಟ್ರದ ಸಂಘಟನೆಗಳಿಗೆ ರಾಜ್ಯದಲ್ಲಿ ಅವಕಾಶ ಕೊಡಬಾರದು.
ಬಸವ ಜಯಮೃತ್ಯುಂಜಯ ಸ್ವಾಮೀಜಿ, ಲಿಂಗಾಯತ ಪಂಚಮಸಾಲಿ ಪೀಠ

ಎಂಇಎಸ್, ಶಿವಸೇನಾ ವಿರುದ್ಧ ಕರವೇ ಆಕ್ರೋಶ

ಬೆಳಗಾವಿ: ಬಸ್ ನಿರ್ವಾಹಕನ ಮೇಲೆ ಹಲ್ಲೆ, ಪೋಕ್ಸೊ ಪ್ರಕರಣ ದಾಖಲಿಸಿದ್ದನ್ನು , ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ.ನಾರಾಯಣಗೌಡ ಬಣ ಮತ್ತು ಪ್ರವೀಣ ಶೆಟ್ಟಿ ಬಣದ ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು. ಮಹಾರಾಷ್ಟ್ರದ ವಿರುದ್ಧ ಧಿಕ್ಕಾರ ಕೂಗಿದರು.

ರಾಣಿ ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದ ಪ್ರವೀಣ ಶೆಟ್ಟಿ ಬಣದ ಕಾರ್ಯಕರ್ತರು ಸಣ್ಣ ಬಾಳೇಕುಂದ್ರಿಗೆ ಹೋಗಲು ಮುಂದಾದಾಗ, ಅವರನ್ನು ಪೊಲೀಸರು ವಶಕ್ಕೆ ಪಡೆದರು. ನಂತರ ಬಿಡುಗಡೆ ಮಾಡಿದರು.

ರಾಣಿ ಚನ್ನಮ್ಮ ವೃತ್ತ ವೃತ್ತದಲ್ಲಿ ಪ್ರತಿಭಟಿಸಿದ ನಾರಾಯಣಗೌಡ ಬಣದ ಕಾರ್ಯಕರ್ತರು, ಕನ್ನಡದ ಬಾವುಟಗಳನ್ನು ಬೀಸಿ ಜೈಕಾರ ಕೂಗಿದರು. ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ, ಮುಖಂಡರಾದ ಸುರೇಶ ಗವನ್ನವರ, ಪ್ರಮೋದ ಹೊಸಮನಿ, ರುದ್ರಗೌಡ ಪಾಟೀಲ ಇದ್ದರು.

4ನೇ ದಿನವು ಬಸ್ ಸ್ಥಗಿತ: ಕರ್ನಾಟಕ– ಮಹಾರಾಷ್ಟ್ರ ನಡುವಿನ ಬಸ್‌ಗಳ ಸಂಚಾರ 4ನೇ ದಿನವಾದ ಮಂಗಳವಾರವೂ ಸ್ಥಗಿತವಾಗಿತ್ತು. ಬಸ್‌ಗಳು ಆಯಾ ರಾಜ್ಯಗಳ ಗಡಿಗಳವರೆಗಷ್ಟೇ ಸಂಚರಿಸಿದವು.

ಮಹಾರಾಷ್ಟ್ರ ಬಸ್‌ಗೆ ಮಸಿ: ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ಚಿತ್ರದುರ್ಗ-ಸೋಲಾಪುರ ಹೆದ್ದಾರಿ–50ರ ಕೂಡಲಸಂಗಮ ಕ್ರಾಸ್‌ನಲ್ಲಿ ಕರವೇ ಕಾರ್ಯಕರ್ತರು ಸೋಮವಾರ ರಾತ್ರಿ ಮಹಾರಾಷ್ಟ್ರ ಸಾರಿಗೆ ಬಸ್ ತಡೆದು, ಫಲಕದ ಮೇಲೆ ಕಪ್ಪು ಮಸಿ ಬಳಿದರು.

ಚಾಲಕ, ನಿರ್ವಾಹಕನಿಗೆ ಕನ್ನಡ ಶಾಲು ಹಾಕಿ, ಧ್ವಜ ನೀಡಿ 'ಜೈ ಕರ್ನಾಟಕ, ಜೈ ಕನ್ನಡ' ಎಂಬ ಘೋಷಣೆ ಹೇಳಿಸಿದರು. ಮರಾಠಿ ನಾಮಫಲಕಗಳಿಗೆ ಮಸಿ ಬಳಿದು 'ಜೈ ಕರ್ನಾಟಕ, ಜೈ ಕನ್ನಡ' ಎಂದು ಬರೆದು, ಕನ್ನಡ ಬಾವುಟ ಹಾರಿಸಿದರು. ನಂತರ ಬಸ್ ಬೆಂಗಳೂರಿಗೆ ತೆರಳಲು ಬಿಟ್ಟರು.

ಕರವೇ ಕೂಡಲಸಂಗಮ ಘಟಕದ ಅಧ್ಯಕ್ಷ ಸಂಜು ಗೌಡರ, ಪದಾಧಿಕಾರಿಗಳಾದ ಪ್ರವೀಣ ವಾಲಿಕಾರ, ಸೋಹಿಲ್ ಸುತ್ತಾರ, ಮಂಜು ವಡ್ಡರ, ಸಂಗಮೇಶ ಹೊತ್ತಗಿ ಇದ್ದರು.

'ಪೋಕ್ಸೊ ಪ್ರಕರಣ ಹಿಂಪಡೆಯುತ್ತೇವೆ'

'ಬಸ್ ನಿರ್ವಾಹಕನ ವಿರುದ್ಧ ದಾಖಲಿಸಿದ ಪೋಕ್ಸೊ ಪ್ರಕರಣ ಹಿಂಪಡೆಯುವುದಾಗಿ ಬಾಲಕಿ ಪಾಲಕರು ವಿಡಿಯೊ ಹೇಳಿಕೆ ನೀಡಿದ್ದಾರೆ. ಇದನ್ನು ಸಾಕ್ಷ್ಯವಾಗಿ ಬಳಸಿಕೊಳ್ಳಲಾಗುವುದು' ಎಂದು ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ತಿಳಿಸಿದರು.

'ಪಾಲಕರು ಸ್ವಪ್ರೇರಣೆಯಿಂದ ಪ್ರಕರಣ ಹಿಂಪಡೆಯಲು ಇಚ್ಛಿಸಿದ್ದಾರೆ. ಬಸ್‌ನಲ್ಲಿ ಕಂಡಕ್ಟರ್ ಮತ್ತು ತಮ್ಮ ಮಗಳ ನಡುವೆ ಜಗಳವಾಗಿದೆ. ಇದು ಕನ್ನಡ– ಮರಾಠಿಗರ ಜಗಳ ಅಲ್ಲ ಎಂಬ ಸಂದೇಶವನ್ನು ವಿಡಿಯೊದಲ್ಲಿ ತಿಳಿಸಿದ್ದಾರೆ' ಎಂದರು.

'ಪ್ರಕರಣದಲ್ಲಿ ಸರಿಯಾದ ಕ್ರಮವಹಿಸದ ಕಾರಣ ಮಾರಿಹಾಳ ಸಿಪಿಐ ಗುರುರಾಜ ಕಲ್ಯಾಣಶೆಟ್ಟಿ ಅವರನ್ನು ವರ್ಗ ಮಾಡಲಾಗಿದೆ' ಎಂದು ತಿಳಿಸಿದರು.

'ಮಹಾ' ಬಸ್‌ಗಳಿಗೆ ಭದ್ರತೆ?



ಪ್ರತಾಪ್ ಸರ್‌ನಾಯಕ್

ಮುಂಬೈ(ಪಿಟಿಐ): 'ಕರ್ನಾಟಕಕ್ಕೆ ತೆರಳುವ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ (ಎಂಎಸ್ ಆರ್‌ಟಿಸಿ) ಭದ್ರತೆಗಾಗಿ ಮಾರ್ಷಲ್ಸ್ ಅಥವಾ ಪೊಲೀಸರನ್ನು ನಿಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ' ಎಂದು ಮಹಾರಾಷ್ಟ್ರದ ಸಾರಿಗೆ ಸಚಿವ ಪ್ರತಾಪ್ ಸರ್‌ನಾಯಕ್ ತಿಳಿಸಿದ್ದಾರೆ.

'ಬಸ್ ಸೇವೆ ಅಮಾನತುಗೊಳಿಸಿದ್ದರಿಂದ, ಪ್ರಯಾಣಿಕರು ಸಂಕಷ್ಟಕ್ಕೆ ಒಳಗಾಗಬಾರದು. ಅವರಿಗೆ ಭದ್ರತೆ ಒದಗಿಸುವ ಬಗ್ಗೆ ಚಿಂತನೆ ನಡೆದಿದೆ. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಾರಿಗೆ ಇಲಾಖೆಯ ಅಧಿಕಾರಿಗಳು ಕರ್ನಾಟಕದ ಅಧಿಕಾರಿಗಳ ಜೊತೆಗೆ ಮಾತುಕತೆ ನಡೆಸಿದ್ದಾರೆ' ಎಂದರು.

'ಪ್ರಯಾಣಿಕರಿಗೆ ಭದ್ರತೆ ಒದಗಿಸುವುದು ಕರ್ನಾಟಕ ಸರ್ಕಾರದ ಜವಾಬ್ದಾರಿ. ಒಂದೊಮ್ಮೆ ಅವರು ಆ ಕೆಲಸ ಮಾಡದಿದ್ದರೆ, ಮಹಾರಾಷ್ಟ್ರ ಸರ್ಕಾರವೇ ಮಾಡಲಿದೆ' ಎಂದು ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಮ್ ತಿಳಿಸಿದ್ದಾರೆ.

ಸುಮ್ಮನಿರುವ ಪ್ರಶ್ನೆಯೇ ಇಲ್ಲ: ತಂಗಡಗಿ

ಬೆಳಗಾವಿ: 'ಕನ್ನಡದ ವಿಚಾರಕ್ಕೆ ಎಂಇಎಸ್ ಕಾರ್ಯಕರ್ತರು ಬಂದರೆ ಸುಮ್ಮನಿರುವ ಪ್ರಶ್ನೆಯೇ ಇಲ್ಲ' ಎಂದು ಸಚಿವ ಶಿವರಾಜ ತಂಗಡಗಿ ಎಚ್ಚರಿಕೆ ನೀಡಿದರು. 'ಎಂಇಎಸ್ ಕಾರ್ಯಕರ್ತರ ವರ್ತನೆ ಇದೇ ರೀತಿ ಮುಂದುವರಿದರೆ ಗೂಂಡಾ ಪ್ರಕರಣ ದಾಖಲಿಸಿ ಜೈಲಿಗೆ ಅಟ್ಟಬೇಕಾಗುತ್ತದೆ' ಎಂದರು.

ಬೆಳಗಾವಿಯಲ್ಲಿ ಕೆಲ ರಾಜಕಾರಣಿಗಳು ಎಂಇಎಸ್ ಕುರಿತು ಮೃದು ಧೋರಣೆ ಹೊಂದಿದ್ದಾರೆ. ಎಂಇಎಸ್ ನಿಷೇಧಕ್ಕೆ ಸರ್ಕಾರ ಹಿಂಜರಿಯಬಾರದು
ಬಸವರಾಜ ಹೊರಟ್ಟಿ, ವಿಧಾನ ಪರಿಷತ್ತಿನ ಸಭಾಪತಿ

ಮುಡಾ: ಇ.ಡಿಗೆ ನೀಡಿದ್ದ ಆದೇಶ ವಿಸ್ತರಣೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಅಕ್ರಮ ಪ್ರಕರಣದಲ್ಲಿ; 'ಮುಡಾಗೆ ಸೇರಿದ ದಟ್ಟಗಳ್ಳಿಯ ಜಮೀನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದ್ದು, ಸದ್ಯ ಈ ಕುರಿತು ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಇ.ಡಿಗೆ ನೀಡಿದ್ದ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ.

ಈ ಸಂಬಂಧ ಮೈಸೂರಿನ 'ಚಾಮುಂಡೇಶ್ವರಿ ನಗರ ಸರ್ವೋದಯ ಸಂಘ'ದ ಕಾರ್ಯದರ್ಶಿ ಭೋಜರಾಜ ಸಲ್ಲಿಸಿದ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ. ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಇದೇ ವೇಳೆ ಮುಡಾದ ಹಾಲಿ ಆಯುಕ್ತ ಎ.ಎನ್.ರಘುನಂದನ ಪರ ಸಿ.ಪಿ.ವಿವೇಕಾನಂದ ವಕಾಲತ್ತು ಸಲ್ಲಿಸಿದರು. ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿದ ಪೀಠ, ವಿಚಾರಣೆಯನ್ನು ಮಾರ್ಚ್ 14ಕ್ಕೆ ಮುಂದೂಡಿತು.

ಸಾಮೂಹಿಕ ನಾಯಕತ್ವ: ಡಿಕೆಶಿ

ಪ್ರಜಾವಾಣಿ ವಾರ್ತೆ



ರಾಜ್ಯದಲ್ಲಿ ಪಕ್ಷಕ್ಕೆ ಶಕ್ತಿ ಬಂದಿದ್ದೇ ನಾನು ಅಧ್ಯಕ್ಷನಾದ ಬಳಿಕ. ಪಕ್ಷವನ್ನು ಬಲಪಡಿಸುವ ಇನ್ನಷ್ಟು ಯೋಜನೆಗಳನ್ನು ಹಮ್ಮಿಕೊಂಡಿದ್ದೇನೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ನವದೆಹಲಿ: ಪಕ್ಷದ ನಾಯಕರು ಸಾಮೂಹಿಕ ನಾಯಕತ್ವದಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಮಂಗಳವಾರ ಭೇಟಿಯಾದ ಬಳಿಕ ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು.

'ಯಾವುದೇ ಹುದ್ದೆಯಲ್ಲಿ ಇದ್ದರೂ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವುದು ನನ್ನ ಕರ್ತವ್ಯ' ಎಂದು ಬೆಂಗಳೂರಿನಲ್ಲಿ ಸೋಮವಾರ ಅವರು ಹೇಳಿದ್ದರು. ಕೆ.ಸಿ.ವೇಣುಗೋಪಾಲ್ ಅವರ ಜೊತೆಗೆ ಶಿವಕುಮಾರ್ ಮುಕ್ಕಾಲು ಗಂಟೆ ಚರ್ಚಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಸಚಿವರು ನೀಡುತ್ತಿರುವ ಹೇಳಿಕೆಗಳಿಗೆ ಶಿವಕುಮಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಗೊಂದಲ ಸೃಷ್ಟಿಸುವ ಇಂತಹ ಹೇಳಿಕೆಗಳಿಗೆ ಹೈಕಮಾಂಡ್ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಮುಂದಿನ ತಿಂಗಳು ನಡೆಯಲಿರುವ ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಹೊಸ ಕಾಂಗ್ರೆಸ್ ಭವನದ ಶಿಲಾನ್ಯಾಸ ಸಮಾರಂಭಕ್ಕೆ ಆಹ್ವಾನಿಸಿದರು. ರಾಜ್ಯದಾದ್ಯಂತ 100 ಸ್ಥಳಗಳಲ್ಲಿ ಪಕ್ಷದ ಕಚೇರಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಅವರು ವೇಣುಗೋಪಾಲ್ ಗಮನಕ್ಕೆ ತಂದರು.

'ಪಕ್ಷ ಬಲಪಡಿಸುವ ಯೋಜನೆಗಳನ್ನು ಪೂರ್ಣಗೊಳಿಸಲು ನಾಯಕರ ಸಹಕಾರ ಬೇಕು. ಆದರೆ, ಕೆಲವು ಸಚಿವರು ಅನಗತ್ಯ ಹೇಳಿಕೆ ನೀಡಿ ದಿಕ್ಕುತಪ್ಪಿಸುತ್ತಿದ್ದಾರೆ. ಇದರಿಂದ ಸಂಘಟನೆ ಮೇಲೆ ಹೊಡೆತ ಬೀಳುತ್ತಿದೆ' ಎಂದು ಅವರು ದೂರಿದರು ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಹೇಳಿಕೆಗಳನ್ನು ನೀಡದಂತೆ ಸಚಿವರಿಗೆ ಈಗಾಗಲೇ ತಾಕೀತು ಮಾಡಲಾಗಿದೆ ಎಂದು ವೇಣುಗೋಪಾಲ್ ತಿಳಿಸಿದರು ಎಂದು ಗೊತ್ತಾಗಿದೆ.

'ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಅದಕ್ಕಾಗಿ ಪಕ್ಷವನ್ನು ಸಜ್ಜುಗೊಳಿಸಲಾಗುತ್ತಿದೆ. ಪಕ್ಷವನ್ನು ಮತ್ತಷ್ಟು ಬಲಪಡಿಸಲು ಜಿಲ್ಲಾ ಘಟಕದ ಅಧ್ಯಕ್ಷರು ಸೇರಿದಂತೆ ಕೆಲವು ಪದಾಧಿಕಾರಿಗಳನ್ನು ಬದಲಾಯಿಸುವುದಾಗಿ ಅವರು ಪಕ್ಷದ ಉನ್ನತ ನಾಯಕರಲ್ಲಿ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

'ಬಜೆಟ್ ಅಧಿವೇಶನ ಮುಗಿದ ಬಳಿಕ ಸಚಿವರು ಜಿಲ್ಲಾ ಪ್ರವಾಸ ಮಾಡಬೇಕು. ಪಕ್ಷದ ಕಚೇರಿಗೆ ಭೇಟಿ ನೀಡಬೇಕು. ಜಿಲ್ಲೆಗಳಲ್ಲಿ ಕಾರ್ಯಕರ್ತರ ಕಷ್ಟ ಆಲಿಸಬೇಕು. ಮುಂದಿನ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಬೇಕು' ಎಂದು ಹೇಳಿದರು.

ಸುದ್ದಿ 2 ನಿಮಿಷ

'ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ'

ಮೈಸೂರು: 'ಪಕ್ಷದಲ್ಲಿ ಸ್ಥಾನಮಾನ ನೀಡದ ಬಗ್ಗೆ ತಳಮಟ್ಟದ ಕಾರ್ಯಕರ್ತರಲ್ಲಿ ಅಸಮಾಧಾನವಿದೆ. ಅದನ್ನು ಮೊದಲು ನೀಗಿಸುವ ಕೆಲಸ ಮಾಡುವೆ. ನಾನು ರಾಜ್ಯಾಧ್ಯಕ್ಷ ಹುದ್ದೆಯ ಆಕಾಂಕ್ಷಿಯಲ್ಲ. ಆ ನೇಮಕದ ಬಗ್ಗೆ ಚರ್ಚೆ ನಡೆದಿಲ್ಲ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯಾಧ್ಯಕ್ಷರಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರೇ ಮುಂದುವರಿಯಬೇಕೆಂಬುದು ಎಲ್ಲರ ಅಭಿಪ್ರಾಯ. ನಾನು ಪಕ್ಷದ ಸಾಮಾನ್ಯ ಕಾರ್ಯಕರ್ತ' ಎಂದರು.

'ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿ ಬಗ್ಗೆ ವರಿಷ್ಠರು ಚರ್ಚಿಸುತ್ತಾರೆ. ಜಿಲ್ಲಾ ಪಂಚಾಯಿತಿ ಚುನಾವಣೆ ಸಂಬಂಧ ಶಾಸಕರು ಹಾಗೂ ಮುಖಂಡರೊಂದಿಗೆ ಸಭೆ ನಡೆಸಲಾಗಿದೆ. ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವುದೇ ಗುರಿ. ಮಾರ್ಚ್ 14ರೊಳಗೆ ಡಿಜಿಟಲ್ ಸದಸ್ಯತ್ವ ಅಭಿಯಾನವನ್ನು ಆರಂಭಿಸಲಾಗುವುದು' ಎಂದರು.

ಆರೋಪಿ ಜೊತೆ ಸೆಲ್ಫಿ: ಕಾನ್‌ಸ್ಟೆಬಲ್ ಅಮಾನತು

ಮಂಗಳೂರು: ಸೈಬರ್ ವಂಚನೆ ಪ್ರಕರಣದಲ್ಲಿ ಬಂಧಿಸಿದ್ದ ಆರೋಪಿ ಜೊತೆಗೆ ಇಲ್ಲಿಯ ಉರ್ವ ಠಾಣೆಯ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಪೀಟರ್ ಡಿಸೋಜ ಸೆಲ್ಫಿ ತೆಗೆಸಿಕೊಂಡಿದ್ದು, ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ. ಪೀಟರ್ ಡಿಸೋಜ ಅವರನ್ನು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಅಮಾನತು ಮಾಡಿದ್ದಾರೆ. ಉರ್ವ ಠಾಣೆಯ ಇನ್‌ಸ್ಪೆಕ್ಟರ್ (ಭಾರತಿ) ಅವರ ವಿರುದ್ಧ ಇಲಾಖಾ ಶಿಸ್ತು ಕ್ರಮಕೈಗೊಂಡಿದ್ದಾರೆ.

'ತನಿಖೆಗೆ ತೆರಳಿದ್ದಾಗ ಆರೋಪಿ ರಾಜ್ ಕುಮಾರ್ ಜೊತೆ ಸೆಲ್ಫಿ ತೆಗೆಸಿಕೊಂಡಿರುವುದು ಇಲಾಖಾ ಶಿಸ್ತಿನ ಉಲ್ಲಂಘನೆ. ಠಾಣೆ ಇನ್‌ಸ್ಪೆಕ್ಟರ್ ಅವರೂ ಘಟನೆ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ' ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ತನಿಖೆಗಾಗಿ ಆರೋಪಿಗಳನ್ನು ರಾಜಸ್ಥಾನದ ಜೈಪುರಕ್ಕೆ ವಿಮಾನದಲ್ಲಿ ಕರೆದೊಯ್ಯಲಾಗಿತ್ತು. 'ವಿಮಾನಯಾನ ವೆಚ್ಚವನ್ನು ಆರೋಪಿಗಳೇ ಭರಿಸಿದ್ದರು. ರಾಜಸ್ಥಾನದಲ್ಲಿ ಕೆಲವು ಪ್ರವಾಸಿ ತಾಣಗಳಿಗೂ ಸಿಬ್ಬಂದಿ ಆರೋಪಿಗಳ ಜೊತೆ ಭೇಟಿ ನೀಡಿದ್ದರು' ಎಂಬ ಆರೋಪವಿದೆ. ಇದನ್ನು ಪೊಲೀಸ್ ಕಮಿಷನರ್ ಅಲ್ಲಗಳೆದಿದ್ದಾರೆ.

'ಖಾಸಗಿ ವಿ.ವಿಗಳಿಗೆ ಮಣೆ'

ಪ್ರಜಾವಾಣಿ ವಾರ್ತೆ



ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ, ಎನ್‌ಇಪಿ ಕುರಿತು ಸಚಿವ ಡಾ.ಎಂ.ಸಿ. ಸುಧಾಕರ್ ಅವರೊಂದಿಗೆ ಬಹಿರಂಗ ಚರ್ಚೆಗೆ ಸಿದ್ಧ
ಡಾ.ಸಿ.ಎನ್. ಅಶ್ವತ್ಥನಾರಾಯಣ, ಶಾಸಕ

ಬೆಂಗಳೂರು: 'ಕ್ವಿನ್ ಸಿಟಿ' ಹೆಸರಲ್ಲಿ ದೇಶ, ವಿದೇಶಗಳ ವಿಶ್ವವಿದ್ಯಾಲಯಗಳಿಗೆ ರತ್ನಗಂಬಳಿ ಹಾಸುತ್ತಿರುವ ರಾಜ್ಯ ಸರ್ಕಾರ, ಬಡ ಮಕ್ಕಳ ಉನ್ನತ ಶಿಕ್ಷಣಕ್ಕೆ ವರವಾಗಿರುವ ಸರ್ಕಾರ ಸ್ಥಾಪಿಸಿದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿದೆ ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ಸಂಶೋಧನಾ ಚಟುವಟಿಕೆಗಳಿಗಾಗಿ ಮಹಾರಾಣಿ ಕ್ಲಸ್ಟರ್, ಮಂಡ್ಯ ವಿಶ್ವವಿದ್ಯಾಲಯ ಸ್ಥಾಪಿಸಲು ಅವಕಾಶ ನೀಡಿದ್ದೇ ಕೇಂದ್ರದ ಯುಪಿಎ ಸರ್ಕಾರ. ನೃಪತುಂಗ ವಿಶ್ವವಿದ್ಯಾಲಯ ಸೇರಿ ಮೂರೂ ವಿಶ್ವವಿದ್ಯಾಲಯಗಳಿಗೆ ಕೇಂದ್ರ ಸರ್ಕಾರ ₹50 ಕೋಟಿ, ನಂತರ ₹20 ಕೋಟಿ ನೀಡಿದೆ. ಈ ಹಣ ಬಳಕೆ ಮಾಡಿಕೊಂಡಿರುವ, ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ಸಂಯೋಜಿತವಾದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಹೊಸ ವಿಶ್ವವಿದ್ಯಾಲಯಗಳನ್ನು ರಚಿಸಿದ್ದರಿಂದ ಅಧಿಕ ಸಂಖ್ಯೆಯ ವಿದ್ಯಾರ್ಥಿ ಗಳಿಗೆ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ಹಿಂದೆ ಇದ್ದ ವಿಶ್ವವಿದ್ಯಾಲಯದ ಜಾಗ, ಅಧಿಕಾರಿ, ಸಿಬ್ಬಂದಿಯನ್ನೇ ಬಳಸಿಕೊಂಡು ಕೆಲಸ ಮಾಡಿವೆ. ಸರ್ಕಾರಕ್ಕೆ ಆರ್ಥಿಕ ಹೊರೆಯಾಗದೆ, ಸ್ಥಳೀಯ ಸಂಪನ್ಮೂಲಗಳಿಂದಲೇ ಸುಗಮ ಕಾರ್ಯನಿರ್ವಹಣೆ ಮಾಡಿವೆ. ಮಹಾರಾಣಿ ಕ್ಲಸ್ಟರ್, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಇದಕ್ಕೆ ಪುರಾವೆ ಎಂದರು.

ಒಂದೆರಡು ವಿಶ್ವವಿದ್ಯಾಲಯಗಳು ಸಮಸ್ಯೆ ಎದುರಿಸಿರಬಹುದು. ಅವುಗಳಿಗೆ ಸ್ವಲ್ಪ ನೆರವು ನೀಡಿದರೂ ಚೇತರಿಸಿಕೊಳ್ಳುತ್ತವೆ. ಪ್ರತಿ ವಿಶ್ವವಿದ್ಯಾನಿಲಯಕ್ಕೆ ₹342 ಕೋಟಿ ಬೇಕು ಎಂದು ಸರ್ಕಾರ ಹೇಳಿದೆ. ಈ ಕುರಿತು ತಜ್ಞರ ಸಮಿತಿಯ ವರದಿ ಇದ್ದರೆ ಬಹಿರಂಗಪಡಿಸಲಿ. ಈ ಕುರಿತು ಸದನದಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು.

ರದ್ದು ಮಾಡಿದರೆ ಪುನರ್ ಸ್ಥಾಪನೆ: ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ. ಆಗ 9 ವಿಶ್ವ ವಿದ್ಯಾಲಯಗಳನ್ನು ಪುನರ್ ಆರಂಭಿಸುವ ಜತೆಗೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಲಿದೆ. ರಾಜ್ಯ ಸರ್ಕಾರದ ನಿರ್ಧಾರದಿಂದ ಉನ್ನತ ಶಿಕ್ಷಣದ ಪ್ರಗತಿಗೆ ಅಡ್ಡಿಯಾಗುತ್ತದೆ ಎಂದು ಅಶ್ವತ್ಥ ನಾರಾಯಣ ಹೇಳಿದರು.

ನಿಧನ ವಾರ್ತೆ

ವಿಮಲಾ ರಂಗಾಚಾರ್



ಬೆಂಗಳೂರು: ರಂಗ ಕಲಾವಿದೆ ವಿಮಲಾ ರಂಗಾಚಾರ್ (97) ಅವರು ಮಂಗಳವಾರ ಸಂಜೆ ನಿಧನರಾದರು.

ವಿಮಲಾ ಅವರು ಮೈಸೂರು ರಾಜ್ಯ ಸಂಗೀತ ಅಕಾಡೆಮಿ ಹಾಗೂ ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾದ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದರು. ಬೆಂಗಳೂರಿನ ಎಂಇಎಸ್ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಅಧ್ಯಕ್ಷರಾಗಿದ್ದರು. ಬೆಂಗಳೂರಿನ ಸೇವಾ ಸದನ ಕಟ್ಟಿ ಬೆಳೆಸಿದ ಅವರು, ಭಾರತೀಯ ನಾಟ್ಯ ಸಂಘದ ಕರ್ನಾಟಕ ಘಟಕದ ಅಧ್ಯಕ್ಷರಾಗಿದ್ದರು. ಬೆಂಗಳೂರಿನ ಎಡಿಎ ರಂಗಮಂದಿರದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿಮಲಾ ಅವರು, ಅದರ ಗೌರವ ಕಾರ್ಯದರ್ಶಿಯೂ ಆಗಿದ್ದರು.

ಅವರ ಮಗಳು ರೇವತಿ ವಿದೇಶದಲ್ಲಿದ್ದಾರೆ. ಮೃತರ ಅಂತ್ಯಕ್ರಿಯೆ ಫೆಬ್ರುವರಿ 27ರಂದು (ಗುರುವಾರ) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಸರಕೋಡ ಟೊಂಕದಲ್ಲಿ ಜಮಾಯಿಸಿದ ಜನ • ಪೊಲೀಸರ ಬಂದೋಬಸ್ತ್

ವಾಣಿಜ್ಯ ಬಂದರು: ಸಮೀಕ್ಷೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಹೊನ್ನಾವರ(ಉತ್ತರಕನ್ನಡ ಜಿಲ್ಲೆ): ಕಾಸರಕೋಡ ಟೊಂಕದಲ್ಲಿ ಉದ್ದೇಶಿತ ವಾಣಿಜ್ಯ ಬಂದರು ನಿರ್ಮಾಣಕ್ಕೆ ಸಂಬಂಧಿಸಿದ ಸಮೀಕ್ಷೆ ಕಾರ್ಯವು ಮೀನುಗಾರರ ಪ್ರಬಲ ವಿರೋಧದ ನಡುವೆಯೂ ಮಂಗಳವಾರ ನಡೆಯಿತು.

ವಾಣಿಜ್ಯ ಬಂದರು ನಿರ್ಮಾಣ ಯೋಜನೆಗೆ ಪ್ರತಿರೋಧ ವ್ಯಕ್ತವಾಗುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ನಿಷೇಧಾಜ್ಞೆ ಹೊರಡಿಸಿದ್ದರೂ ಮೀನುಗಾರರು, ಮಹಿಳೆಯರು, ಮಕ್ಕಳು ಸೇರಿ ನೂರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದರು. ಸಮೀಕ್ಷೆ ಕಾರ್ಯಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

800 ಸಶಸ್ತ್ರ ಪೊಲೀಸರ ಬಂದೋಬಸ್ತ್ ಇದ್ದರೂ ಸಮೀಕ್ಷೆ ಕಾರ್ಯ ತಡೆಯಲು ಮುಂದಾದ ಕೆಲ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದು, ಬೇರೆಡೆ ಕರೆದೊಯ್ದು ಬಿಡುಗಡೆಗೊಳಿಸಿದರು. ಕೆಲ ಮಹಿಳೆಯರು ಸಮುದ್ರಕ್ಕಿಳಿದು ಪ್ರತಿಭಟಿಸಿದರು. ಪ್ರತಿಭಟನೆ ವೇಳೆ ಅಸ್ವಸ್ಥಗೊಂಡ ಮಹಿಳೆಯನ್ನು ಕುಂದಾಪುರದ ಆಸ್ಪತ್ರೆಗೆ ದಾಖಲಿಸಲಾಯಿತು.

ಸಚಿವರ ವಿರುದ್ಧ ಆಕ್ರೋಶ: 'ಶಾಸಕರಾಗಿ ಆಯ್ಕೆಯಾಗುವ ಮೊದಲು ವಾಣಿಜ್ಯ ಬಂದರು ನಿರ್ಮಾಣ ವಿರೋಧಿಸಿ ಪ್ರತಿಭಟನಕಾರರನ್ನು ಬೆಂಬಲಿಸಿದ್ದ ಸಚಿವ ಮಂಕಾಳ ವೈದ್ಯ ಈಗ ಬದಲಾಗಿದ್ದಾರೆ. ಪ್ರಸ್ತುತ ಮೀನುಗಾರಿಕಾ ಸಚಿವರಾದರೂ ಮೀನುಗಾರರ ಅಹವಾಲು ಸ್ವೀಕರಿಸಲು ಸ್ಥಳಕ್ಕೆ ಬಂದಿಲ್ಲ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.



ಕಾಸರಕೋಡ ಟೊಂಕದಲ್ಲಿ ವಾಣಿಜ್ಯ ಬಂದರು ನಿರ್ಮಾಣ ಯೋಜನೆ ವಿರೋಧಿಸಿ ಮಂಗಳವಾರ ಸ್ಥಳದಲ್ಲಿ ಜನರು ಜಮಾಯಿಸಿದ್ದರು

ಮನೆ ಹರಾಜು ನೋಟಿಸ್ ವಿಷ ಸೇವಿಸಿ ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ ಜಿಲ್ಲೆ): ತಾಲ್ಲೂಕಿನ ಕಲ್ಲೆಮುದ್ದನಹಳ್ಳಿಯಲ್ಲಿ ರೈತ ಕೇಶವಯ್ಯ (61) ವಿಷ ತೆಗೆದುಕೊಂಡು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದು, 'ಮನೆ ಹರಾಜು ಹಾಕುವುದಾಗಿ ಮೈಕ್ರೊಫೈನಾನ್ಸ್ ಸಂಸ್ಥೆಯು ಮನೆ ಬಾಗಿಲಿಗೆ ನೋಟಿಸ್ ಅಂಟಿಸಿದ್ದೇ ಕಾರಣ' ಎಂದು ಅವರ ಪತ್ನಿ ತುಳಸಮ್ಮ ಪೊಲೀಸರಿಗೆ ದೂರು ನೀಡಿದ್ದಾರೆ.



ಕೇಶವಯ್ಯ

'ಕೃಷಿಗಾಗಿ ಹಾಗೂ ಮನೆ ಕಟ್ಟಲು ಖಾಸಗಿ ಮೈಕ್ರೊ ಫೈನಾನ್ಸ್ ಸಂಸ್ಥೆ ಹಾಗೂ ಬ್ಯಾಂಕ್‌ನಿಂದ ಸಾಲ ಪಡೆದಿದ್ದರು. ಕೆಲವರಿಂದ ಕೈಸಾಲ ಮಾಡಿದ್ದರು. ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿತ್ತು. ಎರಡು ಕಂತುಗಳನ್ನು ಮರುಪಾವತಿಸದ ಕಾರಣಕ್ಕೆ ಸಂಸ್ಥೆಯವರು ಒತ್ತಡ ಹೇರಿದ್ದರು. ಮನೆ ಬಾಗಿಲಿಗೆ ನೋಟಿಸ್ ಅಂಟಿಸಿದ್ದರಿಂದ ತೀವ್ರವಾಗಿ ನೊಂದು ಪತಿ ಆತ್ಮಹತ್ಯೆ ಮಾಡಿಕೊಂಡರು' ಎಂದು ಆರೋಪಿಸಿದ್ದಾರೆ.

ಶಿರಸ್ತೇದಾರ್ ಸಿ.ಸ್ವಾಮಿ, ಗ್ರಾಮ ಆಡಳಿತಾಧಿಕಾರಿ ಮೋಹನ್ ನಾಯಕ್ ಮೃತರ ಮನೆಗೆ ಭೇಟಿ ನೀಡಿ, ಪರಿಹಾರದ ಭರವಸೆ ನೀಡಿದರು. ಸ್ಥಳಕ್ಕೆ ಭೇಟಿ ನೀಡಿದ್ದ ಬಿಎಸ್‌ಪಿ ಜಿಲ್ಲಾ ಘಟಕದ ಅಧ್ಯಕ್ಷ ಅತ್ನಿ ಹರೀಶ್, 'ಕಿರುಕುಳ ಆರೋಪದ ಬಗ್ಗೆ ತನಿಖೆ ನಡೆಸಿ ಮೈಕ್ರೊ ಫೈನಾನ್ಸ್ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಕುಂಭಮೇಳಕ್ಕೆ ತೆರಳುತ್ತಿದ್ದ ವಾಹನ ಅಪಘಾತ: ಚಡಚಣದ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಸದ್ಲಗಿ



ವಿಶ್ವನಾಥ ಅಜಿ

ವಿಜಯಪುರ: ಪ್ರಯಾಗ ರಾಜ್‌ನಲ್ಲಿ ನಡೆಯುವ ಮಹಾಕುಂಭ ಮೇಳದಲ್ಲಿ ಭಾಗವಹಿಸಲು ತೆರಳಿದ್ದ ಚಡಚಣ ಪಟ್ಟಣದ ಇಬ್ಬರು ಯಾತ್ರಾರ್ಥಿಗಳು ಮಂಗಳವಾರ ನಸುಕಿನಲ್ಲಿ ಗುಜರಾತ್‌ನ ಪೋರಬಂದರ್ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ವಿಶ್ವನಾಥ ಅಜಿ (55) ಮತ್ತು ಮಲ್ಲಿಕಾರ್ಜುನ ಸದ್ಲಗಿ (40) ಮೃತರು.

'ಫೆಬ್ರುವರಿ 21ರಂದು ಚಾಲಕ ಸಹಿತ 17 ಮಂದಿ ಟೆಂಪೊ ಟ್ರಾವೆಲರ್ ವಾಹನದಲ್ಲಿ ಚಡಚಣದಿಂದ ಹೊರಟಿದ್ದರು. ಮಹಾರಾಷ್ಟ್ರ, ಗುಜರಾತ್ ರಾಜ್ಯಗಳ ಪ್ರವಾಸ ಮುಗಿಸಿಕೊಂಡು ಪ್ರಯಾಗ್‌ರಾಜ್‌ಗೆ ತೆರಳುತ್ತಿದ್ದ ವೇಳೆ ಪೋರಬಂದರ್ ಬಳಿ ನಿಂತಿದ್ದ ಟಿಪ್ಪರ್‌ಗೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆಯಿತು. ಇಬ್ಬರು ಸ್ಥಳದಲ್ಲೇ ಮೃತಪಟ್ಟರು' ಎಂದು ಮೂಲಗಳು ತಿಳಿಸಿವೆ.

ಗಾಯಗೊಂಡ ನಾಲ್ವರನ್ನು ಗುಜರಾತ್‌ನ ಪೋರಬಂದರ್ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿವೆ.

ಶಿರಸಿ: ಮಂಗನ ಕಾಯಿಲೆ ಪತ್ತೆ

ಪ್ರಜಾವಾಣಿ ವಾರ್ತೆ

ಶಿರಸಿ: ತಾಲ್ಲೂಕಿನ ಬಲವಳ್ಳಿ ಭಾಗದ 51 ವರ್ಷದ ವ್ಯಕ್ತಿಯೊಬ್ಬರು ಮಂಗನ ಕಾಯಿಲೆಯಿಂದ (ಕೆಎಫ್‌ಡಿ) ಬಳಲುತ್ತಿರುವುದು ಮಂಗಳವಾರ ದೃಢಪಟ್ಟಿದೆ.

'ಫೆಬ್ರುವರಿ 20ರಂದು ವ್ಯಕ್ತಿಗೆ ಜ್ವರ, ಮೈಕೈ ನೋವು ಮತ್ತು ತಲೆನೋವು ಕಾಣಿಸಿಕೊಂಡಿತ್ತು. ಸ್ಥಳೀಯ ರೇವಣಕಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಪಾಸಣೆ ಮಾಡಿದ ಬಳಿಕ, ಅವರ ರಕ್ತದ ಮಾದರಿಯನ್ನು ಶಿವಮೊಗ್ಗದ ಸಂಶೋಧನಾ ಕೇಂದ್ರಕ್ಕೆ ಕಳುಹಿಸಲಾಗಿತ್ತು. ಮಂಗನ ಕಾಯಿಲೆ ದೃಢಪಟ್ಟಿದೆ. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ' ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವಿನಾಯಕ ಕಣ್ಣಿ ತಿಳಿಸಿದ್ದಾರೆ.

'ಲಿಂಗಾಯತ' ಅಸ್ತ್ರ

ಒಂದನೇ ಪುಟದಿಂದ...

ಸಿದ್ದೇಶ್ವರ ನಾಯಕತ್ವಕ್ಕೆ ಒಲವು: ಲಿಂಗಾಯತ ಸಮುದಾಯಕ್ಕೆ ಸಮರ್ಥರ ಕೊರತೆ ಇದೆ. ವಿಶ್ವಾಸಕ್ಕೆ ತೆಗೆದುಕೊಂಡು ಹೋಗವಲ್ಲಿ ವಿಜಯೇಂದ್ರ ವಿಫಲರಾಗಿದ್ದಾರೆ. ಅವರಿಂದ ಪಕ್ಷಕ್ಕೂ ಉಪಯೋಗ ಇಲ್ಲ. ಹಾಗಾಗಿ, ಲಿಂಗಾಯತ ಸಮುದಾಯದ ನಾಯಕತ್ವವನ್ನು ದಾವಣಗೆರೆಯ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ವಹಿಸಬೇಕು ಎಂದು ಸಭೆಯಲ್ಲಿದ್ದ ಲಿಂಗಾಯತ ಮುಖಂಡರಲ್ಲಿ ಬಹುತೇಕ ಕೋರಿದ್ದಾರೆ ಎಂದು ಮೂಲಗಳು ಹೇಳಿವೆ.

ಕರ್ನಾಟಕ ಸರ್ಕಾರ

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪೂರ್ವ)ರವರ ಕಚೇರಿ, ಸಯ್ಯಾಜಿ ರಾವ್ ರಸ್ತೆ, ಮೈಸೂರು-24.
E-mail: eeemccmys@gmail.com, eewmccmys@gmail.com

ದಿನಾಂಕ: 24.02.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಟೆಂಡರ್ ಪ್ರಕಟಣೆ ಸಂಖ್ಯೆ.: ಹೆಚ್1/ಪವಿ/101/2022-2023. ಒಟ್ಟು ಕಾಮಗಾರಿಗಳು: 08. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 677.37. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 25.02.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 13.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 14.03.2025 ಸಂಜೆ 5.30 ಗಂಟೆಗೆ.**

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

DIPR/MYS/RO/1345/2024-25

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:15:2024–25, ದಿನಾಂಕ:25–02–2025

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣಾವಧಿ ಟೆಂಡರ್ ಮತ್ತು ಮರು ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2020–21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2022–23ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ (Untied), 2024–25ನೇ ಸಾಲಿನ ನಗರಸಭೆ ನಿಧಿಯ ಶೇಖಡ 5%ರ ಅನುದಾನ, 2023–24ನೇ ಸಾಲಿನ ನಗರಸಭೆ ನಿಧಿಯ ಶೇಕಡ 5% ರ ಅನುದಾನಗಳಲ್ಲಿ ಅನುಮೋದನೆಯಾಗಿರುವ ರೂ 55.74 ಲಕ್ಷಗಳ 4 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿಕರ್ನಾಟಕ ಲೋಕೋಪಯೋಗಿಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥಾವ ನಗರಭೆಯ ಅಂತರ್‌ಜಾಲ www.chitradurgacity.mrc.gov.in ನಲ್ಲಿ ಪಡೆಯಬಹುದಾಗಿದೆ. ಜಿ.ಎಸ್.ಟಿ.ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (4 ಕಾಮಗಾರಿಗಳ ಇಂಡೆಂಟ್‌ಗಳನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು) (ಗರಿಷ್ಠ ಮೊತ್ತ ರೂ.29.16 ಲಕ್ಷಗಳು)

ಪೂರ್ಣಾವಧಿ ಟೆಂಡರ್ ಪ್ರಕಟಣೆ:- ವಿವರ:- (1) ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನುಭರ್ತಿಮಾಡಿ ಸಲ್ಲಿಸುವಕೊನೆಯ ದಿನಾಂಕ: 12–03–2025 ರ 5.00 ಗಂಟೆ ಸಂಜೆವರೆಗೆ
(2) ಟೆಂಡರ್‌ನ್ನುತೆರೆಯುವ ದಿನಾಂಕ (ತಾಂತ್ರಿಕ) 13–03–2025 ರ 5.30 ಗಂಟೆಗೆ
(3) ಟೆಂಡರ್‌ನ್ನುತೆರೆಯುವ ದಿನಾಂಕ (ಆರ್ಥಿಕ) 14–03–2025 ರ 5.30 ಗಂಟೆಗೆ
(4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ

DIPR/CTA/KSMCA/486/2024-25

ಸಹಿ/-ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಇಂಜಿನಿಯರ್–3, ಆರೋಗ್ಯ ಮತ್ತು ನೈರ್ಮಲ್ಯ, ದಾಸಪ್ಪ ಆಸ್ಪತ್ರೆ ಆವರಣ, ಎನ್.ಆರ್ ರಸ್ತೆ, ಬೆಂಗಳೂರು – 560 002.

No.EE-3/H&S/TEND/10/2024-25 Date: 25.02.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು –3, ಆರೋಗ್ಯ ಮತ್ತು ನೈರ್ಮಲ್ಯ ಇವರು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಬಿಬಿಎಂಪಿಯ 8 ವಲಯಗಳಲ್ಲಿ ಸ್ಮಶಾನ ಮತ್ತು ಚಿತಾಗಾರಗಳ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಗುತ್ತಿಗೆದಾರರನ್ನು ನೇಮಿಸಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸುತ್ತದೆ. ಕೆಪಿಪಿಪಿ ಕಾಯಿದೆಯ ನಿಯಮ 28 ರ ಪ್ರಕಾರ ಎರಡು ಕವರ್ ಬಿಡ್ ವಿಧಾನವನ್ನು ಅನುಸರಿಸಬೇಕು. 2. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ https://www.kppp.karnataka.gov.in ನಿಂದ ಡೌನ್‌ಲೋಡ್ ಮಾಡಬಹುದು. 3. ಪ್ರಸ್ತಾವನೆಗಳನ್ನು 21.03.2025 ರಂದು 16.30 ಗಂಟೆಗಳ ಮೊದಲು ಕೆಪಿಪಿಪಿ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮಾರ್ಗಸೂಚಿಗಳ ಪ್ರಕಾರ ತೆರೆಯಲಾಗುವುದು. 4. ಇತರೆ ವಿವರಗಳನ್ನು RFP ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೋಡಬಹುದು.

ಕ್ರ. ಸಂ.	ನಿಯೋಜನೆಯ ಹೆಸರು/ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ಲಕ್ಷಗಳಲ್ಲಿ ರೂ/ಇಎಂಡಿ (ರೂ. ಗಳಲ್ಲಿ)
1	ಪೂರ್ವ, ಬೊಮ್ಮನಹಳ್ಳಿ ಮತ್ತು ಮಹದೇವಪುರ ವಲಯ – ಪ್ಯಾಕೇಜ್ 1 ರಲ್ಲಿ ಸ್ಮಶಾನ ಮತ್ತು ಚಿತಾಗಾರಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 397.67, ಇಎಂಡಿ ಮೊತ್ತ (ರೂ. ಗಳಲ್ಲಿ): 5,97,000/–.
2	ದಕ್ಷಿಣ ಮತ್ತು ಆರ್ ಆರ್ ನಗರ ವಲಯ – ಪ್ಯಾಕೇಜ್ –2 ರಲ್ಲಿ ಸ್ಮಶಾನ ಮತ್ತು ಚಿತಾಗಾರಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 398.20, ಇಎಂಡಿ ಮೊತ್ತ (ರೂ. ಗಳಲ್ಲಿ): 5,98,000/–.
3	ಪಶ್ಚಿಮ, ಯಲಹಂಕ ಮತ್ತು ದಾಸರಹಳ್ಳಿ ವಲಯ – ಪ್ಯಾಕೇಜ್– 3 ರಲ್ಲಿ ಸ್ಮಶಾನ ಮತ್ತು ಚಿತಾಗಾರಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 397.97, ಇಎಂಡಿ ಮೊತ್ತ (ರೂ. ಗಳಲ್ಲಿ): 5,97,000/–.

ವೇಳಾಪಟ್ಟಿ :
1) RFP ಡಾಕ್ಯುಮೆಂಟ್ 01.03.2025 ಸಂಜೆ 4.00 ಗಂಟೆಯಿಂದ ಲಭ್ಯವಿರುತ್ತದೆ.
2) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 10.03.2025 ಮಧ್ಯಾಹ್ನ 3.00 ಗಂಟೆಯವರೆಗೆ.
3) ವಿಶೇಷ ಆಯುಕ್ತರ (H&S) ಕಚೇರಿಯಲ್ಲಿ ಬಿಡ್ ಪೂರ್ವ ಸಭೆಯ ದಿನಾಂಕ: 10.03.2025 ಮಧ್ಯಾಹ್ನ 3.30 ಗಂಟೆಗೆ.
4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 21.03.2025 ಸಂಜೆ 4.00 ಗಂಟೆಗೆ.
5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ : 24.03.2025 ಸಂಜೆ 4.30 ಗಂಟೆಗೆ.
6) ಆರ್ಥಿಕ ಬಿಡ್‌ಗಳನ್ನು ತೆರೆಯುವುದನ್ನು ತಾಂತ್ರಿಕವಾಗಿ ಅರ್ಹವಾದ ಬಿಡ್‌ದಾರರಿಗೆ ತಿಳಿಸಲಾಗುತ್ತದೆ.

ಸಹಿ/-ಕಾರ್ಯಪಾಲಕ ಅಭಿಯಂತರರು-3, (ಆರೋಗ್ಯ ಮತ್ತು ನೈರ್ಮಲ್ಯ), ಬಿಬಿಎಂಪಿ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/20/2024–25 ದಿನಾಂಕ: 25–02–2025

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2024–25 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **06–03–2025 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/5278/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ, ಬೆಂಗಳೂರು–560009, ದೂರವಾಣಿ ಸಂಖ್ಯೆ: 080–22208402

ಸಂಖ್ಯೆ: ಎಸಿ/ಇಜಿ–4/ಸಿಆರ್–06/2022–23 ದಿನಾಂಕ: 25.02.2025

ಇ–ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಇಲಾಖೆಯು, 81 ದತ್ತಾಂಶ ನಮೂದಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆಗಾಗಿ ದ್ವಿಲಕೋಟೆ/ದ್ವಿಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಸಂ.: CTD/2024-25/SE0059 ದಿನಾಂಕ: 25.02.2025 ರಂತೆ ಟೆಂಡರ್ ಕರೆಯಲಾಗಿದೆ. ಟೆಂಡರ್ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಇತರೆ ವಿವರಗಳನ್ನು ಜಾಲತಾಣ ವಿಳಾಸ **https://kppp.karnataka.gov.in** ದಿಂದ ಅಥವಾ ಜಾಲತಾಣ **https://gst.kar.nic.in/** ದಿಂದ ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 07.03.2025 ಸಂಜೆ 5.00 ಗಂಟೆ.** ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 080–22208402 ಅಥವಾ ಇ–ಮೇಲ್ ವಿಳಾಸ: **addlcom.gst@ctd.ka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು
ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಇ–ಆಡಳಿತ), ಬೆಂಗಳೂರು.

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ನಂ.642, 2ನೇ ಮಹಡಿ, ಪಯೋನೀರ್ ಪ್ಲಾಜಾ, ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098. ದೂರವಾಣಿ: 080–26994402 jcctdgsto2.bng@ctd.ka.gov.in

ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ–2/ಡಿಇಒ/ಇ–ಪ್ರೊಕ್/ಸಿಆರ್–5/2024–25 ದಿನಾಂಕ: 25.02.2025

ಹೊರಗುತ್ತಿಗೆ ಆಧಾರದ ಮೇಲೆ ದತ್ತಾಂಶ ನಮೂದಕರ (Data Entry Operators) ಸೇವೆಯನ್ನು ಒದಗಿಸಲು ಇ–ಟೆಂಡರ್ ಅಧಿಸೂಚನೆ

ಈ ಕಛೇರಿಗೆ **75 ಜನ ದತ್ತಾಂಶ ನಮೂದಕರ** ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

1) ಆಕ್ಷೇಪಣೆ/ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 01.03.2025. 2) ಬಿಡ್‌ನ ಪೂರ್ವಭಾವಿ ಸಭೆ ದಿನಾಂಕ: 03.03.2025. 3) ಆಕ್ಷೇಪಣೆ/ಪ್ರಶ್ನೆಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ: 05.03.2025. 4) ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 10.03.2025. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.03.2025. 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 14.03.2025.

ನಿಗದಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಷರತ್ತುಗಳ ವಿವರಗಳಿಗೆ ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in ಅಥವಾ ವಾಣಿಜ್ಯ ತೆರಿಗೆ ಇಲಾಖೆಯ ವೆಬ್‌ಸೈಟ್ https://ctax.kar.nic.in ಗಳನ್ನು ಸಂಪರ್ಕಿಸಿರಿ.

ಸಹಿ/- ವಾಣಿಜ್ಯ ತೆರಗೆಳ ಜಂಟಿ ಆಯುಕ್ತರು (ಆಡಳಿತ),
ವಿ.ಸ&ಸೇ.ತೆ.ಕ–2, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5311/ಆಕಾರ್/2024–25

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

ಆಸ್ತಿ ಅಧಿಕಾರಿಯವರ ಕಛೇರಿ, ಮುಖ್ಯ ಆವರಣ ಇರುವಕ್ಕಿ–577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ–ಮೇಲ್: eo@uahs.edu.in

ಸಂಖ್ಯೆ : ಕೆಶಿನಾಕೃತೋವಿವಿ(ಇ)/ಆ.ಅ/ಉಖಅ/22/2024–25 ದಿನಾಂಕ : 21.02.2025

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1 & ಕೆ.ಜಿ–2 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 05.03.2025 ಸಂಜೆ 4.00 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 06.03.2025 ಸಂಜೆ 4.30 ಗಂಟೆಗೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 07.03.2025 ಬೆಳಿಗ್ಗೆ 10.00 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ–ಪೋರ್ಟಲ್ ವೆಬ್‌ಸೈಟ್ ಇ–ಮೇಲ್@ hphelpdesk.blr@intarvo.com ಅಥವಾ ಸಹಾಯವಾಣಿ ಸಂಖ್ಯೆ:91–8046010000 ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ – 577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.169–02/ಝೇಂಕಾರ್/2024–25

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080–2727 1259. ಇ–ಮೇಲ್ : eempdrmgm@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 14/2024–25 ದಿನಾಂಕ : 24–02–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ರಸ್ತೆ, ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಫ್ರೀ ಬಿಡ್ ಸಭೆಯ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ612/ಮಣಿಪಾಲ್/2024–25

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ನಂ. 642, 2ನೇ ಮಹಡಿ, ಪಯೋನೀರ್ ಪ್ಲಾಜಾ, ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098,
ದೂರವಾಣಿ: 080–26994402 , ಇ–ಮೇಲ್: jcctdgsto2.bng@ctd.ka.gov.in

ಟೆಂಡರ್ ಪ್ರಕಟಣೆ

ಸಂಖ್ಯೆ: ವಾತೆಜಂಆ(ಆ)/ವಿ.ಸ&ಸೇ.ತೆ.ಕ–2/ವಿಹೆಚ್‌ಟಿ/ಸಿಆರ್–20/2024–25 ದಿನಾಂಕ: 19.02.2025

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ)–ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು, ವಿಭಾಗದ ಬೆಂಗಳೂರು ಕಛೇರಿಗಳ ಉಪಯೋಗಕ್ಕಾಗಿ 13 (ಹದಿಮೂರು) ಮಾಲೀಕರೇ ಚಾಲಕರಾಗಿರುವ ಅಧಿಕೃತ ವಾಹನಗಳನ್ನು ಮಾಸಿಕ ಬಾಡಿಗೆ ರೂ.35,000/– (ಹವಾ ನಿಯಂತ್ರಣ ರಹಿತ ವಾಹನಗಳು) ಆಧಾರದ ಮೇಲೆ 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ವಾಹನಗಳನ್ನು ದಿನಾಂಕ: 01.04.2025 ರಿಂದ 31.03.2026ರ ಅವಧಿಗೆ ಪಡೆಯಲು ನಿಶ್ಚಯಿಸಲಾಗಿದೆ. ದಿನಾಂಕ: 19.02.2025 ರಂದು ಈ ಕಛೇರಿಯ ಸೂಚನಾ ಫಲಕಕ್ಕೆ ಸಂಬಂಧಿಸಿದ ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಅಂಟಿಸಲಾಗಿದೆ, ಹಾಗೂ ಇಲಾಖೆಯ ಜಾಲತಾಣ http://ctax.kar.nic.in ನಲ್ಲು ಸಹ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10/03/2025 ಸಾಯಂಕಾಲ 5.00 ಗಂಟೆಯವರೆಗೆ, ಅರ್ಜಿಯನ್ನು ಷರತ್ತುಗಳಲ್ಲಿ ನಿಗಧಿಪಡಿಸಿರುವ ವಾಹನಗಳ ದಾಖಲೆಗಳೊಂದಿಗೆ ಸಲ್ಲಿಸುವುದು, ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದಲ್ಲಿ ಈ ವಿಭಾಗದ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇ.ಕ) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು, ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿ.ಸ.&ಸೇ.ತೆ.ಕ–2, ಬೆಂಗಳೂರು

DIPR/CP/Zen/5306/2024-25

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ

28ನೇ ವಾರ್ಡ್, 3ನೇ ಕ್ರಾಸ್, ಹಾಗೂ 6ನೇ ಅಡ್ಡ ರಸ್ತೆ ಮೃತ್ಯುಂಜಯನಗರ, ಹೊಸಪೇಟೆ.

ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2024–25/2602.
ದಿನಾಂಕ:20.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (Through Government of Karnataka e-procurement)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ:100.00 ಲಕ್ಷಗಳ ವರೆಗಿನ ಕೆಕೆಆರ್‌ಡಿಬಿ ಮತ್ತು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **Standard Bid Document KW/KG** ನಿಯಮವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು (ವರ್ಕ್ಸ್/ಗೂಡ್ಸ್) ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: ಅನುಬಂಧ : 06.03.2025ರಂದು ನಿಗದಿಪಡಿಸಲಾಗಿದೆ. **(Auto Extension Specialty up to 4 Days)**

ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ **(https://kppp.karnataka.gov.in)** ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ (ಅನುಬಂಧ) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ **(eepredvijayanagara@gmail.com)** ಸಂಪರ್ಕಿಸಬಹುದು.

ಸಹಿ/- ಕಾಪಅ ಪಂರಾಇಂ ವಿಭಾಗ, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/550

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,

ಕೋಲಾರ–563101. e-mail: eepwdkolar07@gmail.com, website: www.kpwd.gov.in, e-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –3 ಮರು ಟೆಂಡರ್ ಪ್ರಕಟಣೆ ಸಂಖ್ಯೆ–42/2024–25 ದಿನಾಂಕ: 21.02.2025

ಕೋಲಾರ ಜಿಲ್ಲೆ ಕೋಲಾರ, ಕೆ.ಜಿ.ಎಫ್, ಮುಳಬಾಗಿಲು, ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054–ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯ **ಅಂದಾಜು ಮೊತ್ತ: ಕನಿಷ್ಟ: ರೂ. 75.00 ಲಕ್ಷಗಳು ಹಾಗೂ ಗರಿಷ್ಟ: 100.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ ಕಾಲಾವಧಿ: 06 ತಿಂಗಳು ನಿರ್ವಹಿಸಲು ಕೆಡಬ್ಲ್ಯು –3 ರ ಕಾಮಗಾರಿಗೆ 3 ನೇ ದರ್ಜೆ ಮೇಲ್ಪಟ್ಟ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ.** ಗುತ್ತಿಗೆದಾರರು ಕೆಡಬ್ಲ್ಯು–3 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್ **(Viz.,http://kppp. karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 10.03.2025 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 11.03.2025 ರಂದು ಸಂಜೆ 16.30 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್** ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು **ಕೆ.ಪಿ.ಪಿ ಪೋರ್ಟಲ್ (Viz.,http://kppp.karnataka.gov.in)**ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:490/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ–1/ಐಎಫ್‌ಟಿ–38/2024–25
ದಿನಾಂಕ:21–02–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (2ನೇ ಕರೆ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
5054–04–337–0–01–160 ಜಿಲ್ಲಾ ಮತ್ತು ಇತರ ರಸ್ತೆಗಳು – ನವೀಕರಣ
1. ಸೊರಬ ತಾಲ್ಲೂಕು 1 ಕಾಮಗಾರಿ (ಇ.ನಂ.19440)
ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು : 24–02–2025 ರಿಂದ 03–03–2025 (ಇ.ನಂ:19440) ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ):6 ತಿಂಗಳು.
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/191/02/1743

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ52/56578/2024–25 ದಿನಾಂಕ: 24.02.2025

ಅಂತಿಮ ನೋಟೀಸ್

ವಿಷಯ: ಶ್ರೀ.ವಿಕಾಸ.ಎಂ.ವರ್ಣೇಕರ, ಸಹಾಯಕ ಇಂಜಿನಿಯರ್ (ವಿ), ಕಾಮಗಾರಿ ಘಟಕ, ಹೆಸ್ಕಾಂ, ಹೊನ್ನಾವರ ರವರ ಅನಧಿಕೃತ ಗೈರುಹಾಜರಿ ಬಗ್ಗೆ.

ಶ್ರೀ.ವಿಕಾಸ.ಎಂ.ವರ್ಣೇಕರ, ಸಹಾಯಕ ಇಂಜಿನಿಯರ್(ವಿ), ಕಾಮಗಾರಿ ಘಟಕ, ಹೆಸ್ಕಾಂ, ಹೊನ್ನಾವರ ಆದ ನೀವು ದಿನಾಂಕ 21.09.2010 ರಿಂದ ಇಲ್ಲಿಯವರೆಗೆ ಕಂಪನಿಯ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಈ ಹಿಂದೆಯೂ ಹಲವು ಬಾರಿ ಕಾರವಾರ ವಿಭಾಗೀಯ ಕಚೇರಿಯಿಂದ ಕೆಲಸಕ್ಕೆ ಹಾಜರಾಗುವಂತೆ ತಮಗೆ ನೋಟೀಸ್ ನೀಡಿದ್ದರೂ ಸಹ ನೀವು ಇದುವರೆವಿಗೂ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ನಿಮ್ಮ ಗೈರುಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಈ ನೋಟೀಸು ಪ್ರಕಟವಾದ **15 ದಿವಸದೊಳಗೆ** ಈ ಕೆಳಕಂಡ ಸಹಿದಾರರ ಮುಂದೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಕವಿಪ್ರನಿನಿ ನೌಕರರ (ವ,ಶಿ.ನಿ ಮತ್ತು ಮೇ) ನಿಬಂಧನೆಗಳ ನಿಬಂಧನೆ 14(ii) ರ ಅನ್ವಯ ಯಾವುದೇ ಪರಿಹಾರ ನೀಡದೆ ನೀವು ಕಂಪನಿಯ ಸೇವೆಯಲ್ಲಿ ಇಲ್ಲವೆಂದು ಪರಿಗಣಿಸಿ, ಯಾವ ಮುನ್ಸೂಚನೆಯನ್ನು ನೀಡದೆ ನಿಮ್ಮನ್ನು ಸೇವೆಯಿಂದ ವಜಾಗೊಳಿಸಲಾಗುವುದು.

ಸಹಿ/-
ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ,
ನಿಗಮ ಕಛೇರಿ, ಕಾವೇರಿ ಭವನ, ಬೆಂಗಳೂರು–09.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 560 040.

ಸಂಖ್ಯೆ: ಕಾಪಾಅ(ವಿನ)/ಎಇ/ಕೆಪಿಪಿಪಿ/10/2024–25 ದಿನಾಂಕ: 25.02.2025

ಟೆಂಡರ್ ಪ್ರಕಟಣೆ (ಏಕಲಕೋಟೆ & ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)


ಕಾರ್ಯಪಾಲಕ ಅಭಿಯಂತರರು, (ವಿಜಯನಗರ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಎಸ್.ಟಿ.ಡಿ. ಕೆಡಬ್ಲ್ಯೂ–1, 2, 3 & 4)

ಕ್ರ. ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ
	(ಏಕಲಕೋಟೆ ಪದ್ಧತಿ) (ಕೆಡಬ್ಲ್ಯೂ–1)
1.	ವಾರ್ಡ್ ಸಂಖ್ಯೆ–148 ಹೊಸ ಗುಡ್ಡದಹಳ್ಳಿಯ ಎಂಸಿಟಿ ಕ್ವಾರ್ಟರ್ಸ್ ಬ್ಲಾಕ್–62, 14–1ರಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು ಮತ್ತು ಇತರೆ ಮೂಲಸೌಕರ್ಯ ಕಾಮಗಾರಿಗಳನ್ನು ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹10.00 ಲಕ್ಷಗಳು, ಇಎಂಡಿ: ₹25,000/–
	(ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–2, 3 & 4)
2.	ವಾರ್ಡ್ ಸಂಖ್ಯೆ–159 ಹಂಪಿನಗರದಲ್ಲಿ ಪಾದಚಾರಿಮಾರ್ಗವನ್ನು ಸುಧಾರಣೆ ಮಾಡುವುದು. (3ನೇ ಕರೆ) (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹30.00 ಲಕ್ಷಗಳು, ಇಎಂಡಿ: ₹60,000/–
3.	2024–25ನೇ ಸಾಲಿಗೆ ಗಾಳಿ ಆಂಜನೇಯ ದೇವಸ್ಥಾನ ಉಪ ವಿಭಾಗದ ವಾರ್ಡ್ ಸಂಖ್ಯೆ–149, 150, 151 & 152ರಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವುದು ಮತ್ತು ರಸ್ತೆ ಕತ್ತರಿಸಿದ ಭಾಗವನ್ನು ಮರುಸ್ಥಾಪನೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹60.00 ಲಕ್ಷಗಳು, ಇಎಂಡಿ: ₹1,20,000/–
4.	ವಾರ್ಡ್ ಸಂಖ್ಯೆ–146 ಹೊಸಹಳ್ಳಿಯ ಸರ್ಕಾರಿಹೋಣಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ಇನ್ನಿತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹100.00 ಲಕ್ಷಗಳು, ಇಎಂಡಿ: ₹2,00,000/– (₹1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ & ಉಳಿದ ₹1,00,000/–ವನ್ನು ಬ್ಯಾಂಕ್ ಗ್ಯಾರಂಟಿ / ಎಫ್‌ಡಿ ಮೂಲಕ)
5.	ವಾರ್ಡ್ ಸಂಖ್ಯೆ–149 ಗಾಳಿ ಆಂಜನೇಯದ ಬಾಪೂಜಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ಇನ್ನಿತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹100.00 ಲಕ್ಷಗಳು, ಇಎಂಡಿ: ₹2,00,000/– (₹1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ & ಉಳಿದ ₹1,00,000/–ವನ್ನು ಬ್ಯಾಂಕ್ ಗ್ಯಾರಂಟಿ / ಎಫ್‌ಡಿ ಮೂಲಕ)
6.	ವಾರ್ಡ್ ಸಂಖ್ಯೆ–151 ದೀಪಾಂಜಲಿನಗರದ ರಂಗನಾಥ ಕಾಲೋನಿ, ದೀಪಾಂಜಲಿ–ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ಇನ್ನಿತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹100.00 ಲಕ್ಷಗಳು, ಇಎಂಡಿ: ₹2,00,000/– (₹1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ & ಉಳಿದ ₹1,00,000/–ವನ್ನು ಬ್ಯಾಂಕ್ ಗ್ಯಾರಂಟಿ / ಎಫ್‌ಡಿ ಮೂಲಕ)
7.	ವಾರ್ಡ್ ಸಂಖ್ಯೆ–151 ದೀಪಾಂಜಲಿನಗರದಲ್ಲಿ ವಾಲ್ಮೀಕಿ ಸಮುದಾಯ ಭವನವನ್ನು ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹500.00 ಲಕ್ಷಗಳು, ಇಎಂಡಿ: ₹7,50,000/– (₹1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ & ಉಳಿದ ₹6,50,000/–ವನ್ನು ಬ್ಯಾಂಕ್ ಗ್ಯಾರಂಟಿ / ಎಫ್‌ಡಿ ಮೂಲಕ)

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **05.03.2025**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **11.03.2025**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **12.03.2025** ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು (**ಕೆಪಿಪಿಪಿ ಮೂಲಕ ನಂತರ ತಿಳಿಸಲಾಗುವುದು**)

ಸಹಿ/- ಕಾರ್ಯಪಾಲಕ ಅಭಿಯಂತರರು,
ವಿಜಯನಗರ ವಿಭಾಗ

ಷೇರುಪೇಟೆ ವಹಿವಾಟು 147



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	22,553
ಇಂದಿನ ಅಂತ್ಯ	22,547
▼	6
ದಿನದ ಕನಿಷ್ಠ	22,513

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹500
12 ಕ್ಕೆ	₹67
ಮೈಸೂರು	
100ಕ್ಕೆ	₹500

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27000
ಎಸಿ	₹16240
ಆರ್‌ಪಿ	₹23500
ಆರ್‌ಸಿ	₹13095

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

ನಿದ್ದೆ, ಊಟಕ್ಕೂ ಮೀಸಲಿಡುವ ಸಮಯ ಇಳಿಕೆ

ನವದೆಹಲಿ (ಪಿಟಿಐ): ನಿದ್ದೆ, ಊಟ, ವ್ಯಾಯಾಮ ಸೇರಿ ಸ್ವ-ಆರೈಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಭಾರತೀಯರು ಪ್ರತಿದಿನ ಮೀಸಲಿಡುವ ಸರಾಸರಿ ಸಮಯವು ಕಳೆದ ಐದು ವರ್ಷಗಳಲ್ಲಿ ತೀರಾ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಕುಟುಂಬ ಸಮೀಕ್ಷೆ ಹೇಳಿದೆ.

2019ರಲ್ಲಿ 6 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರು ಸ್ವ-ಆರೈಕೆಗೆ ಮೀಸಲಿಡುತ್ತಿದ್ದ ಸರಾಸರಿ ಸಮಯವು 726 ನಿಮಿಷ ಅಥವಾ 12.1 ಗಂಟೆ ಆಗಿತ್ತು. 2024ರಲ್ಲಿ ಇದು 708 ನಿಮಿಷ ಅಥವಾ 11.8 ಗಂಟೆಗೆ ಇಳಿದಿದೆ ಎಂದು ವಿವರಿಸಿದೆ.

ಪುರುಷರಿಗೆ ಹೋಲಿಸಿದರೆ (710 ನಿಮಿಷ), ಮಹಿಳೆಯರು ಸ್ವ-ಆರೈಕೆಗೆ (706 ನಿಮಿಷ) ಮೀಸಲಿಡುವ ಸಮಯ ಕಡಿಮೆಯಾಗಿದೆ ಎಂದು ಹೇಳಿದೆ.

ಉದ್ಯೋಗ ಚಟುವಟಿಕೆ: 15ರಿಂದ 59 ವರ್ಷದೊಳಗಿನ ಪುರುಷರು ಮತ್ತು ಮಹಿಳೆಯರು ದಿನವೊಂದರಲ್ಲಿ ಉದ್ಯೋಗ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ ಅವಧಿಯು ಹೆಚ್ಚಳವಾಗಿದೆ ಎಂದು ಎನ್‌ಎಸ್‌ಒ 2024ರ ಜನವರಿ ಯಿಂದ ಡಿಸೆಂಬರ್‌ವರೆಗೆ ನಡೆಸಿದ ಸಮಯ ಬಳಕೆ ಸಮೀಕ್ಷೆ ಹೇಳಿದೆ.

ಶೇ 75ರಷ್ಟು ಪುರುಷರು ಹಾಗೂ ಶೇ 25ರಷ್ಟು ಮಹಿಳೆಯರು ಈ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಎಂದು ಸಮೀಕ್ಷೆ ತಿಳಿಸಿದೆ.

ನಬಾರ್ಡ್: 2025–26ನೇ ಆರ್ಥಿಕ ವರ್ಷದ ಆದ್ಯತಾ ಪತ್ರ ಬಿಡುಗಡೆ

₹4.47 ಲಕ್ಷ ಕೋಟಿ ಸಾಲದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ (ನಬಾರ್ಡ್) ಕರ್ನಾಟಕದ ಆದ್ಯತಾ ವಲಯಕ್ಕೆ 2025-26ನೇ ಆರ್ಥಿಕ ವರ್ಷದಲ್ಲಿ ₹4.47 ಲಕ್ಷ ಕೋಟಿ ಸಾಲ ವಿತರಿಸುವ ಗುರಿ ನಿಗದಿಪಡಿಸಲಾಗಿದೆ.

2024-25ನೇ ಸಾಲಿನಡಿ ₹3.97 ಲಕ್ಷ ಕೋಟಿ ಸಾಲ ವಿತರಿಸುವ ಗುರಿ ನಿಗದಿಯಾಗಿದೆ. ಇದಕ್ಕೆ ಹೋಲಿಸಿದರೆ ಶೇ 12.55ರಷ್ಟು ಹೆಚ್ಚಿದೆ. ವಿವಿಧ ಬ್ಯಾಂಕ್‌ಗಳ ಮೂಲಕ ಈ ಸಾಲ ವಿತರಣೆಗೆ ಗುರಿ ಹೊಂದಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಿ ಆದ್ಯತಾ ವಲಯಗಳಿಗೆ ಅಗತ್ಯವಿರುವ ಆರ್ಥಿಕ ನೆರವಿನ ಕುರಿತು ನಬಾರ್ಡ್ ಸಿದ್ಧಪಡಿಸಿರುವ ಈ ಆದ್ಯತಾ ಪತ್ರವನ್ನು (ಸ್ಟೇಟ್ ಫೋಕಸ್ ಪೇಪರ್) ಮಂಗಳವಾರ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು ರೈತರು, 'ಮಹಿಳೆಯರು, ಎಂಎಸ್‌ಎಂಇ ವಲಯದ ಸಬಲೀಕರಣಕ್ಕೆ ಬ್ಯಾಂಕ್‌ಗಳು ಮತ್ತಷ್ಟು ಆರ್ಥಿಕ ನೆರವು ಒದಗಿಸಲು ಮುಂದಾಗಬೇಕಿದೆ' ಎಂದರು.

ಜಲಾನಯನ, ಕೃಷಿ ಮೂಲಸೌಕರ್ಯ, ಎಂಎಸ್‌ಎಂಇ ವಲಯದ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಬಾರ್ಡ್ ಕಾರ್ಯ ಶ್ಲಾಘನೀಯವಾದುದು ಎಂದರು.

ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೆ.ವಿ. ಎಸ್.ಎಸ್.ಎಲ್.ವಿ. ಪ್ರಸಾದ ರಾವ್ ಮಾತನಾಡಿ, '2025-26ನೇ ಆರ್ಥಿಕ ವರ್ಷಕ್ಕೆ ನಿಗದಿಪಡಿಸಿರುವ ಸಾಲದಲ್ಲಿ ಕೃಷಿಗೆ ₹2.04 ಲಕ್ಷ ಕೋಟಿ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗೆ (ಎಂಎಸ್‌ಎಂಇ) ₹1.88 ಲಕ್ಷ ಕೋಟಿ ಮತ್ತು ಇತರೆ ಆದ್ಯತೆಯ ವಲಯದ ಚಟುವಟಿಕೆಗಳಿಗೆ ₹56 ಸಾವಿರ ಕೋಟಿ ಎಂದು ನಿಗದಿಪಡಿಸಲಾಗಿದೆ' ಎಂದು ವಿವರಿಸಿದರು.




ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಅವರು, ನಬಾರ್ಡ್‌ನಿಂದ ಸಿದ್ಧಪಡಿಸಿರುವ ಸಾಲದ ಆದ್ಯತಾ ಪತ್ರವನ್ನು ಬಿಡುಗಡೆಗೊಳಿಸಿದರು. ಭವೇಂದ್ರ ಕುಮಾರ್, ಕೆ.ವಿ.ಎಸ್.ಎಸ್.ಎಲ್.ವಿ. ಪ್ರಸಾದ ರಾವ್, ಸೋನಾಲಿ ಸೇನ್ ಗುಪ್ತಾ, ಜೂಹಿ ಸ್ಮಿತಾ ಸಿನ್ಹಾ ಇದ್ದರು —ಪ್ರಜಾವಾಣಿ ಚಿತ್ರ

ಪ್ರಸಕ್ತ ಸಾಲಿನಡಿ ರಾಜ್ಯಕ್ಕೆ ₹2,056 ಕೋಟಿ ಮೊತ್ತದ ಆರ್‌ಐಡಿಎಫ್ ನೆರವು ಒಳಗೊಂಡಂತೆ 298 ಗ್ರಾಮೀಣ ಮೂಲಸೌಕರ್ಯ ಯೋಜನೆಗಳನ್ನು ಮಂಜೂರು ಮಾಡಲಾಗಿದೆ ಎಂದರು.

ಎಸ್‌ಬಿಐ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಮಾತನಾಡಿ, 'ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ನಬಾರ್ಡ್ ಪ್ರಮುಖ ಪಾತ್ರ ವಹಿಸುತ್ತಿದೆ. ಕೃಷಿ ವಲಯದ ಅಭಿವೃದ್ಧಿಗೆ ಬ್ಯಾಂಕ್‌ಗಳು ವಿವಿಧ ಸಾಲ ಸೌಲಭ್ಯ ಕಲ್ಪಿಸುತ್ತಿವೆ' ಎಂದು ಹೇಳಿದರು.

ಇದೇ ವೇಳೆ ನಬಾರ್ಡ್‌ನಿಂದ ಕೃಷಿ ಕುರಿತು ತಯಾರಿಸಿರುವ 'ಜೀವ' ಕಿರುಚಿತ್ರವನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಆರ್‌ಬಿಐನ ಪ್ರಾದೇಶಿಕ ಕಚೇರಿಯ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ, ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್ ಇದ್ದರು.



ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಶೋಕ್ ಎಂ.ಆರ್., ಯಲಹಂಕ, ಬೆಂಗಳೂರು.

ಪ್ರಶ್ನೆ: ನನ್ನ ಪುತ್ರ ಕಳೆದ ಮೂರು ವರ್ಷದಿಂದ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಪ್ರಸ್ತುತ ಆತನಿಗೆ ಮಾಸಿಕ ₹75 ಸಾವಿರ ವೇತನವಿದೆ. ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡಿದ್ದಾನೆ. ಇದರಡಿ ತೆರಿಗೆ ವಿನಾಯಿತಿಗೆ ಅವಕಾಶ ಇಲ್ಲದ ಕಾರಣ ಯಾವುದೇ ಹೂಡಿಕೆಗೂ ಅವಕಾಶ ಇಲ್ಲ. ಇಂತಹ ಸಂದರ್ಭದಲ್ಲಿ ಆತನಿಗೆ ಯಾವುದೇ ರೀತಿಯಲ್ಲಿ ಹೂಡಿಕೆಯ ಬದ್ಧತೆ ಇಲ್ಲದಂತಾಗಿದೆ. ಬಹುತೇಕ ಹಣವು ಖರ್ಚಾಗುತ್ತಿರುವ ಕಾರಣ ಉಳಿತಾಯಕ್ಕೆ ಅವಕಾಶ ಇಲ್ಲದಂತಾಗಿದೆ. ಈ ಬಗ್ಗೆ ಏನು ಕ್ರಮ ಕೈಗೊಳ್ಳಬಹುದು?

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ವಿಚಾರ ಬಹುತೇಕ ಯುವಜನರ ಪಾಲಕರಿಗೆ ಕಾಡುತ್ತಿರುವ ಸಾಮಾನ್ಯ ಸಮಸ್ಯೆಯೇ ಆಗಿದೆ. ಹೊಸ ತೆರಿಗೆ ಪದ್ಧತಿ ಆರಂಭವಾದ ಸಂದರ್ಭದಿಂದ ಯಾವುದೇ ಹೂಡಿಕೆಗೆ ತೆರಿಗೆ ವಿನಾಯಿತಿ ಇಲ್ಲ. ಹಾಗಾಗಿ, ಹೂಡಿಕೆ ಕ್ಷೇತ್ರವನ್ನು ಮೇಲ್ನೋಟಕ್ಕೆ ಹೆಚ್ಚು ಆಸಕ್ತಿಯಿಂದ ಪರಿಗಣಿಸುವ ಗೊಡವೆಗೆ ಯಾರೂ ಹೋಗುತ್ತಿಲ್ಲ.

ಆದರೆ, ಈ ಬಗ್ಗೆ ಹೆಚ್ಚಿನ ಒಲವು ಮೂಡಿಸಲು ಭವಿಷ್ಯದ ಅನಿಶ್ಚಿತತೆ, ಮುಂದಿನ ಒಟ್ಟಾರೆ ಗುರಿ- ಆಶಯದ ಜೊತೆಗೆ ಒಂದಷ್ಟು ಜವಾಬ್ದಾರಿ ಇತ್ಯಾದಿಯನ್ನು ಅವರವರೇ ನಿರ್ಧರಿಸಬೇಕು. ಇದಕ್ಕೆ ಪೂರಕವಾಗಿ ಆ ಅಗತ್ಯಕ್ಕಾಗಿ ನಾವು ಯಾವ ರೀತಿ ಮುಂದುವರಿಯಬೇಕು ಎನ್ನುವುದರ ಅರಿವು ಮೂಡಿಸಬೇಕು. ಇದಕ್ಕಾಗಿ ಒಟ್ಟಾರೆ ನಮ್ಮ ಬದುಕಿನ ಆರ್ಥಿಕ ಮುನ್ನೋಟ ಹೊಂದುವುದು ಅವಶ್ಯಕ.

ಉದ್ಯೋಗದಲ್ಲಿದ್ದು ನಿಶ್ಚಿತ ಆದಾಯ ಇರುವವರಿಗೆ ಈ ಬಗ್ಗೆ ಯೋಜಿಸುವುದು ಹೆಚ್ಚೇನೂ ಸಮಸ್ಯೆಯಲ್ಲ. ಕೇವಲ ಆ ಬಗ್ಗೆ ಗಂಭೀರ ಯೋಚನೆಯ ಕೊರತೆ ನೀಗಿಸುವ ಸಮಾಲೋಚನೆಯ ಅಗತ್ಯ ಇದ್ದೀತು. ತದನಂತರ ಗಂಭೀರವಾಗಿ ಪರಿಗಣಿಸುವವರಿಗೆ ಯಾವುದೇ ತೆರಿಗೆ ಪದ್ಧತಿ ಇರಲಿ ಅವಕಾಶಗಳು ಮುಕ್ತವಾಗಿವೆ. ಆರೋಗ್ಯದ ಬಗ್ಗೆ ನಾವು ಹೇಗೆ ಹೆಚ್ಚು ಗಂಭೀರವಾಗಿರುತ್ತೇವೋ ಆರ್ಥಿಕ ಶಿಸ್ತಿನ ಬಗ್ಗೆಯೂ ಅದೇ ರೀತಿ ಹೊಸ ತಲೆಮಾರಿನ ವರ್ಗ ಜಾಗರೂಕವಾಗಬೇಕಿದೆ. ಯಾವುದೇ ಆದಾಯ ಸೃಷ್ಟಿಸದ ಹಣದ ಹೊರಹರಿವು, ಅಗತ್ಯಕ್ಕಿಂತ ಅಧಿಕ ಖರ್ಚು, ಎಲ್ಲೆ ಮೀರಿದ ವಿಲಾಸಿ ವೆಚ್ಚಗಳನ್ನು ದೀರ್ಘಕಾಲದಲ್ಲಿ ಕಡಿತಗೊಳಿಸಬೇಕು. ಆ ಹಣವನ್ನು ಆದಾಯಗಳಿಸುವ ಹೂಡಿಕೆಗಳಲ್ಲಿ ತೊಡಗಿಸಿದಾಗ ನಿರೀಕ್ಷೆಗೂ ಮೀರಿದ ಆರ್ಥಿಕ ವೃದ್ಧಿ ಸಾಧ್ಯ. ಇದಕ್ಕೆ ಬದಲಾದ ಮನಃಸ್ಥಿತಿ ಬೇಕು. ಈ ಬಗ್ಗೆ ಸಾವಧಾನದ ಮನವರಿಕೆ ಮಾಡುವ ಹಾಗೂ ಮಾರ್ಗದರ್ಶನ ಬೇಕಿದೆ.

ಸುಧಾ ಪಿ., ಊರು ತಿಳಿಸಿಲ್ಲ.

ಪ್ರಶ್ನೆ: ನನ್ನದೊಂದು ಅಂಗಡಿಯಿದ್ದು, ತಿಂಗಳಿಗೆ ₹30 ಸಾವಿರ ಸಂಪಾದನೆಯಿದೆ. ನನಗೆ ಒಂದೂವರೆ ವರ್ಷದ ಪುತ್ರಿ ಇದ್ದಾಳೆ. ಸುಕನ್ಯಾ ಸಮೃದ್ಧಿ ಯೋಜನೆಯಡಿ ಮಾಸಿಕ ₹3 ಸಾವಿರ ಕಟ್ಟುತ್ತಿದ್ದೇನೆ. ಮಗಳ ಭವಿಷ್ಯಕ್ಕೆ ಸುಲಭವಾಗಿ ಅರ್ಥವಾಗುವ ಹೂಡಿಕೆಗಳ ಬಗ್ಗೆ ತಿಳಿಸಿ.

ಉತ್ತರ: ನಿಮ್ಮ ಮಗಳ ಭವಿಷ್ಯಕ್ಕಾಗಿ ಹೂಡಿಕೆಗೆ ಯೋಜಿಸುವಾಗ ಆರ್ಥಿಕ ಅಪಾಯವನ್ನು ಕಡಿಮೆ ಮಾಡಿಕೊಳ್ಳುವುದು, ದೀರ್ಘಾವಧಿಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹೂಡಿಕೆ ಮಾಡುವುದು ಸೂಕ್ತ. ಸುಕನ್ಯಾ ಸಮೃದ್ಧಿ ಯೋಜನೆಯ ಜೊತೆಗೆ ಇನ್ನಷ್ಟು ಸುಲಭ ಹಾಗೂ ಸಾಂಪ್ರದಾಯಿಕ ಆಯ್ಕೆಗಳನ್ನು ಅರಿತು ಹೂಡಿಕೆ ಮಾಡಬಹುದು. ಮೊದಲ ಹಂತದಲ್ಲಿ ನೀವು ನಿಮ್ಮ ಮನೆಯ ವೆಚ್ಚ ಇತ್ಯಾದಿ ಕಳೆದು ಇನ್ನೂ ಹೆಚ್ಚಿನ ಎಷ್ಟು ಮೊತ್ತವನ್ನು ಹೂಡಿಕೆ ಮಾಡಬಹುದು ಎಂಬುದನ್ನು ಅರಿತುಕೊಳ್ಳಿ.

- **ಅಂಚೆ ಕಚೇರಿ ಆರ್‌ಡಿ ಠೇವಣಿ:** ಇದರಡಿ ಪ್ರತಿ ತ್ರೈಮಾಸಿಕ ಅವಧಿಗೆ ಶೇ 6.7ರಷ್ಟು ನಿಶ್ಚಿತ ಬಡ್ಡಿ ಲಭಿಸಲಿದೆ. ತಿಂಗಳಿಗೆ ಕನಿಷ್ಠ ₹100ಯಿಂದ ಹೂಡಿಕೆ ಮಾಡಬಹುದು. ಮಗುವಿಗೆ ಹತ್ತು ವರ್ಷ ಆಗುವ ತನಕ ಪೋಷಕರ ಹೆಸರಲ್ಲೇ ಖಾತೆ ತೆರೆದು ವ್ಯವಹರಿಸಬಹುದು. ಈ ಹೂಡಿಕೆಯ ಅವಧಿ 5 ವರ್ಷ. ನಂತರ ಬಡ್ಡಿಸಹಿತ ನಗದೀಕರಿಸಬಹುದು. ಅದೇ ಮೊತ್ತವನ್ನು ನಿಮ್ಮ ಮುಂದಿನ ಯೋಜನೆಯ ಉದ್ದೇಶಕ್ಕೆ ತಕ್ಕಂತೆ ಮರು ಹೂಡಿಕೆ ಮಾಡಬಹುದು.
- **ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್):** ಇದು ದೀರ್ಘಾವಧಿಯ ಹೂಡಿಕೆ ಯೋಜನೆಯಾಗಿದ್ದು, ಹದಿನೈದು ವರ್ಷದ ಹೂಡಿಕೆಯಾಗಿದೆ. ಪ್ರತಿವರ್ಷ ಕನಿಷ್ಠ ₹500ರಿಂದ ₹1.50 ಲಕ್ಷದ ತನಕ ಹೂಡಿಕೆ ಮಾಡಲು ಅವಕಾಶ ಇದೆ. ಪ್ರತಿವರ್ಷ ಶೇ 7.1ರಷ್ಟು ಬಡ್ಡಿ ದೊರೆಯುತ್ತದೆ. ಈ ಖಾತೆಯನ್ನು ಮಕ್ಕಳ ಹೆಸರಲ್ಲಿಯೂ ತೆರೆಯಬಹುದು.
- **ಬ್ಯಾಂಕ್ ಎಫ್‌ಡಿ:** ಇದು ಕೂಡ ಭದ್ರವಾದ ಹೂಡಿಕೆ ಆಯ್ಕೆಯಾಗಿದೆ. ನಿಮ್ಮ ಹೂಡಿಕೆ ಅವಧಿ ಅನುಸರಿಸಿ ಶೇ 8ರ ತನಕವೂ ನಿಶ್ಚಿತ ಬಡ್ಡಿ ಗಳಿಸಬಹುದು. ಒಂದು ವೇಳೆ ಹಣದ ತುರ್ತು ಅಗತ್ಯ ಬಂದರೆ ಅವಧಿಗೂ ಮುನ್ನ ಅದನ್ನು ನಗದೀಕರಿಸುವ ಅವಕಾಶವಿದೆ.
- **ಈಕ್ವಿಟಿ ಲಿಂಕ್ಡ್ ಸೇವಿಂಗ್ ಯೋಜನೆ:** ಇದು ಮ್ಯೂಚುವಲ್ ಫಂಡ್ ವರ್ಗಕ್ಕೆ ಸೇರಿದ ಹೂಡಿಕೆಯಾಗಿದೆ. ಸುಮಾರು ಮೂರು ವರ್ಷ ಅವಧಿಯ ಲಾಕ್-ಇನ್ ಅವಧಿ ಹೊಂದಿದೆ. ಷೇರು ಮಾರುಕಟ್ಟೆ ಆಧರಿತ ಹೂಡಿಕೆಗಳಾದ್ದರಿಂದ ಮಧ್ಯಮ ಮಟ್ಟದ ಅಪಾಯವನ್ನು ಹೊಂದಿದೆ. ಆದರೆ, ಐದರಿಂದ ಹತ್ತು ವರ್ಷದ ದೀರ್ಘಾವಧಿಯಲ್ಲಿ ಉತ್ತಮ ಮೌಲ್ಯ ಸೃಷ್ಟಿಸಿ ಕೊಡಲು ನೆರವಾಗುತ್ತದೆ.
- **ಮಕ್ಕಳ ಶೈಕ್ಷಣಿಕ ಯೋಜನೆ:** ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕಾಗಿ ರೂಪುಗೊಂಡ ಯೋಜನೆ ಇದಾಗಿದೆ. ಹೆಚ್ಚಿನ ವಿಮಾ ಕಂಪನಿಗಳು ಈ ರೀತಿಯ ಯೋಜನೆಗಳನ್ನು ನೀಡುತ್ತವೆ. ಇದರಿಂದ ಮಕ್ಕಳ ಶಿಕ್ಷಣಕ್ಕಾಗಿ ನಿರ್ದಿಷ್ಟ ಸಮಯದಲ್ಲಿ ಹಣ ಸಂಗ್ರಹಿಸಲು ಅನುಕೂಲವಾಗುತ್ತದೆ. ಇದು ಸಾಂಪ್ರದಾಯಿಕವಾಗಿ ವಿಮೆಯ ಜೊತೆಗೆ ನಮ್ಮದೇ ಮೊತ್ತವನ್ನು ವಾರ್ಷಿಕವಾಗಿ ಬೋನಸ್ ಮೂಲಕ ಒದಗಿಸಿಕೊಡುತ್ತದೆ.

ಇದರ ಪ್ರಿಮಿಯಂ ಪಾವತಿ ಅವಧಿಯನ್ನು ನಮ್ಮ ಆಯ್ಕೆಯಂತೆ ಹತ್ತು ಅಥವಾ ಇಪ್ಪತ್ತು ವರ್ಷದ ತನಕ ವಿಸ್ತರಿಸಬಹುದು. ಕೆಲವೊಮ್ಮೆ ಪಾಲಕರ ಅನಿರೀಕ್ಷಿತ ಅಗಲಿಕೆಯಂತಹ ಸಂದರ್ಭದಲ್ಲಿ ಉಳಿದ ವರ್ಷಗಳ ಪ್ರಿಮಿಯಂ ಭರಿಸಿ ವಿಮಾ ಅವಧಿ ಪೂರ್ಣಗೊಂಡಾಗ ಸಂಪೂರ್ಣ ಹಣ ಒದಗಿಸಿಕೊಡುತ್ತವೆ.

ನೀವು ಕಡಿಮೆ ಅಪಾಯದ ಹೂಡಿಕೆಗೆ ಹೆಚ್ಚು ಒತ್ತು ನೀಡುತ್ತಿದ್ದರೆ ಈಕ್ವಿಟಿ ಲಿಂಕ್ಡ್ ಸೇವಿಂಗ್ ಯೋಜನೆ ಬಿಟ್ಟು ಇನ್ನುಳಿದ ಆಯ್ಕೆಗಳು ಸೂಕ್ತವಾಗಿವೆ. ದೀರ್ಘಾವಧಿಯಲ್ಲಿ ಹೆಚ್ಚಿನ ಲಾಭಕ್ಕೆ ಈಕ್ವಿಟಿ ಲಿಂಕ್ಡ್ ಸೇವಿಂಗ್ ಯೋಜನೆಯನ್ನು ಪರಿಗಣಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ರೂಪಾಯಿ ಮೌಲ್ಯ 47 ಪೈಸೆ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 47 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯವು ಮಂಗಳವಾರ ₹87.19 ಆಗಿದೆ.

ತಿಂಗಳ ಅಂತ್ಯವಾಗಿರುವುದರಿಂದ ಆಮದುದಾರರು ಪಾವತಿಗೆ ಮುಂದಾಗಿದ್ದಾರೆ. ಇದರಿಂದ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್‌ಗಳನ್ನು ಹೆಚ್ಚಾಗಿ ಖರೀದಿಸುತ್ತಿದ್ದಾರೆ. ಇದು ರೂಪಾಯಿ ಒತ್ತಡಕ್ಕೆ ಸಿಲುಕಲು ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಲ್ಲದೆ, ದೇಶೀಯ ಷೇರುಪೇಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳ ಮಾರಾಟವನ್ನು ಮುಂದುವರಿಸಿದ್ದಾರೆ. ಅಮೆರಿಕದ ಸುಂಕ ನೀತಿಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ತಲೆದೋರಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚೇತರಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಸತತ ಐದು ದಿನಗಳಿಂದ ಇಳಿಕೆ ಕಂಡಿದ್ದ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ಹಣಕಾಸು ಹಾಗೂ ಎಫ್‌ಎಂಸಿಜಿ ಷೇರುಗಳ ಮಾರಾಟದ ಹೆಚ್ಚಳದಿಂದಾಗಿ ಮಾರುಕಟ್ಟೆ ಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 147 ಅಂಶ ಏರಿಕೆ ಕಂಡು, 74,602 ಅಂಶಗಳಲ್ಲಿ ಸ್ಥಿರಗೊಂಡಿತು.

ಸತತ ಆರನೇ ದಿನವೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಇಳಿಕೆ ಕಂಡಿದೆ. 6 ಅಂಶ ಇಳಿಕೆ ಕಂಡು 22,547 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಬಜಾಜ್ ಫೈನಾನ್ಸ್, ಜೊಮಾಟೊ, ನೆಸ್ಲೆ, ಬಜಾಜ್ ಫಿನ್‌ಸರ್ವ್, ಮಾರುತಿ ಮತ್ತು ಟೈಟನ್ ಷೇರಿನ ಮೌಲ್ಯ ಏರಿಕೆಯಾಗಿದೆ. ಸನ್ ಫಾರ್ಮಾ, ಪವರ್ ಗ್ರಿಡ್, ಟಿಸಿಎಸ್, ಟೆಕ್ ಮಹೀಂದ್ರ, ಏಷ್ಯನ್ ಪೇಂಟ್ಸ್, ಟಾಟಾ ಮೋಟರ್ಸ್ ಷೇರಿನ ಮೌಲ್ಯ ಇಳಿದಿದೆ.

ಚಿನ್ನದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ಬೆಲೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹250 ಏರಿಕೆಯಾಗಿದ್ದು, ₹89,350 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣ ದಲ್ಲಿ ಹೆಚ್ಚಳವಾಗಿದ್ದು, ₹88,950 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಇಳಿಕೆಯಾಗಿದ್ದು, ₹99,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಾಗಿದೆ. ಹಾಗಾಗಿ, ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
25-02-2025

ಜಾವಾ 70/80(ಹೊಸ)	10000-10100
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	7900-8000
ದಪ್ಪ ಗುಜರಾತ್(ಹೊಸ)	8200-8300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1470)
ಒಂದು ವಾರದ ಡೆಲಿವರಿ	1475 (1465)
ಪಾಮ್ ವಾರದ ಡೆಲಿವರಿ	1378 (1373)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹86,450 (86,250)
ಬೆಳ್ಳಿ ಕೆ.ಜಿ ₹95,850 (96,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	87.19
£ ಪೌಂಡ್	110.12
€ ಯುರೊ	91.36
¥ ಯೆನ್ (100ಕ್ಕೆ)	58

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹500-667
ದ್ವಿತಳಿ (ಬಿ.ವಿ) ₹141-836

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1470 (1460)
ಸೋಯಾ (ರಿಫೈನ್ಡ್)	₹1360 (1350)
ಸೂರ್ಯಕಾಂತಿ (ರಿಫೈನ್ಡ್)	₹1430 (1440)
ಪಾಮೋಲಿನ್	₹1380 (1375)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸರಕು	52000-92996	ಕೆಂಪುಗೋಟು	12999-23899
ಕೋಕ	20000-27500	ಸಿದ್ದಾಪುರ		ರಾಶಿ	34699-47849
ಹೊಸತು	30000-37000	ಬಿಳಿಗೋಟು	20219-25689	ಯಲ್ಲಾಪುರ	
ಹಳತು	45200-49200	ಚಾಲಿ	32889-36109	ಅಪಿ	61000-72775
ಸಾಗರ		ಕೋಕ	14819-24299	ಬಿಳಿಗೋಟು	11899-25922
ಕೆಂಪುಗೋಟು	8700-17569	ಹೊಸಚಾಲಿ	26009-34299	ಚಾಲಿ	27469-39099
ರಾಶಿ	43009-50619	ಕೆಂಪುಗೋಟು	19119-22089	ಕೋಕ	4499-16299
ಸಿಪ್ಪೆಗೋಟು	5020-16401	ರಾಶಿ	41889-49499	ಕೆಂಪುಗೋಟು	14099-25969
ಬಿಳಿಗೋಟು	14800-18501	ತಟ್ಟಿಬೆಟ್ಟೆ	27199-33099	ರಾಶಿ	39609-59322
ಚಾಲಿ	29899-32849	ಶಿರಸಿ		ತಟ್ಟಿಬೆಟ್ಟೆ	28100-39600
ಶಿವಮೊಗ್ಗ		ಬೆಟ್ಟೆ	27899-42299	ಕಾರ್ಕಳ	
ಬೆಟ್ಟೆ	47589-56750	ಬಿಳಿಗೋಟು	15199-28799	ಹೊಸತು	25000-37000
ಗೊರಬಲು	16211-30189	ಚಾಲಿ	31099-36299	ಹಳತು	30000-45500
ರಾಶಿ	32009-51669				

ಡಿನೋಟಿಫೈ: ಎಚ್‌ಡಿಕೆಗೆ ಸಂಕಷ್ಟ

ಒಂದನೇ ಪುಟದಿಂದ...

'ಅರ್ಜಿದಾರರು ಪ್ರಕರಣ ದಾಖಲಿಸುವ ಸಮಯದಲ್ಲಿ ಮುಖ್ಯಮಂತ್ರಿಯ ಹುದ್ದೆಯಲ್ಲಿಲ್ಲದ ಕಾರಣ, ಪೂರ್ವಾನುಮತಿಯ ರಕ್ಷಣೆ ಅವರಿಗೆ ದೊರೆಯುವುದಿಲ್ಲ. 2018ರ ತಿದ್ದುಪಡಿಯನ್ನು, ಅದರ ಜಾರಿಗೂ ಮೊದಲು ನಡೆದ ಘಟನೆಗಳಿಗೆ ಅನ್ವಯಿಸಲು ಸಾಧ್ಯವಿಲ್ಲ' ಎಂದು ಅವರು ವಾದ ಮಂಡಿಸಿದರು. ಇವುಗಳನ್ನು ಪರಿಗಣಿಸಿದ ನ್ಯಾಯಾಲಯವು ಹೈಕೋರ್ಟ್ ಆದೇಶವನ್ನು ಎತ್ತಿಹಿಡಿಯಿತು ಮತ್ತು ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿ ಆದೇಶ ಹೊರಡಿಸಿತು.

'ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಾರ್ವಜನಿಕ ಸೇವಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂದು ಭ್ರಷ್ಟಾಚಾರ ನಿಗ್ರಹ ಕಾಯ್ದೆಗೆ 2018ರಲ್ಲಿ ತಿದ್ದುಪಡಿ ತರಲಾಗಿದೆ. ಆದರೆ, ಅದಕ್ಕೂ ಮುಂಚಿನ ಪ್ರಕರಣಕ್ಕೆ ಈ ಕಾಯ್ದೆಯಡಿ ರಕ್ಷಣೆ ಹೇಗೆ ಪಡೆಯುತ್ತೀರಿ' ಎಂದು ಕುಮಾರಸ್ವಾಮಿ ಅವರಿಗೆ ಸುಪ್ರೀಂ ಕೋರ್ಟ್ ಕಳೆದ ತಿಂಗಳು ಪ್ರಶ್ನಿಸಿತ್ತು. '2012ರಲ್ಲಿ ನೀವು ಏನಾದರೂ ಮಾಡಿರಬಹುದು. ಕಾಯ್ದೆಗೆ 2018ರಲ್ಲಿ ತಿದ್ದುಪಡಿ ಮಾಡಲಾಯಿತು. ಅಂತಹ ಸಂದರ್ಭದಲ್ಲಿ ವಿಚಾರಣೆಗೆ ಅನುಮೋದನೆ ಅಗತ್ಯವಿದೆ ಎಂದು ನೀವು ಹೇಳಬಹುದೇ' ಎಂದು ಕೇಳಿತ್ತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19 ಗಮನಿಸಿ ಹೈಕೋರ್ಟ್ ತೀರ್ಪು ನೀಡಿದೆ. ಆ ಪ್ರಕಾರ, ವಿಚಾರಣೆಗೆ ಪೂರ್ವಾನುಮತಿ ಅಗತ್ಯವಿಲ್ಲ ಎಂದು ಹೇಳಿದೆ' ಎಂದು ಪೀಠವು ಅಭಿಪ್ರಾಯಪಟ್ಟಿತ್ತು.

ಪ್ರಕರಣದ ಹಿನ್ನೆಲೆ

ಪದ್ಮಾ ಎಂಬುವವರಿಗೆ ಸೇರಿದ್ದ ಸರ್ವೆ ಸಂಖ್ಯೆ 128ರಲ್ಲಿರುವ 1 ಎಕರೆ 10 ಗುಂಟೆ ಹಾಗೂ ಸರ್ವೆ ಸಂಖ್ಯೆ 137ರ 1 ಎಕರೆ 14 ಗುಂಟೆ ಜಾಗವನ್ನು ಅಂತಿಮ ಅಧಿಸೂಚನೆ ಮೂಲಕ 1997ರ ಸೆಪ್ಟೆಂಬರ್ 12ರಂದು ವಶಪಡಿಸಿಕೊಳ್ಳಲಾಗಿತ್ತು. ಭೂಮಾಲೀಕರಿಗೆ 1998ರಲ್ಲಿ ಪರಿಹಾರ ನೀಡಲಾಗಿತ್ತು. ಈ ಜಾಗವನ್ನು 1999ರ ಸೆಪ್ಟೆಂಬರ್ 29ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿತ್ತು.

1991ರ ಕರ್ನಾಟಕ ಭೂ (ವರ್ಗಾವಣೆ ನಿರ್ಬಂಧ) ಕಾಯ್ದೆ ಉಲ್ಲಂಘಿಸಿ ಪದ್ಮಾ ಅವರು ಮೂರನೇ ವ್ಯಕ್ತಿಗೆ ಸೇಲ್‌ಡೀಡ್ ಮಾಡಿಕೊಟ್ಟಿದ್ದರು. ಈ ಜಾಗವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ/ ಡಿನೋಟಿಫೈ ಮಾಡುವಂತೆ ಮುಖ್ಯಮಂತ್ರಿಗೆ ಪದ್ಮಾ ಮನವಿ ಸಲ್ಲಿಸಿದ್ದರು. ಪ್ರಾಧಿಕಾರವು 2005ರ ಡಿಸೆಂಬರ್‌ನಲ್ಲಿ ಪತ್ರ ಬರೆದು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿತ್ತು ಹಾಗೂ ಈ ಜಾಗ ಪ್ರಾಧಿಕಾರಕ್ಕೆ ಸೇರಿದ್ದು ಎಂದು ಬಲವಾಗಿ ಪ್ರತಿಪಾದಿಸಿತ್ತು. 2 ಎಕರೆ 24 ಗುಂಟೆಯನ್ನು ಡಿನೋಟಿಫೈ ಮಾಡುವಂತೆ ಕುಮಾರಸ್ವಾಮಿ 2007ರ ಸೆಪ್ಟೆಂಬರ್ 25ರಂದು ಆದೇಶಿಸಿದ್ದರು ಎಂದು ಆರೋಪಿಸಲಾಗಿತ್ತು. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಕುಮಾರಸ್ವಾಮಿ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿ ಮಾಹಿತಿ ಹಕ್ಕು ಕಾರ್ಯಕರ್ತ ಎಂ.ಎಸ್. ಮಹದೇವ ಸ್ವಾಮಿ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಈ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ನ್ಯಾಯಾಲಯದ ವಿಶೇಷ ನ್ಯಾಯಾಧೀಶರು 2012ರ ಜುಲೈ 4ರಂದು ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಕುಮಾರಸ್ವಾಮಿ ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ 2015ರಲ್ಲಿ ಅರ್ಜಿ ವಜಾಗೊಳಿಸಿತ್ತು. ಬಳಿಕ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ 2016ರಲ್ಲಿ ವಜಾಗೊಳಿಸಿತ್ತು.

ಏಳು ವರ್ಷ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, 2019ರ ಜನವರಿಯಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಇದನ್ನು ಆಕ್ಷೇಪಿಸಿ ದೂರುದಾರ ಮಹದೇವ ಸ್ವಾಮಿ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು ವಿಶೇಷ ನ್ಯಾಯಾಲಯ ಪುರಸ್ಕರಿಸಿತ್ತು.

'ಬಿ' ರಿಪೋರ್ಟ್ ರದ್ದುಪಡಿಸಿದ್ದ ನ್ಯಾಯಾಧೀಶರು, 2019 ಅಕ್ಟೋಬರ್ 4ರಂದು ವಿಚಾರಣೆಗೆ ಹಾಜರಾಗುವಂತೆ ಕುಮಾರಸ್ವಾಮಿ ಸೇರಿ ಪ್ರಕರಣದ ಒಟ್ಟು 19 ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಿದ್ದರು. ಈ ಕ್ರಮವನ್ನು ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 'ಈ ಆರೋಪಗಳು ಗಂಭೀರ ಸ್ವರೂಪದ್ದು ಆಗಿದ್ದು, ಪ್ರಕರಣದ ತನಿಖೆಯನ್ನು ಹಸ್ತಕ್ಷೇಪ ಮಾಡಲು ಕಾರಣಗಳಿಲ್ಲ' ಎಂಬ ಕಾರಣ ನೀಡಿ ಅರ್ಜಿಯನ್ನು ವಜಾಗೊಳಿಸಿತ್ತು. ಆ ನಂತರ ಕೇಂದ್ರ ಸಚಿವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

20 ಸಾವಿರ ಜನ ಭಾಗವಹಿಸುವ ನಿರೀಕ್ಷೆ: ಪ್ರಿಯಾಂಕ್

ನಾಳೆಯಿಂದ 'ಗೆಫೆಕ್ಸ್' ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 27ರಿಂದ ನಗರದ ಲಲಿತ್ ಅಶೋಕ ಹೋಟೆಲ್‌ನಲ್ಲಿ ಮೂರು ದಿನ ಆ್ಯನಿಮೇಷನ್, ದೃಶ್ಯ ಪರಿಣಾಮಗಳು, ಗೇಮಿಂಗ್, ಕಾಮಿಕ್ಸ್ ಕುರಿತ 'ಗೆಫೆಕ್ಸ್– 2025' ಸಮ್ಮೇಳನ ಆಯೋಜಿಸಲಾಗಿದೆ' ಎಂದು ಐ.ಟಿ– ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಈ ಸಮ್ಮೇಳನವು ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮ್ಸ್ ಮತ್ತು ಕಾಮಿಕ್ಸ್ (ಎವಿಜಿಸಿ) ವಲಯದಲ್ಲಿ ಬೆಂಗಳೂರನ್ನು ವಿಶ್ವದ ಅಗ್ರಗಣ್ಯ ನಗರವಾಗಿ ಮಾಡುವ ದಿಸೆಯಲ್ಲಿ ಮಹತ್ವದ ಹೆಜ್ಜೆ ಆಗಲಿದೆ' ಎಂದರು.

'ಈ ಸಮ್ಮೇಳನವು 'ತಲ್ಲೀನತೆಯ ಭವಿಷ್ಯ: ಅನುಭವಿಸಿ, ಅನ್ವೇಷಿಸಿ, ಭೇದಿಸಿ' ಪರಿಕಲ್ಪನೆಯಲ್ಲಿ ನಡೆಯಲಿದೆ.



'ಗೆಫೆಕ್ಸ್– 2025' ಸಮ್ಮೇಳನದ ಮಾಹಿತಿ ಪತ್ರವನ್ನು ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಏಕರೂಪ್ ಕೌರ್, ಬಿರೇನ್ ಘೋಷ್ ಇದ್ದರು

'ಎವಿಜಿಸಿ ಕ್ಷೇತ್ರಗಳಲ್ಲಿನ ಪರಿಣತರು ಕ್ರಿಯಾಶೀಲತೆ ಮತ್ತು ತಂತ್ರಜ್ಞಾನ ಸಾಧಿಸಿರುವ ನೆಲೆಗಳನ್ನು ಇನ್ನಷ್ಟು ವಿಸ್ತರಿಸಲು ಈ ಕಾರ್ಯಕ್ರಮ ಪೂರಕ ಆಗುವ ನಿರೀಕ್ಷೆಯಿದೆ' ಎಂದು ಹೇಳಿದರು.

'ಎವಿಜಿಸಿ ಕ್ಷೇತ್ರಗಳಲ್ಲಿನ ಪರಿಣತರು ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು, ತಂತ್ರಜ್ಞಾನದ ಆಳ-ವಿಸ್ತಾರವನ್ನು ಹಂಚಿಕೊಳ್ಳಲಿದ್ದಾರೆ. 20 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ' ಎಂದರು.

ಹೊಸ ಸಂತರ ನೇಮಕ ಪೋಪ್ ಜೊತೆ ಚರ್ಚೆ

ರೋಮ್ (ಎ.ಪಿ): ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ ಪೋಪ್ ಫ್ರಾನ್ಸಿಸ್ ಅವರನ್ನು ಆಸ್ಪತ್ರೆಯಲ್ಲಿ ಭೇಟಿಯಾದ ವ್ಯಾಟಿಕನ್ ಆಡಳಿತದ ಕಾರ್ಯದರ್ಶಿ ಹಾಗೂ ಉಪ ಕಾರ್ಯದರ್ಶಿ, ನೂತನ ಸಂತರ ನಿಯೋಜನೆ ಕುರಿತು ಚರ್ಚಿಸಿದರು.

ಫ್ರಾನ್ಸಿಸ್ ಅವರ ಆರೋಗ್ಯ ಸ್ಥಿತಿಯು ಗಂಭೀರವಾಗಿ ಇರುವಾಗಲೇ ಈ ಭೇಟಿ ಹಾಗೂ ಚರ್ಚೆ ನಡೆದಿದೆ.

ಈ ಮಧ್ಯೆ, ವ್ಯಾಟಿಕನ್ ಮಧ್ಯಾಹ್ನ ಬಿಡುಗಡೆ ಮಾಡಿದ ವಾರ್ತಾಪತ್ರದ ಪ್ರಕಾರ ಇಬ್ಬರಿಗೆ ಸಂತ ಸ್ಥಾನ ಹಾಗೂ ಇತರ ಐವರಿಗೆ ದೀಕ್ಷೆ ನೀಡುವ ಪ್ರಸ್ತಾವಕ್ಕೆ ಪೋಪ್ ಒಪ್ಪಿಗೆ ಸೂಚಿಸಿದ್ದಾರೆ.

ಕಾರ್ಡಿನಾಲ್ ಪಿಯೆಟ್ರೊ ಪಾರೊಲಿನ್, ಆರ್ಚ್‌ಬಿಷಪ್ ಎಡ್ಗಾರ್ ಪೆನಾ ಪರ್ರಾ ಅವರು ಪೋಪ್ ಫ್ರಾನ್ಸಿಸ್ ಅವರನ್ನು ಭೇಟಿ ಆಗಿದ್ದರು. 'ಪೋಪ್ ರಾತ್ರಿ ಪೂರಾ ನೆಮ್ಮದಿಯಿಂದ ನಿದ್ರಿಸಿದರು' ಎಂದು ವ್ಯಾಟಿಕನ್ ವಾರ್ತಾಪತ್ರ ತಿಳಿಸಿದೆ.

ಪೋಪ್ ಸ್ಥಿತಿ ಗಂಭೀರವಾಗಿ ಇರುವಂತೆಯೇ ಸೋಮವಾರ ಸಂಜೆ ರೋಮ್‌ನ ಸೇಂಟ್ ಪೀಟರ್ ಸ್ಕ್ವೈರ್‌ನಲ್ಲಿ ಸೇರಿದ್ದ ಸಾವಿರಾರು ಮಂದಿ, ಪೋಪ್ ಅವರು ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದರು.

ರಷ್ಯಾ–ಉಕ್ರೇನ್ ಯುದ್ಧ ಶೀಘ್ರ ಅಂತ್ಯ: ಟ್ರಂಪ್



ವಾಷಿಂಗ್ಟನ್ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧವು ಶೀಘ್ರವೇ ಅಂತ್ಯಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದರು.

ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರನ್ನು ಸೋಮವಾರ ಭೇಟಿಯಾದ ಸಂದರ್ಭದಲ್ಲಿ ಅವರು ಈ ರೀತಿ ವಿಶ್ವಾಸ ವ್ಯಕ್ತಪಡಿಸಿದರು.

ಟ್ರಂಪ್ ಅವರ 'ಅಮೆರಿಕ ಮೊದಲು' ನೀತಿಯ ಪರಿಣಾಮವಾಗಿ ಅಟ್ಲಾಂಟಿಕ್ ಸಾಗರದ ಎರಡೂ ಬದಿಗಳಲ್ಲಿರುವ ದೇಶ ಗಳ ನಡುವಿನ ಸಂಬಂಧದ ಭವಿಷ್ಯ ಕುರಿತು ಅನಿಶ್ಚಿತತೆ ಮೂಡಿರುವ ಸಂದರ್ಭದಲ್ಲಿಯೇ ಮ್ಯಾಕ್ರನ್ ಮತ್ತು ಟ್ರಂಪ್ ಅವರ ಮಧ್ಯೆ ಮಾತುಕತೆ ನಡೆದಿದೆ.

'ಉಕ್ರೇನ್ ಮೇಲಿನ ಆಕ್ರಮಣಕ್ಕೆ ಅಂತ್ಯ ಹಾಡುವ ಒಪ್ಪಂದಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಒಪ್ಪಿಗೆ ಸೂಚಿಸಲಿದ್ದಾರೆ ಎಂದು ಭಾವಿಸುತ್ತೇನೆ. ಈ ಬಗ್ಗೆ ನಾನು ಅವರನ್ನು ಪ್ರಶ್ನಿಸಿದ್ದೆ' ಎಂದರು.

ಈ ಸಂದರ್ಭದಲ್ಲಿ ಮ್ಯಾಕ್ರನ್ ಅವರು, 'ರಷ್ಯಾದೊಂದಿಗಿನ ಯಾವುದೇ ಒಪ್ಪಂದವು ಉಕ್ರೇನ್ ದೇಶವನ್ನು ಶರಣಾಗುವಂತೆ ಮಾಡುವಂತಿರಬಾರದು' ಎಂದು ಎಚ್ಚರಿಸಿದರು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ರಷ್ಯಾ–ಉಕ್ರೇನ್ ನಡುವಣ ಯುದ್ಧವು ಕೆಲವೇ ವಾರಗಳ ಒಳಗಾಗಿ ಅಂತ್ಯಗೊಳ್ಳಲಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಶೀಘ್ರವೇ ಅಮೆರಿಕಕ್ಕೆ ಬರಲಿದ್ದಾರೆ ಮತ್ತು ಉಕ್ರೇನ್‌ನ ಖನಿಜ ಸಂಪನ್ಮೂಲಗಳನ್ನು ಅಮೆರಿಕ ಬಳಸಿಕೊಳ್ಳಲು ಅವಕಾಶ ನೀಡುವ ಒಪ್ಪಂದಕ್ಕೆ ಸಹಿ ಮಾಡಲಿದ್ದಾರೆ' ಎಂದು ಹೇಳಿದರು.

ದೆಹಲಿ ಅಬಕಾರಿ ನೀತಿ ಹಗರಣ: ವರದಿಯಲ್ಲಿ ಉಲ್ಲೇಖ • ಬಿಜೆಪಿ ಸರ್ಕಾರದಿಂದ ವಿಧಾನಸಭೆಯಲ್ಲಿ ಮಂಡನೆ

ಸರ್ಕಾರಕ್ಕೆ ₹2,000 ಕೋಟಿ ನಷ್ಟ: ಸಿಎಜಿ

ನವದೆಹಲಿ (ಪಿಟಿಐ): ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಸರ್ಕಾರವು 2021–2022ರಲ್ಲಿ ಜಾರಿಗೊಳಿಸಿದ್ದ ಅಬಕಾರಿ ನೀತಿಯಿಂದಾಗಿ ಸರ್ಕಾರಕ್ಕೆ ಒಟ್ಟಾರೆ ₹2,000 ಕೋಟಿ ನಷ್ಟ ಉಂಟಾಗಿದೆ ಎಂದು ಸಿಎಜಿ ವರದಿ ತಿಳಿಸಿದೆ.

ರೇಖಾ ಗುಪ್ತಾ ನೇತೃತ್ವದ ಬಿಜೆಪಿ ಸರ್ಕಾರವು ಮಂಗಳವಾರ ವಿಧಾನ ಸಭೆಯಲ್ಲಿ ಮಂಡಿಸಿದ ಸಿಎಜಿ ವರದಿಯು, ಅಬಕಾರಿ ನೀತಿಯ ಅನುಷ್ಠಾನ ಪ್ರಕ್ರಿಯೆಯಲ್ಲಿನ ಲೋಪ ಸೇರಿದಂತೆ ನಷ್ಟಕ್ಕೆ ಕಾರಣವಾದ ವಿವಿಧ ಅಂಶಗಳನ್ನು ಪಟ್ಟಿಮಾಡಿದೆ.

ಹಿಂದಿನ ಎಎಪಿ ಸರ್ಕಾರದ ಕಾರ್ಯ-ದಕ್ಷತೆಗೆ ಸಂಬಂಧಿಸಿದ 14 ವರದಿಗಳನ್ನು ಮಂಡಿಸಲು ಬಿಜೆಪಿ ಸರ್ಕಾರ ಸಿದ್ಧತೆ ನಡೆಸಿದೆ. ಅಬಕಾರಿ ನೀತಿ ಕುರಿತ ಸಿಎಜಿ ವರದಿ ಅದರಲ್ಲಿ ಮೊದಲನೆಯದ್ದು. ಈ ವರದಿಯು, ಮದ್ಯ ಮಾರಾಟ ಮಳಿಗೆಗಳಿಗೆ ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ಆಗಿರುವ ನಿಯಮಗಳ ಉಲ್ಲಂಘನೆಯನ್ನೂ ಎತ್ತಿತೋರಿಸಿದೆ.

ಮದ್ಯ ಮಾರಾಟಕ್ಕೆ ಬೇಕಾದ ರೀತಿಯ ಕಟ್ಟಡಗಳು ಇಲ್ಲದ ವಾರ್ಡ್‌ಗಳಲ್ಲಿ ಮದ್ಯ ಮಾರಾಟ ಮಳಿಗೆಗಳನ್ನು ತೆರೆಯಲು ನಿಗದಿತ ಕಾಲಮಿತಿಯೊಳಗೆ ಅನುಮತಿ ನೀಡಲು ನಿರ್ಧಾರ ತೆಗೆದುಕೊಂಡಿಲ್ಲ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ₹941.53 ಕೋಟಿ ನಷ್ಟ ಉಂಟಾಗಿದೆ ಎಂಬ ಅಂಶ ವರದಿಯಲ್ಲಿದೆ.

'ಈ ವಲಯಗಳಿಂದ ಪರವಾನಗಿ ಶುಲ್ಕದ ರೂಪದಲ್ಲಿ ಸಿಗಬೇಕಿದ್ದ ಸುಮಾರು ₹890.15 ಕೋಟಿ ಅಬಕಾರಿ ಇಲಾಖೆಗೆ ನಷ್ಟ ಆಗಿದೆ. ಕೋವಿಡ್ ಅವಧಿಯಲ್ಲಿ ಮುಚ್ಚಿದ್ದ ಮಳಿಗೆಗಳಿಗೆ ಪರವಾನಗಿ ಶುಲ್ಕದಲ್ಲಿ ಮನ್ನಾ ನೀಡಿದ್ದರಿಂದ ₹144 ಕೋಟಿ ಆದಾಯ ನಷ್ಟವಾಗಿದೆ' ಎಂದು ವಿವರಿಸಲಾಗಿದೆ.

ಅಬಕಾರಿ ನೀತಿಯ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು 2022ರ ಜುಲೈನಲ್ಲಿ ಸಿಬಿಐ ತನಿಖೆಗೆ ಶಿಫಾರಸು ಮಾಡಿದ್ದರು. ಅರವಿಂದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ಸಂಜಯ್ ಸಿಂಗ್ ಸೇರಿದಂತೆ ಎಎಪಿಯ ಉನ್ನತ ನಾಯಕರು ಈ ಪ್ರಕರಣ-ದಲ್ಲಿ ಬಂಧನಕ್ಕೆ ಒಳಗಾಗಿ ಹಲವು ತಿಂಗಳುಗಳನ್ನು ಜೈಲಿನಲ್ಲಿ ಕಳೆದಿದ್ದಾರೆ.



ವಿರೋಧ ಪಕ್ಷದ ನಾಯಕಿ ಆತಿಶಿ ನೇತೃತ್ವದಲ್ಲಿ ಎಎಪಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ವರದಿಯಲ್ಲಿರುವ ಇತರ ಅಂಶಗಳು

- ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪರವಾನಗಿ ನೀಡುವಾಗ ಸಾಲ ತೀರಿಸುವ ಶಕ್ತಿ, ಹಣಕಾಸು ಹೇಳಿಕೆ ಮತ್ತು ಅಪರಾಧ ಹಿನ್ನೆಲೆಯ ಬಗ್ಗೆ ಸರಿಯಾದ ಪರಿಶೀಲನೆ ನಡೆಸಿಲ್ಲ.
- ಆದಾಯ ಗಳಿಕೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ಸಂಪುಟದ ಒಪ್ಪಿಗೆ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರ ಅಭಿಪ್ರಾಯ ಪಡೆಯದೆಯೇ ತೆಗೆದುಕೊಳ್ಳಲಾಗಿದೆ.
- ಅಬಕಾರಿ ನೀತಿಯನ್ನು ರಚಿಸಿದ ತಜ್ಞರ ಸಮಿತಿಯ ಶಿಫಾರಸುಗಳನ್ನು ಅಂದಿನ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ನೇತೃತ್ವದ ಸಚಿವರ ಸಮಿತಿಯು ಬದಲಾಯಿಸಿದೆ.
- ಮದ್ಯದ ಸಗಟು ಮಾರಾಟವನ್ನು ಸರ್ಕಾರಿ ಏಜೆನ್ಸಿಯು ನಿರ್ವಹಿಸಬೇಕು ಎಂದು ತಜ್ಞರ ಸಮಿತಿ ಶಿಫಾರಸು ಮಾಡಿತ್ತು. ಆದರೆ ಸಗಟು ಮಾರಾಟವನ್ನು ಖಾಸಗಿ ಸಂಸ್ಥೆಗಳು ವಹಿಸಿಕೊಳ್ಳಬೇಕೆಂದು ಸಚಿವರ ಸಮಿತಿಯು ಶಿಫಾರಸು ಮಾಡಿದೆ.

ಎಎಪಿಯ 21 ಶಾಸಕರು ಅಮಾನತು

ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರ ಭಾಷಣಕ್ಕೆ ಅಡ್ಡಿಪಡಿಸಿದ ಕಾರಣಕ್ಕಾಗಿ ವಿರೋಧ ಪಕ್ಷದ ನಾಯಕಿ ಆತಿಶಿ ಒಳಗೊಂಡಂತೆ ಎಎಪಿಯ 21 ಶಾಸಕರನ್ನು ಮೂರು ದಿನಗಳ ಮಟ್ಟಿಗೆ ದೆಹಲಿ ವಿಧಾನಸಭೆಯ ಕಲಾಪದಿಂದ ಮಂಗಳವಾರ ಅಮಾನತುಗೊಳಿಸಲಾಗಿದೆ.

ದೆಹಲಿ ಲೋಕೋಪಯೋಗಿ ಸಚಿವ ಪರ್ವೇಶ್ ವರ್ಮಾ ಅವರು ಶಾಸಕರನ್ನು ಅಮಾನತು ಮಾಡುವಂತೆ ಮಂಡಿಸಿದ ನಿರ್ಣಯವನ್ನು ಸದನದಲ್ಲಿ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಅಮಾನತುಗೊಂಡಿರುವ ಶಾಸಕರು ಫೆ.27 ಮತ್ತು 28ರಂದು ಸದನದ ಕಲಾಪದಲ್ಲಿ ಪಾಲ್ಗೊಳ್ಳುವಂತಿಲ್ಲ. ಮುಖ್ಯಮಂತ್ರಿ ಕಚೇರಿಯಿಂದ ಬಿ.ಆರ್. ಅಂಬೇಡ್ಕರ್ ಮತ್ತು ಭಗತ್ ಸಿಂಗ್ ಅವರ ಭಾವಚಿತ್ರಗಳನ್ನು ತೆಗೆದುಹಾಕಲಾಗಿದೆ ಎಂದು ಆರೋಪಿಸಿ ಎಎಪಿ ಶಾಸಕರು ಸೋಮವಾರ ಕೂಡಾ ಕಲಾಪಕ್ಕೆ ಅಡ್ಡಿಪಡಿಸಿದ್ದರು. ಮಂಗಳವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ಆತಿಶಿ ನೇತೃತ್ವದಲ್ಲಿ ಇದೇ ವಿಷಯ ಪ್ರಸ್ತಾಪಿಸಿ ಪ್ರತಿಭಟನೆ ನಡೆಸಿದರು.

ಸ್ಪೀಕರ್ ವಿಜೇಂದರ್ ಗುಪ್ತಾ ಅವರು ಕಲಾಪ ನಡೆಯಲು ಅವಕಾಶ ನೀಡುವಂತೆ ಮನವಿ ಮಾಡಿದರೂ ಎಎಪಿ ಶಾಸಕರು ಪ್ರತಿಭಟನೆ ಮುಂದುವರಿಸಿದರು. ಇದರಿಂದ ಶಾಸಕರನ್ನು ಅಮಾನತುಗೊಳಿಸಲಾಯಿತು. ಸ್ಪೀಕರ್ ಅವರು ಆ ಬಳಿಕ ಕಲಾಪವನ್ನು ಫೆ.27ರ 11 ಗಂಟೆಗೆ ಮುಂದೂಡಿದರು.

ದೆಹಲಿ ವಿಧಾನಸಭೆಯಲ್ಲಿ ಎಎಪಿಯ 22 ಸದಸ್ಯರು ಇದ್ದು, ಓಕ್ಲಾ ಕ್ಷೇತ್ರದ ಶಾಸಕ ಅಮಾನತ್ ಉಲ್ಲಾ ಖಾನ್ ಹೊರತುಪಡಿಸಿ ಇತರ ಎಲ್ಲರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಖಾನ್ ಅವರು ಮಂಗಳವಾರ ಸದನಕ್ಕೆ ಗೈರಾಗಿದ್ದರು. ಅಮಾನತುಗೊಂಡ 21 ಶಾಸಕರು ಆ ಬಳಿಕ ಸದನದ ಆವರಣದಲ್ಲಿ ಅಂಬೇಡ್ಕರ್ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿದರು.

'ದೆಹಲಿ ಜನರು ಉತ್ತರಿಸಿದ್ದಾರೆ'

'ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡಿದ್ದಕ್ಕೆ, ದೆಹಲಿಯ ಜನರು ಚುನಾವಣೆಯಲ್ಲಿ ಉತ್ತರ ನೀಡಿದ್ದಾರೆ' ಎಂದು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಹೇಳಿದ್ದಾರೆ.

ಮಂಗಳವಾರ ವಿಧಾನಸಭೆ-ಯಲ್ಲಿ ಮಾತನಾಡಿದ ಅವರು, 'ಕೇಜ್ರಿವಾಲ್ ಅವರು ಪ್ರಧಾನಿ ಬಗ್ಗೆ ಹಲವು ಸಲ ಅನುಚಿತ ಹೇಳಿಕೆಗಳನ್ನು ನೀಡಿದ್ದಾರೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಮೋದಿ ಅವರಿಗೆ ದೆಹಲಿಯನ್ನು ಗೆಲ್ಲಲು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದೂ ಹೇಳಿದ್ದರು. ಆದರೆ ದೆಹಲಿಯ ಜನರು ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡಿದ್ದಾರೆ' ಎಂದರು.

ತನ್ನ ಅಧಿಕಾರಾವಧಿಯಲ್ಲಿ ಆಗಿರುವ ಭ್ರಷ್ಟಾಚಾರವನ್ನು ಮುಚ್ಚಿಹಾಕಲು ಎಎಪಿ, ಕಲಾಪಕ್ಕೆ ಅಡ್ಡಿಪಡಿಸುತ್ತಿದೆ. ಆದರೆ ಸಿಎಜಿ ವರದಿಯು ಎಲ್ಲವನ್ನೂ ಬಹಿರಂಗಪಡಿಸಲಿದೆ
ಆಶಿಶ್ ಸೂದ್, ದೆಹಲಿ ಸಚಿವ

ಅಂಬೇಡ್ಕರ್ ಭಾವಚಿತ್ರ ತೆಗೆಯುವ ಮೂಲಕ ಬಿಜೆಪಿ ತನ್ನ ನಿಜ ಬಣ್ಣವನ್ನು ತೋರಿಸಿದೆ. ಅಂಬೇಡ್ಕರ್ ಸ್ಥಾನವನ್ನು ಮೋದಿ ತುಂಬುವರು ಎಂದು ಬಿಜೆಪಿ ನಂಬಿದೆಯೇ?
ಆತಿಶಿ, ವಿರೋಧ ಪಕ್ಷದ ನಾಯಕಿ

ಕೋವಿಡ್ ಲಸಿಕೆ ಪ್ರತಿಕ್ರಿಯೆಗೆ ಕೇಂದ್ರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ತಡೆಯಲು ನೀಡಲಾದ ಲಸಿಕೆಗಳಿಂದ ಅಡ್ಡ ಪರಿಣಾಮಗಳು ಉಂಟಾದಲ್ಲಿ ಅದಕ್ಕೆಸಂಬಂಧಿಸಿದಂತೆ ನೀತಿಯೊಂದನ್ನು ರೂಪಿಸುವ ಸಾಧ್ಯತೆಯ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಲಸಿಕೆಯಿಂದಾಗಿ ಮರಣ ಸೇರಿದಂತೆ ಇತರ ಅಡ್ಡ ಪರಿಣಾಮಗಳು ಉಂಟಾದಲ್ಲಿ ಅದಕ್ಕೆ ಪರಿಹಾರ ನೀಡಲು ಯಾವುದೇ ನೀತಿಯನ್ನು ರೂಪಿಸಿಲ್ಲ ಎಂಬುದನ್ನು ಕೋರ್ಟ್‌ನ ಗಮನಕ್ಕೆ ತರಲಾಯಿತು.

ವಿಪತ್ತು ನಿರ್ವಹಣಾ ಕಾಯ್ದೆಯ ಅಡಿಯಲ್ಲಿ, ಕೋವಿಡ್ ಲಸಿಕೆ ನೀಡಿದ ನಂತರದ ಪರಿಣಾಮಗಳನ್ನು ನಿರ್ವಹಿಸಲು ಯಾವುದೇ ಉಲ್ಲೇಖವಿಲ್ಲ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ವಿಭಾಗೀಯ ಪೀಠಕ್ಕೆ ತಿಳಿಸಿದರು.

'ಕೋವಿಡ್ ಸಾಂಕ್ರಾಮಿಕವನ್ನು ವಿಪತ್ತು ಎಂದು ಘೋಷಿಸಲಾಗಿತ್ತು. ಆದರೆ ಲಸಿಕೆ ನೀಡುವ ಅಭಿಯಾನವನ್ನು ವೈದ್ಯಕೀಯ ಶಿಷ್ಟಾಚಾರಗಳಿಗೆ ಅನುಗುಣವಾಗಿ ನಡೆಸಲಾಗಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಲಾಲು ಪ್ರಸಾದ್‌ಗೆ ಸಮನ್ಸ್



ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ದೆಹಲಿ ನ್ಯಾಯಾಲಯವೊಂದು ಮಂಗಳವಾರ ಸಮನ್ಸ್ ಜಾರಿ ಮಾಡಿದೆ.

ಲಾಲು ಪ್ರಸಾದ್ ಅವರೊಂದಿಗೆ ಅವರ ಮಗಳು ಹೇಮಾ ಯಾದವ್, ಮಕ್ಕಳಾದ ತೇಜ್ ಪ್ರತಾಪ್ ಯಾದವ್, ತೇಜಸ್ವಿ ಯಾದವ್ ಅವರಿಗೂ ಸಮನ್ಸ್ ನೀಡಲಾಗಿದೆ. ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗನೆ, ಮಾರ್ಚ್ 11ರಂದು ನ್ಯಾಯಾಲಯದ ಮುಂದೆ ಹಾಜರಾಗುವಂತೆ ಸೂಚಿಸಿದರು.

ಭಾರತೀಯ ರೈಲ್ವೆ ಇಲಾಖೆಯ 'ಗ್ರೂಪ್ ಡಿ' ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಅಂದಿನ ರೈಲ್ವೆ ಸಚಿವ ಲಾಲು ಪ್ರಸಾದ್ ಅವರ ಕುಟುಂಬದವರಿಗೆ ಅಭ್ಯರ್ಥಿಗಳು ಭೂಮಿ ವರ್ಗಾಯಿಸಿದ್ದಾರೆ ಎಂದು ಆರೋಪಿಸಿ, 2022ರಲ್ಲಿ ಪ್ರಕರಣ ದಾಖಲಾಗಿತ್ತು.

ವಿವಿಧ ರಾಜ್ಯಗಳ 60 ಕಡೆಗಳಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿ, ಬಿಟ್‌ಕಾಯಿನ್ ಹಗರಣವನ್ನು ಬೇಧಿಸಿರುವ ಸಿಬಿಐ ಅಧಿಕಾರಿಗಳು ದೇಶದ ವಿವಿಧ ರಾಜ್ಯಗಳ 60 ಸ್ಥಳಗಳಲ್ಲಿ ಮಂಗಳವಾರ ದಾಳಿ ನಡೆಸಿದ್ದಾರೆ.

'ನವದೆಹಲಿ, ಚಂಡೀಗಢ, ಪುಣೆ, ನಾಂದೇಡ್, ಬೆಂಗಳೂರು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಬೆಳಿಗ್ಗೆಯೇ ಸಿಬಿಐ ತಂಡವು ದಾಳಿ ನಡೆಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನ ಕಸಿದುಕೊಂಡ ಕೇಂದ್ರ: ಖರ್ಗೆ ಕಿಡಿ



ನವದೆಹಲಿ- (ಪಿಟಿಐ): ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಯುವಕರ ವಿದ್ಯಾರ್ಥಿ ವೇತನವನ್ನು ಕೇಂದ್ರ ಸರ್ಕಾರ ಕಸಿದುಕೊಂಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಆರೋಪ ಮಾಡಿದ್ದಾರೆ.

ನಿಮ್ಮ (ಮೋದಿ) 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಘೋಷಣೆಯು ದುರ್ಬಲ ವರ್ಗಗಳ ಆಕಾಂಕ್ಷೆಗಳನ್ನು ಪ್ರತಿದಿನವು ಅಣಕಿಸುತ್ತದೆ ಎಂದು ಟೀಕಿಸಿದ್ದಾರೆ.

ಸರ್ಕಾರವು ಎಲ್ಲ ವಿದ್ಯಾರ್ಥಿವೇತನ-ಗಳಲ್ಲಿ ಫಲಾನುಭವಿಗಳನ್ನು ಬಹಳಷ್ಟು ಕಡಿಮೆ ಮಾಡಿರುವುದು ಮಾತ್ರವಲ್ಲದೆ, ವರ್ಷದಿಂದ ವರ್ಷಕ್ಕೆ ಸರಾಸರಿ ಶೇ 25ರಷ್ಟು ಕಡಿಮೆ ಹಣವನ್ನು ಇದಕ್ಕಾಗಿ ಖರ್ಚು ಮಾಡಿರುವುದಾಗಿ ಅಂಕಿಅಂಶಗಳೇ ಹೇಳುತ್ತಿವೆ. ಇದು ನಾಚಿಕೆಗೇಡು ಎಂದು ಹರಿಹಾಯ್ದಿದ್ದಾರೆ.

ಸದನದಲ್ಲಿ ಕೆಟ್ಟ ನಡವಳಿಕೆ ಸಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಸಂಸತ್ ಅಥವಾ ಶಾಸನಸಭೆಗಳಲ್ಲಿ ಆಕ್ರಮಣಶೀಲತೆ ಮತ್ತು ಅಸಭ್ಯತೆಗೆ ಅವಕಾಶವಿಲ್ಲ. ಸದಸ್ಯರು ಪರಸ್ಪರ ಗೌರವದಿಂದ ವರ್ತಿಸಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಸದನದಲ್ಲಿ ಮಾತನಾಡಲು ದೊರೆಯುವ ಹಕ್ಕನ್ನು ಸಹ ಸದಸ್ಯರು, ಸಚಿವರು ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ಸ್ಪೀಕರ್/ ಸಭಾಧ್ಯಕ್ಷರನ್ನು ಅವಮಾನಿಸುವ ಸಾಧನವಾಗಿ ಬಳಸಿ-ಕೊಳ್ಳಬಾರದು ಎಂದು ತಿಳಿಸಿದೆ.

ಬಿಹಾರ ವಿಧಾನಪರಿಷತ್‌ಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರ ಪೀಠವು ಈ ಹೇಳಿಕೆ ನೀಡಿದೆ. ಬಿಹಾರ ವಿಧಾನಪರಿಷತ್‌ನಲ್ಲಿ ಆರ್‌ಜೆಡಿ ಸದಸ್ಯ ಸುನಿಲ್ ಕುಮಾರ್ ಸಿಂಗ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಘೋಷಣೆ ಕೂಗಿದ ನಡವಳಿಕೆ-ಯನ್ನು 'ಒಪ್ಪಲಾಗದು' ಎಂದು ಪೀಠವು ಹೇಳಿತು.

ಡಿಆರ್‌ಡಿಒದಲ್ಲಿ ನೌಕರಿ ಆಮಿಷ: ಎಫ್‌ಐಆರ್

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆಯಲ್ಲಿ (ಡಿಆರ್‌ಡಿಒ) ನೇಮಕಾತಿ ಆಮಿಷವೊಡ್ಡಿ ಯುವಜನರಿಗೆ ವಂಚಿಸಿದ್ದ ಪ್ರಕರಣದಲ್ಲಿ ಸಿಬಿಐ ಮಂಗಳವಾರ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಡಿಆರ್‌ಡಿಒದಲ್ಲಿ ಗುಮಾಸ್ತ, ಸ್ವಚ್ಛತಾಗಾರ, ಬಹುಹಂತದ ಸೇವಾ ಸಿಬ್ಬಂದಿ ಸೇರಿ ವಿವಿಧ ಹುದ್ದೆಗಳಿಗೆ ನೇಮಕಾತಿಯ ಭರವಸೆ ನೀಡಿ ವಂಚಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗದ ಆಮಿಷವೊಡ್ಡಿ ಯುವಜನರಿಂದ ₹5 ಲಕ್ಷದಿಂದ ₹10 ಲಕ್ಷದವರೆಗೂ ಹಣ ವಸೂಲಿ ಮಾಡಲಾಗಿತ್ತು ಎಂದು ತಿಳಿಸಿದ್ದಾರೆ.

ಕೇಂದ್ರವು ಭಾಷಾ ಯುದ್ಧದ ಬೀಜ ಬಿತ್ತುತ್ತಿದೆ: ಸ್ಟಾಲಿನ್



ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ಕೇಂದ್ರ ಸರ್ಕಾರವು ಹಿಂದಿ ಹೇರಿಕೆ ಮಾಡುವ ಮೂಲಕ ಭಾಷಾ ಯುದ್ಧದ ಬೀಜಗಳನ್ನು ಬಿತ್ತುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ, ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರು ಮಂಗಳವಾರ ಆರೋಪಿಸಿದರು.

ರಾಜ್ಯವು ಯಾವುದೇ ಭಾಷೆಯ ವಿರೋಧಿ ಅಲ್ಲ. ಆದರೆ ಮಾತೃ ಭಾಷೆ ತಮಿಳನ್ನು ನಾಶ ಮಾಡಲು ಅಥವಾ ಅದರ ಮೇಲೆ ದಬ್ಬಾಳಿಕೆ ನಡೆಸಲು ಅವಕಾಶ ನೀಡುವುದಿಲ್ಲ ಎಂದರು.

ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಇದೇ ಕಾರಣಕ್ಕಾಗಿ ರಾಜ್ಯವು ದ್ವಿಭಾಷಾ ನೀತಿಯನ್ನು (ತಮಿಳು, ಇಂಗ್ಲಿಷ್) ಅಳವಡಿಸಿಕೊಂಡಿದೆ' ಎಂದು ತಿಳಿಸಿದರು.

ದಬ್ಬಾಳಿಕೆಯನ್ನು ವಿರೋಧಿಸುವ ಮತ್ತು ಮಾತೃ ಭಾಷೆಯನ್ನು ರಕ್ಷಿಸುವ ಗುಣ ಡಿಎಂಕೆ ಸದಸ್ಯರ ರಕ್ತದಲ್ಲಿಯೇ ಇದೆ. ನನ್ನ ಜೀವನದ ಅಂತ್ಯದವರೆಗೂ ಈ ಗುಣವನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಹೇಳಿದರು.

ಮಾ.5ಕ್ಕೆ ಸಭೆ

2026ರಲ್ಲಿ ನಡೆಯಲಿರುವ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯ ಪರಿಣಾಮದ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸ್ಟಾಲಿನ್ ಅವರು ಮಾರ್ಚ್ 5ರಂದು ಸರ್ವಪಕ್ಷಗಳ ಸಭೆ ಕರೆದಿದ್ದಾರೆ.

ಒಕ್ಕೂಟ ವ್ಯವಸ್ಥೆಯನ್ನು ಎತ್ತಿ ಹಿಡಿಯುವಂತೆ ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ನಡೆಸುವಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಿವೆ. ತಮಿಳುನಾಡಿನಲ್ಲಿ ನೋಂದಣಿಯಾಗಿರುವ 40 ರಾಜಕೀಯ ಪಕ್ಷಗಳ ಪ್ರತಿನಿಧಿ-ಗಳೊಂದಿಗೆ ಸಭೆ ನಡೆಯಲಿದೆ. ಸ್ಟಾಲಿನ್ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸ್ಟಾಲಿನ್ ಅವರು ಈ ಹಿಂದೆ, ರಾಜ್ಯದ ರಾಜಕೀಯ ಪ್ರಾತಿನಿಧ್ಯ ಉಳಿವಿಗಾಗಿ ಹೆಚ್ಚು ಮಕ್ಕಳನ್ನು ಹೆರಬೇಕು ಎಂದು ಜನರಲ್ಲಿ ಮನವಿ ಮಾಡಿದ್ದರು.

ಒಪಿಎಸ್ ಜಾರಿಗೆ ಆಗ್ರಹಿಸಿ ಸಾಮೂಹಿಕ ರಜೆ

ಪ್ರಜಾವಾಣಿ ವಾರ್ತೆ


ಚೆನ್ನೈ: ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಮರು ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಮಿಳುನಾಡಿನಾದ್ಯಂತ ಶಿಕ್ಷಕರು ಸೇರಿದಂತೆ ಸಹಸ್ರಾರು ಸರ್ಕಾರಿ ನೌಕರರು ಮಂಗಳವಾರ ಸಾಂದರ್ಭಿಕ ರಜೆ (ಸಿ.ಎಲ್) ಹಾಕಿ ಕರ್ತವ್ಯದಿಂದ ದೂರ ಉಳಿದರು.

ಆಡಳಿತಾರೂಢ ಡಿಎಂಕೆ ಪಕ್ಷವು ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಭರವಸೆಯಂತೆ ಒಪಿಎಸ್ ಮರು ಜಾರಿಗೊಳಿಸಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ.

ಯಾವುದೇ ರೀತಿಯ ಆಂದೋಲನ ನಡೆಸದಂತೆ ಮದ್ರಾಸ್ ಹೈಕೋರ್ಟ್ ನಿರ್ದೇಶನ ನೀಡಿದ್ದರಿಂದ ತಮಿಳುನಾಡಿನ ಸರ್ಕಾರಿ ಶಿಕ್ಷಕರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು (ಜೆಎಸಿಟಿಒ–ಜಿಇಒ) 'ಮೌನ ಪ್ರತಿಭಟನೆ'ಯನ್ನು ನಡೆಸಿತ್ತು.

ನಾಲ್ವರು ಸಚಿವರನ್ನು ಒಳಗೊಂಡ ಸಮಿತಿ ಜತೆ ಸೋಮವಾರ ರಾತ್ರಿವರೆಗೂ ನಡೆದ ಸಭೆ ಫಲಪ್ರದವಾಗದ ಕಾರಣ, ಜೆಎಸಿಟಿಒ–ಜಿಇಒ ಸದಸ್ಯರು ರಜೆ ಹಾಕಿ ಕರ್ತವ್ಯದಿಂದ ದೂರ ಉಳಿಯಲು ನಿರ್ಧರಿಸಿದರು.

ಸಜ್ಜನ್‌ಗೆ ಜೀವಾವಧಿ ಕಾರಾಗೃಹ ಶಿಕ್ಷೆ



ಸಜ್ಜನ್ ಕುಮಾರ್

ಸಿಖ್ ವಿರೋಧಿ ದಂಗೆ

ನವದೆಹಲಿ (ಪಿಟಿಐ): 1984ರಲ್ಲಿ ನಡೆದ ಸಿಖ್ ವಿರೋಧಿ ದಂಗೆಗೆ ಸಂಬಂಧಿಸಿದ ಕೊಲೆ ಪ್ರಕರಣದಲ್ಲಿ ಮಾಜಿ ಸಂಸದ, ಕಾಂಗ್ರೆಸ್ಸಿನ ಸಜ್ಜನ್ ಕುಮಾರ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಮಂಗಳವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

1984ರ ನವೆಂಬರ್ 1ರಂದು ನಡೆದ ಜಸ್ವಂತ್ ಸಿಂಗ್ ಮತ್ತು ಅವರ ಪುತ್ರ ತರುಣದೀಪ್ ಸಿಂಗ್ ಅವರ ಹತ್ಯೆ ಪ್ರಕರಣದ ಅಪರಾಧಿ ಸಜ್ಜನ್ ಅವರಿಗೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಈ ಶಿಕ್ಷೆ ಪ್ರಕಟಿಸಿದರು.

ಸಜ್ಜನ್ ಅವರು ಅಪರಾಧಿ ಎಂದು ನ್ಯಾಯಾಲಯವು ಫೆಬ್ರುವರಿ 12ರಂದು ಘೋಷಿಸಿತ್ತು. ಸಜ್ಜನ್ ಅವರು ಎಸಗಿರುವ ಅಪರಾಧಕ್ಕೆ ಮರಣ ದಂಡನೆ ವಿಧಿಸಲು ಕೂಡ ಅವಕಾಶ ಇತ್ತು. ಜಸ್ವಂತ್ ಅವರ ಪತ್ನಿಯು ಸಜ್ಜನ್ ಅವರಿಗೆ ಮರಣ ದಂಡನೆ ವಿಧಿಸಬೇಕು ಎಂದು ಕೋರಿದ್ದರು.

ಆರಂಭದಲ್ಲಿ ಈ ಪ್ರಕರಣ ತನಿಖೆಯನ್ನು ಪಂಜಾಬಿ ಬಾಗ್ ಪೊಲೀಸರು ನಡೆಸಿದರಾದರೂ, ನಂತರ ವಿಶೇಷ ತಂಡವೊಂದು (ಎಸ್‌ಐಟಿ) ತನಿಖೆ ನಡೆಸಿತು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಗೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಮಾರಕ ಆಯುಧಗಳನ್ನು ಹೊಂದಿದ್ದ ಜನರ ಗುಂಪೊಂದು ಭಾರಿ ಪ್ರಮಾಣದಲ್ಲಿ ಲೂಟಿಗೆ, ಸಿಖ್ ಸಮುದಾಯದವರ ಆಸ್ತಿ ನಾಶಕ್ಕೆ ಇಳಿದಿತ್ತು. ಜಸ್ವಂತ್ ಅವರ ಮನೆಯ ಮೇಲೆ ದಾಳಿ ನಡೆಸಿದ ಗುಂಪು, ಅವರನ್ನು ಮತ್ತು ಅವರ ಮಗನನ್ನು ಕೊಂದು ಮನೆಯಲ್ಲಿದ್ದ ವಸ್ತುಗಳನ್ನು ಲೂಟಿ ಮಾಡಿತು ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ಸಜ್ಜನ್ ಅವರು ಈ ಗುಂಪಿನ ನೇತೃತ್ವ ವಹಿಸಿದ್ದರು ಎಂದು ಮೇಲ್ನೋಟಕ್ಕೆ ಹೇಳಲು ಸಾಕಷ್ಟು ಆಧಾರಗಳಿವೆ ಎಂದು ಕೋರ್ಟ್ ಹೇಳಿತ್ತು.

ಗಲಭೆ ನಡೆದ ಸಂದರ್ಭದಲ್ಲಿ ಸಜ್ಜನ್ ಅವರು ಕಾಂಗ್ರೆಸ್ಸಿನ ಪ್ರಭಾವಿ ನಾಯಕ ಆಗಿದ್ದರು, ಸಂಸದರೂ ಆಗಿದ್ದರು.

'ಅನಾರೋಗ್ಯ, ವಯಸ್ಸಿನ ಕಾರಣಕ್ಕೆ ಈ ಶಿಕ್ಷೆ'

ಸಜ್ಜನ್ ಕುಮಾರ್ ಅವರ ವಯಸ್ಸು ಮತ್ತು ಅವರು ಎದುರಿಸುತ್ತಿರುವ ಅನಾರೋಗ್ಯವನ್ನು ಗಮನಿಸಿ ಅವರಿಗೆ ಮರಣ ದಂಡನೆ ವಿಧಿಸಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಸಜ್ಜನ್ ಎಸಗಿರುವುದು ಪಾಶವೀ ಕೃತ್ಯ, ಅದು ಖಂಡನೀಯ ಎಂಬುದರಲ್ಲಿ ಅನುಮಾನ ಇಲ್ಲ. ಆದರೆ ಅವರಿಗೆ 80 ವರ್ಷ ವಯಸ್ಸಾಗಿರುವುದು ಮತ್ತು ಅವರು ಅನಾರೋಗ್ಯಕ್ಕೆ ಒಳಗಾಗಿರುವುದು ಅವರಿಗೆ ಕಡಿಮೆ ಪ್ರಮಾಣದ ಶಿಕ್ಷೆ ವಿಧಿಸಲು ಕಾರಣ ಎಂದು ನ್ಯಾಯಾಧೀಶೆ ಕಾವೇರಿ ಬವೇಜಾ ಹೇಳಿದ್ದಾರೆ.

'ಜೈಲು ಅಧಿಕಾರಿಗಳು ನೀಡಿರುವ ವರದಿಯ ಪ್ರಕಾರ ಅಪರಾಧಿಯ ನಡತೆ ತೃಪ್ತಿಕರವಾಗಿರುವುದು, ಅವರು ಕಾಯಿಲೆಗಳಿಗೆ ಒಳಗಾಗಿದ್ದಾರೆ ಎನ್ನಲಾದ ಸಂಗತಿ, ಅವರು ಸುಧಾರಣೆ ತಂದುಕೊಳ್ಳುವ ಸಾಧ್ಯತೆ ಇರುವುದು ನನ್ನ ಅಭಿಪ್ರಾಯದಲ್ಲಿ ಅವರಿಗೆ ಮರಣ ದಂಡನೆ ಬದಲು ಜೀವಾವಧಿ ಶಿಕ್ಷೆ ವಿಧಿಸಲು ಕಾರಣ' ಎಂದು ಆದೇಶದಲ್ಲಿ ಅವರು ಹೇಳಿದ್ದಾರೆ.

ಜೈಲು ಅಧಿಕಾರಿಗಳು ನೀಡಿದ ವರದಿಯನ್ನು ಉಲ್ಲೇಖಿಸಿರುವ ನ್ಯಾಯಾಧೀಶರು, ಸಜ್ಜನ್ ಅವರಿಗೆ ಆರೋಗ್ಯದ ಸಮಸ್ಯೆಯ ಕಾರಣದಿಂದಾಗಿ ತಮ್ಮ ದೈನಂದಿನ ಕೆಲಸಗಳನ್ನೂ ಸರಿಯಾಗಿ ಮಾಡಲು ಆಗುತ್ತಿಲ್ಲ ಎಂದು ಹೇಳಿದ್ದಾರೆ.

ಘಟನಾವಳಿ

- **1991:** ಪ್ರಕರಣದಲ್ಲಿ ಎಫ್‌ಐಆರ್ ದಾಖಲು
- **1994, ಜುಲೈ 8:** ಕ್ರಮ ಕೈಗೊಳ್ಳಲು ಅಗತ್ಯ ಸಾಕ್ಷ್ಯಾಧಾರ ಇಲ್ಲ ಎಂದ ದೆಹಲಿ ನ್ಯಾಯಾಲಯ. ಸಜ್ಜನ್ ವಿರುದ್ಧ ದೋಷಾರೋಪ ಪಟ್ಟಿ ಇಲ್ಲ.
- **2015, ಫೆಬ್ರುವರಿ 12:** ವಿಶೇಷ ತನಿಖಾ ತಂಡ ರಚಿಸಿದ ಸರ್ಕಾರ
- **2021, ಏಪ್ರಿಲ್ 6:** ಸಜ್ಜನ್ ಬಂಧನ, ಮೇ 5ರಂದು ಆರೋಪಪಟ್ಟಿ ಸಲ್ಲಿಕೆ
- **2021, ಡಿಸೆಂಬರ್ 16:** ಸಜ್ಜನ್ ವಿರುದ್ಧ ದೋಷಾರೋಪ ನಿಗದಿ
- **2025, ಫೆಬ್ರುವರಿ 12:** ಸಜ್ಜನ್ ಅಪರಾಧಿ ಎಂದು ಘೋಷಣೆ

'ಎಫ್–16' ನಿರ್ವಹಣೆಗೆ ಪಾಕ್‌ಗೆ ಅಮೆರಿಕದ ಹಣ: 'ಕೈ' ಟೀಕೆ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ-ರುವ ಎಫ್–16 ಯುದ್ಧ ವಿಮಾನಗಳ ನಿರ್ವಹಣೆಗೆ ಅಮೆರಿಕವು 39.7 ಕೋಟಿ ಡಾಲರ್ (ಅಂದಾಜು ₹3,460 ಕೋಟಿ) ಮೀಸಲಿಟ್ಟಿರುವ ವಿಚಾರವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್, ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ನರೇಂದ್ರ ಮೋದಿ ಸರ್ಕಾರದ ರಾಜತಾಂತ್ರಿಕ ಕಾರ್ಯತಂತ್ರವನ್ನು ಕಾಂಗ್ರೆಸ್ ಪ್ರಶ್ನಿಸಿದ್ದು, ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಲು ಭಾರತದ ವಿದೇಶಾಂಗ ನೀತಿಯ ಮರುಪರಿಶೀಲನೆ-ಗೆ ಕರೆ ನೀಡಿದೆ.

'ಪಾಕಿಸ್ತಾನದ ಬಳಿಯಿರುವ ಯುದ್ಧ ವಿಮಾನಗಳ ನಿರ್ವಹಣೆಗೆ ದೊಡ್ಡ ಮೊತ್ತ ಮೀಸಲಿಡಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆಗೆದುಕೊಂಡ ನಿರ್ಧಾರವು ಮೋದಿ ಸರ್ಕಾರದ ರಾಜತಾಂತ್ರಿಕ ನೀತಿಗಳ ಪರಿಣಾಮ-ಕಾರಿತ್ವದ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದ್ದಾರೆ.

'ಟ್ರಂಪ್ ಸರ್ಕಾರದ ನಿರ್ಧಾರವು ಹಿಂದಿನ ಬೈಡನ್ ಆಡಳಿತವು ಇದೇ ಉದ್ದೇಶಕ್ಕಾಗಿ ಪಾಕಿಸ್ತಾನಕ್ಕೆ 45 ಕೋಟಿ ಡಾಲರ್ ಪ್ಯಾಕೇಜ್ ನೀಡಿರುವುದನ್ನು ನೆನಪಿಸುತ್ತದೆ ಮತ್ತು ಪಾಕ್‌ಗೆ ಅಮೆರಿಕದ ಮಿಲಿಟರಿ ಬೆಂಬಲವನ್ನು ಎತ್ತಿ ತೋರಿಸುತ್ತದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಭಕ್ತರ ದಂಡು ಉತ್ತರ ಪ್ರದೇಶದ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಶಿವರಾತ್ರಿ ಮುನ್ನಾ ದಿನವಾದ ಮಂಗಳವಾರ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು ಚಿತ್ರ/ಕಿಶೋರ್ ಕುಮಾರ್ ಬೋಳಾರ್

'ಅಮೃತ ಸ್ನಾನ'ಕ್ಕೆ ಭಕ್ತರ ಲಗ್ಗೆ

ಪ್ರಜಾವಾಣಿ ವಾರ್ತೆ

ಲಖನೌ: ಜಗತ್ತಿನಲ್ಲೇ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮವಾದ ಮಹಾ ಕುಂಭಮೇಳವು ಮಹಾ ಶಿವರಾತ್ರಿಯ ದಿನವಾದ ಬುಧವಾರ ಅಂತ್ಯಗೊಳ್ಳ-ಲಿದೆ. 144 ವರ್ಷಕ್ಕೆ ಒಮ್ಮೆ ಮಹಾ ಕುಂಭಮೇಳ ನಡೆಯುತ್ತದೆ ಎನ್ನಲಾಗಿದೆ. ತ್ರಿವೇಣಿ ಸಂಗಮ ಸ್ಥಾನದಲ್ಲಿ ಈ ಬಾರಿಯ ಕೊನೆಯ 'ಅಮೃತ ಸ್ನಾನ' ಮಾಡಲು ದೇಶದಾದ್ಯಂತ ಜನರು ಪ್ರಯಾಗ ರಾಜ್‌ನತ್ತ ಹರಿದುಬರುತ್ತಿದ್ದಾರೆ.

ಕೋಟ್ಯಂತರ ಜನರು ಬುಧವಾರದಂದು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ ಎಂದು ಅಂದಾಜಿಸಲಾಗಿದೆ. ಮಂಗಳವಾರ ಮಧ್ಯಾಹ್ನದಿಂದಲೇ ಸಾಗರೋಪಾ-ದಿಯಲ್ಲಿ ಜನರು ಸಂಗಮಕ್ಕೆ ತೆರಳುವ ರಸ್ತೆಗಳಲ್ಲಿ ಸೇರಿಕೊಳ್ಳುತ್ತಿದ್ದಾರೆ.

ಅಂತಿಮ ದಿನದ 'ಅಮೃತ ಸ್ನಾನ'ಕ್ಕೆ ಮಾಡಿಕೊಳ್ಳಲಾದ ತಯಾರಿಗಳ ಬಗ್ಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಂಗಳವಾರ ಪರಿಶೀಲನೆ ನಡೆಸಿದರು.

ಪ್ರಯಾಗರಾಜ್ ಮಾತ್ರವಲ್ಲದೇ ಅಯೋಧ್ಯೆ ಮತ್ತು ವಾರಾಣಸಿಯಲ್ಲಿಯೂ ಭಕ್ತರ ಸಂಖ್ಯೆ ಅತ್ಯಧಿಕ-ವಾಗಲಿದೆ. ಆದ್ದರಿಂದ ಈ ಸ್ಥಳಗಳ-ಲ್ಲಿಯೂ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳಿಗೆ ಸರ್ಕಾರ ಸೂಚಿಸಿದೆ. ಶಿವರಾತ್ರಿ ಪ್ರಯುಕ್ತ ಅಧಿಕ ಭಕ್ತರು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ದೇವಸ್ಥಾನದಲ್ಲಿ 'ವಿಐಪಿ ದರ್ಶನ'ವನ್ನು ರದ್ದು ಮಾಡಲಾಗಿದೆ.

ಹಿಮಾಲಯದ ನೀರ್ಗಲ್ಲುಗಳು ಕರಗುತ್ತಿರುವ ಬಗ್ಗೆ ವಾಂಗ್ಚುಕ್ ಆತಂಕ

ಮುಂದಿನ ಮಹಾಕುಂಭ ಮರಳಿನಲ್ಲಿ: ಎಚ್ಚರಿಕೆ



ಸೋನಮ್ ವಾಂಗ್ಚುಕ್

ನವದೆಹಲಿ (ಪಿಟಿಐ): 'ವರ್ಷವಿಡೀ ಹರಿಯುವ ನಮ್ಮ ನದಿಗಳಿಗೆ ಹಿಮಾಲಯವೇ ಮೂಲಾಧಾರ. ಇಲ್ಲಿನ ನೀರ್ಗಲ್ಲು-ಗಳನ್ನು ರಕ್ಷಿಸಲು ಕಟಿಬದ್ಧರಾಗದೇ ಇದ್ದರೆ, 144 ವರ್ಷಗಳ ನಂತರ ನಡೆಯುವ ಮುಂದಿನ ಮಹಾಕುಂಭ ಮೇಳವನ್ನು ನಾವು ಮರಳಿನ ಮೇಲೆ ನಡೆಸಬೇಕಾಗು-ತ್ತದೆ' ಎಂದು ಪರಿಸರವಾದಿ ಲಡಾಖ್‌ನ ಸೋಮನ್ ವಾಂಗ್ಚುಕ್ ಕಳವಳ ವ್ಯಕ್ತಪಡಿಸಿದ್ದಾರೆ.

ಹಿಮಾಲಯದ ನೀರ್ಗಲ್ಲುಗಳು ಕರಗುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಲು ವಾಂಗ್ಚುಕ್ ಅವರು ದೆಹಲಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಾಂಗ್ಚುಕ್ ಅವರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಹಿರಂಗ ಪತ್ರವನ್ನೂ ಬರೆದಿದ್ದಾರೆ.

ಪತ್ರದಲ್ಲೇನಿದೆ?

- ಹಿಮಾಲಯದ ನೀರ್ಗಲ್ಲುಗಳನ್ನು ರಕ್ಷಿಸಲು ಆಯೋಗವೊಂದನ್ನು ಸ್ಥಾಪಿಸಿ. ಯಾಕೆಂದರೆ, ಇದೇ ಪ್ರಮಾಣದಲ್ಲಿ ನಮ್ಮ ಹಿಮಾಲಯವು ಕರಗುತ್ತಾ ಹೋದರೆ, ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಗಂಗೆ, ಬ್ರಹ್ಮಪುತ್ರ ಮತ್ತು ಸಿಂಧೂ ನದಿಗಳು ಮಳೆಗಾಲದಲ್ಲಿ ಮಾತ್ರವೇ ಹರಿಯುವಂಥ ನದಿಗಳಾಗುತ್ತವೆ
- ಗಂಗೋತ್ರಿ ಹಾಗೂ ಯಮುನೋತ್ರಿ ರಾಷ್ಟ್ರೀಯ ಸಂಪತ್ತು ಎಂದು ಘೋಷಿಸಿ. ಇದನ್ನು ರಕ್ಷಿಸಲು ವಿಶೇಷ ನೀತಿಗಳನ್ನು ರೂಪಿಸಿ
- ಆರ್ಕ್ಟಿಕ್ ಮತ್ತು ಅಂಟಾರ್ಟಿಕಾ ನಂತರ ಜಗತ್ತಿನಲ್ಲೇ ಅತಿ ಹೆಚ್ಚು ಮಂಜಿನ ಹಾಸು ಹಿಮಾಲಯದಲ್ಲಿದೆ. ಇದಕ್ಕಾಗಿ ಹಿಮಾಲಯವನ್ನು 'ಮೂರನೇ ಧ್ರುವ' ಎನ್ನಲಾಗುತ್ತದೆ. ಜೊತೆಗೆ ನಮ್ಮ ಪವಿತ್ರ ಗಂಗೆ ಹಾಗೂ ಯಮುನಾ ನದಿಗಳ ಹುಟ್ಟು ಹಿಮಾಲಯದಲ್ಲಿ ಆಗುತ್ತದೆ. ಇದೇ ಕಾರಣಕ್ಕೆ ನೀರ್ಗಲ್ಲುಗಳನ್ನು ರಕ್ಷಿಸುವ ಕಾರ್ಯಾಚರಣೆಯ ನೇತೃತ್ವವನ್ನು ಭಾರತ ವಹಿಸಿಕೊಳ್ಳಬೇಕು

ಲಡಾಖ್‌ನಿಂದ ನ್ಯೂಯಾರ್ಕ್ ತಲುಪಿದ ಮಂಜುಗಡ್ಡೆ

ಹಿಮಾಲಯದಲ್ಲಿನ ನೀರ್ಗಲ್ಲುಗಳು ಕರಗುತ್ತಿರುವ ಬಗ್ಗೆ ಜಾಗೃತಿ ಮೂಡಿಸಲು ಸೋನಮ್ ವಾಂಗ್ಚುಕ್ ಅವರು ವಿಶಿಷ್ಟ ಪ್ರಯತ್ನವೊಂದನ್ನು ಮಾಡಿದ್ದಾರೆ. ಲೇಹ್‌ನಲ್ಲಿರುವ ಜಗತ್ತಿನ ಅತಿ ಎತ್ತರದ (5,359 ಮೀಟರ್) ಕಾರ್ದುಂಗ್ ಲಾ ಬೆಟ್ಟದಿಂದ ಬಹಳ ಪ್ರಯಾಸಪಟ್ಟು ನೀರ್ಗಲ್ಲಿನ ಮಂಜುಗಡ್ಡೆಯ ತುಂಡನ್ನು ವಿಶ್ವಸಂಸ್ಥೆಯ ಕೇಂದ್ರ ಕಚೇರಿವರೆಗೂ ಕೊಂಡೊಯ್ದಿದ್ದಾರೆ.

ಮಂಜುಗಡ್ಡೆಯು ಕರಗದಂತೆ ಡಬ್ಬವೊಂದರಲ್ಲಿ ಇಡಲಾಗಿತ್ತು. ಈ ಡಬ್ಬಕ್ಕೆ ಲಡಾಖ್‌ನ ಪಶ್ಮೀನಾ ಉಣ್ಣೆಯನ್ನು ಸುತ್ತಲಾಗಿತ್ತು. 'ಈ ಮಂಜುಗಡ್ಡೆಯು ಜಗತ್ತಿನ ನಾಲ್ಕನೇ ಒಂದು ಭಾಗ ದಷ್ಟು ಪ್ರದೇಶವನ್ನು ಸುತ್ತಿದೆ. ಲಡಾಖ್‌ನಿಂದ ಮೊದಲು ದೆಹಲಿಯ ವಿಶ್ವಸಂಸ್ಥೆಯ ಕಚೇರಿಗೆ ತಲುಪಿತು. ಅಲ್ಲಿಂದ, ಅಮೆರಿಕಕ್ಕೆ ಪ್ರಯಾಣಿಸಿತು. ಅಲ್ಲಿ ಬಾಸ್ಟನ್‌ನ ಹಾರ್ವಡ್ ಕೆನಡಿ ಸ್ಕೂಲ್ ತಲುಪಿತು. ಅಲ್ಲಿಂದ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಕೇಂದ್ರ ಕಚೇರಿ ಸೇರಿತು. ಬಳಿಕ, ನ್ಯೂಯಾರ್ಕ್‌ನಲ್ಲಿರುವ ಹಡ್ಸನ್ ನದಿ ಮತ್ತು ಈಸ್ಟ್ ನದಿಗಳಲ್ಲಿ ಫೆ.21ರಂದು ಹಿಮಾಲಯದ ನೀರ್ಗಲ್ಲು ಲೀನವಾಯಿತು' ಎಂದು ವಾಂಗ್ಚುಕ್ ಮಾಹಿತಿ ನೀಡಿದರು.

ಮಾ.21 'ವಿಶ್ವ ನೀರ್ಗಲ್ಲು ದಿನ'

ಮಾರ್ಚ್ 21 ಅನ್ನು 'ವಿಶ್ವ ನೀರ್ಗಲ್ಲು ದಿನ'ವನ್ನಾಗಿ ಆಚರಿಸಲು ವಿಶ್ವ ಸಂಸ್ಥೆ ನಿರ್ಧರಿಸಿದೆ. ಇದೇ ಮೊದಲ ಬಾರಿಗೆ ಮಾ.21ರಂದು 'ವಿಶ್ವ ನೀರ್ಗಲ್ಲು ದಿನ'ವನ್ನು ಆಚರಿಸಲಾಗುತ್ತಿದ್ದು, ಇದಕ್ಕಾಗಿ 20 ಮತ್ತು 21ರಂದು ಪ್ಯಾರಿಸ್‌ನಲ್ಲಿರುವ ಯುನೆಸ್ಕೊ ಕೇಂದ್ರ ಕಚೇರಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜೊತೆಗೆ, 2025ನೇ ವರ್ಷವನ್ನು 'ಅಂತರ-ರಾಷ್ಟ್ರೀಯ ನೀರ್ಗಲ್ಲು ಸಂರಕ್ಷಣಾ ವರ್ಷ'ವನ್ನಾಗಿ ವಿಶ್ವ ಸಂಸ್ಥೆ ಘೋಷಿಸಿದೆ.

ಜಗತ್ತಿನಲ್ಲಿ ನಾನು ಎಲ್ಲೇ ಹೋದರೂ ಪ್ರಧಾನಿ ಮೋದಿ ಅವರ 'ಮಿಷನ್ ಲೈಫ್' ಯೋಜನೆಯ ಬಗ್ಗೆ ಪ್ರಸ್ತಾಪಿಸುತ್ತೇನೆ. ಈ ಯೋಜನೆಯು ಜಗತ್ತಿಗೆ ಭಾರತ ನೀಡುತ್ತಿರುವ ಕೊಡುಗೆ ಎಂದೇ ಹೇಳುತ್ತೇನೆ
ಸೋನಮ್ ವಾಂಗ್ಚುಕ್, ಪರಿಸರವಾದಿ

ಏಕಕಾಲ ಚುನಾವಣೆ ಹಂತಗಳಲ್ಲಿ ಜಾರಿಗೆ ಸಲಹೆ

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಕುರಿತ ಎರಡು ಮಸೂದೆಗಳ ಪರಿಶೀಲನೆಗೆ ರಚಿಸಿರುವ ಜಂಟಿ ಸಂಸದೀಯ ಸಮಿತಿಯ ಸಭೆ ಮಂಗಳವಾರ ನಡೆದಿದ್ದು, ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಮತ್ತು ಭಾರತೀಯ ಕಾನೂನು ಆಯೋಗದ ಮಾಜಿ ಅಧ್ಯಕ್ಷ ರಿತು ರಾಜ್ ಅವಸ್ಥಿ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಏಕಕಾಲದಲ್ಲಿ ಚುನಾವಣೆ ನಡೆಸುವುದು ಸೈದ್ಧಾಂತಿಕವಾಗಿ ಸುಲಭವಾಗಿ ಕಾಣುತ್ತದೆ. ಆದರೆ, ಅದರ ಸುಗಮ ಅನುಷ್ಠಾನಕ್ಕೆ ಹಲವು ವಿಷಯಗಳ ಬಗ್ಗೆ ಗಮನ ಹರಿಸಬೇಕಿದೆ ಎಂದು ಲಲಿತ್ ಅಭಿಪ್ರಾಯಪಟ್ಟರು ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಏಕಕಾಲ ಚುನಾವಣೆಯನ್ನು ಹಂತ ಹಂತವಾಗಿ ಜಾರಿಗೊಳಿಸುವ ವಿಚಾರವೂ ಸೇರಿದಂತೆ ಹಲವು ಸಲಹೆಗಳನ್ನು ಲಲಿತ್ ಅವರು ನೀಡಿದರು ಎಂದು ಅವು ಹೇಳಿವೆ.

ಏಕಕಾಲದಲ್ಲಿ ಚುನಾವಣೆ ನಡೆಸುವ ಪರಿಕಲ್ಪನೆಯನ್ನು ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ಟೀಕಿಸಿದರು.

10ನೇ ತರಗತಿಗೆ ಎರಡು ಬಾರಿ ಪರೀಕ್ಷೆ

ಒಂದನೇ ಪುಟದಿಂದ...

'ಎರಡೂ ಆವೃತ್ತಿಯ ಪರೀಕ್ಷೆಗಳನ್ನು ಪೂರ್ಣ ಪಠ್ಯಕ್ರಮದಲ್ಲಿ ನಡೆಸಲಾಗುವುದು. ಎರಡು ಆವೃತ್ತಿಗಳಲ್ಲೂ ಒಂದೇ ಪರೀಕ್ಷಾ ಕೇಂದ್ರ ಒದಗಿಸಲಾಗುವುದು. ಪರೀಕ್ಷಾ ಶುಲ್ಕ ಹೆಚ್ಚಿಸ-ಲಾಗುತ್ತಿದ್ದು, ಅರ್ಜಿ ಸಲ್ಲಿಸುವಾಗಲೇ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಸಂಗ್ರಹಿಸಲಾಗುತ್ತದೆ. ಮೊದಲ ಮತ್ತು ಎರಡನೇ ಆವೃತ್ತಿಯ ಪರೀಕ್ಷೆಗಳನ್ನು ಹೊರತುಪಡಿಸಿ ಯಾವುದೇ ವಿಶೇಷ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ' ಎಂದು ಮಂಡಳಿಯ ಹಿರಿಯ ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಶಾಲಾ ವರ್ಷದಲ್ಲಿ ಎರಡು ಬಾರಿ ಪರೀಕ್ಷೆ-ಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕೆಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಶಿಫಾರಸು ಮಾಡಿತ್ತು.

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

ಇಂಗ್ಲೆಂಡ್‌ಗೆ ಇಂದು ಅಫ್ಗನ್ ಸವಾಲು

ಎರಡೂ ತಂಡಗಳಿಗೆ ನಿರ್ಣಾಯಕ ಪಂದ್ಯ




ಅಫ್ಗನ್ ತಂಡದ ಮೊಹಮ್ಮದ್ ನಬಿ

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಲಾಹೋರ್ (ಪಿಟಿಐ): ರನ್ ಹೊಳೆ ಹರಿದ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಆಘಾತ ಅನುಭವಿಸಿರುವ ಇಂಗ್ಲೆಂಡ್ ತಂಡ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ನಿರ್ಣಾಯಕ ಪಂದ್ಯದಲ್ಲಿ ಅಫ್ಗಾನಿಸ್ತಾನದ ವಿರುದ್ಧ ಆಡಲಿದೆ. ಗೆದ್ದರಷ್ಟೇ ಇಂಗ್ಲೆಂಡ್ ತಂಡದ ಅವಕಾಶ ಜೀವಂತವಾಗಿ ಉಳಿಯಲಿದೆ.

ಈ ಪಂದ್ಯದಲ್ಲಿ ಸೋಲನುಭವಿಸಿದ ತಂಡ ಹೊರಬೀಳಲಿದೆ. 'ಬಿ' ಗುಂಪಿನ ಉಳಿದ ಎರಡು ತಂಡಗಳಾದ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತಮ್ಮ ಮೊದಲ ಪಂದ್ಯಗಳನ್ನು ಸುಲಭವಾಗಿ ಗೆದ್ದುಕೊಂಡು ಎರಡು ಪಾಯಿಂಟ್ಸ್ ಸಂಗ್ರಹಿಸಿವೆ.

ಏಕದಿನ ಮಾದರಿಯಲ್ಲಿ ಇಂಗ್ಲೆಂಡ್ ಹಿಡಿತ ಈಗ ಸಡಿಲಿಸಿದೆ. ಮಾಜಿ ವಿಶ್ವ ಚಾಂಪಿಯನ್ ತಂಡ, ಮೊದಲ ಪಂದ್ಯದಲ್ಲಿ 350ಕ್ಕಿಂತ ಅಧಿಕ ರನ್ ಪೇರಿಸಿದರೂ, ಆಸ್ಟ್ರೇಲಿಯಾಕ್ಕೆ ಮಣಿಯಬೇಕಾಯಿತು. ಆದರೆ ಇಂಗ್ಲೆಂಡ್ ಈ ದೊಡ್ಡ ಮೊತ್ತವನ್ನು ಪ್ರಮುಖ ಬೌಲರ್‌ಗಳಿಲ್ಲದ (ಕಮಿನ್ಸ್, ಸ್ಟಾರ್ಕ್, ಹೇಜಲ್‌ವುಡ್) ಆಸ್ಟ್ರೇಲಿಯಾ ಎದುರು ಗಳಿಸಿತ್ತು ಎನ್ನುವುದು ಉಲ್ಲೇಖನೀಯ.



ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್

ಪಂದ್ಯದಲ್ಲಿ ಇಂಗ್ಲೆಂಡ್ ಬೌಲರ್‌ಗಳು ಆಸ್ಟ್ರೇಲಿಯಾದ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಪರದಾಡಿದರು. ಇವೆಲ್ಲವನ್ನು ಲೆಕ್ಕಹಾಕಿದರೆ, ಜೋಸ್ ಬಟ್ಲರ್ ಬಳಗವು ಅಪಾಯಕಾರಿ ಅಫ್ಗಾನಿಸ್ತಾನ ಎದುರು ಸುಧಾರಿತ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿದೆ.

ಅನುಭವಿ ರಶೀದ್ ಖಾನ್, ನೂರ್ ಅಹ್ಮದ್ ಮತ್ತು ಮೊಹಮ್ಮದ್ ನಬಿ ಅವರನ್ನು ಒಳಗೊಂಡ ಅಫ್ಗಾನಿಸ್ತಾನದ ಸ್ಪಿನ್ ದಾಳಿ ಎದುರಾಳಿಗಳನ್ನು ಕಂಗೆಡಿಸುವ ಸಾಮರ್ಥ್ಯ ಹೊಂದಿದೆ. ಇಂಗ್ಲೆಂಡ್ ಬ್ಯಾಟರ್‌ಗಳು ಇತ್ತೀಚಿನ ದಿನಗಳಲ್ಲಿ ಸ್ಲೊ ಬೌಲರ್‌ಗಳ ಎದುರು ಪರದಾಡಿದ್ದೇ ಹೆಚ್ಚು.

ಆಲ್‌ರೌಂಡರ್ ಬ್ರೈಡನ್ ಕಾರ್ಸ್ ಗಾಯಾಳಾಗಿದ್ದು ಇಂಗ್ಲೆಂಡ್‌ಗೆ ಹಿನ್ನಡೆಯಾಗಿದೆ. ಅವರ ಬದಲು ಲೆಗ್ ಸ್ಪಿನ್ನರ್ ರೆಹಾನ್ ಅಹ್ಮದ್ ಕಣಕ್ಕಿಳಿಯಲಿದ್ದಾರೆ. ಈಗ ತಂಡದಲ್ಲಿ ಅದಿಲ್ ರಶೀದ್ ಮಾತ್ರ ಪರಿಣತ ಸ್ಪಿನ್ನರ್ ಆಗಿದ್ದಾರೆ. ಆರಂಭ ಆಟಗಾರ ಫಿಲ್ ಸಾಲ್ಟ್ ಮತ್ತು ಹ್ಯಾರಿ ಬ್ರೂಕ್ ರನ್‌ಗಳಿಗೆ ಪರದಾಡುತ್ತಿರುವುದು ಇಂಗ್ಲೆಂಡ್‌ಗೆ ಚಿಂತೆಯ ವಿಷಯ. ಸಾಲ್ಟ್ ಉತ್ತಮ ಆರಂಭ ಪಡೆದರೂ ಅದನ್ನು ದೊಡ್ಡ ಮೊತ್ತವಾಗಿ ಮಾರ್ಪಡಿಸುತ್ತಿಲ್ಲ.

ಅಫ್ಗಾನಿಸ್ತಾನ ತಂಡಕ್ಕೆ ತನ್ನದೇ ಆದ ಸಮಸ್ಯೆಗಳಿವೆ. ಹಷ್ಮತ್‌ಉಲ್ಲಾ ಶಾಹಿದಿ ಬಳಗ ತನ್ನ ಮೊದಲ ಪಂದ್ಯದಲ್ಲಿ 107 ರನ್‌ಗಳ ದೊಡ್ಡ ಅಂತರದಿಂದ ದಕ್ಷಿಣ ಆಫ್ರಿಕಾಕ್ಕೆ ಮಣಿದಿತ್ತು. ಹೆಚ್ಚುಕಮ್ಮಿ ಇದೇ ತಂಡದೊಡನೆ ಅಫ್ಗನ್ ಪಡೆ, 2024ರ ಟಿ20 ವಿಶ್ವಕಪ್ ಸೆಮಿಫೈನಲ್ ತಲುಪಿತ್ತು ಎನ್ನುವುದನ್ನು ಮರೆಯುವಂತಿಲ್ಲ. ಆದರೆ ಏಕದಿನ ಮಾದರಿಯಲ್ಲಿ ತಂಡ ಅಂಥ ತಂತ್ರಗಾರಿಕೆ ತೋರಿಲ್ಲ.

ಆಸ್ಟ್ರೇಲಿಯಾ– ದಕ್ಷಿಣ ಆಫ್ರಿಕಾ ತಂಡಗಳ ಪಂದ್ಯ ಮಳೆಯ ಪಾಲು



ಛತ್ರಿ ಹಿಡಿದು ಮಳೆಯಿಂದ ರಕ್ಷಣೆ ಪಡೆದ ಪ್ರೇಕ್ಷಕರು ಎಎಫ್‌ಪಿ ಚಿತ್ರ

ರಾವಲ್ಪಿಂಡಿ (ಪಿಟಿಐ): ಬಿಟ್ಟುಬಿಟ್ಟು ಬರುತ್ತಿದ್ದ ಮಳೆಯಿಂದಾಗಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯ ಮಂಗಳವಾರ ಒಂದೂ ಎಸೆತ ಸಾಧ್ಯವಾಗದೇ ಸ್ಥಗಿತಗೊಂಡಿತು.


ಪ್ರತಿಕೂಲ ಹವೆಯಿಂದಾಗಿ ಟಾಸ್ ಕೂಡ ನಡೆಯಲಿಲ್ಲ. ಪಂದ್ಯ ನಡೆಯದ ಕಾರಣ ತಂಡಗಳು ಒಂದೊಂದು ಅಂಕ ಪಡೆದಿದೆ.

ಹೀಗಾಗಿ ಬುಧವಾರ ಇಂಗ್ಲೆಂಡ್ ಮತ್ತು ಅಫ್ಗಾನಿಸ್ತಾನ ನಡುವೆ ನಡೆಯುವ ಪಂದ್ಯ ಹೆಚ್ಚುಕಮ್ಮಿ ನಾಕೌಟ್ ಪಂದ್ಯದಂತೆ ಆಗಿದೆ. ಆ ಪಂದ್ಯದಲ್ಲಿ ಸೋಲುವ ತಂಡ ಟೂರ್ನಿಯಿಂದ ಹೊರಬೀಳುವ ಮೂರನೇ ತಂಡವಾಗಲಿದೆ. ಆತಿಥೇಯ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಈಗಾಗಲೇ ಈ ಐಸಿಸಿ ಟೂರ್ನಿಯಿಂದ ಹೊರಬಿದ್ದಿವೆ. 'ಎ' ಗುಂಪಿನಿಂದ ನ್ಯೂಜಿಲೆಂಡ್ ಮತ್ತು ಭಾರತ ತಂಡಗಳು ತಲಾ ಎರಡು ಗೆಲುವಿನೊಡನೆ ಸೆಮಿಫೈನಲ್ ಪ್ರವೇಶಿಸಿವೆ.

ವಿಶೇಷ ಎಂದರೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಸ್ಟ್ರೇಲಿಯಾ ಪಾಲಿಗೆ ಕೊನೆಯ ಎಂಟು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳು ಹೀಗೆ ಸ್ಥಗಿತಗೊಂಡಿವೆ. ಸ್ಟೀವ್ ಸ್ಮಿತ್ ಸಾರಥ್ಯದ ಆಸ್ಟ್ರೇಲಿಯಾ ತಂಡ ಮುಂದಿನ ಪಂದ್ಯವನ್ನು ಫೆ. 28ರಂದು ಅಫ್ಗಾನಿಸ್ತಾನ ವಿರುದ್ಧ ಲಾಹೋರ್‌ನಲ್ಲಿ ಆಡಲಿದೆ. ದಕ್ಷಿಣ ಆಫ್ರಿಕಾ ಮರುದಿನ ಕರಾಚಿಯಲ್ಲಿ ನಡೆಯುವ ಲೀಗ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಮಳೆ ಮತ್ತೆ ಟೂರ್ನಿಗೆ ಬಾಧಿಸದು ಎಂಬ ವಿಶ್ವಾಸದಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯಿದೆ. 29 ವರ್ಷಗಳಲ್ಲಿ ಇದೇ ಮೊದಲ ಬಾರಿ ಪಾಕಿಸ್ತಾನ ಐಸಿಸಿ ಟೂರ್ನಿಯೊಂದನ್ನು ಆಯೋಜಿಸುತ್ತಿದೆ.

'ಬಿ ತಂಡದ ಎದುರು ಆಡುವುದೂ ಪಾಕ್‌ಗೆ ಕಠಿಣವಾಗುತಿತ್ತು'



ಗಾವಸ್ಕರ್

ನವದೆಹಲಿ (ಪಿಟಿಐ): ಚಾಂಪಿಯನ್ಸ್ ಟೂರ್ನಿಯಲ್ಲಿ ಸಾಂಪ್ರದಾಯಿಕ ಎದುರಾಳಿ ಭಾರತಕ್ಕೆ ಸೋತು ಬೇಗನೇ ಹೊರಬಿದ್ದ ಪಾಕಿಸ್ತಾನ ಕ್ರಿಕೆಟ್ ತಂಡಕ್ಕೆ ಎಲ್ಲೆಡೆಯಿಂದ ಟೀಕಾಪ್ರಹಾರ ಮುಂದುವರಿದಿದೆ. ಭಾರತದ ದಿಗ್ಗಜ ಆಟಗಾರ ಸುನಿಲ್ ಗಾವಸ್ಕರ್ ಅವರು ಈ ಪಾಕ್ ತಂಡ, ಭಾರತ ಬಿ ತಂಡವನ್ನು ಸೋಲಿಸಲೂ ಪರದಾಡಬೇಕಾಗುತಿತ್ತು ಎಂದು ಲೇವಡಿ ಮಾಡಿದ್ದಾರೆ.

'ನನ್ನ ಪ್ರಕಾರ (ಭಾರತದ) 'ಬಿ' ತಂಡ ಕೂಡ ಪಾಕಿಸ್ತಾನ ತಂಡಕ್ಕೆ ಖಂಡಿತಕ್ಕೂ ತೀವ್ರ ಸವಾಲು ಒಡ್ಡುತ್ತಿತ್ತು. ಈಗಿನ ಫಾರ್ಮಿನಲ್ಲಿ ಪಾಕ್ ತಂಡಕ್ಕೆ ಬಿ ತಂಡವನ್ನು ಸೋಲಿಸಲೂ ತುಂಬಾ ಕಷ್ಟವಾಗುತಿತ್ತು' ಎಂದು 'ಸ್ಪೋರ್ಟ್ಸ್ ಟುಡೇ'ಗೆ ತಿಳಿಸಿದ್ದಾರೆ.

'ತಾಂತ್ರಿಕವಾಗಿ ಪರಿಣತರಂತೆ ಕಾಣದಿದ್ದರೂ, ಹಿಂದೆ ಪಾಕಿಸ್ತಾನದಲ್ಲಿ ಪ್ರತಿಭಾನ್ವಿತರು ಆಟಗಾರರು ಕಂಡುಬರುತ್ತಿದ್ದರು' ಎಂದು ಅವರು ಇಂಜಮಾಮ್ ಉಲ್ ಹಕ್ ಅವರ ಉದಾಹರಣೆ ನೀಡಿದರು.

ಪಾಕಿಸ್ತಾನದಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಮತ್ತು ದೇಶಿ ವೈಟ್ ಬಾಲ್ ಟೂರ್ನಿಗಳು ಇದ್ದರೂ ಆ ದೇಶವು ಗುಣಮಟ್ಟದ ಆಟಗಾರರನ್ನು ತಯಾರು ಮಾಡಲು ಪ್ರಯಾಸಪಡುತ್ತಿದೆ ಎಂದರು.

ಮಿಂಚಿದ ಜೊನಾಸೆನ್: ಅಗ್ರಸ್ಥಾನಕ್ಕೇರಿದ ಡೆಲ್ಲಿ ತಂಡ

ಕ್ಯಾಪಿಟಲ್ಸ್‌ಗೆ ಮಣಿದ ಜೈಂಟ್ಸ್

ಬೆಂಗಳೂರು: ಪರಿಣಾಮಕಾರಿ ಬೌಲಿಂಗ್ ದಾಳಿಯ ಬಳಿಕ ಜೆಸ್ ಜೊನಾಸೆನ್ (ಔಟಾಗದೇ 61; 32ಎ, 4x9, 6x2) ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಂಗಳವಾರ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜೈಂಟ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 127 ರನ್ ಗಳಿಸಿತ್ತು. ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ತಂಡವು ಇನ್ನೂ 29 ಎಸೆತ ಬಾಕಿ ಇರುವಂತೆ ನಾಲ್ಕು ವಿಕೆಟ್‌ಗೆ 131 ರನ್ ಗಳಿಸಿ ಗೆಲುವು ಸಾಧಿಸಿತು. ಆಡಿರುವ ಐದು ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದ ಕ್ಯಾಪಿಟಲ್ಸ್ ತಂಡ (6 ಅಂಕ) ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು (4) ಎರಡನೇ ಸ್ಥಾನಕ್ಕೆ ಸರಿಯಿತು.

ಸಾಧಾರಣ ಗುರಿಯನ್ನು ಬೆನ್ನತ್ತಿದ ಡೆಲ್ಲಿ ತಂಡವು ನಾಯಕಿ ಮೆಗ್ ಲ್ಯಾನಿಂಗ್ (3) ಅವರನ್ನು ಬೇಗನೆ ಕಳೆದುಕೊಂಡಿತು. ಆದರೆ, ಎರಡನೇ ವಿಕೆಟ್ ಜೊತೆಯಾಟದಲ್ಲಿ ಶಫಾಲಿ ವರ್ಮಾ (44;27ಎ, 4x5, 6x3) ಮತ್ತು ಜೊನಾಸೆನ್ ಅವರು 37 ಎಸೆತಗಳಲ್ಲಿ 74 ರನ್ ಗಳಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಗುಜರಾತ್‌ನ ನಾಯಕಿ ಆಶ್ಲೆ ಗಾರ್ಡನರ್ ಅವರು ಶೆಫಾಲಿ ವಿಕೆಟ್ ಪಡೆದು, ಜೊತೆಯಾಟವನ್ನು ಮುರಿದರು. ನಂತರ ಬಂದ ಜೆಮಿಮಾ ರಾಡ್ರಿಗಸ್ (5) ಮತ್ತು ಅನ್ನಾಬೆಲ್ ಸದರ್‌ಲ್ಯಾಂಡ್ (1) ಬೇಗನೆ ವಿಕೆಟ್ ಒಪ್ಪಿಸಿದರು. ಆದರೆ, ಮತ್ತೊಂದೆಡೆ ಜವಾಬ್ದಾರಿಯುತವಾಗಿ ಆಡಿದ ಜೊನಾಸೆನ್ ಅವರು ಮರಿಝಾನ್ ಕಾಪ್ (ಔಟಾಗದೇ 8) ಅವರೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದರು.



ಮಹಿಳಾ ಪ್ರೀಮಿಯರ್ ಲೀಗ್

ಡೆಲ್ಲಿ ಕ್ಯಾಪಿಟಲ್ಸ್‌ನ ಜೆಸ್ ಜೊನಾಸೆನ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಇಂದಿನ ಪಂದ್ಯ
ಮುಂಬೈ ಇಂಡಿಯನ್ಸ್ Vs ಯು.ಪಿ ವಾರಿಯರ್ಸ್
ಪಂದ್ಯ ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಇದಕ್ಕೂ ಮೊದಲು ಆರಂಭದಲ್ಲೇ ಕುಸಿತ ಕಂಡ ಗುಜರಾತ್ ಜೈಂಟ್ಸ್ ತಂಡಕ್ಕೆ ಭಾರತಿ ಫುಲ್ಮಲಿ ಅಜೇಯ 40 ರನ್ ಹೊಡೆದು ಚೇತರಿಕೆ ನೀಡಿದ್ದರು. ಸತತವಾಗಿ ವಿಫಲರಾದ ದಯಾಳನ್ ಹೇಮಲತಾ ಬದಲು ತಂಡದಲ್ಲಿ ಅವಕಾಶ ಪಡೆದ ಭಾರತಿ ಎಂಟನೇ ಕ್ರಮಾಂಕದಲ್ಲಿ ಆಡಲು ಇಳಿದಾಗ ತಂಡದ ಮೊತ್ತ 6 ವಿಕೆಟ್‌ಗೆ 60 ಆಗಿತ್ತು. ಡೆಲ್ಲಿ ಬೌಲರ್‌ಗಳು ಸಂಘಟಿತ ದಾಳಿಯ ಮೂಲಕ ಜೈಂಟ್ಸ್ ತಂಡವನ್ನು ಕಟ್ಟಿಹಾಕಿದ್ದರು.

ಆದರೆ ಆಕ್ರಮಣಕಾರಿಯಾಗಿ ಆಡಿದ ಭಾರತಿ 29 ಎಸೆತಗಳನ್ನು ಎದುರಿಸಿ ಎರಡು ಸಿಕ್ಸರ್, ನಾಲ್ಕು ಬೌಂಡರಿ ಬಾರಿಸಿದರು. ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಡಿಯಾಂಡ್ರ ಡಾಟಿನ್ 24 ಎಸೆಗಳಲ್ಲಿ 26 ರನ್ ಗಳಿಸಿದ್ದು ಬಿಟ್ಟರೆ, ಜೈಂಟ್ಸ್‌ನ ಉಳಿದ ಬ್ಯಾಟರ್‌ಗಳು ನಿರಾಶೆ ಮೂಡಿಸಿದರು.

ಶಿಖಾ ಪಾಂಡೆ (18ಕ್ಕೆ2) ಮತ್ತು ಮರಿಝಾನ್ ಕಾಪ್ (17ಕ್ಕೆ2), ಅನ್ನಾಬೆಲ್ ಸದರ್‌ಲ್ಯಾಂಡ್ (20ಕ್ಕೆ2) ಅವರ ವೇಗದ ದಾಳಿಗೆ ಜೈಂಟ್ಸ್ ಕುಸಿತ ಕಂಡಿತು.

ಸ್ಕೋರುಗಳು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 127 (ಡಿಯಾಂಡ್ರ ಡಾಟಿನ್ 26, ಭಾರತಿ ಫುಲ್ಮಲಿ ಔಟಾಗದೇ 40; ಶಿಖಾ ಪಾಂಡೆ 18ಕ್ಕೆ2, ಮರಿಝಾನ್ ಕಾಪ್ 17ಕ್ಕೆ2, ಅನ್ನಾಬೆಲ್ ಸದರ್‌ಲ್ಯಾಂಡ್ 20ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 15.1 ಓವರ್‌ಗಳಲ್ಲಿ 4 ವಿಕೆಟ್‌ಗೆ 131 (ಶೆಫಾಲಿ ವರ್ಮಾ 44, ಜೆಸ್ ಜೊನಾಸೆನ್ ಔಟಾಗದೇ 61; ಕಶ್ವಿ ಗೌತಮ್ 26ಕ್ಕೆ 2). ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಜೆಸ್ ಜೊನಾಸೆನ್

ಫುಟ್‌ಬಾಲ್: ಬೆಂಗಳೂರು ಸಿಟಿ ಎಫ್‌ಸಿಗೆ ಜಯ

ಬೆಂಗಳೂರು: ಆಯುಷ್ ಹಿಮಾನ್ಶು ಪಾಂಚಮಿಯಾ ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವು ಎ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 1–0 ರಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 45ನೇ ನಿಮಿಷದಲ್ಲಿ ಆಯುಷ್ ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಶ್ರೀ ಗಜಾನನ ಎಫ್‌ಸಿ ತಂಡ 2–1 ಗೋಲುಗಳಿಂದ ಸ್ನಿಪ್ಪರ್ಸ್ ಎಫ್‌ಸಿ ತಂಡ ಸೋಲಿಸಿತು.

ಗಜಾನನ ತಂಡದ ಪರ ಗೋಬಿನಾಥ್ ಜಿ. (34ನೇ ಮತ್ತು 49ನೇ ನಿ.) ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರು. ಸ್ನಿಪರ್ಸ್ ಎಫ್‌ಸಿ ತಂಡದ ಸುಬೇಷ್ ಕೆ. (17ನೇ ನಿ.) ಒಂದು ಗೋಲು ಬಾರಿಸಿದರು.

ಐಎಸ್‌ಎಲ್: ಚೆನ್ನೈಯಿನ್ ಎಫ್‌ಸಿ ತಂಡಕ್ಕೆ ನಿರಾಸೆ

ಪ್ಲೇ ಆಫ್‌ನತ್ತ ಬೆಂಗಳೂರು ಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಭೆಕೆ ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಮಂಗಳವಾರ ತವರಿನಲ್ಲಿ ಮತ್ತೊಮ್ಮೆ ಗೆಲುವಿನ ಸಂಭ್ರಮ ಆಚರಿಸಿತು. ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 1–0ಯಿಂದ ಚೆನ್ನೈಯಿನ್ ಎಫ್‌ಸಿ ತಂಡವನ್ನು ಮಣಿಸಿ ಪ್ಲೇ ಆಫ್ ಸ್ಥಾನವನ್ನು ಖಚಿತ ಪಡಿಸಿಕೊಂಡಿತು.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 37ನೇ ನಿಮಿಷದಲ್ಲಿ ರಾಹುಲ್ ಚೆಂಡನ್ನು ಗುರಿ ಸೇರಿಸಿ, ಬಿಎಫ್‌ಸಿ ತಂಡಕ್ಕೆ 1–0 ಮುನ್ನಡೆ ಒದಗಿಸಿದರು. ಅದೇ ಅಂತರವನ್ನು ಕೊನೆಯವರೆಗೆ ಉಳಿಸುವಲ್ಲಿ ಆತಿಥೇಯ ತಂಡ ಯಶಸ್ವಿಯಾಯಿತು.

ಹ್ಯಾಟ್ರಿಕ್ ಸೋಲಿನಿಂದ ಪುನರಾಗಮನ ಮಾಡಿರುವ ಸುನಿಲ್ ಚೆಟ್ರಿ ಬಳಗವು ಈ ಗೆಲುವಿನೊಂದಿಗೆ ಸತತ ಮೂರು ಪಂದ್ಯಗಳನ್ನು ಗೆದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಲೀಗ್ ಹಂತದಲ್ಲಿ ಎರಡು ಪಂದ್ಯ ಬಾಕಿ ಇರುವಂತೆ ಬಿಎಫ್‌ಸಿ ತಂಡವು ಪ್ಲೇ ಆಫ್ ಸ್ಥಾನವನ್ನು ಗಟ್ಟಿಗೊಳಿಸಿತು.



ಗೋಲು ಗಳಿಸಿದ ಸಂಭ್ರಮದಲ್ಲಿ ಬೆಂಗಳೂರು ಎಫ್‌ಸಿ ಆಟಗಾರರು –ಎಕ್ಸ್ ಚಿತ್ರ

ಈ ಆವೃತ್ತಿಯಲ್ಲಿ ಬೆಂಗಳೂರು ತಂಡಕ್ಕೆ ಇದು 11ನೇ ಗೆಲುವು. ನಾಲ್ಕು ಡ್ರಾ, ಏಳು ಸೋಲಿನೊಂದಿಗೆ 37 ಅಂಕ ಗಳಿಸಿದೆ. ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ (52) ಅಗ್ರಸ್ಥಾನದಲ್ಲಿದೆ. ಗೋವಾ ಎಫ್‌ಸಿ (42) ನಂತರದ ಸ್ಥಾನದಲ್ಲಿದೆ.

ಈ ಸೋಲಿನಿಂದ ಚೆನ್ನೈಯಿನ್ ತಂಡದ ಪ್ಲೇ ಆಫ್ ಕನಸು ಕಮರಿತು. ತಂಡವು 22 ಪಂದ್ಯಗಳಿಂದ 24 ಅಂಕ ಪಡೆದಿದೆ. ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆಯುವ ಎರಡು ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶ ಪಡೆಯಲಿವೆ. ಉಳಿದ ಎರಡು ಸ್ಥಾನಕ್ಕಾಗಿ ಮೂರರಿಂದ ಆರನೇ ಸ್ಥಾನದಲ್ಲಿರುವ ತಂಡಗಳು ಪೈಪೋಟಿ ನಡೆಸಲಿವೆ.

ರಣಜಿ ಟ್ರೋಫಿ ಕೇರಳ– ವಿದರ್ಭ ಫೈನಲ್ ಇಂದಿನಿಂದ

ನಾಗ್ಪುರ (ಪಿಟಿಐ): ಲಯದಲ್ಲಿರುವ ವಿದರ್ಭ ತಂಡ, 90ನೇ ವರ್ಷದ ರಣಜಿ ಟ್ರೋಫಿ ಚಾಂಪಿಯನ್ ಪಟ್ಟಕ್ಕಾಗಿ ಬುಧವಾರ ಆರಂಭವಾಗಲಿರುವ ಐದು ದಿನಗಳ ಫೈನಲ್ ಪಂದ್ಯದಲ್ಲಿ ಉತ್ಸಾಹಿ ಕೇರಳ ತಂಡವನ್ನು ಎದುರಿಸಲಿದೆ. ತವರಿನಲ್ಲಿ ಆಡಲಿರುವ ವಿದರ್ಭ ತಂಡವು ಐದು ವರ್ಷಗಳ ಹಿಂದೆ ಗೆದ್ದ ಪ್ರಶಸ್ತಿ ಮರಳಿ ಪಡೆಯುವ ತವಕದಲ್ಲಿದೆ. ಕೇರಳಕ್ಕೆ ಇದು ಮೊದಲ ಫೈನಲ್.

ಈ ಋತುವಿನಲ್ಲಿ ಅಕ್ಷಯ್ ವಾಡಕರ್ ನೇತೃತ್ವದ ತಂಡ ಅಮೋಘ ಫಾರ್ಮಿನಲ್ಲಿದೆ. ಆಡಿರುವ ಒಂಬತ್ತು ಪಂದ್ಯಗಳನ್ನು ಎಂಟು ಪಂದ್ಯಗಳನ್ನು ಅಧಿಕಾರಯುತವಾಗಿ ಗೆದ್ದಿರುವುದು ಅದರ ಪ್ರಾಬಲ್ಯಕ್ಕೆ ಪುರಾವೆಯಾಗಿದೆ.

24 ವರ್ಷ ವಯಸ್ಸಿನ ಯಶ್ ರಾಥೋಡ್ ಅವರು ಬ್ಯಾಟಿಂಗ್‌ನಲ್ಲಿ ಮುಂಚೂಣಿಯಲ್ಲಿದ್ದು 9 ಪಂದ್ಯಗಳಿಂದ 58.13 ಸರಾಸರಿಯಲ್ಲಿ 933 ರನ್ ಪೇರಿಸಿದ್ದಾರೆ. ವಿಕೆಟ್ ಕೀಪರ್–ಕಪ್ತಾನ ವಾಡಕರ್ ಅವರು 48.14 ಸರಾಸರಿಯಲ್ಲಿ 674 ರನ್ ಹೊಡೆದಿದ್ದಾರೆ. ಕರ್ನಾಟಕ ತಂಡದಿಂದ ಇಲ್ಲಿಗೆ ಬಂದಿರುವ ಕರುಣ್ ನಾಯರ್ ಹಿಂದೆಬಿದ್ದಿಲ್ಲ. ಅವರು 642 ರನ್ ಸಂಗ್ರಹಿಸಿದ್ದಾರೆ. ಇವರ ಜೊತೆಗೆ ದಾನಿಶ್ ಮಾಲೇವಾರ್ (557) ಮತ್ತು ಧ್ರುವ್ ಶೋರೆ (446) ಅವರ ಕೊಡುಗೆ ನಿರ್ಲಕ್ಷಿಸುವಂತಿಲ್ಲ. ಬೌಲಿಂಗ್ ವಿಭಾಗದಲ್ಲಿ 22 ವರ್ಷ ವಯಸ್ಸಿನ ಹರ್ಷ್ ದುಬೆ ಅವರು 66 ವಿಕೆಟ್ ಕಿತ್ತು ತಂಡದ ಪ್ರಮುಖ ಅಸ್ತ್ರವಾಗಿದ್ದಾರೆ. ಏಳು ಬಾರಿ ಐದು ವಿಕೆಟ್ ಗೊಂಚಲು ಪಡೆದಿದ್ದಾರೆ.

ಒಂದೆಡೆ ವಿದರ್ಭದ ಸಾಧನೆ ಕಣ್ಣು ಕುಕ್ಕುವಂತಿದ್ದರೆ, ಇನ್ನೊಂದೆಡೆ ಮೊದಲ ಬಾರಿ ಫೈನಲ್ ತಲುಪಿರುವ ಸಚಿನ್ ಬೇಬಿ ಸಾರಥ್ಯದ ಕೇರಳ ತಂಡಕ್ಕೆ ಈ ಹಾದಿಯಲ್ಲಿ ಅದೃಷ್ಟದ ಬಲವೂ ಇತ್ತು.

ಆದರೆ ತಂಡದ ಕೆಚ್ಚಿನ ಹೋರಾಟ ಮರೆಯುವಂತಿಲ್ಲ. ಎರಡೂ ಪಂದ್ಯಗಳಲ್ಲಿ ಅದು ಪರಿಶ್ರಮದಿಂದ ಮುನ್ನಡೆ ಪಡೆದಿತ್ತು. ಸಲ್ಮಾನ್ ನಿಸಾರ್ (8 ಪಂದ್ಯಗಳಿಂದ 607, ಸರಾಸರಿ 86.71) ಮತ್ತು ಮೊಹಮ್ಮದ್ ಅಜರುದ್ದೀನ್ (9 ಪಂದ್ಯಗಳಿಂದ 601, ಸರಾಸರಿ 75.12) ಅವರ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಜನ್ಮ ದಿನಾಂಕ ತಿರುಚಿದ ಪ್ರಕರಣ ತನಿಖೆಗೆ ತಡೆ ನೀಡಿದ 'ಸುಪ್ರೀಂ'



ಲಕ್ಷ್ಯ ಸೇನ್

ನವದೆಹಲಿ (ಪಿಟಿಐ): ಜನ್ಮ ದಿನಾಂಕ ತಿರುಚಿದ ಪ್ರಕರಣಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್, ಅವರ ಸಹೋದರ ಚಿರಾಗ್ ಸೇನ್, ಅವರ ಪೋಷಕರು ಮತ್ತು ತರಬೇತುದಾರ ಯು. ವಿಮಲ್ ಕುಮಾರ್ ವಿರುದ್ಧ ಕರ್ನಾಟಕ ಪೊಲೀಸರು ಕ್ರಮ ಕೈಗೊಳ್ಳುವುದಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಈ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳದಂತೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ಈ ಹಿಂದೆ ನಿರಾಕರಿಸಿತ್ತು. ತಮ್ಮ ಮೇಲೆ ಪೊಲೀಸರು ಕ್ರಮ ಕೈಗೊಳ್ಳದಂತೆ ತಡೆ ನೀಡಬೇಕು ಎಂದು ಕೋರಿ ಲಕ್ಷ್ಯ ಸೇನ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ಕುರಿತು ಪ್ರತಿಕ್ರಿಯಿಸುವಂತೆ ಕರ್ನಾಟಕ ಸರ್ಕಾರ ಹಾಗೂ ದೂರುದಾರ ಎಂ.ಜಿ.ನಾಗರಾಜ್ ಅವರಿಗೆ ನ್ಯಾಯಮೂರ್ತಿಗಳಾದ ಸುಧಾಂಶು ಧೂಲಿಯಾ ಮತ್ತು ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು ನೋಟಿಸ್ ನೀಡಿದೆ. ಮುಂದಿನ ವಿಚಾರಣೆಯನ್ನು ಏಪ್ರಿಲ್ 16ಕ್ಕೆ ನಿಗದಿ ಮಾಡಿದೆ.

ಏನಿದು ಪ್ರಕರಣ?: 'ಟೂರ್ನಿಗಳಲ್ಲಿ ಭಾಗವಹಿಸಲು ಮತ್ತು ಸರ್ಕಾರದಿಂದ ಅನುಕೂಲಗಳನ್ನು ಪಡೆದುಕೊಳ್ಳಲು ಲಕ್ಷ್ಯ ಸೇನ್ ಹಾಗೂ ಸಹೋದರ ಚಿರಾಗ್ ಸೇನ್ ಅವರು ತರಬೇತುದಾರನ ಸಹಕಾರದಿಂದ ಜನ್ಮ ದಿನಾಂಕದಲ್ಲಿ ಬದಲಾವಣೆ ಮಾಡಿಕೊಂಡು, ಜನ್ಮ ಪ್ರಮಾಣಪತ್ರದಲ್ಲಿ ಎರಡೂವರೆ ವರ್ಷ ಕಡಿಮೆ ವಯಸ್ಸು ನಮೂದು ಮಾಡಿದ್ದಾರೆ' ಎಂದು ನಾಗರಾಜ್ ಅವರು ಖಾಸಗಿ ದೂರು ನೀಡಿದ್ದರು.

ಈ ಆರೋಪಕ್ಕೆ ಸಾಕ್ಷಿಯಾಗಿ ಆರ್‌ಟಿಐನಲ್ಲಿ ಪಡೆದ ಮಾಹಿತಿಯನ್ನು ನಾಗರಾಜ್ ವಿಚಾರಣಾ ನ್ಯಾಯಾಲಯವೊಂದಕ್ಕೆ ನೀಡಿದ್ದರು. ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಉದ್ಯೋಗಿಯೊಬ್ಬರೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿತ್ತು. ದೂರಿನೊಂದಿಗೆ ನೀಡಲಾಗಿದ್ದ ಎಲ್ಲ ಸಾಕ್ಷ್ಯಗಳನ್ನು ಪರಿಗಣಿಸಿ, ಪ್ರಕರಣದ ತನಿಖೆ ನಡೆಸದಂತೆ ವಿಚಾರಣಾ ನ್ಯಾಯಾಲಯವು ಪೊಲೀಸರಿಗೆ ಸೂಚಿಸಿತ್ತು.

ಐಪಿಸಿ ಸೆಕ್ಷನ್ 420 (ವಂಚನೆ), 468 (ತಿರುಚುವಿಕೆ) ಮತ್ತು 471 (ನಕಲಿ ದಾಖಲೆ ಬಳಕೆ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ತನಿಖೆಗೆ ತಡೆ ನೀಡಬೇಕು ಎಂದು ಕೋರಿ ಲಕ್ಷ್ಯ ಸೇನ್ ಮತ್ತು ಇತರರು 2022ರಲ್ಲಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು.

'ವೈಯಕ್ತಿಕ ದ್ವೇಷದಿಂದ ದೂರು': 'ವೈಯಕ್ತಿಕ ದ್ವೇಷದಿಂದ ನಾಗರಾಜ್ ಈ ದೂರು ನೀಡಿದ್ದಾರೆ. ಪ್ರಕಾಶ್ ಪಡುಕೋಣೆ ಅಕಾಡೆಮಿಗೆ ಸೇರಿಕೊಳ್ಳಲು 2020ರಲ್ಲಿ ನಾಗರಾಜ್ ಅವರ ಮಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆ ಪ್ರಕ್ರಿಯೆಯಲ್ಲಿ ತೇರ್ಗಡೆಗೊಳ್ಳಲು ಅವರ ಮಗಳು ವಿಫಲರಾದರು. ವಿಮಲ್ ಕುಮಾರ್ ಅವರು ಆಯ್ಕೆ ಪ್ರಕ್ರಿಯೆ ನಡೆಸಿದ್ದರು' ಎಂದು ಲಕ್ಷ್ಯ ಸೇನ್ ಮತ್ತು ಇತರರು ಅರ್ಜಿಯಲ್ಲಿ ವಾದಿಸಿದ್ದಾರೆ.

ಒಲಿಂಪಿಕ್ ಚಾಂಪಿಯನ್ನರಿಗೆ ಭಾರತ ಆಘಾತ

ಪ್ರೊ ಲೀಗ್: ಪೆನಾಲ್ಟಿ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ ಗೆದ್ದ ಸಲಿಮಾ ಪಡೆ

ಭುವನೇಶ್ವರ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತದ ವನಿತೆಯರು ಮಂಗಳವಾರ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ರೋಚಕ ಹಣಾಹಣಿಯಲ್ಲಿ ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ತಂಡಕ್ಕೆ ಆಘಾತ ನೀಡಿದರು.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ನಿಗದಿತ ಅವಧಿಯಲ್ಲಿ 2–2 ಗೋಲುಗಳಿಂದ ಸಮಬಲಗೊಂಡಿತು. ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತದ ವನಿತೆಯರು 2–1ರಿಂದ ವಿಶ್ವದ ಅಗ್ರ ಕ್ರಮಾಂಕದ ತಂಡದ ವಿರುದ್ಧ ಗೆಲುವು ಸಾಧಿಸಿ, ತವರು ಲೆಗ್‌ನ ಅಭಿಯಾನವನ್ನು ಮುಗಿಸಿದರು.

17ನೇ ನಿಮಿಷದಲ್ಲಿ ಪಿಯೆನ್ ಸ್ಯಾಂಡರ್ಸ್ ಮತ್ತು 28ನೇ ನಿಮಿಷದಲ್ಲಿ ಫೇ ವ್ಯಾನ್ ಡೆರ್ ಎಲ್ಸ್ಟ್ ಅವರು ಡಚ್ ಪರ ಗೋಲು ದಾಖಲಿಸಿ, ವಿರಾಮದ ವೇಳೆಗೆ ತಮ್ಮ ತಂಡಕ್ಕೆ 2–0 ಮುನ್ನಡೆ ಒದಗಿಸಿದ್ದರು. ಮೂರನೇ ಕ್ವಾರ್ಟರ್‌ನಲ್ಲಿ ಪುನರಾಗಮನ ಮಾಡಿದ ಆತಿಥೇಯ ತಂಡ ಎಂಟು ನಿಮಿಷಗಳ ಅಂತರದಲ್ಲಿ ಎರಡು ಗೋಲು ಗಳಿಸಿತು. ದೀಪಿಕಾ (35ನೇ) ಮತ್ತು ಬಲ್ಜೀತ್ ಕೌರ್ (43ನೇ) ಚೆಂಡನ್ನು ಗುರಿ ಸೇರಿಸಿದರು. ಹೀಗಾಗಿ, ಉಭಯ ತಂಡಗಳ ಸ್ಕೋರ್ 2–2 ಸಮಬಲಗೊಂಡಿತು. ನಾಲ್ಕನೇ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳ ಆಟಗಾರ್ತಿಯರು ಮುನ್ನಡೆಗಾಗಿ ಸಾಕಷ್ಟು ಪೈಪೋಟಿ ನಡೆಸಿದರು. ಆದರೆ, ಯಾರಿಗೂ ಎದುರಾಳಿಯ ರಕ್ಷಣಾ ಕೋಟೆಯನ್ನು ಭೇದಿಸಲು ಸಾಧ್ಯವಾಗಲಿಲ್ಲ.

ನಿಗದಿತ ಅವಧಿಯ ಪಂದ್ಯದಲ್ಲೂ ಉತ್ತಮ ಆಟ ಪ್ರದರ್ಶಿಸಿದ ಭಾರತದ ಅನುಭವಿ ಗೋಲ್‌ಕೀಪರ್ ಸವಿತಾ ಪೂನಿಯಾ, ಪೆನಾಲ್ಟಿ ಶೂಟೌಟ್‌ನಲ್ಲೂ ಪರಾಕ್ರಮ ಮೆರೆದರು. ಎದುರಾಳಿ ತಂಡದ ಐದು ಪ್ರಯತ್ನಗಳಲ್ಲಿ ನಾಲ್ಕನ್ನು ವಿಫಲಗೊಳಿಸಿ ಭಾರತ ತಂಡದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು. ಭಾರತದ ದೀಪಿಕಾ ಮತ್ತು ಮುಮ್ತಾಜ್ ಖಾನ್ ಅವರು ಶೂಟೌಟ್‌ನಲ್ಲಿ ಚಾಣಾಕ್ಷತೆ ಮೆರೆದರು. ಪೂನಿಯಾಗೆ ಇದು 301ನೇ ಅಂತರ ರಾಷ್ಟ್ರೀಯ ಪಂದ್ಯವಾಗಿತ್ತು.

ಸೋಮವಾರ ಭಾರತ ತಂಡವು ಇದೇ ತಂಡದ ವಿರುದ್ಧ 2–4 ಗೋಲುಗಳಿಂದ ಪರಾಭವಗೊಂಡಿತ್ತು. ತವರಿನ ಲೆಗ್‌ನಲ್ಲಿ ನಡೆದ ಒಟ್ಟು ಎಂಟು ಪಂದ್ಯಗಳಲ್ಲಿ ಸಲಿಮಾ ಟೆಟೆ ಬಳಗ ಮೂರು ಗೆಲುವು ಮತ್ತು ಐದು ಸೋಲಿನೊಂದಿಗೆ 9 ಅಂಕ ಪಡೆದು ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಎಂಟು ಪಂದ್ಯಗಳನ್ನು ಆಡಿದ ನೆದರ್ಲೆಂಡ್ಸ್ ತಂಡಕ್ಕೆ ಇದು ಮೊದಲ ಸೋಲು. ಆರು ಗೆಲುವು, ಒಂದು ಡ್ರಾ ಸಾಧಿಸಿರುವ ಡಚ್ ತಂಡವು 19 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಬೆಲ್ಜಿಯಂ (17), ಚೀನಾ (16) ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ಮುಂದಿನ ಲೆಗ್ ಜೂನ್‌ನಲ್ಲಿ ಆರಂಭವಾಗಲಿದೆ.





ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಗೆದ್ದ ಭಾರತ ಹಾಕಿ ತಂಡದ ಆಟಗಾರ್ತಿಯರ ಸಂಭ್ರಮ (ಎಡಚಿತ್ರ). ಭಾರತ ಪುರುಷರ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ –ಎಕ್ಸ್ ಚಿತ್ರಗಳು

ಹರ್ಮನ್ ಆಟಕ್ಕೆ ಒಲಿದ ಗೆಲುವು

ಭುವನೇಶ್ವರ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಭಾರತದ ಪುರುಷರ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 2–1 ಗೋಲುಗಳಿಂದ ಇಂಗ್ಲೆಂಡ್ ತಂಡವನ್ನು ಮಣಿಸಿತು.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ಸೋಮವಾರ ಆಂಗ್ಲರ ವಿರುದ್ಧ 3–2 ಗೋಲುಗಳಿಂದ ಸೋಲು ಅನುಭವಿಸಿದ್ದ ಭಾರತ ತಂಡವು, ಮರುದಿನ ರಿವರ್ಸ್ ಲೆಗ್‌ನಲ್ಲಿ ಮುಯ್ಯಿ ತೀರಿಸಿಕೊಳ್ಳುವುದರೊಂದಿಗೆ ತವರು ಲೆಗ್‌ನ ಅಭಿಯಾನ ಮುಗಿಸಿತು. ಹರ್ಮನ್‌ಪ್ರೀತ್ 26ನೇ ಮತ್ತು 32ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಈ ಎರಡೂ ಗೋಲುಗಳು ಪೆನಾಲ್ಟಿ ಕಾರ್ನರ್‌ನಿಂದ ಬಂದವು. ಇಂಗ್ಲೆಂಡ್ ಪರ ಏಕೈಕ ಗೋಲನ್ನು ಕಾನರ್ ವಿಲಿಯಮ್ಸನ್ (30ನೇ ನಿ) ದಾಖಲಿಸಿದರು.

ತವರಿನಲ್ಲಿ ಆಡಿದ ಒಟ್ಟು ಎಂಟು ಪಂದ್ಯಗಳಲ್ಲಿ ಐದು ಪಂದ್ಯಗಳನ್ನು ಗೆದ್ದು 15 ಅಂಕ ಗಳಿಸಿದ ಭಾರತ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ಈ ಪಂದ್ಯದ ಸೋಲಿನ ಹೊರತಾಗಿಯೂ ಇಂಗ್ಲೆಂಡ್ (16) ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಬೆಲ್ಜಿಯಂ (16) ಎರಡನೇ ಸ್ಥಾನದಲ್ಲಿದೆ.

ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿ: ಪ್ರಜ್ಞಾನಂದ ನೆಚ್ಚಿನ ಆಟಗಾರ



ಪ್ರಾಗ್ (ಝೆಕ್ ರಿಪಬ್ಲಿಕ್): ಟಾಟಾ ಸ್ಟೀಲ್ ಮಾಸ್ಟರ್ಸ್ ಟೂರ್ನಿಯಲ್ಲಿ ಸಾಧಿಸಿದ ರೋಚಕ ಗೆಲುವಿನಿಂದ ವಿಶ್ವಾಸದಲ್ಲಿರುವ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಬುಧವಾರ ಇಲ್ಲಿ ಆರಂಭವಾಗುವ ಪ್ರಾಗ್ ಮಾಸ್ಟರ್ಸ್ ಟೂರ್ನಿಯಲ್ಲೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದಾರೆ.

ಟಾಟಾ ಸ್ಟೀಲ್ ಮಾಸ್ಟರ್ಸ್ ಟೂರ್ನಿಯ ಅಗ್ರಸ್ಥಾನಕ್ಕೆ ನಡೆದ ಪೈಪೋಟಿಯಲ್ಲಿ ಪ್ರಜ್ಞಾನಂದ ತೀವ್ರ ಹೋರಾಟ ತೋರಿ ಅಂತಿಮವಾಗಿ ಟೈಬ್ರೇಕರ್‌ನಲ್ಲಿ ಸ್ವದೇಶದ ದೊಮ್ಮರಾಜು ಗುಕೇಶ್ ಅವರನ್ನು ಸೋಲಿಸಿದ್ದರು.

ಅರವಿಂದ ಚಿದಂಬರಮ್ ಅವರು ಮೊದಲ ಬಾರಿ ಈ ಟೂರ್ನಿಯಲ್ಲಿ ಆಡಲಿದ್ದಾರೆ. 2024ರಲ್ಲಿ ಅವರು ಸ್ಥಿರ ಪ್ರದರ್ಶನ ನೀಡಿ ರೇಟಿಂಗ್‌ನಲ್ಲಿ ಸಾಕಷ್ಟು ಸುಧಾರಣೆ ಕಂಡಿದ್ದರು. 2730 ಲೈವ್ ರೇಟಿಂಗ್ ಹೊಂದಿರುವ ಅರವಿಂದ್ ಅಗ್ರ 20ರೊಳಗೆ ಸ್ಥಾನ ಪಡೆಯುವ ಹೊಸ್ತಿಲಲ್ಲಿದ್ದಾರೆ. ಗುಕೇಶ್, ಅರ್ಜುನ್ ಇರಿಗೇಶಿ, ವಿಶ್ವ ಚಾಂಪಿಯನ್ ಪ್ರಜ್ಞಾನಂದ ಮತ್ತು ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಈಗಾಗಲೇ ಅಗ್ರ 20ರಲ್ಲಿರುವ ಭಾರತದ ಆಟಗಾರರಾಗಿದ್ದಾರೆ.

ಬೆಂಗಳೂರು ಓಪನ್: ಸ್ನೇಹಿತನಿಗೆ ಮಣಿದ ಝೆಕ್ ಆಟಗಾರ

ಅಗ್ರ ಶ್ರೇಯಾಂಕದ ಕೊಪ್ರಿವಾಗೆ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹತಾ ಸುತ್ತಿನ ವಿಜೇತ ಹೈನೆಕ್ ಬಾರ್ಟನ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಮಂಗಳವಾರ ಅಗ್ರ ಶ್ರೇಯಾಂಕದ ಆಟಗಾರ ವಿಟ್ ಕೊಪ್ರಿವಾ ಅವರಿಗೆ 4–6, 6–4, 6–3 ರಿಂದ ಆಘಾತ ನೀಡಿ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಟೂರ್ನಿಯಲ್ಲಿ ಭಾರತದ ಆಟಗಾರರ ಸವಾಲು ಕೂಡ ಬೇಗನೇ ಅಂತ್ಯಗೊಂಡಿತು.

ಕಬ್ಬನ್ ಪಾರ್ಕ್‌ನ ಕೆಎಸ್‌ಎಲ್‌ಟಿಎ ಎರಡನೇ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಬಾರ್ಟನ್ ಸುಮಾರು ಎರಡು ಗಂಟೆ ನಡೆದ ಪಂದ್ಯವನ್ನು ಮೂರು ಸೆಟ್‌ಗಳಲ್ಲಿ ಗೆದ್ದು ಗಮನ ಸೆಳೆದರು. ಝೆಕ್ ಗಣರಾಜ್ಯದ ಈ ಇಬ್ಬರೂ ಸ್ನೇಹಿತರು.

ಮೊದಲ ಸೆಟ್‌ನ ಏಳನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಕೊಪ್ರಿವಾ 6–4 ರಲ್ಲಿ ಸೆಟ್ ಕೈವಶ ಮಾಡಿಕೊಂಡರು. ಆದರೆ ಎರಡು ಮತ್ತು ಮೂರನೇ ಸೆಟ್‌ನಲ್ಲಿ 20 ವರ್ಷ ವಯಸ್ಸಿನ ಬಾರ್ಟನ್ ಕೈಮೇಲಾಯಿತು.

ಭಾರತದ ಯುವ ಆಟಗಾರ ಮಾನಸ್ ಧಾಮನೆ ಅವರು ಮೊದಲ ಸುತ್ತಿನಲ್ಲಿ, ಅರ್ಹತಾ ಸುತ್ತಿನ ವಿಜೇತ ಆಟಗಾರ ಪೀಟರ್ ಬರ್ ಬಿಯರ್ಯುಕೊವ್ ಅವರಿಗೆ ಮಣಿಯುವ ಮೊದಲು ಹೋರಾಟ ನೀಡಿದರು. ಬಿಯರ್ಯುಕೋವ್ ಅಂತಿಮವಾಗಿ 6–3, 3–6, 7–6 (3) ರಿಂದ 17 ವರ್ಷದ ಮಾನಸ್ ಅವರನ್ನು ಸೋಲಿಸಿ 16ರ ಘಟ್ಟಕ್ಕೆ ಮುನ್ನಡೆದರು.



ಭಾರತದ ರಾಮಕುಮಾರ್ ರಾಮನಾಥನ್ ವಿರುದ್ಧ ಜಯಗಳಿಸಿದ ಜಪಾನ್‌ನ ಶಿಂಟಾರೊ ಮೊಚಿಝುಕಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಕರಣ್ ಸಿಂಗ್ ಅವರ ಸವಾಲು ಕೂಡ ಬೇಗನೇ ಕೊನೆಗೊಂಡಿತು. ಆಸ್ಟ್ರಿಯಾದ ಜುರಿಜ್ ರೊಡಿಯೊನೊವ್ ತೀವ್ರ ಹೋರಾಟದ ಪಂದ್ಯದಲ್ಲಿ ಕರಣ್ ಅವರನ್ನು 6–4, 4–6, 7–6 (3) ರಿಂದ ಸೋಲಿಸಿದರು. ವೈಲ್ಡ್ ಕಾರ್ಡ್ ಪಡೆದಿದ್ದ ರಾಮಕುಮಾರ್ ರಾಮನಾಥನ್ ನೇರ ಸೆಟ್‌ಗಳಲ್ಲಿ ಸೋತರೂ ಜಪಾನಿನ ಶಿಂಟಾರೊ ಮೊಚಿಝುಕಿ ಅವರಿಗೆ ಪೈಪೋಟಿ ನೀಡಿದರು. ಅಂತಿಮವಾಗಿ ಏಳನೇ ಶ್ರೇಯಾಂಕದ ಶಿಂಟಾರೊ 7–6 (3), 7–5 ರಿಂದ ಜಯಗಳಿಸಿದರು.

17 ವರ್ಷ ವಯಸ್ಸಿನ ಬರ್ನಾರ್ಡ್ ಟಾಮಿಕ್ (ಆಸ್ಟ್ರೇಲಿಯಾ) ಇನ್ನೊಂದು ಪಂದ್ಯದಲ್ಲಿ 3–6, 7–6 (4), 6–4 ರಿಂದ ಇಲಿಯಾ ಸಿಮಕಿನ್ ಅವರನ್ನು ಸೋಲಿಸಿದರು. ಆಸ್ಟ್ರೇಲಿಯಾದ ಇನ್ನೊಬ್ಬ ಆಟಗಾರ, ಎರಡನೇ ಶ್ರೇಯಾಂಕದ ಟ್ರಿಸ್ಟಾನ್ ಸ್ಕೂಲ್‌ಕೇಟ್ 7–5, 6–7 (5), 6–3 ರಿಂದ ಖುಮೊಯುನ್ ಸುಲ್ತಾನೋವ್ ಅವರನ್ನು ಸೋಲಿಸಿ ಎರಡನೇ ಸುತ್ತಿಗೇರಿದರು.

ಇತ್ತೀಚೆಗೆ ಡೆಲ್ಲಿ ಓಪನ್ ಟೂರ್ನಿಯ ಸಿಂಗಲ್ಸ್ ವಿಜೇತರಾಗಿದ್ದ, ಐದನೇ ಶ್ರೇಯಾಂಕದ ಕೈರಿಯನ್ ಜಾಕ್ವೆಟ್ ಹೊರ ಬಿದ್ದರು. ಆಸ್ಟ್ರೇಲಿಯಾದ ಜೇಮ್ಸ್ ಮೆಕ್‌ಕ್ಯಾಬ್ 6–7 (8), 6–1, 6–2 ರಿಂದ ಜಾಕ್ವೆಟ್ ಅವರನ್ನು ಮಣಿಸಿದರು.